ಸಂಪುಟ ೭
ಸಂಚಿಕೆ ೧

ಕರ್ನಾಟಕ ಭಾರತಿ

ಸ್ವಾತಂತ್ರ್ಯೋತ್ಸವ ಸಂಚಿಕೆ
೧೯೭೪

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580003** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ ವಿಸ್ತರಣ ಹಾಗು ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580003** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ ೨. ರಾಜ್ಯೋದಯ ಸಂಚಿಕೆ
೩. ಸಂಕ್ರಮಣ ಸಂಚಿಕೆ ೪. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)

ಬಿಡಿಸಂಚಿಕೆಯ ಬೆಲೆ : ರೂ. ೨-೫೦

(ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦ ಮಾತ್ರ)

ಹಣವನ್ನು ಮನಿಯಾರ್ಡರ್ ಇಲ್ಲವೆ ಪೋಸ್ಟಲ್ ಆರ್ಡರ್ ಮೂಲಕ **ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-580003 ಇವರಿಗೆ ಕಳುಹಿಸಬೇಕು.**

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೭ ಸಂಚಿಕೆ : ೧

ಪ್ರಧಾನ ಸಂಪಾದಕರು

ಡಾ. ಆರ್. ಸಿ. ಹಿರೇಮಠ

ಸಹಾಯಕ ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ: ೭, ಸಂಚಿಕೆ: ೧

ಅಗಸ್ಟ ೧೯೭೪

ಸ್ವಾತಂತ್ರ್ಯೋತ್ಸವ ಸಂಚಿಕೆ

ಎಲ್ಲ ಹಕ್ಕುಗಳನ್ನು ಕಾಯ್ದಿಡಲಾಗಿದೆ.

ಸಂಪಾದಕ ಮಂಡಲ:

ಡಾ. ಆರ್. ಸಿ. ಹಿರೇಮಠ (ಅಧ್ಯಕ್ಷರು)

ಡಾ. ರಾ. ಯ. ಧಾರವಾಡಕರ

ಪ್ರಿ. ಎಸ್. ಎಸ್. ಬೊಮ್ಮಣ್ಣವರ

ಶ್ರೀ ಶರಣಬಸವಪ್ಪ ಡಿ. ಅಪ್ಪಾ

ಶ್ರೀ ಎಚ್. ಎಂ. ಮರುಳಸಿದ್ಧಯ್ಯ

ಶ್ರೀ ಸಿ. ಎಸ್. ಕಣವಿ (ಕಾರ್ಯದರ್ಶಿಗಳು)

ಡಾ. ಎಂ. ಎಂ. ಕಲಬುರ್ಗಿ (ಸಹಾಯಕ ಸಂಪಾದಕರು)

ಪ್ರಕಾಶಕರು:

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.

ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩

ಮುದ್ರಕರು:

ಕೆ. ಜಿ. ಜೋಶಿ

ಕೆ. ಇ. ಬೋರ್ಡ್ಸ ಪ್ರಿಂಟಿಂಗ ಪ್ರೆಸ್, ಧಾರವಾಡ

ಪರಿವಿಡಿ

ಅಸ್ತಿತ್ವ

ಎಸ್. ಎಸ್. ಕೋತಿನ

ಹರಿವ ಹಳ್ಳದ ಬದಿಗೆ
ನಾನೊಂದು ಕಿರಿಯ ಒರತೆ
ನಿಂತಲ್ಲೇ ನಿಂತ ನಾನು
ಈ ಹಳ್ಳದ
ಚಲನೆ ಚಟುವಟಿಕೆಗಳನೆಲ್ಲ ಗಮನಿಸುತ್ತೇನೆ.
ಮೆರೆಯುತ್ತ ಮುಂದೆ ಸಾಗುವ
ಸಂಭ್ರಮವನ್ನು ಕಾಣುತ್ತೇನೆ.
ಹರಿದು ಹೊಳೆಯನು ಕೂಡಿ
ಧುಮುಕಿ ಸಾಗರ ಸೇರಿ–
ಸಾಗರವಾಗುವ ಚಿತ್ರವನ್ನು
ಕಲ್ಪಿಸಿಕೊಳ್ಳುತ್ತೇನೆ.
ನನ್ನ ಕಿರಿತನಕಾಗಿ ಕೊರಗುತ್ತೇನೆ.
ಪರರ ಪುಣ್ಯದಲ್ಲಿ
ಪಾಲುಗೊಳ್ಳುವುದಕ್ಕೂ ಚಲನೆ ಬೇಕು.
ಅದಕಾಗಿ
ಗುದ್ದಾಡಿ ಒದ್ದಾಡಿ ಏನಾದರೂ ಮಾಡಿ
ನೆಲದೊಳಗಿಂದಾದರೂ
ಹಳ್ಳವನು ಕೂಡಿ ಹರಿಯಬಯಸುತ್ತೇನೆ.
ಆದರೆ
ಹರಿದರೆ ನಾನು
ಒರತೆಯೆಂತಾದೇನು ?
ನನ್ನ ಅಸ್ತಿತ್ವವನೇ ಅಳಿಸಿ ಹಾಕುವುದಾದರೆ
ಈ ಚಲನೆಯೂ ಬೇಡ
ಸಾಗರದ ಸೌಭಾಗ್ಯವೂ ಬೇಡ.
ನಾನು ನಾನಾಗಿ ಬದುಕಬೇಕು
ನನ್ನ ಅಸ್ತಿತ್ವವೇ ನನಗೆ ಸಾಕು.

ಕಾವ್ಯಾದರ್ಶ ಮತ್ತು ರತ್ನಶ್ರೀಜ್ಞಾನಕೃತ ಟೀಕೆಯ ವೈಶಿಷ್ಟ್ಯ

ಕೆ. ಕೃಷ್ಣಮೂರ್ತಿ

ದಂಡಿಯ 'ಕಾವ್ಯಾದರ್ಶ'ವು ಸಂಸ್ಕೃತ ಕಾವ್ಯ ಲಕ್ಷಣ ಗ್ರಂಥಗಳಲ್ಲೆಲ್ಲ ಅತ್ಯಂತ ಪ್ರಭಾವ ಪೂರ್ಣವಾದ ಶಾಸ್ತ್ರಕೃತಿ. ಅತ್ಯಂತ ಪ್ರಾಚೀನ ಕಾಲದಲ್ಲಿಯೇ ಸಂಸ್ಕೃತದಿಂದ ಪಾಳಿ[1], ಪ್ರಾಕೃತ[2], ತಮಿಳು[3], ಸಿಂಹಳಿ[4], ಕನ್ನಡ[5], ಟಿಬೆಟನ್[6] ಭಾಷೆಗಳಲ್ಲೆಲ್ಲ ಇದರ ಭಾವಾನುವಾದಗಳು ಪ್ರಕಟವಾಗಿವೆಯೆಂಬ ಒಂದೇ ಸಂಗತಿ ಸಾಕು–ಇದರ ವೈಶಿಷ್ಟ್ಯವನ್ನೆತ್ತಿ ತೋರಿಸುವದಕ್ಕೆ. ಇಷ್ಟೊಂದು ಭಾಷಾಂತರಗಳು ಮತ್ತಾವ ಸಂಸ್ಕೃತ ಲಕ್ಷಣ ಗ್ರಂಥಕ್ಕೂ ಹಿಂದಿನ ಶತಮಾನಗಳಲ್ಲಿಯೇ ಆದ ಉದಾಹರಣೆಯನ್ನು ನಾವು ಕಾಣಲಾರೆವು.

---

1. ಸಂಘರಕ್ಷಿತನ 'ಸುಬೋಧಾಲಂಕಾರ'; ಸಂಪಾದಕ : ಪುಷ್ಪೇಂದ್ರಕುಮಾರ ಶರ್ಮಾ, ಲಾಲ ಬಹಾದ್ದೂರ ಶಾಸ್ತ್ರಿ ಕೇಂದ್ರೀಯ ವಿದ್ಯಾಪೀಠ, ೧೯೭೩.

2. 'ಅಲಂಕಾರ ದಪ್ಪಣ', ಜೈಸಲ್‌ಮೀರ್ ಹಸ್ತಪ್ರತಿಗಳ ಭಂಡಾರ, No. 326. ಇದರ ಕಾಲ 13 ನೆಯ ಶತಮಾನಕ್ಕಿಂತ ಮುಂಚೆ. ಇದೇ ಓಲೆಯಲ್ಲಿ 13 ಪತ್ರಗಳಷ್ಟು ಮಾತ್ರ 'ಅಲಂಕಾರ ದಪ್ಪಣ'ಕ್ಕೆ ಮೀಸಲಾಗಿದ್ದರೆ ಮಿಕ್ಕ ಪತ್ರಗಳು ದಂಡಿಯ ಕಾವ್ಯಾದರ್ಶ ಗ್ರಂಥದ ಪ್ರತಿಯನ್ನೇ ಒಳಗೊಂಡಿರುವುದೆಂಬ ವಿಷಯ ಉಲ್ಲೇಖನಾರ್ಹವಾಗಿದೆ. ಇದು ಪ್ರಕಾಶಿತ, ಮುನಿಶ್ರೀ ಮಿಶ್ರೀಮಲ ಜೀ ಅಭಿನಂದನ ಗ್ರಂಥ, ಜೋಧಪುರ, ೧೯೬೮. ಬಾಗ IV, ಪು. ೪೩೦–೪೫೭.

3. 'ದಂಡಿ ಅಳಂಕಾರ', ಎರಡನೆಯ ಆವೃತ್ತಿ, ಸಂಪಾದಕ : ಚೆನ್ನಾಕಂ ಪಂಡಿತ್ ಕುಮಾರಸ್ವಾಮಿ ಪುಲವರ್ (ನೋಡಿ– Journal of Oriental Research, Madras, II p. 149).

4. ಸಿಂಹಳಿ ಭಾಷೆಯ ಸಿಯ–ಬಸ್–ಲಕಾರ (= ಸ್ವೀಯ ಭಾಷಾ–ಅಲಂಕಾರ), ಶೀಲಮೇಘ–ವರ್ಣಸೇನನೆಂಬ ರಾಜನಿಂದ ರಚಿತ (ಕ್ರಿ. ಶ. ೯ ನೆಯ ಶತಮಾನ) ಸಂಪಾದಕ : ಹೆನ್ಡ್ರಿಕ್–ಜಯತಿಲಕ, ಕೊಲಂಬೋ, ೧೮೯೨.

5. ನೃಪತುಂಗನ ಕವಿರಾಜಮಾರ್ಗ, ಉದಯಾದಿತ್ಯಾಲಂಕಾರ, ಮಾಧವಾಲಂಕಾರ, ಇತ್ಯಾದಿ. (ವಿವರಗಳಿಗೆ ನೋಡಿ : ಡಾ॥ ಕೆ. ಕೃಷ್ಣಮೂರ್ತಿ, "ಕನ್ನಡದಲ್ಲಿ ಕಾವ್ಯತತ್ತ್ವ", ಮೈಸೂರು, ೧೯೭೪, ಮತ್ತು "ಕವಿರಾಜಮಾರ್ಗ", ಐ. ಬಿ. ಎಚ್. ಪ್ರಕಾಶನ, ಬೆಂಗಳೂರು ೧೯೭೨).

6. ಕಲ್ಕತ್ತಾ ವಿಶ್ವವಿದ್ಯಾಲಯದ ಪ್ರಕಟಣೆ, ಸಂಪಾದಕ : ಅನುಕೂಲ ಚಂದ್ರ ಬ್ಯಾನರ್ಜಿ, ಕಲ್ಕತ್ತಾ, ೧೯೩೯. ಇದರ ಗ್ರಂಥಾಂತ್ಯದಲ್ಲಿ 'ಕಾವ್ಯಾದರ್ಶ'ದ ಬದಲು 'ಕಾವ್ಯಾಲಂಕಾರ'ವೆಂದೇ ಹೆಸರಿದೆ.

ದಂಡಿಯ ಗ್ರಂಥಕ್ಕೆ ಇಷ್ಟೊಂದು ಪ್ರಖ್ಯಾತಿಯುಂಟಾಗಲು ಕಾರಣವೂ ಇಲ್ಲದಿಲ್ಲ. ಅವನು ಕೇವಲ ಶಾಸ್ತ್ರಕಾರನಾಗಿರದೆ ಸಂಸ್ಕೃತದ ಮಹಾಕವಿಗಳಲ್ಲೊಬ್ಬನೂ ಆಗಿದ್ದನು. ಕಾಳಿದಾಸ, ಬಾಣಭಟ್ಟರಾದ ಮೇಲೆ ಬಂದ ಸಂಸ್ಕೃತ ಮಹಾಕವಿಗಳಲ್ಲಿ ಅಗ್ರಪಟ್ಟವೇ ದಂಡಿಯದು. 'ಗದ್ಯಂ ಕವೀನಾಂ ನಿಕಷಂ ವದಂತಿ'–ಗದ್ಯ ರಚನೆಯೇ ಕವಿಗಳಿಗೆ ಒರೆ ಗಲ್ಲು–ಎಂದು ವಿದ್ವಾಂಸರು ಭಾವಿಸುತ್ತಿದ್ದ ಯುಗದಲ್ಲಿ 'ದಂಡಿನಃ ಪದಲಾಲಿತ್ಯಂ' ಎಂಬುದು ಗಾದೆ ಮಾತಾಗುವಂತೆ ಮೂರು ರತ್ನದಂತಹ ಕೃತಿಗಳನ್ನು ಬರೆದ ಕೀರ್ತಿ ದಂಡಿಯದಾಗಿದೆ. ಮೊದಲಿನಿಂದಲೂ ಸಂಸ್ಕೃತ ಸಾಹಿತ್ಯದಲ್ಲಿ ದಂಡಿಯ ಗದ್ಯ ಕಾವ್ಯ ವಾದ 'ದಶಕುಮಾರ ಚರಿತೆ' ಒಂದು ಉತ್ತಮ ರಚನೆಯೆಂಬ ವಿಖ್ಯಾತಿಯನ್ನು ಗಳಿ ಸಿದ್ದಿತು. ಎಂತಲೇ ಹಳೆಗನ್ನಡ ಚಂಪೂಶೈಲಿಯಲ್ಲಿ ಚೌಂಡರಾಜನು ತನ್ನ ಅಭಿನವ ದಶಕುಮಾರಚರಿತೆಯನ್ನು ಬರೆಯಲು ಪ್ರಭಾವಿತನಾದುದು. ಆದರೆ ಅದಕ್ಕೆ ಪೂರಕ ಕಥೆಯಾದ 'ಅವಂತಿ ಸುಂದರೀಕಥೆ' ಈ ಶತಮಾನದ ಮಧ್ಯದವರೆಗೂ ದಂಡಿಯ ಇನ್ನೊಂದು ಗದ್ಯಕೃತಿಯೆಂದೇ ವಿದ್ವಾಂಸರಿಗೂ ತಿಳಿಯದಂತೆ ಲುಪ್ತವಾಗಿದ್ದಿತು. ಆದರ ೧೯೫೪ರ ರಲ್ಲಿ ತಿರುವೇಂದ್ರಂ ಸಂಸ್ಕೃತ ಗ್ರಂಥ ಮಾಲೆಯಲ್ಲಿ ಅದು ಪ್ರಕಟವಾದ ಮೇಲೆ ರಾಜವಾಹನ–ಅವಂತಿ ಸುಂದರಿಯರ ಶೃಂಗಾರ ಕಥೆಯನ್ನು ಒಳಗೊಳ್ಳುವ ಆ ಕಥೆ ನಿಜವಾಗಿಯೂ ದಂಡಿಯದೇ ಎಂದು ಡಾ॥ ವಿ. ರಾಘವನ್ ಮುಂತಾದ ವಿದ್ವಾಂ- ಸರೂ ಒಪ್ಪುತ್ತಿದ್ದಾರೆ. ಅದರಲ್ಲಿ ಬರುವ ಐತಿಹ್ಯದ ಪ್ರಕಾರ ದಂಡಿಯು ಭಾರವಿಯ ಅಥವಾ ಅವನ ಮಿತ್ರ ದಾಮೋದರನ ಮರಿಮಗ (ಮೊಮ್ಮಗನ ಮಗ) ನಾಗುತ್ತಾನೆ. ದಂಡಿಯು ಕಾಂಚೀ ಪಟ್ಟಣದಲ್ಲಿ ಪಲ್ಲವರಾಜ ಇಮ್ಮಡಿ ನರಸಿಂಹವರ್ಮನ ಆಸ್ಥಾನ ಕವಿಯಾಗಿದ್ದಿರಬೇಕೆಂದು ಊಹಿಸಲಾಗಿದೆ (ಕಾವ್ಯಾದರ್ಶ II-278-9, III-50 ರಲ್ಲಿ ಬರುವ 'ರಾಜಸಿಂಹ', 'ಕಾಲಕಾಲ' ಎಂಬ ಬಿರುದುಗಳ ಮೇಲಿಂದ). ಅವನ ಕಾಲ ಕ್ರಿ. ಶ. ೬೮೮–೭೨೨.

'ತ್ರಯೋಽಗ್ನಯಸ್ತ್ರಯೋ ವೇದಾಸ್ತ್ರಯೋ ದೇವಾಸ್ತ್ರಯೋ ಗುಣಾಃ ।
ತ್ರಯೋ ದಂಡಿಪ್ರಬಂಧಾಶ್ಚ ತ್ರಿಷು ಲೋಕೇಷು ವಿಶ್ರುತಾಃ ॥

(ರಾಜಶೇಖರ, ಜಲ್ಹಣನ ಸೂಕ್ತಿಮುಕ್ತಾವಳಿಯಲ್ಲಿ ಉದಾಹೃತ, ಪು. ೪೫)

ಎಂಬ ಪ್ರಸಿದ್ಧಿಯಂತೆ ದಂಡಿ ಬರೆದ ಮೂರನೆಯ ಕಾವ್ಯಗ್ರಂಥವಾವುದು ? ಇದರ ಬಗ್ಗೆ ಭಿನ್ನಾಭಿಪ್ರಾಯಗಳುಂಟು :– 'ದ್ವಿಸಂಧಾನ' ಕಾವ್ಯವೆಂಬುದಿರಬೇಕೆಂದು ಭೋಜನ 'ಶೃಂಗಾರಪ್ರಕಾಶ'ದ ಉಲ್ಲೇಖಗಳಿಂದ ತೋರಿಬರುತ್ತದೆ. 'ಕಲಾ ಪರಿಚ್ಛೇದ' ವಿರಬಹುದೆಂದು ಕೆಲವರೂ 'ಛಂದೋವಿಚಿತಿ'ಯೆಂದು ಕೆಲವರೂ ಊಹಿಸುವದಕ್ಕೆ ಕಾವ್ಯಾದರ್ಶದ ಆ ನಾಮೋಲ್ಲೇಖಗಳೇ ಕಾರಣ. ಆದರೆ ಅವು ಶಾಸ್ತ್ರಗ್ರಂಥಗಳಾಗಿರು ವುದರಿಂದ ರಾಜಶೇಖರನು ಉಲ್ಲೇಖಿಸಿರುವ ಶಕ್ಯತೆ ಕಡಿಮೆಯೇ. ಅಲ್ಲದೆ ಅವು 'ಕಲಾಸೂತ್ರ', 'ಛಂದಶ್ಶಾಸ್ತ್ರ' ಎಂದಂತೆ ಸಾಮಾನ್ಯನಾಮಗಳೇ ಹೊರತು ನಿರ್ದಿಷ್ಟ

ಗ್ರಂಥವಾಚಿಗಳಾಗಿಯೂ ಕಾಣುವುದಿಲ್ಲ. ಒಂದು ವೇಳೆ ಶಾಸ್ತ್ರಗ್ರಂಥವೊಂದನ್ನು ರಾಜಶೇಖರನು ಉಲ್ಲೇಖಿಸುತ್ತಿರಬಹುದಾದರೆ 'ಕಾವ್ಯಾದರ್ಶ'ವನ್ನೇ ಉಲ್ಲೇಖಿಸುತ್ತಿರುವನೆಂದು ಭಾವಿಸುವುದು ಹೆಚ್ಚು ಸಮಂಜಸವಾಗುತ್ತದೆ.

ಎರಡನೆಯದಾಗಿ, ಸಂಸ್ಕೃತ ಅಲಂಕಾರಶಾಸ್ತ್ರದ ಇತಿಹಾಸದಲ್ಲಿ ಉಪಲಬ್ಧ ಗ್ರಂಥಕಾರರೆಲ್ಲ ದಂಡಿಯೇ ಎಲ್ಲರಿಗಿಂತ ಪ್ರಾಚೀನನೆನ್ನುವರೆಂಬುದು ಮಹಾಮಹೋಪಾಧ್ಯಾಯ, ಪಿ. ವಿ. ಕಾಣೆ, ಎ. ಬಿ. ಕೀತ್ ಮುಂತಾದ ವಿದ್ವಾಂಸರ ಅಭಿಪ್ರಾಯ. ಆದರೆ ಹೆರ್ಮಾನ್ ಯಾಕೊಬಿ, ಎಸ್. ಕೆ. ಡೇ ಮುಂತಾದ ವಿದ್ವಾಂಸರು ಭಾಮಹನೇ ದಂಡಿಗಿಂತ ಪ್ರಾಚೀನನೆಂದು ವಾದಿಸುತ್ತಿದ್ದರು. ಸುದೈವದಿಂದ ಈ ಜಟಿಲ ವಿವಾದವು ಈಗ ಕೊನೆಗೊಳ್ಳುವಂತೆ ಡಾ॥ ಕೆ. ಕುಂಜುಣ್ಣಿರಾಜ ಅವರು ಕೆಲವು ಹೊಸ ಸಂಗತಿಗಳನ್ನು ಬೆಳಕಿಗೆ ತಂದಿದ್ದಾರೆ.[7] ಯಾಸ್ಕನ ನಿರುಕ್ತದ ಮೇಲೆ ವ್ಯಾಖ್ಯಾನವನ್ನು ಬರೆದವರಲ್ಲಿ ಮಹೇಶ್ವರನೆಂಬಾತನು ಸ್ಕಂದಸ್ವಾಮಿಯ ಶಿಷ್ಯನೂ ಹರಿಸ್ವಾಮಿಯ ಸಹಾಧ್ಯಾಯಿಯೂ ಆಗಿದ್ದವನು. ಹರಿಸ್ವಾಮಿಯು ತನ್ನ 'ಶತಪಥ ಬ್ರಾಹ್ಮಣ' ವಾಖ್ಯಾರಚನೆಯ ಕಾಲ ಕ್ರಿ. ಶ. ೬೩೮ ಎಂದು ಸ್ಪಷ್ಟವಾಗಿ ಬರೆದಿರುವುದರಿಂದ ಮಹೇಶ್ವರನ ಕಾಲವೂ ಅದೇ ಎಂದು ನಿಸ್ಸಂಶಯ. ಈ ಮಹೇಶ್ವರನು ತನ್ನ ನಿರುಕ್ತವ್ಯಾಖ್ಯೆಯಲ್ಲಿ (X 16 ಮತ್ತು III 20) ಭಾಮಹನ ಎರಡು ವಚನಗಳನ್ನು (ಕಾವ್ಯಾಲಂಕಾರ II 17 ಮತ್ತು II, 51) ಉದಾಹರಿಸಿದ್ದಾನೆ. ಎಂದ ಮೇಲೆ ಭಾಮಹನು ಕ್ರಿ. ಶ. ೬೩೮ಕ್ಕಿಂತ ಹಿಂದಿನವನೇ ಆಗಿರಬೇಕು. ಆದ್ದರಿಂದ ಭಾಮಹನೇ ದಂಡಿಗಿಂತ ಪ್ರಾಚೀನನೆಂದು ಸಿದ್ಧವಾದಂತಾಗುತ್ತದೆ. ಇಷ್ಟಾದರೂ ಭಾಮಹನು ಉತ್ತರ ಭಾರತದ ಪ್ರಥಮ ಕಾವ್ಯಶಾಸ್ತ್ರಕಾರನಾದರೆ ದಂಡಿ ದಕ್ಷಿಣ ಭಾರತದ ಮಹಾಕವಿ ಹಾಗೂ ಪ್ರಥಮ ಲಕ್ಷಣಕಾರನೆಂಬುದಂತೂ ನಿರ್ವಿವಾದವೇ.

ದಂಡಿಯು ಸುಮಾರು ಕ್ರಿ. ಶ. ೭೦೦ ಕ್ಕಿಂತ ಈಚಿನವನಾಗಲಾರನೆನ್ನಲು ಅನೇಕ ಬಹುಮುಖ ಸಾಕ್ಷ್ಯಗಳಿವೆ. ಒಂದು ಮುಖವೆಂದರೆ ದಂಡಿಯ ಸಮಕಾಲೀನರ ಉಲ್ಲೇಖಗಳಂತಿರುವ ಕೆಲವು ವಚನಗಳು. ಎರಡನೆಯ ಪುಲಿಕೇಶಿಯ ಸೊಸೆಯಾದ ವಿಜಯಾ ಅಥವಾ ವಿಜ್ಜಿಕಾ ಎಂಬ ಮಹಾರಾಣಿ ಹೀಗೆ ಸ್ವಪ್ರಶಂಸೆ ಮಾಡಿಕೊಳ್ಳುತ್ತಿದ್ದಳೆಂಬ ಒಂದು ಸುಭಾಷಿತವಿದೆ.

"ನೀಲೋತ್ಪಲದಲಶ್ಯಾಮಾಂ ವಿಜ್ಜಿಕಾಂ ಮಾಮಜಾನತಾ ।
ವೃಥೈವ ದಂಡಿನಾ ಪ್ರೋಕ್ತಂ ಸರ್ವ ಶುಕ್ಲಾ ಸರಸ್ವತೀ" ॥

---

7. ನೋಡಿ :— The Date of Bhamaha, Journal of Oriental Research, Madras, Vol. XXVIII, 1-4, 1958-59. pp. 38-43.

ಇದರಂತೆ ಶ್ರವಣಬೆಳಗೊಳದ ಶಾಸನವೊಂದರಲ್ಲಿ (ಕ್ರಿ. ಶ. ೧೧೨೯) "ಚೂಡಾಮಣಿ" ಎಂಬ ಗ್ರಂಥದ (ಇದರ ಭಾಷೆ ಸಂಸ್ಕೃತವೋ, ಪ್ರಾಕೃತವೋ, ಕನ್ನಡವೋ ಎಂಬುದು ಸಂಶಯಾಸ್ಪದ) ಕರ್ತನಾದ ಶ್ರೀವರ್ಧದೇವನನ್ನು ದಂಡಿ ಹೀಗೆ ಹೊಗಳಿದ್ದನಂತೆ:—

"ಜಹ್ನೋಃ ಕನ್ಯಾಂ ಜಟಾಗ್ರೇಣ ಬಭಾರ ಪರಮೇಶ್ವರಃ ।
ಶ್ರೀವರ್ಧದೇವಃ ಸಂಧತ್ತೇ ಜಿಹ್ವಾಗ್ರೇಣ ಸರಸ್ವತೀಂ ॥

ಆರ್. ನರಸಿಂಹಾಚಾರ್ ಅವರ ಪ್ರಕಾರ 'ಚೂಡಾಮಣಿ'ಯ ಕಾಲ ಸುಮಾರು ಕ್ರಿ. ಶ. ೭೦೦. ಇನ್ನೊಂದು ಮುಖ್ಯವೆಂದರೆ 'ಅವಂತಿಸುಂದರೀಕಥೆ'ಯಲ್ಲಿ ಬರುವ ದಂಡಿಯ ಆತ್ಮವೃತ್ತಾಂತ.

ದಂಡಿಯನ್ನು ಪ್ರಶಂಸೆ ಮಾಡುವ ಮುಂದಿನವರಲ್ಲಿ 'ಪಉಮಚರಿಉ' ಎಂಬ ಅಪಭ್ರಂಶ ಕಾವ್ಯವನ್ನು ಬರೆದ ಸ್ವಯಂಭು ಎಂಬ ಕವಿ:—

"ಣಉ ಉಜ್ಝಿಉ ಪಿಂಗಲಪತ್ಥಾರು ಣವು ಭಮ್ಮಹ ದಂಡಿಯಲಂಕಾರು"

ಎಂದು ಕಾವ್ಯಾರಂಭದಲ್ಲಿ ಭಾಮಹನೊಡನೆ ದಂಡಿಯನ್ನು ಹೆಸರಿಸುವನು.

ಇವನ ಕಾಲವೂ ಸುಮಾರು ಎಂಟನೆಯ ಶತಮಾನವೆಂದು ಹೇಳಲಾಗುತ್ತದೆ. ಇದರಂತೆಯೇ ಸಂಸ್ಕೃತ ಆದಿಪುರಾಣಕಾರನಾದ ಜಿನಸೇನನು (ಕ್ರಿ. ಶ. ೯ನೆಯ ಶತಮಾನ) 'ಅಲಂಕಾರ ಸಂಗ್ರಹ'ದ ಬಗೆಗೆ ಹೇಳುವ ಮಾತು ದಂಡಿಯ 'ಕಾವ್ಯಾದರ್ಶ'ದ ಪ್ರಕ್ರಿಯೆಯನ್ನೇ ಪ್ರತಿಧ್ವನಿಸುತ್ತಿರುವುದನ್ನು ನೋಡಬಹುದು :—

"ಉಪಮಾದೀನಲಂಕಾರಾಂಸ್ತನ್ಮಾರ್ಗದ್ವಯವಿಸ್ತರಮ್ ।
ದಶ ಪ್ರಾಣಾನಲಂಕಾರಸಂಗ್ರಹೇ ವಿಭುರಭ್ಯಧಾತ್" ॥ (XVI. 115)

ಇಲ್ಲಿ ಜಿನನಾಥನು ಆದಿಕಾಲದಲ್ಲಿ ಹೇಳಿದನೆನ್ನಲಾದ ವಿಷಯಗಳಲ್ಲಿ ಮೂಲಭೂತವಾದ 'ಮಾರ್ಗದ್ವಯ' ಮತ್ತು 'ದಶಪ್ರಾಣ'ಗಳಾದ ಗುಣಗಳು ದಂಡಿಯ ಗ್ರಂಥದಲ್ಲಿ ಹೊರತು ಮತ್ತಾವ ಪ್ರಾಚೀನ ಅಲಂಕಾರಗ್ರಂಥದಲ್ಲಿಯೂ ಕಾಣಬರುವುದಿಲ್ಲ. ಮುಂದೆ ಚಂಡೀದಾಸನೆಂಬ ಕಾವ್ಯಪ್ರಕಾಶ ವ್ಯಾಖ್ಯಾನಕಾರನು ಕೂಡ ಶಬ್ದದ ದಶಗುಣಗಳ ಮಾತು ಬಂದಾಗ "ಇದು ದಂಡ್ಯಾದ್ಯುಕ್ತ"ವೆಂದೇ ಉಲ್ಲೇಖಿಸುತ್ತಾನೆ. (ಕಾವ್ಯಪ್ರಕಾಶ ದೀಪಿಕಾ, ಎಸ್. ಪಿ. ಭಟ್ಟಾಚಾರ್ಯರಿಂದ ಸಂಪಾದಿತ, VIII. ಪು. 361).

ದಂಡಿಯ ಬಗೆಗೆ ಮಹಾಕವಿಯೆಂದೂ, ಮಹಾಲಾಕ್ಷಣಿಕನೆಂದೂ ಗೌರವ ತೋರುವ ಸಂಪ್ರದಾಯವನ್ನು ವಿಜಯನಗರದ ಕಾಲದವರೆಗೂ ಸಂಸ್ಕೃತ ಕನ್ನಡ ಕವಿಪರಂಪರೆಯಲ್ಲಿ ಕೂಡ ಕಾಣುತ್ತೇವೆ. ಅತ್ಯಂತ ಮೇಧಾವಿಯೆಂದು ಪ್ರಖ್ಯಾತನಾದ ಅಭಿನವಗುಪ್ತನು ತನ್ನ ನಾಟ್ಯಶಾಸ್ತ್ರವ್ಯಾಖ್ಯಾನವಾದ 'ಅಭಿನವ ಭಾರತಿ'ಯಲ್ಲಿಯೂ 'ಧ್ವನ್ಯಾಲೋಕ'ದ ವ್ಯಾಖ್ಯಾನವಾದ 'ಲೋಚನ'ದಲ್ಲಿಯೂ "ಚಿರಂತನ"ನಾದ ದಂಡಿ

ಯನ್ನು ಹೆಸರೆತ್ತಿ ನಿರ್ದೇಶಿಸುತ್ತಾನೆ; ಅವನ ಕಾವ್ಯಾದರ್ಶದಿಂದ ಅವತರಣಿಕೆಗಳನ್ನು ಉದಾಹರಿಸುತ್ತಾನೆ.[8] ಕರ್ನಾಟಕದ ಸಂಸ್ಕೃತ ಕವಯಿತ್ರಿಯರಲ್ಲೆಲ್ಲ ಅಗ್ರಗಣ್ಯಳಾದ ಗಂಗಾದೇವಿಯು "ತನ್ನ ಮಧುರಾ ವಿಜಯ"ದಲ್ಲಿ ದಂಡಿಯನ್ನು ಹೀಗೆ ಕೊಂಡಾಡಿದ್ದಾಳೆ :—

> ಆಚಾರ್ಯ ದಂಡಿನೋ ವಾಚಾಮಾಚಾಂತಾಮೃತ ಸಂಪದಾಮ್ ।
> ವಿಕಾಸೋ ವೇಧಸಃ ಪತ್ನ್ಯಾ ವಿಲಾಸಮಣಿದರ್ಪಣಃ ॥ (I. 10)

"ಆಚಾರ್ಯ ದಂಡಿಯ ನುಡಿಗಳು ಅಮೃತದ ಸವಿಯನ್ನು ಒಳಗೊಂಡಂಥವು. ಅವುಗಳ ವಿಕಾಸವೆಂದರೆ ಸರಸ್ವತಿಯ ಸಿಂಗಾರಕ್ಕೆ ಕೈಗನ್ನಡಿಯೇ ಸರಿ !" ಇಲ್ಲಿ 'ಮಣಿದರ್ಪಣ' ಎನ್ನುವಾಗ 'ಕಾವ್ಯಾದರ್ಶ'ವನ್ನೇ ಧ್ವನಿಯಿಂದ ಸೂಚಿಸುತ್ತಿರುವುದು ಸ್ಪಷ್ಟವಾಗಿದೆ.

ಇದು ಕನ್ನಡ ಪಂಚತಂತ್ರದ ಕವಿ ದುರ್ಗಸಿಂಹನ ದಂಡಿ ಪ್ರಶಸ್ತಿ :—

> ವಿಪುಲ ಕವಿತಾಗುಣಾಪಾ
> ಸ್ತಪುರಾಣಕವೀಂದ್ರನೆನಿಪ ಮಹಿಮೆಯನಿಂದ್ರ-
> ದ್ವಿಪದುಗ್ಧವಾರ್ಧಿಡಿಂಡೀ
> ರಪಿಂಡ ಪಾಂಡುರಯಶಕ್ಕೆ ದಂಡಿಯೆ ನೋಂತಂ ।[9]

ದುರ್ಗಸಿಂಹನ ಪ್ರಕಾರ ಕವಿತಾಗುಣದ ಅತಿಶಯದಲ್ಲಿ ಪುರಾತನ ಕವೀಂದ್ರರನ್ನೆಲ್ಲ ಸೋಲಿಸಿದ ಮಹಿಮೆ ದಂಡಿಯದು. ಅವರ ಯಶಸ್ಸು ಇಂದ್ರನ ಐರಾವತ ಮತ್ತು ಕ್ಷೀರಸಾಗರದ ತೆರೆಯ ನೊರೆಗಳಂತೆ ಅಚ್ಚ ಬಿಳುಪಾದುದು ! ಅದ್ವಿತೀಯವಾದುದು !!

ಇದು ಚೌಂಡರಸನ (ಕ್ರಿ. ಶ. ೧೩೦೦) ಅಭಿವಂದನೆ :—

> ಮೊದಲೊಳ್ ದಂಡಿಕವೀಶ್ವರಂ ದಶಕುಮಾರಾಖ್ಯಾತ ಚಾರಿತ್ರಮಂ
> ಪದೆಪಿಂ ಸಂಸ್ಕೃತ ಭಾಷೆಯಿಂ ರಚಿಸಿದಂ ಧಾತ್ರೀಜನಸ್ತೋತ್ರಸ ।
> ಮ್ಮದವಪ್ಪಂತದನಾಂ ಪ್ರಸಿದ್ಧಿಯವತಾರಾಕಾರಮಂ ತಾಳ್ದಿ ಸ
> ದ್ವಿದಿತಂ ರಂಗದೊಳಾಡಿ ತೋರ್ಪ ತೆರದಿಂ ಪೇಳ್ವೆಂ ಸುಕರ್ಣಾಟದಿಂ ॥

ಇವನ ಅಭಿನವ ದಶಕುಮಾರ ಚರಿತೆಯು ದಂಡಿಯ ಮೂಲಕಥೆಯ ಹಂದರದ ಮೇಲೆ ಹಂಲುಸಾಗಿ ಹಬ್ಬಿದ ಚಂಪೂಕಾವ್ಯವೇ ಆಗಿದೆ.

---

8. ಚಿರಂತನಾನಾಂ ಚಾಯಮೇವ ಪಕ್ಷಃ. ತಥಾಹಿ ದಂಡಿನಾ ಸ್ವಾಲಂಕಾರ ಲಕ್ಷಣೇs ಭ್ಯಧಾಯಿ— ರತಿಃ ಶೃಂಗಾರತಾಂ ಗತಾ ರೂಪಬಾಹುಲ್ಯಯೋಗೇನ' ಇತಿ (II. 281); 'ಅಧಿರುಹ್ಯ ಪರಾಂ ಕೋಟಿಂ ಕೋಪೋ ರೌದ್ರಾತ್ಮತಾಂ ಗತಃ' ಇತ್ಯಾದಿ ಚ (II. 283)–ಅಭಿನವ ಭಾರತೀ ಸಂಪುಟ I. 1956, ಪು. 272 ಮತ್ತು 'ಯಥಾಹ ದಂಡೀ— ಗದ್ಯಪದ್ಯಮಯೀ ಚಂಪೂಃ' ಲೋಚನ, ಬಾಲಪ್ರಿಯಾ ವ್ಯಾಖ್ಯಾನ ಸಮೇತ, ಕಾಶೀ ಪು. 324.
9. ಎನ್. ಅನಂತರಂಗಾಚಾರ್ ಸಂಸ್ಕರಣ, ಶಾರದಾಮಂದಿರ, ಮೈಸೂರು, 1973, I 20.

II

ಸಂಸ್ಕೃತ ವಿದ್ವತ್ಕ್ಷೇತ್ರದಲ್ಲಿ ದಂಡಿಯನ್ನು ಕುರಿತು ಉಪಲಬ್ಧವಿರುವ ಮುಖ್ಯಾಂಶಗಳನ್ನೆಲ್ಲ ಮೇಲೆ ಸಂಗ್ರಹಿಸಲಾಯಿತು. ೧೯೫೭ ರಲ್ಲಿ ದರ್ಭಾಂಗದ ಮಿಥಿಲಾ ವಿದ್ಯಾಪೀಠದವರು ದಂಡಿಯ ಗ್ರಂಥದ ಮೇಲೆ ಸಿಂಹಳದ ಬೌದ್ಧ ಲೇಖಕನಾದ ರತ್ನಶ್ರೀಜ್ಞಾನನೆಂಬಾತನು ಕ್ರಿ. ಶ. ೯೫೧ ರಲ್ಲಿ ರಚಿಸಿದ "ರತ್ನಶ್ರೀ" ಎಂಬ ವ್ಯಾಖ್ಯಾನವನ್ನು ಮೊಟ್ಟಮೊದಲಿಗೆ ಪ್ರಕಟಿಸಿದನಂತರ ಇನ್ನೂ ಹೊಸ ವಿಷಯಗಳನ್ನರಿಯಲು ತುಂಬಾ ಸಹಾಯವಾಗಿದೆ. ವಿವಿಧ ಹಸ್ತಪ್ರತಿ ಭಂಡಾರಗಳ ಸೂಚಿಗಳಲ್ಲಿ ಹದಿನೈದರವರೆಗೆ ಕಾವ್ಯಾದರ್ಶದ ಮೇಲಿನ ವ್ಯಾಖ್ಯಾನಗಳು ಉಕ್ತವಾಗಿದ್ದರೂ, ಅವುಗಳಲ್ಲಿ ಕೆಲವು–ತರುಣವಾಚಸ್ಪತಿ, ವಾದಿ ಜಂಘಾಲ, ಹೃದಯಂಗಮಾ. ಇತ್ಯಾದಿ— ಪ್ರಕಟಿತವಾಗಿದ್ದರೂ, ಯಾವುವೂ ರತ್ನಶ್ರೀಜ್ಞಾನನ ಟೀಕೆಯಷ್ಟು ಪ್ರಾಚೀನವಲ್ಲ; ಯಾವುವೂ ಇಷ್ಟು ಸಮಗ್ರವಾಗಿ ವಿಷಯಗಳನ್ನು ಚರ್ಚಿಸುವುದಿಲ್ಲ. ಈಗ ರತ್ನಶ್ರೀಜ್ಞಾನನು ಸುರಿಸುವ ಹೊಸ ಬೆಳಕಿನ ಕೆಲವಂಶಗಳನ್ನು ಸಂಕ್ಷೇಪವಾಗಿ ಇಲ್ಲಿ ಹೇಳಲಾಗುತ್ತದೆ :—

೧. ಕಥಾ, ಆಖ್ಯಾಯಿಕಾ ಎಂಬ ಗದ್ಯ ಭೇದಗಳು (I–23–25), ಉಪಮಾ ದೋಷಗಳು (II. 51), 'ವಾರ್ತಾ' ಅಲಂಕಾರವೆ ಎಂಬ ಚರ್ಚೆ (II. 87), 'ಸಸಂದೇಹ, ಅನನ್ವಯ, ಉತ್ಪ್ರೇಕ್ಷಾವಯವ ಇವು ಸ್ವತಂತ್ರವಾಗಿ ಅಲಂಕಾರವೆನಿಸಿಯಾವೆ' ಎಂಬ ಪ್ರಶ್ನೆ (II. 358–359), ಪ್ರತಿಜ್ಞಾ–ಹೇತು–ದೃಷ್ಟಾಂತ–ಹೀನ ದೋಷಗಳ ಅಗತ್ಯ (III. 127), ಪ್ರಹೇಲಿಕೆಗಳ ವಿಷಯ (III. 120), ವೈದರ್ಭ, ಗೌಡ ಮಾರ್ಗಗಳ ವಿಭಾಗ ಪ್ರಶ್ನೆ (I. 40), ಗುಣಗಳ ಸಂಖ್ಯೆ, (I. 41–42), ಉಪಮಾಭೇದಗಳ ಸಂಖ್ಯೆ (II. 30–32), ಹೇತು–ಸೂಕ್ಷ್ಮ–ಲೇಶ ಎಂಬವು ಅಲಂಕಾರಗಳಾಗಬಲ್ಲವೆ ಎಂಬ ಚರ್ಚೆ (II. 235), ಸ್ವಭಾವೋಕ್ತಿಯ ಸ್ಥಾನ (II. 8), ಇವೇ ಮುಂತಾದ ಹತ್ತಾರು ವಿಷಯಗಳಲ್ಲಿ ಭಾಮಹನಿಗೂ ದಂಡಿಗೂ ಮತಭೇದವಿರುವುದು ಸುಪರಿಚಿತವಾಗಿದೆ. ಇಲ್ಲೆಲ್ಲ ತಮ್ಮ ತಮ್ಮ ಮನಸ್ಸಿಗೆ ಬಂದಂತೆ ಭಾಮಹನ ಪೂರ್ವಪಕ್ಷವನ್ನು ದಂಡಿಯು ಖಂಡಿಸುತ್ತಾನೆಂದು ಕೆಲವರು ವಿದ್ವಾಂಸರು ಹೇಳಿದರೆ, ದಂಡಿಯ ಪೂರ್ವಪಕ್ಷವನ್ನು ಭಾಮಹನೇ ಖಂಡಿಸಿರುವನೆಂದು ಮತ್ತೆ ಕೆಲವರೂ, ಇಬ್ಬರಿಗೂ ಮೊದಲಿನ ಸಮಾನ ಲಕ್ಷಣಕಾರನೊಬ್ಬನನ್ನು ಇಬ್ಬರೂ ಖಂಡಿಸುವರೆಂದು ಮತ್ತೆ ಕೆಲವರೂ ವಾದಿಸುತ್ತಿದ್ದರು. ಎಸ್. ಕೆ. ಡೇ ಮತ್ತು ಪಿ. ವಿ. ಕಾಣೆ ಅವರ ಗ್ರಂಥಗಳಲ್ಲಿ ಈ ವಿವಾದವನ್ನು ವಿಸ್ತಾರವಾಗಿ ನೋಡಬಹುದು. ಆದರೆ ಇದಮಿತ್ಥಮೆಂದು ನಿರ್ಣಾಯಕವಾಗುವಂತಹ ಒಂದು ವ್ಯಾಖ್ಯಾಸಂಪ್ರದಾಯ ಅವರ ಮುಂದೆ ಇರಲಿಲ್ಲ. ರತ್ನಶ್ರೀಜ್ಞಾನನ ವ್ಯಾಖ್ಯೆಯಲ್ಲಿ ಅನೇಕ ಸಲ ಭಾಮಹನ ಹೆಸರು ಮಾತ್ರವಲ್ಲ, ವಚನಗಳೂ ಕೂಡ, ಬಹು ಹೆಚ್ಚು ಸಂಖ್ಯೆಯಲ್ಲಿ ಉದಾಹೃತ

ವಾಗಿವೆ. ಮತ್ತು ಎಲ್ಲ ಸಂದರ್ಭಗಳಲ್ಲೂ ಭಾಮಹನೇ ಪೂರ್ವವರ್ತಿಯೆಂದೂ ದಂಡಿಯೇ ಅವನನ್ನು ಟೀಕಿಸುವ ಉತ್ತರಕಾಲೀನ ವಿಮರ್ಶಕನೆಂದೂ ಸ್ಫುಟವಾಗಿ ತೋರಿಸಲಾಗಿದೆ.

೨. ದಂಡಿಯು 'ಕಾವ್ಯಾದರ್ಶ'ಕ್ಕೆ 'ಕಾವ್ಯಲಕ್ಷಣ'ವೆಂಬ ಸಾಮಾನ್ಯವಾಚಿ ಹೆಸರೂ ಇದ್ದುದು ರತ್ನಶ್ರೀಜ್ಞಾನನ ವ್ಯಾಖ್ಯೆಯಿಂದ ಮಾತ್ರ ತಿಳಿಯುತ್ತದೆ. ಈ ಹೆಸರೇ ಪಾಳಿ ಹಾಗು ಪ್ರಾಕೃತ ಲಕ್ಷಣ ಗ್ರಂಥಕಾರರಿಗೆ ಪರಿಚಿತವಿದ್ದಂತೆ ಅಭಿನವ ಗುಪ್ತನಿಗೂ ಪರಿಚಿತವಿದ್ದುದನ್ನು ಮೇಲೆ ನೋಡಲಾಯಿತು.

೩. ರತ್ನಶ್ರೀಜ್ಞಾನನು ಪ್ರಪ್ರಥಮವಾಗಿ ಅಶ್ವಘೋಷ, ಮಾತೃಚೇಟ, ಆರ್ಯಶೂರ, ಧರ್ಮಕೀರ್ತಿ, ಮುಂತಾದ ಬೌದ್ಧ ಕವಿಗಳಿಂದ ಅಲಂಕಾರಗಳಿಗೆ ಉದಾಹರಣೆಗಳನ್ನು ಸಂಗ್ರಹಿಸಿದ್ದಾನೆ.

೪. ಆರ್ಯಶೂರನ 'ಜಾತಕಮಾಲಾ' ಗ್ರಂಥವು ಚಂಪೂಕಾವ್ಯಕ್ಕೆ ಉದಾಹರಣೆ ಯೆಂದು ನಿಸ್ಸಂದಿಗ್ಧವಾಗಿ ಇವನು ಬರೆದಿದ್ದಾನೆ. "ಚಂಪೂರಿತಿ ಯಾವತ್; ಸಾ ಚ ಜಾತಕಮಾಲಾ ದಮಯಂತ್ಯಾದಿ" (ಪು. ೨೩). ಇದರಿಂದ ದಂಡಿಯು ಕನ್ನಡ ಚಂಪೂ ಗ್ರಂಥಗಳ ಪ್ರಭಾವದಿಂದ ಸಂಸ್ಕೃತದಲ್ಲಿಯೂ ಅದನ್ನೊಂದು ಸಾಹಿತ್ಯಪ್ರಕಾರ ವಾಗಿ ಪರಿಗಣಿಸಿದನೆಂಬ ಪ್ರೊ॥ ರಂ. ಶ್ರೀ. ಮುಗಳಿಯವರ ವಾದ ಶಿಥಿಲವಾಗುತ್ತದೆ. ಏಕೆಂದರೆ ಆರ್ಯಶೂರನ ಕಾಲ ದಂಡಿಗಿಂತಲೂ ತುಂಬಾ ಪ್ರಾಚೀನವಾಗಿದ್ದು, ಪಾಶ್ಚಾತ್ಯ ವಿದ್ವಾಂಸರು ಅದನ್ನು ಸುಮಾರು ಕ್ರಿ. ಶ. ೪೦೦ ಎನ್ನುತ್ತಾರೆ.

೫. ಡಾ॥ ಎಂ. ಎಂ. ಕಲಬುರ್ಗಿಯವರು ಉಲ್ಲೇಖಿಸುವಂತೆ[10] "ಸಂಘಾತ" ಎಂಬ ಸಾಹಿತ್ಯ ರೂಪದ ಸ್ವರೂಪನಿರ್ಣಯಕ್ಕೆ ರತ್ನಶ್ರೀಜ್ಞಾನನ ವ್ಯಾಖ್ಯಾನ ದಿಂದಲೂ ತುಂಬಾ ಉಪಯೋಗ ಬೀಳುತ್ತದೆ. ಅವರು "ದಂಡಿ ತಮಿಳುನಾಡಿನ ಕಾಂಜೀವರಂ ನಿವಾಸಿ. ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಸಂಘಾತದ ಉಲ್ಲೇಖ ಪ್ರಥಮ ಸಲ ಬಂದುದು ಈತನ ಕೃತಿಯಲ್ಲಿ. ತನ್ನ ನಾಡಿನ ಸಾಹಿತ್ಯವೆಂದೋ, ಇದೂ ಒಂದು ಗಮನಿಸಬೇಕಾದ ಸಾಹಿತ್ಯಪ್ರಕಾರವೆಂದೋ ಈತನು ಸಂಘಂ ಸಾಹಿತ್ಯಕ್ಕೆ 'ಸಂಘಾತ' ಎಂದು ಹೆಸರಿಟ್ಟು ಕಾವ್ಯ ಮೀಮಾಂಸೆಯಲ್ಲಿ ಹೊಸ ಗದ್ದುಗೆ ನೀಡಿರುವ ಸಾಧ್ಯತೆಯಿದೆ-" ಎಂದು ಊಹಿಸುತ್ತಾರಲ್ಲದೆ "ಕನ್ನಡ ಇಡುಕುಂಗಬ್ಬವು ತಮಿಳಿನ ಸಂಘ ಸಾಹಿತ್ಯವನ್ನು ಹೋಲುವ ಸಾಹಿತ್ಯ ಜಾತಿ" ಎಂದು ಹೇಳಬೇಕಾಗುತ್ತದೆ– ಎಂದಿದ್ದಾರೆ." ಇದಕ್ಕೆ ಉಪಷ್ಟಂಭಕವಾಗಿ ಅವರು ಅಧುನಿಕ ತಮಿಳರಾದ ನಾರಾ

10. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೩ ಪು. ೨೮೭.

11. ಅಲ್ಲಿಯೇ ಪು. ೨೮೮.

ಯಣ ಅಯ್ಯರ್ ಮಾಡುವ ಊಹೆಯನ್ನೂ, ಅದಕ್ಕೂ ಮುಂಚೆ ತಮಿಳು ನಾಡಿನ ಒಬ್ಬ ವ್ಯಾಖ್ಯಾಕಾರ ('ಹೃದಯಂಗಮಾ') ಹೇಳಿರುವ ವಚನವನ್ನೂ ಉಲ್ಲೇಖಿಸಿದ್ದಾರೆ.

ಆದರೆ ಸಂಸ್ಕೃತದಲ್ಲಿ 'ಮುಕ್ತಕ', 'ಕುಲಕ', 'ಕೋಶ', ಯಾವುದನ್ನೇ ಆಗಲಿ ಬೇರೆ ಬೇರೆ ಸಾಹಿತ್ಯ ಜಾತಿಯೆಂದು ತಿಳಿಯುವ ಪರಂಪರೆಯೇ ಇಲ್ಲ. ಎಲ್ಲವೂ 'ಮಹಾಕಾವ್ಯ' ಅಥವಾ 'ಸರ್ಗಬಂಧ'ದ ಅಂಶಾಂಗಗಳೆಂದೇ ತಿಳಿಯುವ ಪರಂಪರೆ ಲಾಕ್ಷಣಿಕರಲ್ಲಿದೆ. ಕೋಶಕಾರರು ಕೂಡ ಇವನ್ನೆಲ್ಲ ಭಿನ್ನ ಭಿನ್ನ ಸಾಹಿತ್ಯ ಜಾತಿಗಳೆಂದು ಎಲ್ಲಿಯೂ ವರ್ಗೀಕರಿಸಿಲ್ಲ. ಸಂಸ್ಕೃತ ಲಾಕ್ಷಣಿಕರ ಪ್ರಕಾರ ಒಂದು ಪದ್ಯದಲ್ಲೇ ಕರ್ತೃ–ಕ್ರಿಯೆ ಮುಂತಾದುವೆಲ್ಲ ಬಂದಿದ್ದು, ಅನ್ವಯಪೂರ್ಣವಾಗುವಂತಿದ್ದು, ಇನ್ನೊಂದರ ಅಪೇಕ್ಷೆಯಿಲ್ಲದಂತಿರುವುದಾದರೆ ಆ ಬಿಡಿ ಪದ್ಯವೇ 'ಮುಕ್ತಕ'. ಅದು ಮಹಾಕಾವ್ಯದ ಒಳಗೂ ಬರಬಹುದು; ಹೊರಗೂ ಇರಬಹುದು. ಆ ಕ್ರಿಯೆ ಒಂದೇ ಪದ್ಯದಲ್ಲಿ ಬಾರದೆ ಎರಡು ಅಥವಾ ಹೆಚ್ಚಿನ ಪದ್ಯಗಳೊಡನೆ ಸೇರಿಸಿ ಓದಿದಾಗ ಕಡೆಗೆ ಬರುತ್ತಿದ್ದರೆ, ಅರ್ಥ ಪೂರ್ತಿಯಾಗಲು ಒಂದಕ್ಕಿಂತ ಹೆಚ್ಚು ಪದ್ಯಗಳು ಬೇಕಾಗುವಾಗ ಆ ಗುಂಪಿಗೆ ಕುಲಕ ಮುಂತಾದ ಬೇರೆ ಹೆಸರುಗಳು. 'ಕೋಶ'ವೆಂದರೆ ಅನೇಕ ಕವಿಗಳು ಬರೆದ ಮುಕ್ತಕಗಳ ಸಂಗ್ರಹ–ಒಂದೇ ವಿಷಯದ ಮೇಲಿದ್ದಾಗ. ಹಾಗೆಯೇ 'ಸಂಘಾತ'ವೆಂದರೆ ಒಬ್ಬನೇ ಕವಿ ಒಂದೇ ವಿಷಯದ ಮೇಲೆ ಬರೆದ ಅನೇಕ ಪದ್ಯಗಳ ಸಂಗ್ರಹ. ತಮಿಳಿನ 'ಸಂಘ' ಸಾಹಿತ್ಯದಲ್ಲಿ ಅನೇಕ ಕವಿಗಳ ಏಕವಿಷಯಕ ಪದ್ಯಗಳೇ ಹೆಚ್ಚಾಗಿವೆ—ಇವೆಲ್ಲ ಸಂಸ್ಕೃತ ಸಾಂಪ್ರದಾಯಿಕ ಅರ್ಥದಲ್ಲಿ 'ಕೋಶ'ಗಳಾಗಬಲ್ಲವೇ ಹೊರತು 'ಸಂಘಾತ'ಗಳಲ್ಲ. ಒಂದು ಮಹಾಕಾವ್ಯದ ಅಂಗವಾಗಿ ಅಥವಾ ಸ್ವತಂತ್ರವಾಗಿ ಒಂದು ಋತು ವರ್ಣನೆ, ವನವರ್ಣನೆ ಮುಂತಾದ ಏಕಕವಿಕೃತ ಪದ್ಯಗಳ ಗುಂಪು ಮಾತ್ರ ಸಂಘಾತವೆನಿಸುತ್ತದೆ. ತಮಿಳಿನಲ್ಲಿ ಏಕಕವಿಕೃತವಾದ 'ಕುರಳ್'ನಲ್ಲಿ ಕೂಡ ಸಂಘ ಸಾಹಿತ್ಯ ಜಾತಿ 'ಸಂಘಾತ'ವೆಂಬ ಹೆಸರಿನಿಂದ ಸಂಸ್ಕೃತ ಕಾವ್ಯಜಾತಿಯಾಗಿ ಗದ್ದುಗೆಯೇರಿರುವ ಸಂಭವ ಕಡಮೆಯೇ.

ಈಗ ರತ್ನಶ್ರೀಜ್ಞಾನ ಇದನ್ನು ಕುರಿತು ಹೇಳುವುದನ್ನು ನೋಡೋಣ. ಅವನು ನಿಸ್ಸಂದಿಗ್ಧವಾಗಿ ಹೇಳಿದ್ದಾನೆ—

> "ಸಂಘಾತಾದ್ಯಪಿ ವೃತ್ತಜಾತಿ ಪ್ರಕಾರೋऽಸ್ತಿ
> ಛಂದಶ್ಶಾಸ್ತ್ರೋಕ್ತಃ; ಸ ಇಹ ಕಿಂ ನ ದರ್ಶಿತಃ ಇತಿ ಚೇತ್" (ಪು.–9)

'ಛಂದಶ್ಶಾಸ್ತ್ರದಲ್ಲಿ ಹೇಳಿರುವ ವೃತ್ತ ಜಾತಿ ಪ್ರಕಾರವಾದ 'ಸಂಘಾತ'ವೆಂಬುದೂ ಇದೆಯಲ್ಲವೆ ? ಅದನ್ನೇಕೆ ಇಲ್ಲಿ ಹೇಳಲಿಲ್ಲ ?' ಈ ಮಾತಿನಿಂದ ಸಂಘಾತವು ಸಾಹಿತ್ಯ ಜಾತಿಯಾಗಿರದೆ 'ಛಂದೋವೃತ್ತ ಜಾತಿ'ಯೆಂಬುದು ಸ್ಪಷ್ಟವಾಗುತ್ತದೆ. ಒಂದೇ ಛಂದಸ್ಸಿನಲ್ಲಿ ಒಬ್ಬನೇ ಕವಿ ಒಂದೇ ವಿಷಯವನ್ನು ಹತ್ತಾರು ಪದ್ಯಗಳಲ್ಲಿ ಒಟ್ಟಾಗಿ

ವಿವರಿಸಿದಾಗ ಮಾತ್ರ ಅದು 'ಸಂಘಾತ'. ಈ ಲಕ್ಷಣ ತಮಿಳಿನ ಸಂಘ ಸಾಹಿತ್ಯಕ್ಕೆ ಅನ್ವಯಿಸದು. ಆದ್ದರಿಂದಲೇ ರಾಜಶೇಖರನು ಬರಿಯ 'ಮುಕ್ತಕ ಕವಿ'ಗಳನ್ನೂ 'ಸಂಘಾತ ಕವಿ'ಗಳನ್ನೂ ಅಪಹಾಸ್ಯ ಮಾಡುತ್ತಾನೆ :—

ಮುಕ್ತಕೇ ಕವಯೋಽನಂತಾಃ ಸಂಘಾತೇ ಕವಯಃ ಶತಮ್ ।
ಮಹಾಪ್ರಬಂಧೇ ತು ಕವಿರೇಕೋ ದ್ವೌ ದುರ್ಲಭಾಸ್ತ್ರಯಃ ॥[12]

'ಬರಿಯ ಬಿಡಿಪದ್ಯಗಳನ್ನು ಬರೆಯುವ ಕವಿಗಳಿಗೆ ಲೆಕ್ಕವೇ ಇಲ್ಲ; ಸಂಘಾತಗಳನ್ನು ಬರೆಯಬಲ್ಲವರು ಎಲ್ಲಿಯೋ ನೂರು ಜನ. ಆದರೆ ಮಹಾ ಕಾವ್ಯವನ್ನು ರಚಿಸುವವರು ಒಬ್ಬನೋ ಇಲ್ಲವೆ ಇಬ್ಬರೋ, ಅಷ್ಟೆ! ಮೂವರು ಸಿಕ್ಕಲಾರರು.'

ಇದೂ ಅಲ್ಲದೆ, 'ಸಂಘಾತ' ಶಬ್ದವು ಯಾಸ್ಕನ 'ನಿರುಕ್ತ'ದಲ್ಲಿಯೇ ಪ್ರಥಮತಃ ಕಾಣಬರುತ್ತದೆ:— 'ಸ್ತೂಪಃ ಸ್ತ್ಯಾಯತೇಃ ಸಂಘಾತಃ' (X. 33) 'ಸ್ತುಕಃ ಸ್ತ್ಯಾಯತೇಃ ಸಂಘಾತಃ' ((XI. 32). ವೇದಾಂತದಲ್ಲಿ ಅವಿದ್ಯೆಯನ್ನು 'ಕರ್ಮಸಂಘಾತ'ವೆಂದೂ (ಸರ್ವದರ್ಶನ ಸಂಗ್ರಹ) ವಿಶ್ವವನ್ನು ಮೂವತ್ತಾರು ತತ್ತ್ವಗಳ 'ಸಂಘಾತ'ವೆಂದೂ ಹೇಳುವುದು ಸುಪ್ರಸಿದ್ಧ. ಆದ್ದರಿಂದ ಆ ಶಬ್ದ ತಮಿಳಿನಿಂದ ಬಂದಿರಲಾರದು.

೬. ರತ್ನಶ್ರೀಜ್ಞಾನನು ಪ್ರಪ್ರಥಮವಾಗಿ ಪ್ರಾಕೃತ ವ್ಯಾಕರಣಕಾರನಾದ 'ಹರಿವೃದ್ಧ'ನೆಂಬಾತನ ಉಕ್ತಿಗಳನ್ನು ಅನೇಕ ವೇಳೆ ಉದಾಹರಿಸಿದ್ದಾನೆ.

೭. ಪ್ರಾಕೃತ ಮತ್ತು ಅಪಭ್ರಂಶ ಪ್ರಕಾರಗಳ ವಿವೇಚನೆಯಲ್ಲಿ, ಮಹಾರಾಷ್ಟ್ರೀ ಮುಂತಾದ ಪ್ರಾಕೃತಗಳ ಪ್ರಾದೇಶಿಕ ಸೀಮೆಗಳ ನಿರ್ಣಯದಲ್ಲಿ ರತ್ನಶ್ರೀಜ್ಞಾನನು ಉದ್ಧರಿಸುವ ವಚನಗಳು ನೆರವೀಯುತ್ತವೆ.

೮. ಪೈಶಾಚೀ ಭಾಷೆಯಲ್ಲಿ ರಚಿತವಾದ "ಬೃಹತ್ಕಥೆ"ಯೊಂದೇ ವಿದ್ವಾಂಸರಿಗೆ ಗೊತ್ತಿತ್ತು. ಇಲ್ಲಿ "ರತ್ನಪ್ರಭಾ" ಎಂಬ ಇನ್ನೊಂದು ಗ್ರಂಥವೂ ಪೈಶಾಚಿಯಲ್ಲಿದ್ದ ವಿಷಯ ಮೊಟ್ಟಮೊದಲಿಗೆ ತಿಳಿದುಬರುತ್ತದೆ.

೯. "ವಕ್ರೋಕ್ತಿ"ಗೆ ರತ್ನಶ್ರೀಜ್ಞಾನನು ವಿನೂತನವಾದ ವ್ಯಾಖ್ಯೆಯನ್ನು ಹೇಳಿದ್ದಾನೆ.

"ಕಾವ್ಯಂ ಹಿ ವಕ್ರೋಕ್ತಿ ಪ್ರಧಾನಂ. ಅಯಂ ಚ ಕ್ರಮಃ ವಕ್ರೋಕ್ತಿಸ್ವಭಾವಃ
ಯದ್ವಿಪಕ್ಷಪಕ್ಷವರ್ಣನದ್ವಾರೇಣ ಪ್ರತಿಪಕ್ಷೋತ್ಕರ್ಷಕಥನಮ್"

ಎಂದು I. 22 ಕ್ಕೆ ವ್ಯಾಖ್ಯಾನ ಮಾಡಿದ್ದಾನೆ. ಎಂದರೆ, ಕಾವ್ಯವು 'ವಕ್ರೋಕ್ತಿ'ಯನ್ನು ಪ್ರಧಾನವಾಗಿ ಹೊಂದಿರುತ್ತದೆ. ವಿರೋಧಪಕ್ಷದ ಗುಣಾತಿಶಯವನ್ನು ವರ್ಣಿಸಿ ಅದನ್ನು ಗೆದ್ದ ನಾಯಕನ ಮೇಲ್ಮೆಯನ್ನು ಪ್ರಕಾರಾಂತರದಿಂದ ಹೊರಗೆಡಹುವುದೂ ವಕ್ರೋಕ್ತಿಯ ಪ್ರಕಾರ'ವೆಂದು ತಾತ್ಪರ್ಯ.

12. ಕಾವ್ಯಮೀಮಾಂಸಾ. ಬರೋಡಾ ಸಂಸ್ಕರಣ. ಪು. 54

೧೦. I, 9 ರಲ್ಲಿ ಬರುವ "ಕ್ರಿಯಾವಿಧಿ" ಶಬ್ದಕ್ಕೆ "ಕ್ರಿಯಾಕಲ್ಪ" ಎಂದರೆ "ಕಾವ್ಯಾಲಂಕಾರ" ಎಂದು ಮೊಟ್ಟಮೊದಲಿಗೆ ಇಲ್ಲಿ ಅರ್ಥ ಹೇಳಿದೆ. ಅಲಂಕಾರ ಶಾಸ್ತ್ರದ ಮೊದಲ ಹೆಸರು "ಕ್ರಿಯಾಕಲ್ಪ"ವೆಂದು ಈ ಮುಂಚೆ ಮಾಡಿದ್ದ ಡಾ॥ ವಿ. ರಾಘವನ್ ಅವರ ಊಹೆಗೆ ಸಮರ್ಥನೆ ಸಿಕ್ಕಂತಾಗಿದೆ.

೧೧. ಸಾಹಿತ್ಯದ ಲಕ್ಷಣ ಹೇಳುವಾಗ 'ಶಬ್ದ', 'ಅರ್ಥ' ಎಂಬ ಮಾತನ್ನು ಎಲ್ಲರೂ ಬಳಸುವರಷ್ಟೇ! ಅವಕ್ಕೆ ಅತ್ಯಂತ ಸಂಕುಚಿತಾರ್ಥವನ್ನು ಕಲ್ಪಿಸುವ ವ್ಯಾಖ್ಯಾಕಾರರೇ ಹೆಚ್ಚು. ಆದರೆ ಕವಿಯು ವರ್ಣಿಸಲು ಹೊರಟ ವಿಷಯವೆಲ್ಲ ಒಟ್ಟಾಗಿ ಕೂಡಿ "ಅರ್ಥ"ವೆನಿಸುವುದೆಂದೂ (ಉದಾಹರಣೆಗೆ ಕಾಳಿದಾಸನ 'ರಘುವಂಶ'ದ ವಿಷಯ), ಆ ಅರ್ಥ ಬೋಧಕವಾಗಿ ಪ್ರಯುಕ್ತವಾದ ಪದಾವಲಿ ಅಥವಾ ಭಾಷೆಯೆಲ್ಲ "ಶಬ್ದ"ವೆಂದೂ ಯೋಗ್ಯವಾದ ವ್ಯಾಪಕಾರ್ಥವನ್ನು ರತ್ನಶ್ರೀಜ್ಞಾನನು ಹೇಳುತ್ತಾನೆ. (I. 10 ರ ಕೆಳಗೆ).

೧೨. "ಕಾವ್ಯಾಲಾಪ" ಎಂಬ ಶಬ್ದವು "ಕಾವ್ಯಾಲಾಪಾಂಶ್ಚ ವರ್ಜಯೇತ್" ಮುಂತಾದ ಸೂಕ್ತಿಗಳಲ್ಲಿ ಸುಪ್ರಸಿದ್ಧವಿದ್ದರೂ ಅದರ ಭಾವಾರ್ಥ ಸಂದಿಗ್ಧವೇ ಇದ್ದಿತು. ಇಲ್ಲಿ ಪ್ರಥಮತಃ 'ವಿದಗ್ಧರ ಗೋಷ್ಠಿ' ಎನ್ನುವುದಕ್ಕೆ ಪರ್ಯಾಯವಾಗಿ 'ಕಾವ್ಯಾಲಾಪ' ಶಬ್ದವನ್ನು ಬಳಸುವ ರತ್ನಶ್ರೀಜ್ಞಾನನು ಈ ಶಬ್ದದ ಅರ್ಥದ ಮೇಲೆ ಬೆಳಕನ್ನು ಚೆಲ್ಲಿದ್ದಾನೆ. ಅಲ್ಲಿ ಆ ಕಾವ್ಯಗೋಷ್ಠಿಗಳನ್ನು ಅನೇಕ ಸುಂದರ ವಿಶೇಷಣಗಳಿಂದ ಅಭಿನಂದಿಸಿ ಹಿಂದಿನ ಕಾಲದಲ್ಲಿ ಅವುಗಳಿಗಿದ್ದ ಪ್ರಾಶಸ್ತ್ಯವನ್ನು ಎತ್ತಿ ತೋರಿಸಿದ್ದಾನೆ:—

> "ವಿದಗ್ಧಾ: = ಕವಯ:, ತೇಷಾಂ ಗೋಷ್ಠೀಷು = ಕಾವ್ಯಾಲಾಪೇಷು,
> ವಿದ್ಯಾರಮಣೀಮೇಖಲಾನೂಪುರಶಿಂಜಿತೇಷು, ಸಕಲಕಲಾನದೀವಿಶ್ರಾಮ
> ಸಮುದ್ರೇಷು, ನಾನಾರಸಭಾವಾಭಿನಯಮಹಾನಟೇಷು, ಶಬ್ದಪಾರಾಯಣ-
> ಮಹಾರ್ಣವರತ್ನಾಂಕುರೇಷು, ಶಾಸ್ತ್ರಪರಿಶ್ರಮಫಲೋದಯಮಹೋತ್ಸ-
> ವೇಷು, ಕವಿಸಾಗರಾಮೃತೇಷು. ಬುಧಜನಮನಸ್ತಸ್ಕರೇಷು.
> ವಿವಿಧಾಲಂಕಾರಹಾರಿಷು. ವಂದನೀಯೇಷು, ವಿದಗ್ಧತಾ ಭೂಮಿಸೀಮಾಯಮಾ
> ನೇಷು, ವಿದ್ವತ್ಸರಣಿಪ್ರಭಾಭೂತಾತಿಶಯೇಷು, ಸ್ವಯಂಕೃತೇಷು,
> ಅಧ್ಯಾತ್ಮಶಾಸ್ತ್ರಕಲಾ ಕೌಶಲವರ್ಣನೇಷು, ಸತಾಮುಚಿತೇಷು. ತದೇಕ-
> ರೂಪೇಷ್ವಪಿ ಪ್ರತಿಪುರುಷಮಪೂರ್ವಪರಿಣಾಮಿತಯಾ ಪರಮಾತ್ಮ-
> ದೇಶೀಯೇಷು. ಸರಸ್ವತೀಪ್ರಸಾದಮಹಾಪರೇಷು. ಲಕ್ಷ್ಮೀಪೂಜಾ
> ಭಾಜನೇಷು. ನಿರುದ್ವೇಗಸುಖಸ್ವಭಾವತ್ವಾತ್ ಕೈವಲ್ಯಕಲ್ಪೇಷು.
> ಅತಲಭಾವಗಂಭೀರತ್ವಾತ್ ಪರಾರ್ಥಪ್ರಸಕ್ತಿಗುಣಯೋಗಾಚ್ಚ ಸಾಗರೇ-
> ಷ್ವಿವ ಮಹಾಹ್ರದೇಷು, ಸತ್ಪುರುಷಚರಿತಾದರ್ಶಭಿತ್ತಿಷು, ಯಶಃ-
> ಕುಸುಮಾಮೋದಸುರಭಿಷು, ಮಹಾಕವಿಕೀರ್ತಿಸ್ತಂಭೇಷು, ಕಿಂ ಬಹುನಾ
> ಸಂಸಾರಸಾರಸಂದೋಹೇಷು." (I. 105).

ಒಂದು ಸ್ವತಂತ್ರ ಕಾವ್ಯದಂತೆ ಈ ಗೋಷ್ಠೀವರ್ಣನೆ ಬಂದಿದೆ. ಪ್ರಾಚೀನ ಸಂಸ್ಕೃತ ಸಾಹಿತ್ಯದ ವ್ಯವಸಾಯಕ್ಕೆ ರಸಿಕ ಗೋಷ್ಠಿಗಳ ಕೊಡುಗೆಯೇನೆಂಬುದು ಇದ ರಿಂದ ಮೊದಲಿಗೆ ವ್ಯಕ್ತವಾಗುವಂತಿದೆ.

III

ಇನ್ನು ದಂಡಿಯ ಕಾವ್ಯಚಿಂತನೆಯ ವೈಶಿಷ್ಟ್ಯವನ್ನು ಕುರಿತು ಒಂದು ಮಾತು. ಅವನಿಗೆ ಭಾಮಹನಂತೆಯೇ ಸಮಾಸೋಕ್ತಿ, ಆಕ್ಷೇಪಾದಿ ಅಲಂಕಾರಗಳನ್ನು ವಿವರಿಸು ವಾಗ ವ್ಯಂಗ್ಯಾರ್ಥದ ಕಲ್ಪನೆಯಿದ್ದುದು ಸ್ಪಷ್ಟ. ಆದರೆ ಧ್ವನಿವಾದಿಗಳಂತೆ ವ್ಯಂಗ್ಯಾ ರ್ಥವೇ ಕಾವ್ಯದಲ್ಲಿ ಪ್ರಧಾನವೆಂಬ ಭಾವನೆಯಿರಲಿಲ್ಲ. ಕಾವ್ಯದಲ್ಲಿ ಶೋಭಾದಾಯಕ ವಾದ ಧರ್ಮಗಳಿಗೆಲ್ಲ "ಅಲಂಕಾರ" ವೆಂದೇ ಸಾಮಾನ್ಯವಾಗಿ ದಂಡಿ ಹೇಳುತ್ತಾನೆ. "ರಸ" ಶಬ್ದವನ್ನು ಕೂಡ ಅವನು ಒಮ್ಮೆ ಮಾಧುರ್ಯಗುಣಕ್ಕೆ ಅನ್ವಯಿಸುತ್ತ ಶಿಥಿಲ ವಾಗಿ ಶೋಭಾವಹ ಧರ್ಮವೆಂಬರ್ಥದಲ್ಲೇ ಬಳಸುತ್ತಾನೆ. ಮುಂದೆ ಭರತೋಕ್ತ ಅರ್ಥದಲ್ಲಿ ಬಳಸಿದರೂ ಅದನ್ನು ಅಲಂಕಾರವೆಂದೇ ಕರೆಯುತ್ತಾನೆ. 'ಸಂಧಿ', 'ಸಂಧ್ಯಂಗ', 'ವೃತ್ತಿ', 'ವೃತ್ತ್ಯಂಗ' ಮುಂತಾದ ಭರತೋಕ್ತ ಪ್ರಕ್ರಿಯೆಗಳೆಲ್ಲ ದಂಡಿಯ ದೃಷ್ಟಿಯಲ್ಲಿ ಅಲಂಕಾರಗಳೇ. ಒಂದು ಪ್ರಬಂಧದಲ್ಲಿ ಮೊದಲಿನಿಂದ ಕಡೆಯವರೆಗೆ ಅನುಗತವಾಗಿ ಬರುತ್ತ ಏಕಸೂತ್ರತೆಯನ್ನು ಕಲ್ಪಿಸುವ ವಸ್ತುಸಂವಿಧಾನ ಅಥವಾ ಅವನ ಮಾತಿನಲ್ಲಿ 'ಭಾವಿಕತ್ವ' ಕೂಡ ಒಂದು ಅಲಂಕಾರವೇ. ಹೀಗೆ ಮೇಲ್ನೋಟಕ್ಕೆ ದಂಡಿಯು ಎಲ್ಲ ರೀತಿಯಿಂದ ಅಲಂಕಾರಪ್ರಸ್ಥಾನದ ಪುರಸ್ಕರ್ತನಾಗಿಯೇ ಕಾಣುತ್ತಾನೆ.

ಆದರೆ ವಸ್ತುತಃ ದಂಡಿಯ ವೈಶಿಷ್ಟ್ಯವಿರುವುದು ಅವನ ಅಲಂಕಾರ ನಿರ್ವಚನ ಕ್ಕಿಂತ ಹೆಚ್ಚಾಗಿ 'ಮಾರ್ಗ'ನಿಷ್ಠ ಗುಣಗಳ ವಿವೇಚನೆಯಲ್ಲಿ ಎಂಬುದು ಗಮನಾರ್ಹ. ಭಾಮಹನು ಮಾರ್ಗಗಳ ವಿವೇಚನೆ ನಿರುಪಯುಕ್ತವೆಂದು ಕೈಬಿಟ್ಟಿದ್ದನು. ಅದಕ್ಕೂ ಮುಂಚೆ ಬಾಣನಲ್ಲಿಯೇ ಮಾರ್ಗವಿಭೇದಗಳ ಕುರುಹು ಕಾಣಿಸುತ್ತದೆ. ವೈದರ್ಭಿ ಅಥವಾ ದಕ್ಷಿಣಮಾರ್ಗದ "ದಶಪ್ರಾಣ"ಗಳೆಂಬ ಹತ್ತು ಗುಣಗಳನ್ನು ಸ್ಪಷ್ಟವಾಗಿ ವಿಭಜಿಸಿ ನಿದರ್ಶಿಸಿದ ಕೀರ್ತಿ ದಂಡಿಯದು. ಭರತನಲ್ಲಿ ಸ್ಫುಟವಾದ ನಿದರ್ಶನಗಳೊಂದೂ ಇಲ್ಲ. ಈ ಹತ್ತೂ ಕೂಡಿ ಬರುವ ವೈದರ್ಭ ಮಾರ್ಗವನ್ನು ಉತ್ತಮ ಕಾವ್ಯಲಕ್ಷಣ ವೆಂದು ತೀರ್ಮಾನಿಸಿ ಕಾಳಿದಾಸನನ್ನೇ ಅದಕ್ಕೆ ಪ್ರತಿನಿಧಿಯನ್ನಾಗಿ ದಂಡಿಯು ತೋರಿಸಿ ದ್ದಾನೆ. ಅಷ್ಟೇ ಅಲ್ಲದೆ, ವಿದರ್ಭ ಮಾರ್ಗದಲ್ಲಿ ಯಾವುವು ಗುಣಗಳೋ ತದ್ವಿರು ದ್ಧಾಂಶಗಳೇ ಗೌಡಮಾರ್ಗದಲ್ಲಿ ಗುಣಗಳೆನಿಸುವ ಹೊಸ ವಿಷಯವನ್ನೂ ದಂಡಿಯಲ್ಲಿ ನಾವು ಮೊದಲಿಗೆ ಕಾಣುತ್ತೇವೆ. 'ಇಷ್ಟಾರ್ಥವ್ಯವಚ್ಛಿನ್ನವಾದ ಪದಾವಲಿ'ಯು ಎಂದರೆ (ನಾವು ಮೇಲೆ ರತ್ನಶ್ರೀಜ್ಞಾನನಲ್ಲಿ ನೋಡಿದಂತೆ) ಉದ್ದಿಷ್ಟ ಕಥಾಭಾಗವನ್ನು ಸಮರ್ಪಕವಾಗಿ ಮೂಡಿಸಬಲ್ಲ ಭಾಷೆ ಕಾವ್ಯಶರೀರವಾದರೆ ದಶಗುಣಗಳೇ ಕಾವ್ಯದ ಪ್ರಾಣ ಅಥವಾ ಜೀವ. ರಸವೂ ಮಾಧುರ್ಯಗುಣದಲ್ಲಿ ಸೇರ್ಪಡೆಯಾಗುವುದೆಂಬು ದನ್ನು ಮರೆಯಬಾರದು. ಮುಂದೆ ಬಂದ ವಾಮನನು ದಂಡಿಯ ವಿಚಾರಧಾರೆಯನು

ಸ್ವಲ್ಪ ವಿಸ್ತರಿಸಿದರೂ ಅವನ ಮೂಲಪ್ರೇರಣೆ ದಂಡಿಯಿಂದಲೇ ಎಂಬುದು ಸ್ಪಷ್ಟ. ಗುಣಗಳು ಹತ್ತು ಹೋಗಿ ಶಬ್ದ-ಅರ್ಥಗಳ ಭೇದದಿಂದ ಇಪ್ಪತ್ತಾಗಬಹುದು. ಎರಡಿದ್ದ ಮಾರ್ಗಗಳು ಸಮ್ಮಿಶ್ರ ಜಾತಿಯೂ ಸೇರಿ ಮೂರು 'ರೀತಿ'ಗಳಾಗಿ ಮಾರ್ಪಾಡಬಹುದು. ರಸವು ಅಲಂಕಾರದ ವಲಯದಿಂದ ಹೊರಬಂದು ಅರ್ಥಗುಣಗಳಲ್ಲೇ ಐಕ್ಯಗೊಳ್ಳಬಹುದು ಅಷ್ಟೆ.

ದಂಡಿಯ ಮಾರ್ಗದ್ವಯಮೀಮಾಂಸೆ ಹಳಗನ್ನಡದ ಕವಿಗಳಿಗೆಲ್ಲ ಬಹಳ ಮೆಚ್ಚಾಗಿದ್ದುದನ್ನು ನೋಡುತ್ತೇವೆ. ಸಂಸ್ಕೃತ ಕವಿ ಜಿನಸೇನನ ಮೆಚ್ಚುಗೆಯನ್ನು ಈಗಾಗಲೇ ನೋಡಿದ್ದಾಗಿದೆ. 'ಕವಿತಾ ಗುಣಾರ್ಣವ'ನೆಂದು ಹೊಗಳಿಕೆವೆತ್ತು

ವಿದಿತಂ ಪ್ರಾತೀತಿಕಂ ಕೋಮಲಮತಿ ಸುಭಗಂ ಸುಂದರಂ ಸೂಕ್ತಿಗರ್ಭಂ
ಮೃದುಸಂದರ್ಭಂ ವಿಚಾರಕ್ಷಮಮುಚಿತಪದಂ ಶ್ರವ್ಯಮವ್ಯಾಕುಲಂ ವ್ಯಾ
ಪ್ತದಿಗಂತಂ ಕಾವ್ಯಂ...

ಎಂದು ಗುಣಗಳಿಂದಲೇ ಕಾವ್ಯದ ಮೇಲ್ಮೆಯನ್ನು ಹೇಳುವ ಪಂಪನೂ

ಕವಿಮಾರ್ಗದೊಳೊಬ್ಬಾಣಿಪ
ರವಣಿಪ ಕಮ್ಮೈಸುವೆಡೆಯೊಳೊಕ್ಕಾಣಿಸಲುಂ ।
ರವಣಿಸಲುಂ ಕಮ್ಮೈಸಲು
ಮಿವನಂತಾರ್ ಬಲ್ಲರೆನಿಸಿದಂ ಕವಿರತ್ನಂ ॥ (ಅಜಿತ ಪುರಾಣ I–83)
ಕವಿಮಾರ್ಗದೊಳೊಳಪೊಕ್ಕುಂ
ನವರಸಮಂ ತೆಱೆಯೆ ನುಡಿದನೆನಿಸಿದ ಕವಿ ಸ– ।
ತ್ಕವಿಯೆನಿಕುಂ... (ಅದೇ I 87)

ಎನ್ನುವ ರನ್ನನೂ

ಮಾರ್ಗದ್ವಯಪರಿಣತ[13] ಕವಿ
ಮಾರ್ಗಮನೋಹಾರಿಯಾದುದೆಂದಖಿಳಬುಧರ್ ।
ನಿರ್ಗರ್ವಾಗಿ ಪಂಪನ
ಗೀರ್ಗುಂಫದ ಪೆಂಪನಾಗಳುಂ ಬಣ್ಣಿಸುವರ್ ॥

ಎಂದು ಪಂಪನನ್ನು ಬಾಯ್ತುಂಬ ಹೊಗಳುವ ದುರ್ಗಸಿಂಹನೂ (ಕರ್ಣಾಟಕ ಪಂಚತಂತ್ರ I–25) ದಂಡಿಯ ಮಾರ್ಗಪರಂಪರೆಯನ್ನೇ ಕೊಂಡಾಡುತ್ತಿರುವುದು ಕಾಣುತ್ತದೆ. ಕನ್ನಡ ಲಾಕ್ಷಣಿಕರಲ್ಲಿ ನೃಪತುಂಗನಂತೂ ತನ್ನ ಗ್ರಂಥದ ಹೆಸರಿನಲ್ಲಿಯೇ 'ಮಾರ್ಗ' ಶಬ್ದಕ್ಕೆ ಎಡೆಯಿತ್ತಿದ್ದಾನೆ. ಹೀಗೆ ಕನ್ನಡ ಕವಿ-ಲಾಕ್ಷಣಿಕರ ಪರಂಪರೆಯಲ್ಲಿ ದಂಡಿಯ ಪ್ರಭಾವ ಮಿಕ್ಕೆಲ್ಲ ಸಂಸ್ಕೃತ ಲಾಕ್ಷಣಿಕರ ಪ್ರಭಾವಕ್ಕಿಂತ ಹೆಚ್ಚಿನದೆಂದು ತೀರ್ಮಾನಿಸಬಹುದು.

---

13. ಸಾಮಾನ್ಯವಾಗಿ 'ಮಾರ್ಗದ್ವಯ'ವೆಂದರೆ ಲೌಕಿಕ ಮತ್ತು ಆಗಮಿಕ ಪರಂಪರೆಗಳೆಂದು ಅರ್ಥ ಮಾಡುವುದುಂಟು. ಆದರೆ ಕಾವ್ಯಶಾಸ್ತ್ರದಲ್ಲಿ ಪರಿಣತರಾದವರ ಪೂರ್ವ ಪ್ರಯೋಗಗಳಲ್ಲಿ ಗುಣಕೃತವಾದ ದಕ್ಷಿಣೋತ್ತರ 'ಮಾರ್ಗ'ಗಳ ವಿವಕ್ಷೆಯೇ ಇರುವುದು ಹೆಚ್ಚು ಸಂಭವನೀಯ.

ಅರ್ಥ

ಈಶ್ವರ ಕಮ್ಮಾರ

ಅಧಿಕಾರ, ಅಷ್ಟೈಶ್ವರ್ಯ
ಭೋಗ ವಿಲಾಸ–
ಬೇಕು ಬೇಕಾದುದನ್ನು ತಿಂದು
ವಾಕರಿಸಿ ಚೆಲ್ಲಿದಂದ
ಕಂಡಿದ್ದೆ, ಕೇಳಿದ್ದೆ, ಆದರೂ
ಬದುಕಿನ ಅರ್ಥ ಆಗಿರಲಿಲ್ಲ.

ದೇವರು ಧಾರಾಳವಾಗಿ
ಆಶೀರ್ವದಿಸಿದ ಹತ್ತೆಂಟು ಮಕ್ಕಳು
ದಿನವಿಡಿ ದುಡಿದರೂ ತುಣುಕೂ ದೊರೆಯದೆ
ಕಚ್ಚಾಡುವಾಗ;

ಕುತ್ತಿಗೆ ಕುಕ್ಕರಿಸುವ ಹಾಗೆ
ಇಮ್ಮಡಿ ಮುಮ್ಮಡಿ ಕಟ್ಟಿಗೆಯ ಹೊರೆ ಹೊತ್ತು
ದೂರದ ಗುಡ್ಡದೋರೆಯಿಂದಿಳಿದು ಬರುವಾಗ
ಬೆನ್ನಗಾಲುವೆಯಿಂದ ಮೊಣಕಾಲ ಕೆಳಗೂ
ದಳದಳ ಇಳಿದು ಬರುವ ಬೆವರು.
ಎಡಬಲಕೆ ಹಸಿದು ಕುಸುಗುಡುವ ಕೂಸುಕುನ್ನಿಗಳು.
ಬಲಗೈಯಲ್ಲಿ ಡಬರಿ ಖಾಲೀ ಕೈಚೀಲ–
ಮೈಲು ಮೈಲುಗಳುದ್ದ ಹೊತ್ತು ತಂದ
ದುಡಿತದ ಬೆಲೆಯು ಕಟ್ಟಿ
ಪುಡಿಕಾಸನೆಸೆದಾಗ ಆ ಕೆಂಜಿಗೆಯ ಮುಖ–
ಭಾವದಲ್ಲಿ;

ಕೈಬಿಟ್ಟು ನಕ್ಕು ನಲಿದು
ಕಲಿಕೆಯಲ್ಲಿರಬೇಕಾದ ಮಕ್ಕಳು

ದಂಡಿತದಾಳಾಗಿ ನಿಂತಾಗ;
ಮಂತ್ರಲೆಲೆಗಂಟಿರುವ ತುಂತ್ರನ್ನಕ್ಕೆ ಕಚ್ಚಾಡುವಾಗ;

ಮೈಯಲ್ಲ ಹುಣ್ಣಾಗಿ
ರೋಗ ರುಜಿನಗಳ ತವರಾಗಿ
ಜನಸಂದಣಿಯ ಕಾಲ್ಕೆಳಗೆ ಒದ್ದಾಡಿ
ಸಾವಿನ ದಾರಿಯಲ್ಲಿರುವ
ಪಾಪಿಗೇಡಿಯನು ಕಂಡಾಗ;

ನಡತೆ, ನೀತಿ, ಪ್ರೀತಿ, ಪ್ರಖ್ಯಾತಿ
ಇದ್ದಕಿದ್ದಂತೆ ನೋಟಿಗೆ
ಮಾರಿಕೊಳ್ಳುವಾಗ
—ಹೊಳೆದಿತ್ತು ಬದುಕಿನ ಅರ್ಥ !

ಯಾವುದನು ಬರೆವಾಗ
ಲೇಖನಿಯು ಮಸಿಯಾರುವುದೊ,
ಕವಿಯ ಕಲ್ಪನೆ ಮಂಕಾಗುವುದೊ
ಹಾಡೆ ಕಂಠ ಸಿಡಿಯುವುದೊ
ಕಾಣೆ ಕಣ್ಣು ಮಂಜಾಗುವುದೊ
ಕೇಳೆ ಕಿವಿ ಕಿವುಡಾಗುವುದೊ
ಅದೇ ಬದುಕು,
ಬದುಕಿನ ಅರ್ಥ.

ಪಂಡಿತ ಶ್ರೀ ಬಸವರಾಜ ಶಾಸ್ತ್ರಿಗಳು ಕೋಡಿಕೊಪ್ಪಮಠ

ಶಶಿಕಲಾ ಎಸ್. ವಸ್ತ್ರದ

ಉದಯೋನ್ಮುಖ ಕನ್ನಡ ಗದ್ಯಸಾಹಿತ್ಯಶ್ರೀಗೆ ಶ್ರೀ ಬಸವರಾಜಶಾಸ್ತ್ರಿಗಳ ಕೊಡುಗೆ ಅಪಾರವಾಗಿದೆ. ೧೯೨೫ನೆಯ ವರ್ಷದ ಸಮಯದಲ್ಲಿ ಈಗಿನಷ್ಟು ಕನ್ನಡ ಗದ್ಯಸಾಹಿತ್ಯ ಸಮೃದ್ಧವಾಗಿರಲಿಲ್ಲ. ಸಸಿರೂಪದಲ್ಲಿದ್ದ ಅದಕ್ಕೆ ನೀರೆರೆದು ಪೋಷಿಸಿ ಬೆಳೆಸಿದವರಲ್ಲಿ ಶಾಸ್ತ್ರಿಗಳೂ ಒಬ್ಬರು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅವರು ಮಾಡಿದ ಗೆಯ್ಮೆ ಗಮನೀಯ. ಆದರೆ ಈ ಸೇವೆಯನ್ನು ಪೂರ್ತಿ ಸ್ವೀಕರಿಸದೆಯೇ ಕನ್ನಡ ಸರಸ್ವತಿ ಶಾಸ್ತ್ರಿಗಳನ್ನು ಕಳೆದುಕೊಂಡಳು. ಅವರ ಬದುಕಿದ ಅವಧಿ ಚಿಕ್ಕದಾದರೂ ಕ್ಷಣಕಾಲವನ್ನೂ ಅಪವ್ಯಯ ಮಾಡದೆ ಅಧ್ಯಯನಶೀಲರಾದ ಅವರ ಬಗ್ಗೆ, ಅವರ ಕೃತಿಗಳ ಬಗ್ಗೆ ಕನ್ನಡಿಗರು ತಿಳಿಯಬೇಕಾದುದು ಅಗತ್ಯ.

ಪಂ. ಬಸವರಾಜಶಾಸ್ತ್ರಿಗಳು ೧೮೮೬ನೆಯ ಇಸ್ವಿ ಶ್ರಾವಣಮಾಸದ ಶುಕ್ಲಪಕ್ಷ ಸೋಮವಾರ ದಿವಸ ಸ್ವಗೃಹದಲ್ಲಿ ಜನಿಸಿದರು. ಧಾರವಾಡ ಜಿಲ್ಹೆಯ ರೋಣ ತಾಲೂಕಿನ ಕೋಡಿಕೊಪ್ಪ ಅವರು ಹುಟ್ಟಿದೂರು. ಅವರ ತೀರ್ಥರೂಪರು ವೇದಮೂರ್ತಿ ಮಲ್ಲಿನಾಥಶಾಸ್ತ್ರಿಗಳು, ಮಾತೋಶ್ರೀಯವರು ತೋಟಮ್ಮನವರು. ಅವರಿಬ್ಬರೂ ತಮ್ಮ ಮಗ ಪ್ರಬುದ್ಧನಾಗಿ ಕೀರ್ತಿಗಳಿಸಿದುದನ್ನು ಕಾಣುವ ಯೋಗಪಡೆದಿರಲಿಲ್ಲ. ನಾಲ್ಕು ಜನ ಸಹೋದರರನ್ನು ಪಡೆದ ಶ್ರೀ ಶಾಸ್ತ್ರಿಗಳು, ಕೊನೆಯವರು. ಅವರು ಜನಿಸಿದ ನಾಲ್ಕನೆಯ ತಿಂಗಳಿಗೇ ಅವರ ತೀರ್ಥರೂಪರು ಶಿವಾಧೀನರಾದರು. ಮುಂದೆ ನಾಲ್ಕನೆಯ ವರ್ಷಕ್ಕೆ ತಾಯಿಯನ್ನೂ ಕಳೆದುಕೊಂಡು ಶಾಸ್ತ್ರಿಗಳು ಅನಾಥರಾದರು. ಊರಿಗೆ ಸಮೀಪವಿದ್ದ ನರೇಗಲ್ಲಕ್ಕೆ ಹೋಗಿ ಬಂಧುಗಳಲ್ಲಿ ನೆಲೆನಿಂತು ಮೂರು–ನಾಲ್ಕು ವರ್ಷ ಶಾಲೆಯಲ್ಲಿ ಅಭ್ಯಾಸಮಾಡಿದರು. ಅಲ್ಲಿ ಅವರಿಗೆ ತೃಪ್ತಿ ಸಿಗಲಿಲ್ಲ. ಜ್ಞಾನದಾಹ ಇನ್ನೂ ಬೆಳೆಯಿತು. ನಿರಾಶರಾಗಿ ಮಲೆನಾಡಿನ ಕಾಡುಗಳಲ್ಲಿ ಅನೇಕ ದಿನ ಅಲೆದಾಡಿದರು. ಈಗ ಅವರ ವಯಸ್ಸು ೯ ವರ್ಷ. ೧೮೯೫ ರಿಂದ ೧೯೧೦ ರ ವರೆಗೆ ಅಲ್ಲಲ್ಲಿ ತಿರುಗಾಡಿ ಕೊನೆಗೆ ವಿದ್ಯಾಭ್ಯಾಸಕ್ಕೆಂದು ಕಾಶಿಗೆ ಹೋದರು.

ಕಾಶಿಯಲ್ಲಿ ೪-೫ ವರ್ಷಗಳ ವರೆಗೆ ಸಂಸ್ಕೃತ ವ್ಯಾಕರಣ ಮತ್ತು ಧರ್ಮಗ್ರಂಥಗಳನ್ನು ಅಭ್ಯಾಸಮಾಡಿ ಅಲ್ಲಿಯ ವಿದ್ವಾಂಸರಿಂದ ಈ ಪಂಡಿತ ಪ್ರಶಸ್ತಿಯನ್ನು ಪಡೆದರು.

ಪ್ರಶಸ್ತಿ ಪತ್ರಿಕೆ

ಕರ್ನಾಟಕ ಪ್ರದೇಶಾಂತರ್ಗತ ಧಾರವಾಡ ಮಂಡಲಾಂತರ್ಗತ ಕೋಡಿಕೊಪ್ಪ ಗ್ರಾಮ ವಾಸ್ತವ್ಯಸ್ಯ ಶ್ರೀ ಮಲ್ಲಿನಾಥ ಶಾಸ್ತ್ರಿಣಸ್ತನೂ ಜನ್ಮಾ ಶ್ರೀ ಬಸವರಾಜಶಾಸ್ತ್ರಿ

ಸ್ವದೇಶಏವಕತಿಶಯ ವ್ಯಾಕರಣ ಗ್ರಂಥಾನ್‌ಕತಿಪಯ ಕಾವ್ಯಗಂಥಾನಧೀತ್ಯ, ಭೂಯಂ ಸ್ಸೈ ವ್ಯುತ್ಪತ್ತ್ಯೈ ಸ್ವಯುನ್ ಕಾಶೀಮಾಗತ್ಯ, ಶ್ರೀ ಸ್ವಾಮೀ ಮಂಡಲಾಧೀಶ ಪರಮಾತ್ಮಾನಂದಾಶ್ರಮ ಸಂಸ್ಥಾಪಿತ ಬ್ರಹ್ಮವಿದ್ಯಾ ಪಾಠಶಾಲಾಂ ಪ್ರವಿಶ್ಯ ವ್ಯಾಕರಣೇ ಸಿದ್ಧಾಂತ ಕೌಮುದೀಂ, ಮನೋರಮಾ, ಶಬ್ದರತ್ನಾ, ಲಘುಶಬ್ದೇಂದು ಶೇಖರ ಪರಿಭಾಹೇಂದು ಶೇಖರೌ, ಮಹಾಭಾಷ್ಯಾನವಾಹ್ನಿಕಂ. ಭೂಷಣಂ ನ್ಯಾಯೇ ಪ್ರತ್ಯಕ್ಷ ಖಂಡಾಂತ ಮುಕ್ತಾವಲೀ ವೇದಾಂತೇ ವೇದಾಂತ ಪರಿಭಾಷಾಂ ಬ್ರಹ್ಮಸೂತ್ರ ಶಾರೀರಿಕ ಭಾಷ್ಯಂ ಸಾಹಿತ್ಯೇ ಸಾಹಿತ್ಯದರ್ಪಣಂ, ಕಾವ್ಯ ಪ್ರಕಾಶಂ ಧ್ವನ್ಯಾಲೋಕಂ, ಕಾವ್ಯೇ ನೈಷಧ ಚರಿತಾದೀಂ ಶ್ವಾಧ್ಯೈಷ್ಟ. ಅಧಿತೇಷು ಚೈತೇಷು ಗ್ರಂಥೇಷು ಸಮುಚಿತ ಪರಿಶ್ರಮೇಣ ಪರಮನೈಪುಣ್ಯಮಯಂ ಪ್ರಾಪ್ತವಾನ್ ಸಾಂಪ್ರತಂ ಚೈತೇಷಾ, ಗ್ರಂಥಾನಾಮಧ್ಯಾಪನಾದಿ ಸಕಲ ಪಾಂಡಿತ್ಯಕಾರ್ಯಕರಣಕ್ಷಮೋಽಯಂ ಜಾತ ಇತ್ಯರ್ಥಬೋಧಕಂ ಪ್ರತಿಷ್ಠಾಪತ್ರಮಸ್ಮೈ ಸುಶೀಲಾಯ ಮೇಧಾವಿನೇವಿತರಂ ತ್ಯತ್ರತ ವಿದ್ವಾಂಸ ಇತಿಶಮ್ (೧೯೧೪ ಆನಂದನಾಮ ಸಂ. ಚೈ. ಶು. ೧೦).

೧) ಮಹಾಮಹೋಪಾಧ್ಯಾಯ ಶ್ರೀ ಶಿವಕುಮಾರ ಮಿಶ್ರ; ಶರ್ಮಾ.
೨) ಶ್ರೀ ಜಯದೇವ ಮಿಶ್ರ.
೩) ಶ್ರೀ ಶಂಕರ ತರ್ಕ ರತ್ನಾಃ
೪) ಶ್ರೀ ನಿತ್ಯಾನಂದ ಮೀಮಾಂಸಕಾಃ
೫) ಶ್ರೀ ಸ್ವಾಮಿ ಆನಂದಗಿರಿ ಮಂತ್ರೀ ಬ್ರಹ್ಮವಿದ್ಯಾ ಪಾಠಶಾಲಾ.
೬) ಶ್ರೀ ಜೀವನಾಥ ಮಿಶ್ರಃ
೭) ಶ್ರೀ ಮಧುಸೂದನ ಮಿಶ್ರಃ
೮) ಶ್ರೀ ಗುಲಾಬಶ್ಶೋಪಾಖ್ಯೋ ವ್ಯಾಕರಣ ತೀರ್ಥಃ
೯) ಶ್ರೀ ಸಾಹಿತ್ಯ ಸಾಂಖ್ಯಯೋಗ ಮೀಮಾಂಸಾದ್ಯನೇಕ ಶಾಸ್ತ್ರಾಧ್ಯಾಪಕೊಘಾಖ ಭಂಜನಿರ್ದೇವೀ ಪ್ರಸಾದ ಶರ್ಮಾಕವಿಃ
೧೦) ಶ್ರೀ ವ್ಯಾಕರಣ ಪಂಡಿತ ಕೃಷ್ಣಶಾಸ್ತ್ರಿಣಃ ಮೈಸೂರು

ಈ ಪ್ರಶಸ್ತಿಯಿಂದ ಸನ್ಮಾನಿತರಾಗಿ ೧೯೧೪ನೆಯ ಇಸ್ವಿಯಲ್ಲಿ ಕೋಡಿಕೊಪ್ಪಕ್ಕೆ ಬಂದರು. ಮುಂದೆ ಕೆಲ ದಿನಗಳಲ್ಲಿ ಶ್ರೀಮನ್ನಿರಂಜನ ಅನ್ನದಾನ ಮಹಾಸ್ವಾಮಿಗಳವರು ಅವರನ್ನು ಕರೆಸಿಕೊಂಡು, ಅನ್ನದಾನ ಮಹಾಸ್ವಾಮಿಗಳ ಸ್ಮಾರಕ ಸಂಸ್ಕೃತ ಪಾಠಶಾಲೆಗೆ ಅಧ್ಯಾಪಕರಾಗುವಂತೆ ಅಪ್ಪಣೆ ಕೊಡಿಸಿದರು. ಪ್ರಶಾಂತವಾದ ಆ ವನಶ್ರೀಯ ಮಧ್ಯ ಶಾಸ್ತ್ರಿಗಳು ಪಾಠ ಹೇಳುತ್ತ ತೃಪ್ತಜೀವನ ನಡೆಸಿದ್ದರು, ಆದರೆ ಸಭಾಸದರೊಬ್ಬರ ರಾಜಕಾರಣ ಕಾರಣವಾಗಿ ಶಾಸ್ತ್ರಿಗಳು ನೊಂದುಕೊಂಡು ಪಾಠಶಾಲೆಯ ಸಂಬಂಧವನ್ನು ಕಡಿದುಕೊಂಡರು. ಆಗ ಅನ್ನದಾನ ಮಹಾಸ್ವಾಮಿಗಳವರು ಅವರನ್ನು ಕರೆಸಿ ಗಂಜೀಹಾಳದ ತಮ್ಮ ಮಠದ ಪಾಠಶಾಲೆಗೆ ಸಂಸ್ಕೃತ ಹೇಳುವಂತೆ

ಆದೇಶ ನೀಡಿದರು. ೧೮೨೪ರಿಂದ ಅಲ್ಲಿ ೮-೯ ತಿಂಗಳು ಇರುವುದರಲ್ಲಿ ಪುನಃ ಪೂಜ್ಯ ಮಹಾಸ್ವಾಮಿಗಳವರೇ ಅವರನ್ನು ಕೋಡಿಕೊಪ್ಪಕ್ಕೆ ಕರೆಸಿಕೊಂಡು ಮದ್ರಾಸಿಗೆ ಧರ್ಮಗ್ರಂಥಗಳ ಅಧ್ಯಯನಕ್ಕೆ ಕಳಿಸಿದರು. ಶಾಸ್ತ್ರಿಗಳು ೬-೧-೧೯೨೫ನೆಯ ದಿನ ಮದ್ರಾಸಿಗೆ ಪ್ರಯಾಣ ಬೆಳೆಸಿದರು. ದೇವರಾಜ ಬೀದಿಯಲ್ಲಿರುವ ರೇವಣಸಿದ್ದಪ್ಪ ಉಪನಿ ಎಂಬ ಶ್ರೀಮಂತರ ಮನೆಯಲ್ಲಿದ್ದು ೪-೫ ತಿಂಗಳು ಕಾಲ ಓರಿಯಂಟಲ್ ಲೈಬ್ರರಿಯಲ್ಲಿದ್ದ ಕೆಲವು ಧರ್ಮಗ್ರಂಥಗಳನ್ನು ಪರಿಶೋಧಿಸಿ ಪ್ರತಿಲಿಪಿ ಮಾಡಿಕೊಂಡು ಕೋಡಿಕೊಪ್ಪಕ್ಕೆ ಬಂದರು.

ಪೂಜ್ಯ ಶ್ರೀಗಳವರ ಸನ್ನಿಧಿಯಲ್ಲಿ ಕುಳಿತು ಧರ್ಮಗ್ರಂಥಗಳ ಬಗ್ಗೆ ಆಳವಾದ ಅಧ್ಯಯನ ಲೇಖನಕಾರ್ಯ ಪ್ರಾರಂಭಿಸಿದರು. ಇಷ್ಟರಲ್ಲಿ ವಿಜಾಪುರದ ಶ್ರೀ ಸಿದ್ಧೇಶ್ವರ ಹೈಸ್ಕೂಲಿನ ಪ್ರಮುಖರಿಂದ ಸಂಸ್ಕೃತ ಮತ್ತು ಧರ್ಮಗ್ರಂಥಗಳನ್ನು ಬೋಧನೆಗೆ ಆಗಮಿಸಬೇಕೆಂಬ ಆಮಂತ್ರಣ ಬಂದಿತು. ಶ್ರೀಮನ್ನಿರಂಜನ ಮಹಾಸ್ವಾಮಿಗಳ ಆಶೀರ್ವಾದದೊಂದಿಗೆ ಶಾಸ್ತ್ರಿಗಳು ಕುಟುಂಬ ಸಮೇತರಾಗಿ ವಿಜಾಪುರಕ್ಕೆ ಹೋಗಿ ಅಲ್ಲಿ ೧೯೨೫ನೆಯ ಅಗಸ್ಟ ೧೨ರಿಂದ, ಅಧ್ಯಾಪಕ ವೃತ್ತಿಯನ್ನು ಕೈಕೊಂಡರು. ಅವರ ಹೆಚ್ಚಿನ ಸಾಹಿತ್ಯಸೇವೆಯೆಲ್ಲ ಈ ಅವಧಿಯಲ್ಲೇ ಆದದ್ದು. ಇಲ್ಲಿದ್ದಾಗಲೇ ಅವರು ರಾಜಶೇಖರ ವಿಳಾಸ, ಕನ್ನಡ ಅಲ್ಲಮಪ್ರಭು ಮೊದಲಾದ ಕೃತಿಗಳನ್ನು ರಚಿಸಿದರು. ಆಗಾಗ ಕೋಡಿಕೊಪ್ಪಕ್ಕೆ ಬಂದು ಪರಮಪೂಜ್ಯ ಶ್ರೀಗಳವರೊಂದಿಗೆ ತಮ್ಮ ಸಾಹಿತ್ಯದ ಸಾಧನೆಗಳನ್ನು ಕುರಿತು ಚರ್ಚಿಸುತ್ತಿದ್ದರು. ಶ್ರೀಗಳವರು ಸಂತೋಷ ಅಭಿಮಾನಗಳಿಂದ ಅವರನ್ನು ಪ್ರೋತ್ಸಾಹಿಸುತ್ತಿದ್ದರು. ಹೀಗೆ ಸಾಹಿತ್ಯಸರಸ್ವತಿಯ ಆರಾಧನೆ ನಡೆದಾಗಲೇ ಅವರು ವಿಜಾಪುರದ ತಮ್ಮ ಸ್ವಗೃಹದಲ್ಲಿ ೧೯೫೪ರಲ್ಲಿ ಶಿವೈಕ್ಯರಾದರು. ಕನ್ನಡ ಸಾಹಿತ್ಯಕ್ಷೇತ್ರ ಒಬ್ಬ ಸಮರ್ಥ ಪಂಡಿತವರ್ಯನನ್ನು ಕಳೆದುಕೊಂಡಿತು. ಅಪಾರ ಬಂಧು-ಬಳಗ-ಪತ್ನೀ-ಪುತ್ರರನ್ನೂ ಕನ್ನಡ ರಸಿಕರನ್ನೂ ನಿರಾಶೆಗೊಳಿಸಿ ಅಲ್ಪಾಯುಷ್ಯದಲ್ಲಿಯೇ ಶಾಸ್ತ್ರಿಗಳು ಈ ಲೋಕದಿಂದ ನಿರ್ಗಮಿಸಿದರು.

ಶಾಸ್ತ್ರಿಗಳ ಕೃತಿಗಳನ್ನು ಅಭ್ಯಾಸ ಮಾಡಿದಾಗ ಅವರ ಪ್ರತಿಭೆಯ ಪ್ರಕಾಶ ಪಾಂಡಿತ್ಯದ ಪದರುಪದರುಗಳನ್ನು ಕಾಣುತ್ತೇವೆ. ಅವರ ಚೇತನ ಇನ್ನೂ ಈ ಕೃತಿಗಳಲ್ಲಿ ಉಸಿರಾಡುತ್ತಿದೆ ಎನಿಸುತ್ತದೆ. ಸುಲಲಿತವಾದ ಗದ್ಯಶೈಲಿ ಹೃದ್ಯವಾಗಿ ಸಹೃದಯರನ್ನು ಸೆರೆ ಹಿಡಿಯುತ್ತದೆ. ಸಂಸ್ಕೃತ ಸಾಹಿತ್ಯದ ಪಂಚಮಹಾಕಾವ್ಯಗಳನ್ನು ಸರಳ ಕನ್ನಡದಲ್ಲಿ ಸಾರಸಂಗ್ರಹ ಮಾಡಿದ ಕೆಲವೇ ಲೇಖಕರಲ್ಲಿ ಇವರೂ ಎದ್ದು ಕಾಣುವಂಥವರು. ಅವರದು ಕೇವಲ ಶಬ್ದಶಃ ಅನುವಾದವಲ್ಲ: ಕಾವ್ಯಗಳ ಅಂತರಂಗದ ಅನುವಾದ. ಹೊಸಬಗೆಯ ನಿರೂಪಣಾಶೈಲಿಯಿಂದ ಈ ಗದ್ಯ ಭಾಗಗಳು ತಾವೇ ಓದಿಸಿಕೊಂಡು ಹೋಗುತ್ತವೆ. ಈ ಅನುವಾದಗಳಲ್ಲದೇ ಸ್ವತಂತ್ರ ಗ್ರಂಥಗಳೂ ಕೂಡಿ ಒಟ್ಟಿಗೆ ೬೧ ಕೃತಿಗಳು ಶಾಸ್ತ್ರಿಗಳ ಕೊಡುಗೆ. ಇವುಗಳಲ್ಲಿ ಹನ್ನೊಂದು ಮಾತ್ರ ಪ್ರಕಟವಾಗಿವೆ.

‘ಕನ್ನಡ ಕಿರಾತಾರ್ಜುನೀಯ ಸಾರ’ ೧೩-೧೨-೧೯೨೮ ರಂದು ಶ್ರೀ ಆಲೂರ ವೆಂಕಟರಾಯರ ಮುನ್ನುಡಿಯೊಂದಿಗೆ ಪ್ರಕಟವಾಯಿತು. ‘ಕನ್ನಡ ರಘುವಂಶ ರಹಸ್ಯ’ ಡಾ. ಶಿ. ಚೆ. ನಂದೀಮಠ, ಅವರ ಮುನ್ನುಡಿಯೊಂದಿಗೆ ೨೨-೨-೧೯೬೧ ರಲ್ಲಿ ಬೆಳಕು ಕಂಡಿತು. ೧೦-೧೨-೧೯೩೩ ರಲ್ಲಿ ಪುನಃ ಶ್ರೀ ಆಲೂರ ವೆಂಕಟರಾಯರ ಮುನ್ನುಡಿಯಲ್ಲಿ ‘ಕನ್ನಡ ಶಿಶುಪಾಲವಧಸತ್ವ’ವೂ ೯-೩-೧೯೩೭ರಲ್ಲಿ ಶ್ರೀ ಮಹದೇವಪ್ಪ ರೇ. ಸಾಖರೆ ಅವರ ಮುನ್ನುಡಿಯೊಂದಿಗೆ ‘ಕನ್ನಡ ಕುಮಾರ ಸಂಭವಸಾರ’ವೂ ಪ್ರಕಟನಗೊಂಡವು. ೨೮-೧೦-೧೯೩೯ ರಂದು ರಾ|| ಸಾ|| ಫ. ಗು. ಹಳಕಟ್ಟಿ ಅವರ ಮುನ್ನುಡಿಯೊಂದಿಗೆ ಪ್ರಕಟವಾದದು “ಕನ್ನಡ ನೈಷಧೀಸಾರ”. ಈ ಗ್ರಂಥ ಮುಂಬೈ ಇಲಾಖೆಯ ವಿಶ್ವವಿದ್ಯಾಲಯದಿಂದ ೧೯೩೪ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಪಠ್ಯಪುಸ್ತಕವೆಂದು ಮನ್ನಣೆ ಪಡೆಯಿತು. ‘ಕನ್ನಡ ಗದ್ಯದ ಐದು ಮಾಗಬ್ಬಗಳು’ ಎಂದು ಇವು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಬಹುಮಾನಗಳನ್ನೂ ಪಡೆದುವು. ಕೆಲವು ಪುಸ್ತಕಗಳು ಮುಂಬೈ ಪ್ರಾಂತದ ವಿದ್ಯಾ ಇಲಾಖೆಯವರಿಂದ ಪಠ್ಯಪುಸ್ತಕಗಳೆಂದೂ ಪರಿಗಣಿಸಲ್ಪಟ್ಟವು.

ಅವರ ಇನ್ನಿತರ ಪ್ರಸಿದ್ಧ ಗ್ರಂಥಗಳು ೧. ರಾಜಶೇಖರ ವಿಳಾಸ ೨. ಕನ್ನಡ ಅಲ್ಲಮಪ್ರಭು. ೩. ಹರಿಶ್ಚಂದ್ರ ಮಹಾಕಾವ್ಯದ ತಿರುಳು. ೪. ಹರಿಹರನ ರಗಳೆಗಳು. ೫. ಉತ್ತರ ನಳಚರಿತ್ರೆ. ಇವಲ್ಲದೆ ಕೆಲವು ಹಸ್ತಪ್ರತಿಗಳು ವಿಜಾಪುರದ ಅವರ ಸ್ವಗೃಹದಲ್ಲಿವೆ. ಕೆಲವು ಪ್ರತಿಗಳನ್ನು ಅಭ್ಯಾಸಮಾಡಲು ಒಯ್ದು ಮಹನೀಯರು ಹಿಂದಿರುಗಿಸಲೇ ಇಲ್ಲ. ಈಗ ನನ್ನ ಬಳಿ ೧. ಅಮರ ನೀತಿಗಳು ೨. ಕೆಂಭಾವಿ ಭೋಗಣ್ಣ ೩. ಕಲ್ಯಾಣಪುರದ ಆದಯ್ಯ. ೪. ಕುಂಬಾರ ಗುಂಡಯ್ಯ ೫. ಹಂಪೆಯ ಹರಿಹರ ಎಂಬ ಸುಸ್ಥಿತಿಯ ಹಸ್ತಪ್ರತಿಗಳಿದ್ದು ಪ್ರಕಟಣೆಗೆ ಯೋಗ್ಯವಾಗಿವೆ.

ಈ ಐದೂ ಹರಿಹರನ ರಗಳೆಗಳ ತಿರುಳಿನ ರಸವತ್ತಾದ ನಿರೂಪಣೆಯನ್ನೊಳಗೊಂಡಿವೆ. ಕೆಲವು ಕೃತಿಗಳಲ್ಲಿ ಬಸವಣ್ಣನವರ ಪೂರ್ವದ ಕೆಲವು ವಚನಕಾರರ ಪ್ರಸ್ತಾಪವೂ ಬಂದಿದೆ. ಗದ್ಯಶೈಲಿ ತುಂಬ ಮನೋಹರವಾಗಿದೆ. ಶಬ್ದಪ್ರಯೋಗ ನಾವಿನ್ಯತೆಯಿಂದ ಕೂಡಿದೆ. ಓದುತ್ತ ಹೋದಂತೆ ಗದ್ಯವಾದರೂ ಅದರದೇ ಆದ ಶೈಲಿಯ ಒಂದು ನಾದ ಎದೆಯಲ್ಲೆಲ್ಲಾ ತುಂಬಿ ಬರುತ್ತದೆ. ನಿರೂಪಣೆಯಲ್ಲಿ ಹೊಸತನವಿದೆ. ಶಬ್ದಸಂಗ್ರಹ ಶ್ರೀಮಂತವಾಗಿದೆ. ಕೆಂಭಾವಿ ಭೋಗಣ್ಣನ ಕುರಿತಾದ ಕೃತಿಯಲ್ಲಿ ಭೋಗಣ್ಣನ ಸ್ವರಚಿತ ವಚನಗಳಿವೆ. ಕೆಂಭಾವಿಯ ಅರಸ ಚಂದಿಮರಸನು ಊರ ಕುಹಕಿಗಳ ಚಾಡಿಮಾತು ಕೇಳಿ ಭೋಗಣ್ಣನಿಗೆ ಊರು ಬಿಡುವಂತೆ ಆಜ್ಞಾಪಿಸುತ್ತಾನೆ. ಹಾಗೆ ಅವನು ಊರು ಬಿಟ್ಟು ಹೋಗುವಾಗ ಆ ಊರ ಲಿಂಗಗಳೆಲ್ಲ ಭೋಗಣ್ಣನ ಬೆನ್ನು ಹತ್ತಿ ಹೊರಟ ಪ್ರಸಂಗ ರಸವತ್ತಾಗಿ ನಿರೂಪಿತವಾಗಿವೆ.

“ಆತನು ಮುಂದೆ ಒಂದಡಿಯಿಡಲು ಆ ಊರೊಳಗಿನ ಲಿಂಗಗಳೆಲ್ಲ ಸಡಲಿ ನಡುಗಿದವು. ಮತ್ತೊಂದು ಅಡಿ ಇಡಲು ಎಲ್ಲವೂ ಮೇಲಕ್ಕೆದ್ದವು. ಆತನು ನಡೆದು ಹೋಗುತ್ತಿರಲು ಪುರದ ಲಿಂಗಗಳೆಲ್ಲ ಒಡಗೂಡಿ ಅವನ ಸಂಗಡ ನಡೆದವು. ನೆಲವ ಮುಟ್ಟದ ಹಾಗೆ ಗಾಳಿ ಮೈದೋರಿ ಬರುವಂತೆ ಲಿಂಗ-ಜಂಗುಳಿಯು ಬರುವಾಗ ದಾರಿಯೊಳಗಿನ ತರುನಿಕರವೆಲ್ಲ ಅವುಗಳಿಗೆ ನೆರಳಾಗಿ ಬಂದವು. ಗಿಡ-ಹೂಗಳಿಂದ ಸೋರುವ ರಸವು ಲಿಂಗಗಳಿಗೆ ಶೀತಲ ಮಜ್ಜನವಾಯಿತು. ಮರದಿಂದ ಉದುರುವ ಹೂವು-ಎಲೆಗಳು ಪೂಜೆಯ ಪುಷ್ಪಪತ್ರಿಗಳಾದವು. ಕಾಶಿಗೆ ಹೋಗುವ ಹಾಗೆ ಲಿಂಗಗಳು ಇಳೆಯೊಳಗೆ ಉರುಳುತ್ತ ನಡೆದವು. ಜಂಗಮನೇ ಲಿಂಗಕ್ಕೆ; ಲಿಂಗವೇ ಜಂಗಮಕ್ಕೆ; ಲಿಂಗ ಜಂಗಮವೆಂಬ ಭೇದವಿಲ್ಲವೆಂಬುದನ್ನು ಜಗದೊಳು ತೋರಿಸುವಂತೆ ಲಿಂಗಗಳು ಭೋಗಣ್ಣನೊಡನೆ ನಡೆದಿದ್ದವು.” ಇಂಥ ಶೈಲಿಯ ಸೊಬಗು ಕೃತಿಯ ಉದ್ದಕ್ಕೂ ಹರಿದು ಬಂದಿದೆ.

ಕಲ್ಯಾಣಪುರದ ಆದಯ್ಯನ ಕಥೆಯು ಸೌರಾಷ್ಟ್ರದ ಸೋಮನಾಥನ ಮರು ಪ್ರತಿಷ್ಠಾಪನೆಯ ಕಥೆಯೇ ಆಗಿದೆ. ‘ಅಮರ ನೀತಿಗಳು’ ಕೂಡ ಸರಳ ಗದ್ಯ ಶೈಲಿಯಿಂದ ಕೂಡಿ ಸಂಭಾಷಣೆಗಳು ಸುಮನೋಹರವಾಗಿ ಮನಸೆಳೆಯುತ್ತವೆ. “ಆ ವ್ಯಕ್ತಿಯು ಕೂತ ಶಿವಭಕ್ತರನ್ನು ದಾಟುತ್ತಾ ವೇಗದಿಂದ ಬಂದು ತೇಕುತ್ತ ನಿಂತು, “ಕೊಡು ನಮ್ಮ ಕೋವಣನನ್ನು ಎಮ್ಮ ಒಡೆನಾಡಿಗಳು ಮುಂದೆ ನಡೆದಿರುವರು, ಹೊತ್ತಾಗುವದು ಬೇಗನೇ ಕೊಡು, ತಡಮಾಡಬೇಡ. ತಾ......ತಾರೋ-ಹೂಂ, ತಾರೋ ಎಷ್ಟೊತ್ತು ಮಾಡುತ್ತಿ?” ಎಂಬ ಇಲ್ಲಿಯ ಮಾತುಗಳ ಸಹಜತೆ ವಾತಾವರಣದ, ವ್ಯಕ್ತಿಯ ಚಿತ್ರಣವನ್ನು ಕಣ್ಣೆದುರಿಗೆ ತರುತ್ತದೆ. ಶಾಸ್ತ್ರಿಗಳು ಬರೆದ ಓಹಿಲಯ್ಯ ಮತ್ತು ಕೊಂಡಗುಳಿ ಕೇಶಿರಾಜನ ವಿಷಯ ಸಂಗ್ರಹವೂ ನನ್ನ ಸಂಗ್ರಹದಲ್ಲಿದೆ.

ಶಾಸ್ತ್ರಿಗಳ ಗ್ರಂಥಗಳನ್ನು ಕುರಿತು ಅನೇಕ ಜನ ಪ್ರಶಂಸಿಸಿದ್ದಾರೆ. ಶ್ರೀ ಫ. ಗು. ಹಳಕಟ್ಟಿಯವರು ‘ನೈಷಧೀಯಸಾರ’ದ ಮುನ್ನುಡಿಯಲ್ಲಿ “ಸಂಸ್ಕೃತ ಕಾವ್ಯಗಳ ರಸವನ್ನು ಕನ್ನಡಿಗರಿಗೂ ಉಣಿಸಲೆಂದು ಕನ್ನಡ ಭಾಷಾಸೇವಕರು ಹಲಕೆಲವರು ಈ ಮೊದಲು ಪ್ರಯತ್ನಿಸಿದ್ದಾರೆ. ಆದರೆ ಅವರೆಲ್ಲರ ಕೃತಿಗಳು ಕನ್ನಡ ಗದ್ಯ-ಪದ್ಯಗಳಲ್ಲಿ ಆಮೂಲಾಗ್ರವಾಗಿ ಭಾಷಾಂತರಿಸಲ್ಪಟ್ಟವುಗಳಿರುವವು. ಹಲವು ಕಾವ್ಯಗಳ ತಿರುಳನ್ನು ತಿಳಿಯಬೇಕೆಂಬುವ ಕನ್ನಡಿಗರಿಗೆ ಈ ಕಾವ್ಯಗಳ ಮುಖ್ಯ ಭಾಗಗಳನ್ನಷ್ಟೇ ಅಭ್ಯಸಿಸಲಿಕ್ಕೆ ಅವು ಅನುಕೂಲವಾದವುಗಳಿರಲಿಲ್ಲ. ಈ ಕೊರತೆಯ ನಿವಾರಣೆಯಾಗುವದಕ್ಕೂ ಕನ್ನಡ ಭಾಷಾಭ್ಯಾಸಕ್ಕೆ ಅನುಕೂಲವಾಗುವದಕ್ಕೂ ತಕ್ಕಂತೆ ಶಾಸ್ತ್ರಿಗಳು ಈ ಐದೂ ಕಾವ್ಯಗಳನ್ನು ಅನುವಾದಿಸಿದ್ದಾರೆ’......ಮೂಲ ಗ್ರಂಥದ ಸುಂದರವಾದ ಸ್ಥೂಲ ರೂಪವನ್ನು ತಮಗೆ ಬೇಕಾದ ಬೇರೊಂದು ಬಗೆಯ ಅಂದವಾದ ಸ್ಥೂಲ ರೂಪಕ್ಕೆ ಬದಲಿಸಿ ಮಿಗಿಲಾದ ರಸಭಾವಗಳನ್ನು ಅಳಿಯದಂತೆ ಉಳಿಸುವದೇ ಅನು

ವಾದದ ಮುಖ್ಯರೀತಿ. ಇದಕ್ಕೆ ಅನುವಾದಕನೂ ತಕ್ಕ ಯೋಗ್ಯತೆಯುಳ್ಳವನೇ ಇರಲೇ ಬೇಕೆಂಬುದನ್ನು ಒಪ್ಪಲೇಬೇಕು. ಪಂ. ಬಸವರಾಜ ಶಾಸ್ತ್ರಿಗಳವರು ಇಂತಹ ಆಳವೂ ಅಗ್ಗಳವೂ ಆದ ಪಾತ್ರತೆಯುಳ್ಳವರೆಂಬುದಕ್ಕೆ ಸಂಶಯವಿಲ್ಲ. ಈ ಮೊದಲಿನ ಇವರ ಅನುವಾದ ಗ್ರಂಥಗಳು ಕರ್ನಾಟಕದಲ್ಲಿ ಪಡೆದ ಸ್ಥಾನಮಾನಗಳೇ ಇದಕ್ಕೆ ಪ್ರಮಾಣವು ...ಇವರ ಕನ್ನಡ ಶೈಲಿಯು ಹೊಳೆಯುವ ಪಳಕುಗಲ್ಲುಗಳ ಮೇಲೆ ಹರಿಯುವ ತಿಳಿ ಯಾದ ಪ್ರವಾಹದಂತಿದೆ. ಮುಂದು ಮುಂದಿನ ಶಬ್ದಗಳು ಓದುವಾಗ ಓದುಗರ ಬಾಯಲ್ಲಿ ಆತುರದಿಂದ ಬರುವಂತಿದೆ. ಶಬ್ದಯೋಜನೆಯಲ್ಲಿ ಅದೊಂದು ಸೊಬಗಿದೆ. ಹಲಕೆಲವು ಶಬ್ದಗಳ ವಾಕ್ಯ ಪದ್ಧತಿಗಳ ಪ್ರಯೋಗಗಳು ಹೊಸಬಗೆಯುವಾಗಿವೆ. ಅದು ಕನ್ನಡಕ್ಕೆ ಬಹಳ ಭೂಷಣವೂ ಆಗಿದೆ." ಎಂದು ತುಂಬು ಹೃದಯದಿಂದ ಶ್ಲಾಘಿ ಸಿದ್ದಾರೆ.

ಡಾ. ಶಿ. ಚ. ನಂದೀಮಠ ಅವರು 'ನೈಷಧೀಯ ಸಾರ'ದ ಬಗ್ಗೆ ಬರೆಯುತ್ತ, "ನೈಷಧೀಯ ಸಾರವು ಸಂಸ್ಕೃತ ಭಾಷೆಯಲ್ಲಿ ಉತ್ತಮವೂ ಅತಿಕ್ಲಿಷ್ಟವೂ ಆದ ಶ್ರೀ ಹರ್ಷಕೃತ 'ನೈಷಧೀಯ ಚರಿತೆ'ಯ ಸರಳ ಭಾವಾನುವಾದವು. ಸಂಸ್ಕೃತಜ್ಞರಲ್ಲಿ ಅನೇಕರಿಗೂ ಕೂಡ ನೈಷಧೀಯ ರಸ ಸ್ವಾರಸ್ಯವನ್ನು ಸಂಪೂರ್ಣವಾಗಿ ಆಸ್ವಾದಿಸು ವದೂ ಕಷ್ಟ. ಅಷ್ಟು ಕ್ಲಿಷ್ಟವಾದುದಾಗ್ರಂಥ. ಅದರಲ್ಲಿ ನಾರಿಕೇಳಪಾಕದ ಶೈಲಿ ಇದೆ ಯೆಂದು ಬಲ್ಲವರು ಹೇಳುತ್ತಾರೆ...ಪಂ. ಬಸವರಾಜಶಾಸ್ತ್ರಿಗಳವರು ಸಂಸ್ಕೃತ ಮೂಲ ದಲ್ಲಿದ್ದ ಕಠಿಣತೆಯನ್ನು ತೆಗೆದು ಶ್ರೀ ಹರ್ಷನ ಸ್ವಾಭಾವಿಕ ಸಿದ್ಧವಾದ ಕವಿತ್ವದ ನವ ರಸವನ್ನು ಸರಳ–ಸುಲಭ ಮತ್ತು ಸುಲಲಿತವಾದ ಶಬ್ದಗಳಿಂದ ಸಾಮಾನ್ಯರಿಗೂ ಕೂಡ ತಿಳಿಯುವಂಥ ಕನ್ನಡದಲ್ಲಿ ಬರೆದಿದ್ದಾರೆ." ಎಂದು ಹೇಳಿದ್ದಾರೆ.

ಇವರಲ್ಲದೆ ಶ್ರೀ ಹಣಮಂತರಾವ ಬಿ. ಕಣ್ಣೂರ, ಶ್ರೀ ಆಲೂರ ವೆಂಕಟರಾಯ ರಂಥ ಸಾಹಿತಿಗಳು ಅವರ ಗ್ರಂಥಗಳನ್ನು ಮುಕ್ತಕಂಠದಿಂದ ಸ್ತುತಿಸಿದುದು ಶ್ರೀ ಶಾಸ್ತ್ರಿ ಗಳ ಸಾಹಿತ್ಯ ಸಿದ್ಧಿಯನ್ನು ಎತ್ತಿ ತೋರಿಸುತ್ತದೆ. ಅವರ ಭಾಷಾಪ್ರಭುತ್ವ, ವಿಷಯ ಗ್ರಹಣಶಕ್ತಿ, ನಿರೂಪಣಾಶಕ್ತಿ ಹೊಗಳುವಂಥವು. ಅವರ ಶೈಲಿಯು ಸುಲಲಿತವಾದ ಶಬ್ದಜಾಲದ ಹೊಳಪಿನ ಆಳವಾದ ಹೊಳೆಯು ಹರಿದಂತಿದೆ..." ಎಂದು ಮುಂತಾ ಗಿಯೂ ಹೊಗಳಿದ್ದಾರೆ.

ಪಂ. ಬಸವರಾಜಶಾಸ್ತ್ರಿಗಳದು ಋಷಿಸದೃಶ ಜೀವನ. ಸಂಸಾರದ ಆಂತರಿಕ ನೋವುಗಳು ಸಾಕಷ್ಟಿದ್ದರೂ ಅವರು ನಗುನಗುತ್ತ ಬಾಳನ್ನು ಎದುರಿಸಿದವರು. ಅವರ ನೇತೃತ್ವದಲ್ಲಿ ಅಧ್ಯಯನಮಾಡಿ ಈಗ ದೊಡ್ಡ ಹುದ್ದೆಗಳಲ್ಲಿರುವ ಅನೇಕ ಜನರು ಈಗಲೂ ಅವರ ಪುಣ್ಯಸ್ಮರಣೆಮಾಡಿ ಅವರ ಆತ್ಮೀಯತೆಯನ್ನೂ, ವಿದ್ವತ್ತನ್ನೂ, ಹಾಸ್ಯ ಸ್ವಭಾವವನ್ನೂ ನೆನೆಸುತ್ತಾರೆ.

ಎತ್ತರವಾದ ತುಂಬುವ್ಯಕ್ತಿತ್ವ ಅವರದು. ಗಾಂಭೀರ್ಯದ ಕಳೆ, ವಿದ್ವತ್ತನ್ನು ಸೂಚಿಸುವ ಉನ್ನತಲಲಾಟ. ಅಪಾರಜ್ಞಾನ, ಕರುಣೆಗಳನ್ನು ಸೂಸುವ ಹೊಳಪು ಗಣ್ಣುಗಳು. ಸದಾ ತುಂಬು ನಗೆ. ಅವರ ಮನಸ್ಸಿನಂತೆಯೇ ಧರಿಸುವ ಬಟ್ಟೆಗಳೂ ಶುಭ್ರ. ಹಾಲು ಬಿಳುಪಿನ ಧೋತರ, ಮೇಲೊಂದು ಅಷ್ಟೇ ಬೆಳ್ಳಗಿರುವ ಶರ್ಟ್, ಕಾಲಲ್ಲಿ ಹಾವುಗೆಗಳು. ಕೈಯಲ್ಲಿ ಬೆತ್ತಹಿಡಿದುಕೊಂಡು ಹೊರಟರೆ ಎಂಥವರಿಗೂ ಗೌರವದಿಂದ ತಲೆಬಾಗುವಂತಾಗುತ್ತಿತ್ತು. ನೀಳವಾದ ಶುಭ್ರವಾದ ಗಡ್ಡವನ್ನು ಅವರು ನಯವಾಗಿ ನೀವುತ್ತ ವಿಚಾರಿಸುತ್ತ ತಾಸು-ತಾಸುಗಳ ವರೆಗೆ ಕುಳಿತುಬಿಡುತ್ತಿದ್ದರು. ಸದಾ ಕೈಯಲ್ಲಿ ಒಂದು ಪುಸ್ತಕವೋ ಪೆನ್ನುಹಾಳೆಯೋ ಅವರ ಕೈಯಲ್ಲಿರುತ್ತಿತ್ತು. ನೀಲಿ ಬಣ್ಣದ ರೇಶಿಮೆ ಮಡಿಯುಟ್ಟು ಪೂಜಾ ಸಾಮಗ್ರಿಗಳೊಂದಿಗೆ ಹೊರಟು ಅವರು ಶ್ರೀ ಸಿದ್ಧೇಶ್ವರನ ಪೂಜೆ ಮಾಡುವ ವೈಭವವನ್ನು ನೋಡಲು ಎರಡು ಕಣ್ಣು ಗಳೂ ಸಾಲದೆನಿಸುತ್ತಿದ್ದವು. ಬಿಡುವಿನ ಸಮಯದಲ್ಲಿ ತಮ್ಮ ಪ್ರಿಯ ಶಿಷ್ಯರೊಂದಿಗೆ ಗ್ರಂಥಗಳ ಚರ್ಚೆ ಮಾಡುತ್ತಿದ್ದರು. ಧರ್ಮ-ತತ್ವಜ್ಞಾನಗಳ ಬಗ್ಗೆ ತೀವ್ರವಾದ ವಾದ-ವಿವಾದ ನಡೆಸುತ್ತಿದ್ದರು. ಅದು ಕೇವಲ ಶುಷ್ಕವಾಗಿರದೇ ರಸಭರಿತವೂ ಆಗಿರುತ್ತಿತ್ತು. ಹಾಸ್ಯಚಟಾಕಿಯುಕ್ತವೂ ಆಗಿರುತ್ತಿದ್ದಿತು.

ಅವರು ಶಿವಾಧೀನರಾಗುವದಕ್ಕಿಂತ ೫-೬ ವರ್ಷ ಮೊದಲು ಡಾ. ದ. ರಾ. ಬೇಂದ್ರೆಯವರು ಶಾಸ್ತ್ರಿಗಳ ಮನೆಯಲ್ಲಿ ತುಂಬ ವೇಳೆ ಅವರ ಬರಹದ ಬಗೆಗೆ, ಇತರ ವಿಷಯಗಳ ಬಗೆಗೆ ಚರ್ಚಿಸುತ್ತ ಅವರನ್ನು ತುಂಬ ಅಭಿಮಾನ, ಪ್ರೀತಿಗಳಿಂದ ಕಂಡರು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೂಡ ಅವರು ಸಕ್ರಿಯವಾಗಿ ಭಾಗವಹಿಸಿದವರು. ಕನ್ನಡಕ್ಕಾಗಿ ಬದುಕಿನ ಕೊನೆಯ ಕ್ಷಣದವರೆಗೂ ದುಡಿದವರು. ಅವರು 'ರಾಜಶೇಖರ ವಿಳಾಸ' ಬರೆದು ಮುಗಿಸಿದ ದಿನವೇ ಅವರ ಮಗಳು ಚೊಚ್ಚಿಲು ಗಂಡುಮಗು ಹೆತ್ತ ದ್ದಕ್ಕೆ ಮಗುವಿಗೆ ರಾಜಶೇಖರ ಎಂದು ಅವರೇ ಹೆಸರಿಟ್ಟರು. ಅವರು ನಡೆದಾಡಿದರೆ ಚೇತನ ನಡೆದಾಡಿದಂತೆ, ಶುಭ್ರತೆ ಜೀವ ತಳೆದಂತೆ, ನಗುವೇ ಸಾಕಾರವಾದಂತೆ ಹೆಜ್ಜೆ ಇಟ್ಟಲ್ಲೆಲ್ಲ ಆನಂದದ ಬೆಳಕು ಚಿಮ್ಮುತ್ತಿತ್ತು. ಅವರ ಸುತ್ತಲ ವಾತಾವರಣ ನಿರ್ಮಲವೂ ಆನಂದದಾಯಕವೂ ಆಗಿರುತ್ತಿತ್ತು. ಮಕ್ಕಳೊಂದಿಗೆ ಮಕ್ಕಳಾಗಿ ಆಡುವ ಅವರ ಮುಗ್ಧತೆಯನ್ನು ಮಕ್ಕಳಾಗಿಯೇ ಅನುಭವಿಸಬೇಕು. ಅಂಥ ಭಾಗ್ಯ ಪಡೆದವ ರಲ್ಲಿ ನಾನೂ ಒಬ್ಬಳು. ಅವರ ಮೊಮ್ಮಗಳಾಗಿ ಅವರ ಸಾನ್ನಿಧ್ಯದಲ್ಲಿಯೇ ನಾನು ಅಕ್ಷರಾಭ್ಯಾಸ ಕಲಿತಿದ್ದು. ಶ್ರೀ ಸಿದ್ಧೇಶ್ವರ ಹೈಸ್ಕೂಲು ಆವರಣದಲ್ಲಿ ಬೆಳೆದ ಆಕಾಶ ಮಲ್ಲಿಗೆ ಹೂಗಳನ್ನು ನಮ್ಮಿಂದ ತರಿಸಿ ಅವುಗಳಲ್ಲೇ ಅಕ್ಷರ ಜೋಡಿಸಿ ನಮಗೆಲ್ಲ ಹೇಳಿಕೊಡುತ್ತಿದ್ದರು.

ಕೋಡಿಕೊಪ್ಪದ ಮಹಾಮಹಿಮ ಶ್ರೀ ಹುಚ್ಚೀರಪ್ಪಜ್ಜನವರು ಪಂ. ಬಸವರಾಜ ಶಾಸ್ತ್ರಿಗಳ ತೊಡೆಯ ಮೇಲೆ ಶಿವಾಧೀನರಾದರು. ಅವರನ್ನು ಕುರಿತು ಶಾಸ್ತ್ರಿಗಳು "ಶ್ರೀ ಹುಚ್ಚೀರಪ್ಪಜ್ಜನವರ ಸಂಕ್ಷಿಪ್ತ ಜೀವನ ಚರಿತ್ರೆ" ಎಂಬ ಪುಸ್ತಕ ಬರೆದಿದ್ದಾರೆ. ಅದು ಪ್ರಕಾಶನಗೊಂಡಿದೆ, ಅವರು ರಚಿಸಿದ ಅನೇಕ ಕೃತಿಗಳಲ್ಲಿ ಬಹಳಷ್ಟು ಅಲ್ಲಿ-ಇಲ್ಲಿ ಹಂಚಿಹೋಗಿವೆ. ಅವುಗಳನ್ನೆಲ್ಲ ಸಂಗ್ರಹಿಸಿ ಅವುಗಳ ಬಗ್ಗೆ ಆಳವಾದ ಅಭ್ಯಾಸ ಮಾಡಿದರೆ ಕನ್ನಡ ಗದ್ಯಕ್ಕೆ ಸಾಹಿತ್ಯದ ಇತಿಹಾಸದಲ್ಲಿ ಅವರು ಗಳಿಸಿದ ಸ್ಥಾನ ವೇದ್ಯವಾಗುತ್ತದೆ.

ಆ ದಿಕ್ಕಿನಲ್ಲಿ ನಡೆಯುವುದು ಕನ್ನಡಿಗರಾದ ನಮ್ಮ ಕರ್ತವ್ಯವಾಗಿದೆ. ●

ಮುನಿಧರ್ಮ

ಬಿ. ಬಿ. ಮಹೀಶವಾಡಿ

ಜೈನಧರ್ಮದ ಪ್ರಕಾರ ಜಗತ್ತು ಚಿರಂತನವಾದುದು. ಆದ್ದರಿಂದ ಸೃಷ್ಟಿ-ಸ್ಥಿತಿ-ಲಯಾದಿಗಳಿಗೆ ಕಾರಣಕರ್ತರಾದ ದೇವರನ್ನು ಹುಡುಕುವ ಆವಶ್ಯಕತೆ ಅದಕ್ಕಿಲ್ಲ. ಅಂದರೆ—ಜೈನಧರ್ಮದ ದೇವತ್ವಕಲ್ಪನೆ ಭಿನ್ನವಾಗಿದೆಯೆಷ್ಟೆ. ಜೈನಧರ್ಮವು ಕರ್ಮ ರಹಿತನನ್ನು, ವೀತರಾಗನನ್ನು, ಸರ್ವಜ್ಞನನ್ನು ದೇವರೆಂದು ನಂಬುತ್ತದೆ. ಅರ್ಹಂತ, ಸಿದ್ಧ, ತೀರ್ಥಂಕರ, ಜಿನ–ಜೈನಧರ್ಮದ ದೇವರು.

ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲ–ಎಂಬ ಷಡ್ದ್ರವ್ಯಗಳಿಂದ ಜಗತ್ತಿನ ರಚನೆಯಾಗಿದೆ. ಆದ್ದರಿಂದ ಷಡ್ದ್ರವ್ಯಗಳು ಚಿರಂತನವಾದುವು. ಅಂದರೆ—ಅವು ಅನಾದಿ, ಅನಂತ.

ಷಡ್ದ್ರವ್ಯಗಳಲ್ಲಿ **ಜೀವ** ಅತ್ಯಂತ ಮಹತ್ವದ್ದು. ಅದು **ಒಂಬತ್ತು**[1] ಗುಣಗಳುಳ್ಳದ್ದು:— (೧) ಅದು ದ್ರವ್ಯಪ್ರಾಣ–ಭಾವಪ್ರಾಣಗಳಿಂದ ಜೀವಿಸುವುದು. (೨) ಜ್ಞಾನೋಪಯೋಗ–ದರ್ಶನೋಪಯೋಗ ಲಕ್ಷಣವುಳ್ಳದ್ದು. (೩) ರೂಪ-ರಸ-ಗಂಧ-ಸ್ಪರ್ಶಗಳಿಲ್ಲದ ಅಮೂರ್ತವುಳ್ಳದ್ದು. (೪) ಶುಭಾಶುಭ ಕರ್ಮಗಳಿಗೆ ಕರ್ತೃವಾಗಿರುವುದು. (೫) ಕರ್ಮವಶದಿಂದ ಪಡೆದ ಶರೀರದಲ್ಲಿ **'ಶರೀರ-ಪರಿಮಾಣ'** ವುಳ್ಳದ್ದು. (೬) ಕರ್ಮಫಲಗಳನ್ನು ಅನುಭವಿಸುವುದು. (೭) ಚತುರ್ಗತಿರೂಪವಾದ ಸಂಸಾರದಲ್ಲಿರುವುದು. (೮) ಸಕಲ ಕರ್ಮವಿನಾಶದಿಂದ ಸಿದ್ಧಾವಸ್ಥೆಯನ್ನು ಹೊಂದುವ ಸಾಮರ್ಥ್ಯ ಉಳ್ಳದ್ದು. (೯) ಸ್ವಭಾವದಿಂದ ಸಹಜವಾಗಿ ಊರ್ಧ್ವಗಮನವುಳ್ಳದ್ದು.

ಸಾಮಾನ್ಯವಾಗಿ [2]**ಪುದ್ಗಲ**ವೆಂದರೆ ಜಡವಸ್ತು. ಸ್ಪರ್ಶ, ರಸ. ಗಂಧ. ವರ್ಣಗಳೆಂಬ ನಾಲ್ಕು ಗುಣಗಳು ಒಟ್ಟಿಗೆ ಇರುವುದು ಅದರ ಲಕ್ಷಣ. ಶಬ್ದ, ಗಂಧ, ಸೂಕ್ಷ್ಮತ್ವ, ಸ್ಥೂಲತ್ವ, ಆಕಾರಭೇದ, ಅಂಧಕಾರ-ಛಾಯಾ-ಬಿಸಿಲು-ಬೆಳುದಿಂಗಳುಗಳಿಂದ ಕೂಡಿರುವಂತಹದು; ಇವು ಪುದ್ಗಲದ ಪರ್ಯಾಯಗಳು. ಅಣು. ಪರಮಾಣು, ಸ್ಕಂಧ–ಗಳೆಂಬ ಭೇದಉಳ್ಳದ್ದು.

ನೀರು ಮೀನುಗಳ ಸಂಚಾರಕ್ಕೆ ಸಹಾಯಕವಾದಂತೆ, ಜೀವ-ಪುದ್ಗಲ–ದ್ರವ್ಯ

1. ನೇಮಿಚಂದ್ರಾಚಾರ್ಯರ 'ದ್ರವ್ಯಸಂಗ್ರಹ' ಸೂತ್ರ : ೨.
2. ಉಮಾಸ್ವಾಮಿ–'ತತ್ವಾರ್ಥ ಸೂತ್ರ' : ೨೩, ೨೪, ೨೫.

ಗಳಿಗೆ ಸಂಚಾರಕ್ಕೆ ಸಹಾಯವಾಗುವುದೇ [1] **ಧರ್ಮದ್ರವ್ಯ.** ಧರ್ಮವೆಂದರೆ ಪುಣ್ಯ, ಸುದೈವ ಎಂದು ಅರ್ಥವಲ್ಲ. ಅದು ಆಕಾಶದಂತೆ ಅಖಂಡವೂ, ಅಮೂರ್ತವೂ, ಲೋಕ ವ್ಯಾಪಕವೂ ಆದ ವಸ್ತು.

[2] **ಅಧರ್ಮ ದ್ರವ್ಯವು** ಉದಾಸೀನ ಕಾರಣವಾಗಿದೆ. ಜೀವ-ಪುದ್ಗಲಗಳ ತಡೆ (ಸ್ಥಿತಿ)ಗೆ ಕಾರಣವಾಗಿದೆ. ಪ್ರಯಾಣಿಕರನ್ನು ನೆರಳು ತಡೆದು ನಿಲ್ಲಿಸದಿದ್ದರೂ, ಪ್ರಯಾಣಿಕರು ತಾವಾಗಿಯೇ ನೆರಳಿಗೆ ಬಂದು ನಿಲ್ಲುವಂತೆ ಜೀವ–ಪುದ್ಗಲಗಳು ಅಧರ್ಮವನ್ನು ಆಶ್ರಯಿಸುತ್ತವೆ. ಅಧರ್ಮವು ಪಾಪ, ದುರದೃಷ್ಟವೆಂದು ಅರ್ಥವಲ್ಲ. ಧರ್ಮದಂತೆ ಅಧರ್ಮವೂ ಅಖಂಡ-ಅಮೂರ್ತ-ಲೋಕವ್ಯಾಪಕ ವಸ್ತು.

[3] ಆಕಾಶವೆಂದರೆ— ಜೀವ, ಪುದ್ಗಲ, ಧರ್ಮ, ಅಧರ್ಮ, ಕಾಲಗಳು ಇರುವ ಸ್ಥಳ. ಈ ಐದು ದ್ರವ್ಯ (ಪದಾರ್ಥ)ಗಳಿರುವ ಪ್ರದೇಶಕ್ಕೆ ಲೋಕಾಕಾಶವೆಂದೂ. ಅದ ರಾಚೆಯ ಪ್ರದೇಶಕ್ಕೆ ಅಲೋಕಾಕಾಶವೆಂದೂ ಹೆಸರು.

[4] ಕಾಲವು ಅನಾದಿ ನಿಧನವೂ, ಅಮೂರ್ತವೂ ಆಗಿದೆ. ರತ್ನರಾಶಿಯಲ್ಲಿಯ ರತ್ನಗಳು ಒಂದಕ್ಕೊಂದು ಅಂಟಿಕೊಳ್ಳದೆ ಇರುವಂತೆ, ಲೋಕಾಕಾಶದ ಪ್ರತಿಯೊಂದು ಪ್ರದೇಶದಲ್ಲಿ ಕಾಲಾಣುವಿದೆ. ಜೀವ-ಪುದ್ಗಲಗಳ ನೂತನ ಪುರಾತನ ಅವಸ್ಥೆಗಳಿಗೆ ಕಾರಣವಾದುದು ವ್ಯವಹಾರಕಾಲ. ಅದು ನಿಮಿಷ, ತಾಸು, ದಿವಸ, ಮಾಸ, ವರ್ಷ ರೂಪದಲ್ಲಿ ಗೋಚರಿಸುವಂತಹದು. ಅವಸ್ಥಾಂತರ ಹೊಂದುವ ಜೀವಾದಿಗಳ ಪರಿಣಾಮಕ್ಕೆ ಸಹಕಾರಿಯಾಗಿರುವುದು ನಿಶ್ಚಯಕಾಲ. ನೀರು-ಬೆಂಕಿಗಳಿಂದ ಅಕ್ಕಿ ಅನ್ನದ ರೂಪವನ್ನು ಹೊಂದುವಂತೆ, ಜೀವವು ಕಾಲದ ಸಹವಾಸದಿಂದ ಸ್ವರ್ಗ-ನರಕ ಹೊಂದಲು ಕಾರಣವಾದ ಅಣುದ್ರವ್ಯರೂಪವೇ ನಿಶ್ಚಯ ಕಾಲ. ಷಡ್‌ದ್ರವ್ಯಗಳಲ್ಲಿ ಕಾಲವೊಂದನ್ನು ಬಿಟ್ಟರೆ ಉಳಿದವು [5] ಪಂಚಾಸ್ತಿ ಕಾಯಗಳು. ಅವಕ್ಕೆ ಅಸ್ತಿತ್ವ ಮತ್ತು ಪ್ರದೇಶವ್ಯಾಪಕತ್ವ ಧರ್ಮಗಳುಂಟು. ಕಾಲದ್ರವ್ಯಕ್ಕೆ ಒಂದೇ ಪ್ರದೇಶವಿರುವುದರಿಂದ ಅದು **'ಕಾಯ'**ವಲ್ಲ. ಅದಕ್ಕೆ ಅಸ್ತಿತ್ವ ಧರ್ಮವಿದ್ದರೂ, ಬಹುಪ್ರದೇಶವ್ಯಾಪಕತ್ವ ಧರ್ಮವಿಲ್ಲ. ಆದ್ದರಿಂದ ಅದು 'ಅಸ್ತಿಕಾಯ'ವಲ್ಲ.

'ಸಮ್ಯಗ್ದರ್ಶನ ಜ್ಞಾನಚಾರಿತ್ರಾಣಿ ಮೋಕ್ಷಮಾರ್ಗ' [6] ಉಮಾಸ್ವಾಮಿಗಳು ರತ್ನ ತ್ರಯದಿಂದ ಮೋಕ್ಷ ಲಭಿಸುವುದನ್ನು ಸಾರಿದ್ದಾರೆ. ಅಲ್ಲದೆ, ಅವರು ತಮ್ಮ ಕೃತಿಯಾದ ಮೋಕ್ಷಶಾಸ್ತ್ರ (ತತ್ವಾರ್ಥಸೂತ್ರ) ದಲ್ಲಿ— 'ಜೀವಾಜೀವಾಸ್ರವಬಂಧಸಂವರ

1. 2. 'ದ್ರವ್ಯಸಂಗ್ರಹ' ಸೂತ್ರ : ೧೭,೧೮.
3. 4. 'ದ್ರವ್ಯಸಂಗ್ರಹ' ಸೂತ್ರ : ೧೯–೨೨
5. 'ದ್ರವ್ಯಸಂಗ್ರಹ' ಸೂತ್ರ : ೨೩–೨೫.
6. 'ತತ್ವಾರ್ಥಸೂತ್ರ'–೧.

ನಿರ್ಜರಾ ಮೋಕ್ಷಾಸ್ತತ್ವಂ'[1] ಎಂದು ಹೇಳಿ, ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರಾ ಮೋಕ್ಷವೆಂಬ ಸಪ್ತತತ್ವಗಳನ್ನು ವಿವರಿಸಿದ್ದಾರೆ.

ಸಂಸಾರದುಃಖದಿಂದ ಆತ್ಮನನ್ನು ಮುಕ್ತಗೊಳಿಸಿ ಉತ್ತಮ ಸುಖವನ್ನು ಯಾವುದು ಉಂಟುಮಾಡುತ್ತದೆಯೋ ಅದು ಧರ್ಮವೆಂದು[2] ಸಮಂತಭದ್ರಾಚಾರ್ಯರು ಹೇಳಿದ್ದಾರೆ.

ಆಚರಣಾಧರ್ಮವು ಸತ್ಯಸಾಧನೆಯ ಮಾರ್ಗವನ್ನು ತೋರಿಸುತ್ತದೆ. ಆತ್ಮದ ಸತ್ಯಸ್ವಭಾವ ಶಾಶ್ವತಸುಖ, ಇದೇ ಮೋಕ್ಷ. ಇದನ್ನು ಸಾಧಿಸುವ ಮಾರ್ಗವೇ [೨] **ಧರ್ಮ**ವೆಂದು ಕುಂದಕುಂದಾಚಾರ್ಯರು ತಿಳಿಸಿದ್ದಾರೆ.

ಧರ್ಮವೆನ್ನುವುದು ಎಲ್ಲರಿಗೂ ಒಂದೇ ಆದರೂ, ಅದನ್ನು ಆಚರಿಸುವ ಶಕ್ತಿ ಗನುಗುಣವಾಗಿ **ಎರಡು** ಭಾಗಗಳಾಗಿ ವಿಂಗಡಿಸಿದ್ದಾರೆ: (೧) ಶ್ರಾವಕ ಧರ್ಮ (೨) ಮುನಿಧರ್ಮ. ಶ್ರಾವಕನು ಮುನಿಯಾಗುವುದೇ ಆದರ್ಶ. ಗ್ರಹಸ್ಥನು ಸನ್ಯಾಸಿ ಯಾದಾಗಲೇ ಪೂರ್ಣತೆ ಪ್ರಾಪ್ತಿ.

ಮೊಟ್ಟಮೊದಲು ಮಾನವನಿಗೆ ತತ್ವದಲ್ಲಿ ಶ್ರದ್ಧೆ ಹುಟ್ಟಬೇಕು. ದೇವ-ಗುರು-ಶಾಸ್ತ್ರಗಳಲ್ಲಿ ಆಸಕ್ತಿ ಮೂಡಬೇಕು. ಅಂದರೆ,–ಸಮ್ಯಕ್ತ್ವ ಲಭಿಸಬೇಕು. ಅದು ಪ್ರತಿ ಯೊಬ್ಬನ ಕರ್ಮಗತಿಯನ್ನು ಅವಲಂಬಿಸಿರುತ್ತದೆ. ಕಾಲಲಬ್ಧಿ-ಯಿಂದ ಸಮ್ಯಕ್ತ್ವ; ಸಮ್ಯಕ್ತ್ವದಿಂದ ಮೋಕ್ಷಮಾರ್ಗ ಕ್ರಮದಿಂದ ದೊರೆಯುತ್ತವೆ.

ಪುಣ್ಯವಿಶೇಷಗಳಿಂದ ಸಮ್ಯಕ್ತ್ವವನ್ನು ಹೊಂದಿದ ಶ್ರಾವಕನು ಅಷ್ಟಮೂಲ-ಗುಣಗಳು, ಪಂಚ-ಅಣುವ್ರತಗಳು, ಗುಣವ್ರತಗಳು, ಶಿಕ್ಷಾವ್ರತಗಳು, ಶೀಲ-ಷಟ್ಕರ್ಮ ಗಳು, ದಾನಧರ್ಮಗಳನ್ನು ನಡೆಸುತ್ತ **ಹನ್ನೊಂದು ನೆಲೆ**ಗಳಲ್ಲಿ ಮೇಲೆ ಮೇಲೆ ಏರುತ್ತ ಹೋಗಿ, [3]ಶ್ರಾವಕಧರ್ಮವನ್ನು ಪೂರ್ಣ ಆಚರಿಸಬೇಕಾಗುತ್ತದೆ.

ಶ್ರಾವಕನು ಗ್ರಹತ್ಯಾಗಮಾಡಿ ಪರಿಪೂರ್ಣ ಧರ್ಮಾಚರಣೆಯಿಂದ ಮೋಕ್ಷಸುಖ ವನ್ನು ಹೊಂದಲು ಸನ್ಯಾಸಧರ್ಮವನ್ನು ಸ್ವೀಕರಿಸಬೇಕಾಗುತ್ತದೆ. ಆಗ ಮುನಿ ಧರ್ಮದ (ಸನ್ಯಾಸಧರ್ಮದ) ವಿವರಗಳನ್ನು ಅರಿಯಬೇಕಾಗುತ್ತದೆ. ಶ್ರಾವಕಧರ್ಮದ ಮುಂದುವರಿದ ಭಾಗವೇ ಮುನಿಧರ್ಮ.

ಶ್ರಾವಕನು ಬ್ರಹ್ಮಚಾರಿಯಾಗಿ, 'ಕ್ಷುಲ್ಲಕ ಸನ್ಯಾಸಿ'ಯಾಗಿ, 'ಐಲಕ ಸನ್ಯಾಸಿ' ಯಾಗಿ ದಿಗಂಬರ ಮುನಿಯಾಗಿ, ಆಚಾರ್ಯಮುನಿಮಹಾರಾಜನಾಗಿ ಪ್ರಗತಿ

1. 'ರತ್ನಕರಂಡಶ್ರಾವಕಾಚಾರ'
2. 'ಪ್ರವಚನಸಾರ'.
3. ಶ್ರಾವಕಧರ್ಮ–ಬಿ. ಜಿ. ಎಂ. ಕರ್ನಾಟಕ ಭಾರತಿ (೬–೩) : ಪುಟ : ೯೧–೧೦೨

ಹೊಂದುತ್ತ ಹೋಗಬಹುದು. ಕ್ರಮವಾಗಿ ಒಂದಕ್ಕಿಂತ ಒಂದು ಮೇಲಿನ ಸ್ಥಾನಗಳಾಗಿವೆ.

ಯತಿಧರ್ಮದ ವಿವರಣೆ :

'ಯತಿಧರ್ಮಂ ದಶವಿಧ:'[1]–ಎಂದು ಮಾಘಣಂದಿ ಆಚಾರ್ಯರು ಚರಣಾನುಯೋಗಪ್ರಕರಣದಲ್ಲಿ ಮುನಿಧರ್ಮವನ್ನು ಕುರಿತು ವಿವರಣೆಯನ್ನು ಪ್ರಾರಂಭಿಸುತ್ತಾರೆ.

[2]ಉತ್ತಮ ಕ್ಷಮಾಮಾರ್ದವಾರ್ಜವ ಸತ್ಯಶೌಚಸಂಯಮ
ತಪಸ್ತ್ಯಾಗಾಕಿಂಚನ್ಯ ಬ್ರಹ್ಮಚರ್ಯಾಣಿ ಧರ್ಮ : ॥೯–೬॥

ಉಮಾಸ್ವಾಮಿಯವರು ಹತ್ತು ಪ್ರಕಾರದ ಮುನಿ (ಯತಿ) ಧರ್ಮಗಳನ್ನು ಹೇಳಿ ವಿವರಣೆ ಕೊಟ್ಟಿದ್ದಾರೆ.

೧. **ಉತ್ತಮ ಕ್ಷಮಾ :** ಕ್ರೋಧ ಸಹಿಸಿ ತಾಳ್ಮೆಯನ್ನು ಹೊಂದುವುದು.

೨. **ಉತ್ತಮ ಮಾರ್ದವ :** ಗರ್ವ ತೊರೆದು ನಮ್ರನಾಗಿರುವುದು.

೩. **ಉತ್ತಮ ಆರ್ಜವ :** ಮನವಚನಕಾಯಗಳಲ್ಲಿ ವಕ್ರವಿಲ್ಲದಿರುವುದು.

೪. **ಉತ್ತಮ ಸತ್ಯ :** ಅಪ್ರಿಯ ಸತ್ಯವನ್ನು ಹೇಳದೆ ಪ್ರಿಯವಾದ ಸತ್ಯವನ್ನು ಹೇಳುವದು.

೫. **ಉತ್ತಮ ಶೌಚ :** ಲೋಭತೊರೆದು ಆತ್ಮಶುದ್ಧಿಯನ್ನು ಸಾಧಿಸುವುದು.

೬. **ಉತ್ತಮ ಸಂಯಮ :** ತ್ರಿಕರಣ ಶುದ್ಧಿಯಿಂದ ಪ್ರಾಣಿಗಳಿಗೆ ಪೀಡೆ ಮಾಡದಿರುವುದು.

೭. **ಉತ್ತಮ ತಪ :** ಅನಶನಾದಿ ಹನ್ನೆರಡು ತಪಗಳನ್ನು ಆಚರಿಸುವುದು.

೮. **ಉತ್ತಮ ತ್ಯಾಗ :** ಶುಭ ಪರಿಣಾಮದಿಂದ ದಾನ ಮಾಡುವುದು; ತ್ಯಾಗ ಮಾಡುವುದು.

೯. **ಉತ್ತಮ ಆಕಿಂಚನ್ಯ :** ಶರೀರಾದಿಗಳಲ್ಲಿ ಮಮತ್ವವಿಲ್ಲದಿರುವುದು.

೧೦. **ಉತ್ತಮ ಬ್ರಹ್ಮಚರ್ಯ :** ಸ್ತ್ರೀಸಂಗ ತ್ಯಾಗಮಾಡುವುದು.

ದಶಧರ್ಮಗಳನ್ನು ತಿಳಿದ ಮುನಿಗಳು (ಸನ್ಯಾಸಿಗಳು) [3]**ದ್ವಾದಶಾನುಪ್ರೇಕ್ಷೆ**ಗಳನ್ನು ಅಭ್ಯಸಿಸಬೇಕು; ಆಚರಣೆಯಲ್ಲಿ ತರಬೇಕು.

1. ಮಾಘಣಂದಿ ಆಚಾರ್ಯರ 'ಶಾಸ್ತ್ರಸಾರಸಮುಚ್ಚಯ'–ಸೂತ್ರ : ೩೯.
2. ಉಮಾಸ್ವಾಮಿ ಆಚಾರ್ಯರ 'ತತ್ವಾರ್ಥಸೂತ್ರ'–(೯–೬)
3. ತತ್ವಾರ್ಥಸೂತ್ರ – (೯-೭)

೧. ಅನಿತ್ಯಾನುಪ್ರೇಕ್ಷೆ[1] **:** ಮಳೆಬಿಲ್ಲು, ಮೋಡ, ನೀರಗುಳ್ಳೆಗಳಂತೆ— ಸಮಸ್ತ ಪದಾರ್ಥಗಳು ಕ್ಷಣಭಂಗುರವಾದವುಗಳು. ಆತ್ಮನೇ ನಿತ್ಯ; ಉಳಿದುವೆಲ್ಲ ಅನಿತ್ಯ ವೆಂದು ತಿಳಿಯುವುದು. ಸ್ಥಾನ, ಮಾನ, ಪದವಿ, ದ್ರವ್ಯ, ಬಂಧುಬಳಗ ಸ್ಥಿರವಲ್ಲವೆಂದು ಚಿಂತಿಸುವುದು.

೨. ಅಶರಣಾನುಪ್ರೇಕ್ಷೆ : ಮರಣದಿಂದ ಯಾರೂ ತನ್ನನ್ನು ರಕ್ಷಿಸರು. ಧರ್ಮವೇ ರಕ್ಷಣೆಯನ್ನು ನೀಡಬಲ್ಲುದು—ಎಂದು 'ಅಶರಣ' ಸ್ಥಿತಿಯನ್ನು ಚಿಂತಿಸು ವುದು.

೩. ಸಂಸಾರಾನುಪ್ರೇಕ್ಷೆ : ಸಂಸಾರದಲ್ಲಿ ಹುರುಳಿಲ್ಲವೆಂದು ಅದನ್ನು ತ್ಯಜಿಸಿ, 'ರತ್ನತ್ರಯ'-ಗಳನ್ನು ಹೊಂದಲು ಯತ್ನಿಸುವುದು.

೪. ಏಕತ್ವಾನುಪ್ರೇಕ್ಷೆ : ಜನ್ಮ, ಜರಾ, ಮರಣಗಳ ದುಃಖವನ್ನು ತಾನೊ ಬ್ಬನೇ ಏಕಾಕಿಯಾಗಿ ಅನುಭವಿಸಬೇಕಾಗುತ್ತದೆ. ಯಾವ ಬಂಧುಗಳೂ ಭಾಗಿಯಾಗ ರೆಂದು ತಿಳಿಯುವುದು.

೫. ಅನ್ಯತ್ವಾನುಪ್ರೇಕ್ಷೆ : ಶರೀರದಿಂದ ಆತ್ಮಸ್ವರೂಪಿಯಾದ ತಾನು ಅನ್ಯ ನಾಗಿರುವುದನ್ನು ತಿಳಿಯುವುದು. ಶರೀರ ಪೀಡೆ ತನ್ನದಲ್ಲ; ತಾನು ಆತ್ಮ ಸಂಬಂಧಿ ಎನ್ನುವುದು.

೬. ಅಶುಚಿತ್ವ : ಅಶುಚಿಯಾದ (ಮಲೀನವಾದ) ಶರೀರವನ್ನು ಸೊರಗಿಸಿ ಅವಿನಾಶಿಯಾದ ಸುಖವನ್ನು ಹೊಂದಲು ಯತ್ನಿಸುವುದು.

೭. ಆಸ್ರವಾನುಪ್ರೇಕ್ಷೆ : ಕಾದ ಕಬ್ಬಿಣವು ನೀರನ್ನು ಹೀರುವಂತೆ, ಜೀವಿ ಕರ್ಮಜಲವನ್ನು ಹೀರುತ್ತಾನೆ. ಈ ಕರ್ಮಾಣುಗಳು ಬಾಧಿಸುತ್ತವೆ. ಇವು ಆತ್ಮನಲ್ಲಿ ಸೇರದಂತೆ ಎಚ್ಚರಿಕೆವಹಿಸುವುದು.

೮. ಸಂವರಾನುಪ್ರೇಕ್ಷೆ : ಪಾಪಕರ್ಮಗಳು ಒಳಸೇರದಂತೆ ತಡೆಯುವುದು. ಒರತೆಯ ನೀರಿನಂತೆ ಬರುವ ಕರ್ಮಗಳನ್ನು ವ್ರತಾಚರಣೆಯ ವಜ್ರದ ಹಲಗೆಕಟ್ಟಿ ನಿಂದ ತಡೆಯುವುದು.

೯. ನಿರ್ಜರಾನುಪ್ರೇಕ್ಷೆ : ಜೀವದಲ್ಲಿ ಬಂದು ಸೇರುವ ಕರ್ಮಕಲಂಕವನ್ನು ವ್ರತಗುಣಚಾರಿತ್ರಗಳಿಂದ ಕೂಡಿದ 'ಭೇದ-ಜ್ಞಾನ'ವೆಂಬ ಜಲದಿಂದ ತೊಳೆದು ಸ್ವಚ್ಛ ಮಾಡುವುದು. ಸವಿಪಾಕ-ಅವಿಪಾಕ ನಿರ್ಜರೆಗಳ ಹಾನಿಯ ಬಗ್ಗೆ ಚಿಂತಿಸುವುದು.

೧೦. ಲೋಕಾನುಪ್ರೇಕ್ಷೆ : ಷಡ್‌ದ್ರವ್ಯಗಳಿರುವ ಸ್ಥಳವೇಲೋಕ: ಅದ ರಾಚೆಗಿನದು ಅಲೋಕ-ಎಂದು ಲೋಕಾಕಾರವನ್ನು ತಿಳಿಯಲು ಯತ್ನಿಸುವುದು.

---

1. ತಾ. ಸಾ. ಸ. – ಸೂತ್ರ : ೩೮

೧೧. ಬೋಧಿದುರ್ಲಭಾನುಪ್ರೇಕ್ಷೆ : ರತ್ನತ್ರಯಗಳ ಸ್ವರೂಪವನ್ನು ಬೋಧಿಸುವ ಗುರು-ಶಾಸ್ತ್ರಗಳು ದೊರಕುವುದು ಅತಿ ದುರ್ಲಭ. ಆದ್ದರಿಂದ ಅವು ಬಹಳ ಅಪರೂಪ ವಸ್ತುಗಳೆಂದು ಅವುಗಳ ಹಿರಿಮೆಯನ್ನು ಚಿಂತಿಸುವುದು.

೧೨. ಧರ್ಮಾನುಪ್ರೇಕ್ಷೆ : ಏಕಾದಶ ನಿಲಯಗಳ ಶ್ರಾವಕ ಧರ್ಮ, ದಶ ವಿಧವಾದ ಯತಿಧರ್ಮಗಳ ಆಚರಣೆ ಇಲ್ಲದೆ ತನಗೆ ಮುಕ್ತಿಲಭಿಸದೆಂದು ಚಿಂತಿಸು ವುದು. ಅವುಗಳನ್ನು ನಡೆಸಲು ಯತ್ನಿಸುವುದು.

ಈ ದ್ವಾದಶಾನು ಪ್ರೇಕ್ಷೆಗಳನ್ನು ಭಾವಿಸುವ ಭವ್ಯರಿಗೆ ಸ್ವರ್ಗಮೋಕ್ಷಗಳು ಲಭಿಸುವವು.

[1]ಅಷ್ಟಾವಿಂಶತಿ ಮೂಲಗುಣಗಳು :

ಮುನಿಯಾದವನು ೨೮ ಮೂಲಗುಣಗಳನ್ನು ಪಡೆದಿರಬೇಕಾಗುತ್ತದೆ:

ಪಂಚ ಮಹಾವ್ರತಗಳು, **ಪಂಚ** ಸಮಿತಿಗಳು, **ಪಂಚೇಂದ್ರಿಯ**ಗಳು ಸೇರಿ **ಹದಿನೈದು** ಗುಣಗಳಾಗುತ್ತವೆ:— ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ, ಈರ್ಯಾಸಮಿತಿ (ಹಿಂಸೆಯಾಗದಂತೆ ಮುಂದೆ ನೋಡಿ ನಡೆಯುವುದು), ಭಾಷಾಸಮಿತಿ (ಹಿತಮಿತ ಮಾತು), ಏಷಣಾಸಮಿತಿ (ಪರಿಶುದ್ಧ ಆಹಾರ ಸ್ವೀಕರಿ ವುದು), ಆದಾನನಿಕ್ಷೇಪಸಮಿತಿ (ಉಪಕರಣಗಳನ್ನು ಹಿಂಸೆಯಾಗದಂತೆ ಬಳಸುವುದು), ಉತ್ಸರ್ಗ ಸಮಿತಿ ಅಥವಾ ಪ್ರತಿಷ್ಠಾಪನಾಸಮಿತಿ (ಮಲಮೂತ್ರ ವಿಸರ್ಜನೆಯ ಸಮಯದಲ್ಲಿ ಹಿಂಸೆಯಾಗದಂತೆ ವರ್ತಿಸುವುದು), ಸ್ಪರ್ಶನ, ರಸನ, ಘ್ರಾಣ, ಚಕ್ಷು, ಶ್ರೋತ್ರಗಳಲ್ಲಿ ರಾಗದ್ವೇಷಬಿಡುವುದು—ಇವೇ **ಮೂರು ಪಂಚಕಗಳ** ಹದಿನೈದು ಮೂಲಗುಣಗಳು.

ಸಾಮಾಯಿಕ, ಸ್ತುತಿ. ವಂದನೆ, ಪ್ರತಿಕ್ರಮಣ. ಪ್ರತ್ಯಾಖ್ಯಾನ. ಕಾಯೋತ್ಸರ್ಗ, ಕೇಶಲೋಚನ, ನಿರ್ಗ್ರಂಥ, (ಅಚೇಲತ್ವ), ಅಸ್ನಾನ, ಕ್ಷಿತಿಶಯನ, ಅದಂತಧಾವನ. ಸ್ಥಿತಿ ಭೋಜನ, ಏಕಭುಕ್ತ-ಎಂಬ ಹದಿಮೂರು ಗುಣಗಳು ಸೇರಿದರೆ ಒಟ್ಟು ೨೮ ಮೂಲ ಗುಣಗಳಾಗುತ್ತವೆ. ಮುನಿಗಳು ಇವುಗಳನ್ನು ಆಚರಣೆಯಲ್ಲಿ ತರುವುದು ಪ್ರಥಮ ಕರ್ತವ್ಯವಾಗಿದೆ.

ಪಂಚಭಾವನೆಗಳು : (೧) ವಾಗ್ಗುಪ್ತಿ, ಮನೋಗುಪ್ತಿ, ಈರ್ಯಾಸಮಿತಿ, ಆದಾನನಿಕ್ಷೇಪಸಮಿತಿ, ಆಲೋಕಿತಪಾನಭೋಜನ-ಎಂಬ **ಐದು** ಅಹಿಂಸಾವ್ರತದ ಭಾವನೆಗಳು. (೨) ಕ್ರೋಧ, ಲೋಭ, ಹಾಸ್ಯ, ಭೀತಿಗಳನ್ನು ತೊರೆದು ಅನುವೀಚಿ ಭಾಷಣದ ಸತ್ಯವ್ರತದ **ಐದು** ಭಾವನೆಗಳು. (೩) ಶೂನ್ಯಾಗಾರದಲ್ಲಿರುವುದು, ಪರಕೀಯೋಜ್ಝಿತಮೋಚಿತಾವಾಸ, ಪರರಿಗೆ ಉಪರೋಧಮಾಡುವುದು, ಭಿಕ್ಷಾಶುದ್ಧಿ,

1, ಶಾ. ಸಾ. ಸ.—40

ಸದ್ಧರ್ಮದಲ್ಲಿ ಇರುವುದು ಎಂಬ **ಐದು** ಆಚಾರ್ಯ ವ್ರತಗಳು. (೪) ಬ್ರಹ್ಮಚರ್ಯ. (೫) ಅಪರಿಗ್ರಹ–ಪಂಚಮಹಾವ್ರತಗಳ ಪಂಚಭಾವನೆಗಳನ್ನು ಚಿಂತಿಸಬೇಕು. ಅಂದರೆ– ಅವು ಸ್ಥಿರತ್ವವನ್ನು ಹೊಂದುತ್ತವೆ.

ಗುಪ್ತಿತ್ರಯಗಳು–ಮನೋಗುಪ್ತಿ, ವಾಗ್ಗುಪ್ತಿ, ಕಾಯಗುಪ್ತಿಗಳ ಮೂಲಕ ಮನ-ವಾಕ್-ಕಾಯಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದು.

[1]**ದ್ವಾವಿಂಶತಿ ಪರಿಷಹಗಳು :** ಮೋಕ್ಷಮಾರ್ಗದಲ್ಲಿ ಕ್ರಮಿಸುವಾಗ ಅನೇಕ ಕಷ್ಟಗಳು ಎದುರು ಬರುತ್ತವೆ. ಅವುಗಳನ್ನು ಶಾಂತರೀತಿಯಿಂದ ತಾಳಿಕೊಳ್ಳಬೇಕು. ಈ ಕಷ್ಟಗಳಿಗೆ **ಪರಿಷ**ಹಗಳೆನ್ನುತ್ತಾರೆ. ಹಸಿವು, ನೀರಡಿಕೆ, ಚಳಿ, ಬಿಸಿಲು, ಸೊಳ್ಳೆ-ನೊಣಗಳ ಕಡಿತ, ಬತ್ತಲೆ,— ಮುಂತಾದವುಗಳ ಕಷ್ಟ ಸಹಿಸುವುದು. ಸಿಕ್ಕಲ್ಲಿ ತಂಗುವುದು, ಸ್ತ್ರೀ ಸಹವಾಸ ಬಿಡುವುದು, ಸಂಚರಿಸುವುದು, ಸ್ಮಶಾನ ಮೊದಲಾದ ಕೆಟ್ಟ ಸ್ಥಳಗಳಲ್ಲಿ ಧ್ಯಾನಕ್ಕೆ ಕೂಡ್ರುವುದು, ಸಿಕ್ಕಲ್ಲಿ ಮಲಗುವುದು, ಬೈಗುಳ ಸಹಿಸುವುದು, ಬಡಿದರೆ ತಾಳಿಕೊಳ್ಳುವುದು, ನಿಷ್ಠುರ ನುಡಿಗಳನ್ನು ಸಹಿಸುವುದು, ಭಿಕ್ಷೆ ಸಿಗದಿದ್ದರೆ ಉಪವಾಸ ಹಿಂದಿರುಗುವುದು, ರೋಗದ ನೋವು ಸಹಿಸುವುದು. ಕಲ್ಲು ಮುಳ್ಳು ಚುಚ್ಚಿದರೆ ಸಹನ ಮಾಡುವುದು, ಅಸ್ನಾನದ ಹೊಲಸನ್ನು ಸಹಿಸುವುದು, ಸತ್ಕಾರ-ಅಸತ್ಕಾರಗಳಿಗೆ ಸಮಾನ ಭಾವ ತೋರುವುದು, ತನ್ನ ಪ್ರಜ್ಞೆಗೆ ತಾನು ಮೆಚ್ಚದಿರುವುದು, ತನ್ನ ಅಜ್ಞಾನಕ್ಕೆ ಗೋಳಾಡದಿರುವುದು, ಸಮ್ಯಕ್ತ್ವ ಸಾಧನೆಯಲ್ಲಿ ಬಂದ ಎಡರುಗಳಿಗೆ ಬಗ್ಗದೆ ಧರ್ಮದ ಬಗ್ಗೆ ಸಂಶಯಪಡದೆ ನಿಶ್ಶಂಕೆಯಿಂದಿರುವುದು. ಹೀಗೆ ೨೨ ಪರಿಷಹಗಳನ್ನು ಗೆದ್ದರೆ ಮುನಿಯ ಮನಸ್ಸು ಪಕ್ವವಾಗುತ್ತದೆ.

[2]**ದ್ವಾದಶ ತಪಗಳು :** ಇವುಗಳಲ್ಲಿ ಅಂತರ ಬಾಹ್ಯ ಭೇದಗಳುಂಟು. **ಬಾಹ್ಯ ತಪಗಳು**— ಅನಶನ, ವೃತ್ತಿಪರಿಸಂಖ್ಯಾನ (ಇಂತಿಂಥ ಆಹಾರ ಇಷ್ಟಿಷ್ಟು ಪ್ರಮಾಣ), ರಸಪರಿತ್ಯಾಗ, ವಿವಿಕ್ತಶಯನಾಸನ (ಕಠಿಣ ಆಸನಗಳು), ಕಾಯಕ್ಲೇಶ (ಶರೀರ ಕಷ್ಟಗೊಳಿಸುವುದು ಈ **ಆರು** ಬಾಹ್ಯತಪಗಳು. **ಅಂತರಂಗ (ಅಭ್ಯಂತರ) ತಪಗಳು**– ಪ್ರಾಯಶ್ಚಿತ್ತ, ವಿನಯ, ವೈಯ್ಯಾವೃತ್ಯ (ಔಷಧೋಪಚಾರ ಸೇವೆ), ಸ್ವಾಧ್ಯಾಯ, ಉತ್ಸರ್ಗ, ಧ್ಯಾನ— ಈ **ಆರು** ಅಂತರಂಗದ ತಪಗಳು.

ನಾಲ್ಕು ಪ್ರಕಾರದ ಧ್ಯಾನಗಳು:— ಆರ್ತ, ರೌದ್ರ, ಧರ್ಮ, ಶುಕ್ಲ ಎಂದು ನಾಲ್ಕು ಪ್ರಕಾರದ ಧ್ಯಾನಗಳುಂಟು. ಆರ್ತ–ರೌದ್ರಗಳು ಹೇಯಗಳು; ಧರ್ಮ-ಶುಕ್ಲಗಳು ಉಪಾದೇಯಗಳು.

ಹದಿನೆಂಟು ಬುದ್ಧಿಗಳು:— ಕೇವಲಜ್ಞಾನ, ಅವಧಿಜ್ಞಾನ, ಮನಃಪರ್ಯಾಯ ಜ್ಞಾನ, ಬೀಜಬುದ್ಧಿ, ಕೋಷ್ಠಬುದ್ಧಿ, ಪದಾನುಸಾರಿತ್ವ, ಸಂಭಿನ್ನ ಶ್ರೋತೃತ್ವ, ದೂರಾ

1. ಮಹಾವೀರನ ಮಾತುಕತೆ–ಜಿ. ಪಿ. ರಾ. (ಪುಟ ೧೧೭)
2. ಶಾ. ಸಾ. ಸ.–೪೬

ಸ್ವಾದನ, ದೂರದರ್ಶನ, ದೂರಶ್ರವಣ, ದೂರಘ್ರಾಣ, ದಶಪೂರ್ವತ್ವ, ಚತುರ್ದಶ ಪೂರ್ವತ್ವ, ಅಷ್ಟಾಂಗಮಹಾನಿಮಿತ್ತ ಜ್ಞಾನತ್ವ, ಪ್ರಜ್ಞಾಶ್ರಮಣತ್ವ, ಪ್ರತ್ಯೇಕಬುದ್ಧಿತ್ವ, ದೂರಸ್ಪರ್ಶನತ್ವ, ವಾದಿತ್ವ—ಎಂಬ ಹದಿನೆಂಟು ಬುದ್ಧಿಗಳುಂಟು.

ಅಷ್ಟಋದ್ಧಿಗಳು : ಬುದ್ಧಿ, ಕ್ರಿಯಾ, ವಿಕ್ರಿಯಾ, ತಪ, ಬಲ, ಔಷಧ, ರಸ, ಅಕ್ಷೀಣ ಎಂಬ ಎಂಟು ಋದ್ಧಿಗಳುಂಟು.

ಹನ್ನೊಂದು ಕ್ರಿಯಾಋದ್ಧಿಗಳು : ಅಣಿಮಾ. ಮಹಿಮಾ, ಲಘಿಮಾ, ಗರಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ, ವಶಿತ್ವ, ಅಪ್ರತಿಘಾತ, ಅಂತರ್ಧಾನ. ಕಾಮ ರೂಪಿತ್ವ—ಎಂಬ ಹನ್ನೊಂದು ವಿಕ್ರಿಯಾ ಬುದ್ಧಿಗಳುಂಟು. ಇವುಗಳ ಬಲೆಗೆ ಬೀಳ ಬಾರದು.

ಪಂಚಾಚಾರಗಳು : ಜ್ಞಾನ, ದರ್ಶನ, ತಪ, ವೀರ್ಯ, ಚಾರಿತ್ರಾಚಾರಗಳು.

ಪಂಚನಿರ್ಗ್ರಂಥರು : ಪುಲಾಕರು, ವಕುಶರು, ಕುಶೀಲರು, ನಿರ್ಗ್ರಂಥರು, ಸ್ನಾತಕರು-ಎಂದು ಐದು ವಿಧ. ಇವುಗಳಲ್ಲಿ 'ನಿರ್ಗ್ರಂಥ' 'ಸ್ನಾತಕ' ಅವಸ್ಥೆಗಳು ಆದರ್ಶ.

ಸಪ್ತ ಪರಮ ಸ್ಥಾನಗಳು : ಸಜ್ಜಾತಿತ್ವ, ಸದ್ಗೃಹಸ್ಥತ್ವ, ಪಾರಿವ್ರಾಜ್ಯಕತ್ವ, ದೇವೇಂದ್ರತ್ವ, ಚಕ್ರವರ್ತಿತ್ವ, ಪರಮಾರ್ಹಂತ್ಯತ್ವ, ನಿರ್ವಾಣತ್ವ ಎಂಬ ಏಳು ಮೇಲ್ತರಗತಿಯ ಸ್ಥಾನಗಳುಂಟು. ಪುಣ್ಯವಿಶೇಷಗಳಿಂದ, ತಪಸ್ಸಿನಿಂದ ಅವು ದೊರೆ ಯುವವು. ಒಂದಕ್ಕಿಂತ ಒಂದು ಹೆಚ್ಚಿನವು. 'ನಿರ್ವಾಣತ್ವ'ವೇ ಸರ್ವಶ್ರೇಷ್ಠಸ್ಥಾನ.

ಪಂಚಚಾರಿತ್ರಗಳು : ಸಾಮಾಜಿಕ, ಛೇದೋಪಸ್ಥಾಪನೆ, ಪರಿಹಾರವಿಶುದ್ಧಿ, ಸೂಕ್ಷ್ಮಸಾಂಪರಾಯ, ಯಥಾಖ್ಯಾತವೆಂಬ ಐದು ಚಾರಿತ್ರಗಳುಂಟು.

ಚತುರ್ದಶ ಗುಣಸ್ಥಾನಗಳು : ಮಿಥ್ಯಾದೃಷ್ಟಿ, ಸಾಸಾದನ ಸಮ್ಯಗ್ದೃಷ್ಟಿ, ಸಮ್ಯಗ್ಮಿಥ್ಯಾದೃಷ್ಟಿ, ಅಸಂಯತಸಮ್ಯಗ್ದೃಷ್ಟಿ, ದೇಶವ್ರತಿ, ಪ್ರಮತ್ತಸಂಯತ, ಅಪ್ರ-ಮತ್ತಸಂಯತ. ಅಪೂರ್ವಕರಣ. ಅನಿವೃತ್ತಿಕರಣ, ಕ್ಷಪಕೋಪಸಮಕಸಂಯತ, ಉಪ ಶಾಂತಕಷಾಯ ವೀತರಾಗಛದ್ಮಸ್ಥಸಂಯತ. ಕ್ಷೀಣಕಷಾಯ ವೀತರಾಗಛದ್ಮಸ್ಥಸಂಯತ ಸಯೋಗಿಕೇವಲಿಜಿನ, ಅಯೋಗಿಕೇವಲಿಜಿನ ಎಂದು ೧೪ ಗುಣಸ್ಥಾನಗಳುಂಟು. ಸಾಧ ಕನು ತನ್ನ ಚಾರಿತ್ರ ತಪಗಳಿಂದ ಹೆಚ್ಚಿನ ಸ್ಥಾನ ಹೊಂದುತ್ತಾನೆ.

ಚತುರ್ದಶ ಜೀವಸಮಾಸ ಮತ್ತು ಮಾರ್ಗಣ ಸ್ಥಾನಗಳು : ಬಾದರೈ ಕೇಂದ್ರಿಯ ಪರ್ಯಾಪ್ತಕಾ ಪರ್ಯಾಪ್ತಕ, ಸೂಕ್ಷ್ಮೈಕೇಂದ್ರೀಯ ಪರ್ಯಾಪ್ತಕಾ ಪರ್ಯಾಪ್ತಕ, ಅದರಂತೆ ದ್ವೀಂದ್ರಿಯ, ತ್ರೀಂದ್ರಿಯ, ಚತುರೀಂದ್ರಿಯ, ಅಸಂಜ್ಞಿ ಪಂಚೇಂದ್ರಿಯ, ಸಂಜ್ಞಿಪಂಚೇಂದ್ರಿಯ, ಪರ್ಯಾಪ್ತಕಾಪರ್ಯಾಪ್ತಕಗಳು ಸೇರಿ ೧೪ ಜೀವಸಮಾಸಗಳು. ಆಮೇಲೆ ಗತಿ, ಇಂದ್ರಿಯ, ಕಾಯ. ಯೋಗ, ವೇದ, ಕಷಾಯ,

ಜ್ಞಾನ, ಸಂಯಮ, ದರ್ಶನ, ಲೇಶ್ಯಾ, ಭವ್ಯತ್ವ, ಸಮ್ಯಕ್ತ್ವ, ಸಂಜ್ಞಿತ್ವ, ಆಹಾರ ಈ ೧೪ ಮಾರ್ಗಣ ಸ್ಥಾನಗಳು. ದಿಗಂಬರ ಮುನಿಗೆ ಇವೆಲ್ಲ ಆದರ್ಶವಾದವುಗಳು.

ಸಲ್ಲೇಖನೆ : ಶ್ರಾವಕರು ಮುನಿಗಳು ಇಬ್ಬರಿಗೂ ಸಲ್ಲೇಖನೆ ಹೇಳಿದೆ. ಸಾವಿನೆದುರು ಎಲ್ಲರೂ ಸಮಾನರು. ಉಪಸರ್ಗ, ದುರ್ಭಿಕ್ಷ, ಮುಪ್ಪು, ರೋಗಗಳು ಬಂದು ಇನ್ನೇನು ಕೆಲವೇ ದಿನಗಳಲ್ಲಿ ಸಾವು ತಮಗೆ ಸಂಭವಿಸಲಿದೆ ಎಂದು ಖಾತ್ರಿಯಾದಾಗ' ಮರಣದ ಹೊರತು ಅನ್ಯಮಾರ್ಗವೇ ಇಲ್ಲವೆಂದು ನಿಶ್ಚಯವಾದಾಗ, ಶುಭಚಿಂತನೆಯೊಂದಿಗೆ ಪ್ರಾಣಬಿಡುವುದಕ್ಕೆ **ಸಲ್ಲೇಖನೆ** ಎಂಬ ವ್ರತಾಚರಣೆಯನ್ನು ಕೈಕೊಳ್ಳಬೇಕು. ಮರಣವನ್ನು ಸಂತೋಷದಿಂದ ಎದುರಿಸಬೇಕು. ಆಹಾರ-ನೀರುಗಳನ್ನು ತ್ಯಜಿಸಿ ಮರಣ ಕಾಲಕ್ಕಾಗಿ ಕಾತರದಿಂದ ಕಾಯ್ದು ಸದ್ಗತಿ ಹೊಂದುವುದು ಬಹಳ ಶ್ರೇಷ್ಠವಾದುದು. ಅದು ಕೆಲವರು ತಪ್ಪು ತಿಳಿದಂತೆ ಆತ್ಮಹತ್ಯವಲ್ಲ; ವೀರಮರಣವದು; ಇಂಗಿನೀ ಮರಣವದು !

ಶ್ರಾವಕ, ಬ್ರಹ್ಮಚಾರಿ, ಕ್ಷುಲ್ಲಕ ಸಾಧು, ಐಲಕಸಾಧು, ನಿರ್ಗ್ರಂಥ ಸಾಧು.–ಎಂದು ತ್ಯಾಗಪೂರ್ವಕವಾದ ನಿರ್ವತ್ತಿಮಾರ್ಗ ಜೈನಧರ್ಮದ ವೈಶಿಷ್ಟ್ಯವಾಗಿದೆ. ಕ್ರಮದಿಂದ ದಿಗಂಬರತ್ವವನ್ನು ಹೊಂದಿ ಸಾಧಕನು ಸ್ವರ್ಗ-ಮೋಕ್ಷಗಳನ್ನು ಸಾಧಿಸುತ್ತಾನೆ. ಅಹಿಂಸೆಯೇ ಎಲ್ಲ ಅವಸ್ಥೆಗಳಲ್ಲಿ, ಎಲ್ಲ ತತ್ವಗಳಲ್ಲಿ ಎಲ್ಲ ಗುಣಗಳಲ್ಲಿ ಪ್ರಮುಖಪಾತ್ರ ವಹಿಸುವುದರಿಂದ ಜೈನಧರ್ಮಕ್ಕೆ ಅಹಿಂಸಾಪರಮೋಧರ್ಮವೆಂದು ಹೆಸರಾಗಿದೆ. ಶಾಖಾಹಾರ–ಅಹಿಂಸೆಗಳಲ್ಲಿ ಜೈನರು ಮಾಡಿದಷ್ಟು ಪ್ರಯೋಗಗಳನ್ನು, ಸಾಧನೆಗಳನ್ನು, ಸಿದ್ಧಿಯನ್ನು ಅನ್ಯರು ಹೊಂದಿರುವುದು ಬಹಳ ಅಪರೂಪ. ಜಗತ್ತಿನ ಯಾವದೇ ಧರ್ಮದಲ್ಲಿ, ವ್ಯಕ್ತಿಯ ಸಾಧನೆಯಲ್ಲಿ ಅಹಿಂಸೆಯ ಬಗ್ಗೆ ಹೆಚ್ಚಿನ ತಿಳುವಳಿಕೆಬೇಕಾಗಿದ್ದರೆ ಜೈನ ಶಾಸ್ತ್ರಗಳನ್ನು ಮೊರೆಹೋಗಬೇಕು. ತಕ್ಕ ಉಪಾಯ ಅಲ್ಲಿ ಸಿಕ್ಕುತ್ತದೆ.

ಜೈನಧರ್ಮ ಮಾನವ. ಮಹಾಮಾನವಧರ್ಮ. ಅಲ್ಲಿ ಆದ್ಯಂತವೂ ಮನುಷ್ಯನೇ ಪ್ರಯೋಗಕ್ಕೆ ವಸ್ತು, ಸಾಧನ. ಸಲಕರಣೆ. ಸಕಲ ಜೀವರಾಶಿಗಳಿಗೂ ಆತ್ಮವಿದೆ ಎಂದು ಸಾರುವ ಜೈನಧರ್ಮ ಜೀವರಾಶಿಗಳಿಗೆಲ್ಲ ಹೆಚ್ಚಿನ ಯೋಗ್ಯತೆಯನ್ನು ತಂದಿದೆ. ತಾನು ಬದುಕಿ ಜಗತ್ತನ್ನು ಬದುಕಗೊಡುವ ದಯಾಧರ್ಮವಿದು. ಜಗತ್ತಿನ ಸಕಲ ತತ್ವಗಳನ್ನು ಶಾಂತರೀತಿಯಿಂದ ಕೇಳಿಕೊಂಡು ಅವೆಲ್ಲವುಗಳಿಗೂ ಮರ್ಯಾದೆಯನ್ನು ಕೊಡುವುದು, ಅಹಿಂಸಾವಾದಿಯಾಗಿ ಯಾರಮನಸ್ಸನ್ನೂ ನೋಯಿಸದಿರುವುದು, ಜೈನರ ಕರ್ತವ್ಯವಾಗಿದೆ. ಅಲ್ಲದೆ "ಸ್ಯಾದ್ವಾದ" "ಅನೇಕಾಂತವಾದ" "ಸಪ್ತಭಂಗಿ"ಗಳ ಮುಖಾಂತರ ಸಾಪೇಕ್ಷ ಮುಖಾಂತರ ಸಾಪೇಕ್ಷಸಿದ್ಧಾಂತವನ್ನು ಹೇಳಿದೆ.

ಜೈನ ಧರ್ಮವು ಬಹಳ ವಿಸ್ತಾರವಾದ ತತ್ವರಾಶಿಯುಳ್ಳದ್ದು. ಅದು ಸಂಪೂರ್ಣ ಸ್ವತಂತ್ರವಾದುದು. ಅಸಂಖ್ಯ ಗ್ರಂಥರಾಶಿಯನ್ನು ಹೊಂದಿರುವುದು. ಅನೇಕ ಭಾಷೆ

ಗಳಲ್ಲಿ ಅಭಿವ್ಯಕ್ತಿತ್ವವನ್ನು ಪಡೆದಿರುವುದು. ಅನೇಕ ಪ್ರಕಾಂಡ ಪಂಡಿತರನ್ನು, ತತ್ವವಿದರನ್ನು, ಕವಿಗಳನ್ನು, ವಿವಿಧ ಶಾಸ್ತ್ರಕಾರರನ್ನು ಹೊಂದಿದೆ. ಸಂಸ್ಕೃತ, ಪ್ರಾಕೃತ, ಹಿಂದಿ, ಗುಜರಾತಿ, ಕನ್ನಡ ಭಾಷೆಗಳಲ್ಲಿ ಅಧಿಕ ಜೈನಗ್ರಂಥಗಳಿವೆ.

ಜೈನಮುನಿಗಳು ಸಲ್ಲಿಸಿದ ಸೇವೆ ಅಪಾರವಾದುದು; ಸಾಹಿತ್ಯಕ್ಕೆ, ತತ್ವಕ್ಕೆ, ಶಾಸ್ತ್ರಗಳಿಗೆ, ಸಂಶೋಧನಗಳಿಗೆ ಜೈನಮುನಿಗಳು ಸಲ್ಲಿಸಿದ ಕಾಣಿಕೆ ಎಂದೆಂದಿಗೂ ಮರೆಯಲಾರದಂತಹದು. ಮೇಲೆ ಉಲ್ಲೇಖಮಾಡಿದ ಗ್ರಂಥರಾಶಿಯಲ್ಲಿ ಮುಕ್ಕಾಲುಪಾಲು ಮುನಿಗಳಿಂದ ರಚಿಸಲ್ಪಟ್ಟ ಕೃತಿಗಳೇ ಉಂಟು.

ಮುನಿಧರ್ಮವನ್ನು ಪಾಲಿಸಿಕೊಂಡು ಅವರು ಆತ್ಮೋದ್ಧಾರ ಮಾಡಿಕೊಂಡರು. ಜಗತ್ತಿನ ಆತ್ಮೋದ್ಧಾರಕ್ಕೆ ಅವರ ಗ್ರಂಥರಾಶಿಗಳು ಕೈಬಾಚಿ ಕರೆಯುತ್ತಿವೆ. ಮುನಿಧರ್ಮದಲ್ಲಿ ವಿವರಿಸಿದ ತತ್ವಗಳು ಬರಿ ಕಲ್ಪನೆಯ, ಕನಸಿನ, ಅವಾಸ್ತವಿಕ ವಿಷಯಗಳಲ್ಲ. ವಾಸ್ತವವಾದವುಗಳು: ನಿತ್ಯಕಾರ್ಯಾಚರಣೆಗೆ ಬರುವಂತಹವು. ಏಕೆಂದರೆ—ಮುನಿಧರ್ಮದ ಬಗ್ಗೆ ತತ್ವಗ್ರಂಥ ಬರೆದವರು ಸ್ವತಃ ಮುನಿಗಳಾಗಿದ್ದುಕೊಂಡು ಆಚರಿಸಿ ತೋರಿಸಿದ್ದಾರೆ. ಅವರು ಹೇಳಿದ ತತ್ವಗಳು ಆಚರಿಸಲು ಕಷ್ಟವಾಗಬಹುದು; ಆದರೆ ಆಚರಣಾಬಾಹಿರವಾದುವಲ್ಲ.

ದಿಗಂಬರ ಸಾಧುಗಳು ಸ್ವತಂತ್ರರು, ಸ್ವಾವಲಂಬಿಗಳು; ನಿರ್ಮಮತೆಯುಳ್ಳವರು; ಬಹಿರಂಗದಲ್ಲಿ ದೈಹಿಕವಾಗಿ ಮಾತ್ರ ಮಲೀನರಾಗಿರುವಂತೆ ಕಂಡರೂ ಅಂತರಂಗದಲ್ಲಿ ಅತ್ಯಂತ ನಿರ್ಮಲತೆಯನ್ನು ಹೊಂದಿದವರು; ಮಾಯಾಚಾರ-ವಂಚನೆಗಳಿಗೆ ಅವಕಾಶ ಕೊಡದವರು. 'ಅಸೀಧಾರಾವ್ರತ'-ಉಳ್ಳವರು, ಮಹರ್ಷಿಗಳು, ಸಿಂಹವೃತ್ತಿಯುಳ್ಳ ಮಹಾಪುರುಷರು; ವಿಕಾರರಹಿತರು. ವೀತರಾಗರು; ವಿಶ್ವಕಲ್ಯಾಣಭಾವ ಉಳ್ಳವರು: ಚಕ್ರವರ್ತಿಗಳಿಂದ ಪೂಜಿಸಲ್ಪಟ್ಟವರು; ಅದ್ವಿತಿಯರು. ಸರ್ವೋಚ್ಚ ಆದರ್ಶವುಳ್ಳವರು; ಸಾಧುಗಳೆಲ್ಲರಲ್ಲಿಯೇ ಪರಮ ಸನ್ಮಾನ ಹೊಂದಿದವರು: ಇದಕ್ಕಿಂತ ಹೆಚ್ಚಿನ ಅವಸ್ಥೆ ಸಾಧನೆಯ ಮಾರ್ಗದಲ್ಲಿ ಮತ್ತೊಂದು ಇಲ್ಲ. ಎನಿಸಿದವರು !

[1]ಉಮಾಸ್ವಾಮಿ, ಪೂಜ್ಯಪಾದ, ಅಕಲಂಕ, ವಿದ್ಯಾನಂದಿ. ಸಮಂತಭದ್ರ, ವಾದೀಭಸಿಂಹ, ನೇಮಿಚಂದ್ರ, ಜಿನಸೇನ, ವಾದಿರಾಜ ಮೊದಲಾದವರು ಕರ್ನಾಟಕದವರೇ ಆದ ಮಹಾಗ್ರಂಥಕಾರರಾದ ದಿಗಂಬರ ಸಾಧುಗಳು.

[2]ಮಹರ್ಷಿ ಕುಂದಕುಂದಾಚಾರ್ಯರು ತಮಿಳ ಪ್ರಾಂತದವರು. ತಮಿಳನಾಡಿನ ಮಧುರೆಯ ಸಮೀಪದ ಗುಹೆಗಳಲ್ಲಿ ದಿಗಂಬರ ಜೈನಸಾಧುಗಳು ಸಂಸಂಘಟಿತರಾಗಿ ವಾಸಿಸುತ್ತಿದ್ದರೆಂದು ತಿಳಿದುಬರುತ್ತದೆ. ಕರ್ನಾಟಕದ ಶ್ರವಣಬೆಳಗೊಳ, ಮೂಡಬಿದಿರೆ,

1.2. ವರ್ಧಮಾನ ಶಾಸ್ತ್ರಿಗಳ 'ದಿಗಂಬರ ಸಾಧುತ್ವ ಮತ್ತು ಅದರ ಮಹತ್ವ'ವೆಂಬ ಲೇಖನ (ವಿವೇಕಾಭ್ಯುದಯ ವಿಶೇಷಾಂಕ) ೧೯೫೧.

ಅಜಂತಾ, ಎಲ್ಲೋರಾ, ಬಾದಾಮಿ; ಓಡಿಸಾದ ಖಂಡಗಿರಿ-ಉದಯಗಿರಿ; ಬಂಗಾಳ-ಪಂಜಾಬಗಳಲ್ಲಿ; ಗುಜರಾತದ ಗಿರಿನಾರದಲ್ಲಿ: ಸೌರಾಷ್ಟ್ರ-ಬಿಹಾರಗಳಲ್ಲಿ; ರಜಪೂತಸ್ಥಾನದಲ್ಲಿ ದಿಗಂಬರ ಸಾಧುಗಳು ವ್ಯವಸ್ಥಿತ ರೀತಿಯಿಂದ ಇದ್ದರೆಂದು ತಿಳಿಯುತ್ತದೆ. ಇಂದಿಗೂ ಬಿಹಾರದ ಸಮ್ಮೇದ ಶಿಖರದಲ್ಲಿ: ಗುಜರಾತದ ಊರ್ಜಯಂತಿಗಿರಿ (ಗಿರನಾರ) ಯಲ್ಲಿ; ಕರ್ನಾಟಕದ ಶ್ರವಣಬೆಳುಗೊಳದಲ್ಲಿ; ಮಹಾರಾಷ್ಟ್ರದ ಬಾಹುಬಲಿ ಬೆಟ್ಟದಲ್ಲಿ-ಅಲ್ಲದೆ ಅನೇಕ ಪಟ್ಟಣ-ಹಳ್ಳಿಗಳಲ್ಲಿ ಜೈನ ಜನಸಂಖ್ಯೆ ಹೆಚ್ಚಾಗಿರುವ ಊರುಗಳಲ್ಲಿ ದಿಗಂಬರ ಸಾಧುಗಳನ್ನು ಕಾಣಬಹುದು.

[1]ಪ್ರಾಚೀನಕಾಲದ ಅರಸರಲ್ಲಿ ಮೌರ್ಯರು, ಕಲಿಂಗ ಅರಸರು, ಮಾಳವ-ಗುಜರಾತ ದೇಶಗಳ ಅರಸರು, ಕರ್ನಾಟಕದ ರಾಷ್ಟ್ರಕೂಟ, ಚಾಳುಕ್ಯ, ಗಂಗ, ಕದಂಬ, ಹೊಯ್ಸಳ, ವಿಜಯನಗರ ಅರಸರು, ಪ್ರಾಚೀನ ಕಂಚಿಯ ಪಲ್ಲವರು, ಚೋಳ ಅರಸರಲ್ಲಿ ಕೆಲವು ಪ್ರಾಚೀನ ಅರಸರು, ಪಾಂಡ್ಯರಲ್ಲಿ ಕೆಲವರು ಜೈನಧರ್ಮಕ್ಕೆ ಆಶ್ರಯ ಕೊಟ್ಟಿದ್ದರು. ಜೈನಮುನಿಗಳನ್ನು ಮರ್ಯಾದೆಯಿಂದ ಕಾಣುತ್ತಿದ್ದರು. ಅವರಲ್ಲಿ ಮೌರ್ಯರ ಚಂದ್ರಗುಪ್ತ, ಕಳಿಂಗದ ಖಾರವೇಲ, ಉಜ್ಜೈನಿಯ ರಾಜಭೋಜ, ಪರಮಾರ ವಂಶದ ರಾಜರು, ರಾಷ್ಟ್ರಕೂಟರ ನೃಪತುಂಗ, ಚಾಳುಕ್ಯರ ಪುಲಕೇಶಿ, ಸೋಲಂಕಿ ಸಿದ್ಧರಾಜ, ಗಂಗರ ರಾಚಮಲ್ಲ, ಅವನ ಮಂತ್ರಿಯಾದ ಚಾವುಂಡರಾಯ, ವೀರಪಾಂಡ್ಯ ಮೊದಲಾದ ಅರಸರು ಜೈನಸಂಸ್ಕೃತಿಯ ಸಂವರ್ಧನೆಗೆ ತುಂಬ ನೆರವು ನೀಡಿದ್ದಾರೆ. ಅವರ ಕಾಲದಲ್ಲಿ ಸುಪ್ರಸಿದ್ಧ ದಿಗಂಬರ ಮುನಿಗಳು ಇದ್ದುದು ಸ್ಪಷ್ಟವಾಗಿದೆ. ಉಜ್ಜಯಿನಿಯ ಪ್ರಭಾಚಂದ್ರರು ರಾಜಭೋಜನಿಂದ ಪೂಜಿತರು. ಭೂತಬಲಿ-ಪುಷ್ಪದಂತರು ಅಂಕಲೇಶ್ವರದಲ್ಲಿದ್ದು ಧವಲ ಸಿದ್ಧಾಂತಗ್ರಂಥ ರಚಿಸಿದರು.

ಕೆಲವು ಮುಸಲ್ಮಾನ ಅರಸರುಕೂಡ ಜೈನದಿಗಂಬರ ಸಾಧುಗಳನ್ನು ಗೌರವಾದರಗಳಿಂದ ಕಂಡುದುಂಟು. ಆಧುನಿಕಕಾಲದ ಮಹಾತ್ಮಾಗಾಂಧೀಜಿಯವರು ದಿಗಂಬರತ್ವವನ್ನು ಆದರ್ಶವಾಗಿ ಕಾಣುತ್ತಿದ್ದರು. ಕೆಲವು ಭಾರತೀಯ ವಿದ್ವಾಂಸರು, ಪಾಶ್ಚಾತ್ಯ ವಿದ್ವಾಂಸರು ದಿಗಂಬರತ್ವದ ಶ್ರೇಷ್ಠತೆಯನ್ನು ಪ್ರಶಂಸೆಮಾಡಿದ್ದಾರೆ. ಭಾಗವತ, ಭಾರತ ಮುಂತಾದ ಗ್ರಂಥಗಳಲ್ಲಿ ದಿಗಂಬರತ್ವದ ಆದರ್ಶ ವರ್ಣಿತವಾಗಿದೆ. ರಾಜಾಭರ್ತೃಹರಿ ದಿಗಂಬರತ್ವವನ್ನು ತನ್ನ ವೈರಾಗ್ಯಶತಕದಲ್ಲಿ ವರ್ಣಿಸಿದ್ದಾನೆ. ಯಜುರ್ವೇದ (ಅ. ೯ ಮಂ. ೨೫)ದಲ್ಲಿ ನಗ್ನಸಾಧುಗಳ ಉಲ್ಲೇಖಮಾಡಲಾಗಿದೆ. ಅನೇಕಕಡೆಗೆ ಶಿವನೂ ದತ್ತಾತ್ರೇಯನೂ 'ದಿಗಂಬರ'–ಮೂರ್ತಿಗಳೆಂದು ವರ್ಣನೆ ಮಾಡಿರುವ ಅಂಶ ಸುಪ್ರಸಿದ್ಧವಾಗಿದೆ. ಸ್ವಾಮಿ ರಾಮಕೃಷ್ಣಪರಮಹಂಸರು ಧ್ಯಾನಕ್ಕೆ.

---

1. ವರ್ಧಮಾನ ಶಾಸ್ತ್ರಿಗಳ 'ದಿಗಂಬರ ಸಾಧುತ್ವ ಮತ್ತು ಅದರ ಮಹತ್ವ' ಎಂಬ ಲೇಖನ (ವಿವೇಕಾಭ್ಯುದಯ ವಿಶೇಷಾಂಕ) ೧೯೫೧.

ಯೋಗಾಭ್ಯಾಸಕ್ಕೆ ಕೂಡ್ರುವಾಗ ಏಕಾಂತಸ್ಥಳವನ್ನು ಹುಡುಕಿ ಬತ್ತಲೆಯಾಗಿ ಕೂಡ್ರುತ್ತಿದ್ದರು ಎಂಬ ವಿಷಯವನ್ನು ಅವರ [1]ಚರಿತ್ರೆಯನ್ನು ಓದಿದವರೆಲ್ಲರೂ ಬಲ್ಲರು. [2]ವೀರಶೈವರಲ್ಲಿ ಕೆಲವು ಶಿವಶರಣೆಯರು ದಿಗಂಬರೆಯರಾಗಿದ್ದರೆಂದು ಹೇಳಲಾಗಿದೆ; ಅಕ್ಕಮಹಾದೇವಿಯು ದಿಗಂಬರ ಶಿವಶರಣೆಯಾಗಿದ್ದ ವಿಷಯ ಸುಪ್ರಸಿದ್ಧವಾಗಿದೆ.

ದಿಗಂಬರ ಸಾಧುಗಳ ದರ್ಶನ ಶುಭಶಕುನವೆಂದು ನಿಮಿತ್ತ ಶಾಸ್ತ್ರಕಾರರು ಹೇಳುತ್ತಾರೆ. ಮಹಾಭಾರತದಲ್ಲಿ ದಿಗಂಗರ ಸಾಧು ಎದುರಿಗೆ ಬಂದ ಸಮಯದಲ್ಲಿ ಯುದ್ಧಸನ್ನದ್ಧನಾದ ಅರ್ಜುನನ್ನು ಕುರಿತು ಶ್ರೀಕೃಷ್ಣ ಹೀಗೆ [3]ಹೇಳುತ್ತಾನೆ :

> ಆರೋಹಸ್ವರಥೆ ಪಾರ್ಥ ಗಾಂಡೀವಂ ಚ ಕರೇ ಕುರು ।
> ನಿರ್ಜಿತಾ ಮೇದಿನೀ ಮನ್ಯೇ ನಿರ್ಗ್ರಂಥೊ ಯಸ್ಯ ಸಮ್ಮುಖೇ ॥

ದಿಗಂಬರ ಮುನಿದರ್ಶನ ಶುಭದಾಯಕ, ಅದು ಯುದ್ಧದಲ್ಲಿ ಯಶಸ್ಸನ್ನು ಸೂಚಿಸುತ್ತದೆ, ಕೂಡಲೆ ಯುದ್ಧಮಾಡು, ನಿನಗೆ ಗೆಲವು ನಿಶ್ಚಿತ ಎಂದು ಪ್ರಚೋದನೆ ಕೊಡುವ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳಲಾಗಿದೆ.

> ಪದ್ಮಿನೀ ರಾಜಹಂಸಾಶ್ಚ ನಿಗ್ರಂಥಾಶ್ಚ ತಪೋಧನಾಃ ।
> ಯಂ ದೇಶಮುಪಸರ್ಪಂತಿ ದುರ್ಭಿಕ್ಷಂ ತತ್ರನೋಭವೇತ್ ॥

ದಿಗಂಬರ ಸಾಧುಗಳು ಇರುವ ಭೂಮಿಯಲ್ಲಿ ಬರಗಾಲ ಬೀಳುವುದಿಲ್ಲವೆಂದೂ, ಅವರು ವಾಸಿಸುವ ಭೂಮಿ ಸದಾ ಸುಭಿಕ್ಷತೆಯುಳ್ಳುದಾಗಿರುತ್ತದೆಯೆಂದೂ ನೀತಿಕಾರರು ಸಾರಿದ್ದಾರೆ.

ಹೀಗೆ ದಿಗಂಬರತ್ವದ ಆದರ್ಶ ಪ್ರಸಿದ್ಧವಾಗಿದೆ. ಎಲ್ಲ ಸಂಪ್ರದಾಯದವರೂ ಅದರ ಮಹತ್ವವನ್ನು ತಿಳಿದಿದ್ದಾರೆ. ಆಗೊಮ್ಮೆ ಈಗೊಮ್ಮೆ ಕೆಲವು ಧರ್ಮದವರು ಅದನ್ನು ಕಾರ್ಯರೂಪದಲ್ಲಿಯೂ ತಂದಿದ್ದಾರೆ. ಆದರೆ ಜೈನರು ದಿಗಂಬರತ್ವದ ಆದರ್ಶವನ್ನು ನಿತ್ಯವೂ ಅನುಸರಣೆಯಲ್ಲಿ ತಂದು ಆ ಪರಂಪರೆಯನ್ನು ಜೀವಂತವಾಗಿ ಇಟ್ಟಿದ್ದಾರೆ. 'ದಿಗಂಬರತ್ವ'ವನ್ನು ಪಡೆಯದೆ ಮೋಕ್ಷವೇ ಇಲ್ಲವೆಂದು ದಿಗಂಬರ ಜೈನ ಪಂಥೀಯ ಶಾಸ್ತ್ರಗಳು ಸಾರುತ್ತಿವೆ.

ಆಧುನಿಕ ದಿಗಂಬರ ಸಾಧುಗಳಲ್ಲಿ ಚಾರಿತ್ರಚಕ್ರವರ್ತಿ ಎನಿಸಿದ ಆಚಾರ್ಯ ಶಾಂತಿಸಾಗರ ಮಹಾರಾಜರು 'ದಿಗಂಬರತ್ವ' ವನ್ನು ಧರಿಸಿ, ಅಖಂಡ ಭಾರತದ ಭೂಪ್ರದೇಶವನ್ನೆಲ್ಲ ಪಾದಸಂಚಾರಿಯಾಗಿಯೇ ತಿರುಗಿ, ದಿಗ್ವಿಜಯವನ್ನೇ ಸಂಪಾದಿಸಿದರು. ಜೈನ

---

1. ಕುವೆಂಪು ಅವರ 'ರಾಮಕೃಷ್ಣಪರಮಹಂಸ'ರ ಚರಿತ್ರೆ.
2. ಶ್ರೀ ಫ. ಗು. ಹಳಕಟ್ಟಿಯವರ 'ಶಿವಶರಣೆಯರ ಚರಿತ್ರೆಗಳು', (೧೯೫೯ ಪ್ರ. ಮು.) ಪುಟ ೧೧೦ ಗೊಗ್ಗವ್ವೆ, ಬೊಂತಾದೇವಿ ಮತ್ತು ಮಹಾದೇವಿಯಕ್ಕ ದಿಗಂಬರೆಯರಾಗಿದ್ದರು.
3. ವರ್ಧಮಾನಶಾಸ್ತ್ರಿಗಳ "ದಿಗಂಬರರ ಸಾಧುತ್ವ ಮತ್ತು ಅದರ ಮಹತ್ವ" (ವಿವೇಕಾಭ್ಯುದಯ ವಿಶೇಷಾಂಕ) ೧೯೫೧.

ದಿಗಂಬರ ಸಾಧುಸಂಪ್ರದಾಯಕ್ಕೆ ಉಜ್ವಲತೆಯನ್ನೂ ಮರ್ಯಾದೆಯನ್ನೂ ತಂದು ಕೊಟ್ಟರು. ಆಚಾರ್ಯ ಕುಂತುಸಾಗರ, ಆಚಾರ್ಯ ಪಾಯಸಾಗರ, ಆಚಾರ್ಯ ದೇಶ ಭೂಷಣ, ಆಚಾರ್ಯ ವಿದ್ಯಾನಂದೀ ಮಹಾರಾಜರು 'ದಿಗಂಬರ' ಪರಂಪರೆಗೆ ಭೂಷಣಾ ಸ್ಪದರಾಗಿದ್ದು ಕೀರ್ತಿ ತಂದಿದ್ದಾರೆ. ದೇಶಭೂಷಣರು, ವಿದ್ಯಾನಂದೀ ಮಹಾರಾಜರು ಇಂದು ಜೈನ-ಜೈನೇತರರ ಚಿತ್ತವನ್ನೇ ಸೆಳೆದುಕೊಂಡು, ಉತ್ತರ ಹಿಂದುಸ್ಥಾನದ ದಿಲ್ಲಿ, ಕಲಕತ್ತಾ, ಕಾಶಿ, ಮೀರತ, ಅಯೋಧ್ಯಾ, ಪಾಟಣಾ ಮುಂತಾದ ಸ್ಥಳಗಳಲ್ಲಿ ಪ್ರಚಂಡ ಕೀರ್ತಿ ಹೊಂದುತ್ತಿದ್ದಾರೆ; ಗೌರವ ಆದರಗಳಿಗೆ ಪಾತ್ರರಾಗುತ್ತಿದ್ದಾರೆ, ಎಲ್ಲರ ಹೃದಯ ದಲ್ಲಿಯೂ ಪೂಜ್ಯತೆಯನ್ನು ಪ್ರತಿಷ್ಠಾಪಿಸಿದ್ದಾರೆ.

ಆಚಾರ್ಯ ಶಾಂತಿಸಾಗರರು ಕುಂಥಲಗಿರಿಯಲ್ಲಿ ಯಶಸ್ವಿ ಸಲ್ಲೇಖನ ನಡೆಸಿ ಇಂಗಿನೀ ಮರಣವನ್ನು ಹೊಂದಿದರು. 'ಸಲ್ಲೇಖನ'ದ ಅನೇಕ ಉದಾಹರಣೆಗಳು ಹಲವಾರು ವರ್ಷಗಳಲ್ಲಿ ಪ್ರತ್ಯಕ್ಷ ಸಾಕ್ಷಿಯಾಗಿ ಇತಿಹಾಸವನ್ನೇ ನಿರ್ಮಿಸಿವೆ. ಸಾಧು ಗಳಂತೆ ಸಾಮಾನ್ಯರೂ(ಶ್ರಾವಕರೂ) ಸಲ್ಲೇಖನ ವ್ರತವನ್ನು ನಡೆಸಿ ತೋರಿಸುತ್ತಿ ದ್ದಾರೆ.

ದಿಗಂಬರ ಸನ್ಯಾಸಿಗಳ ಆದರ್ಶವನ್ನು ಪ್ರತಿಯೊಬ್ಬ ಶ್ರಾವಕನು ಅಥವಾ ಕೆಳ ಶ್ರೇಣಿಯಲ್ಲಿರುವ ಸನ್ಯಾಸಿಗಳು ಅನುಸರಿಸಲೇಬೇಕಾದುದು ಅದರಂತೆ ಸನ್ಯಾಸಿಗಳಿಗೆಜೈನ ಶ್ರಾವಕರ ಮೇಲೆ ಕಳಕಳಿ ಇರಬೇಕಾದುದು ಅವಶ್ಯ. ದಿಗಂಬರ ಸನ್ಯಾಸಿಗಳು ಶ್ರಾವಕ ರಿಗೆ ಧರ್ಮದ ವಿಷಯದಲ್ಲಿ ಬೋಧನೆ ಮಾಡುತ್ತಾರೆ; ಮಾರ್ಗದರ್ಶನ ಮಾಡುತ್ತಾರೆ; ಆದರೆ ಹಾಗೆ ಮಾಡಲೇಬೇಕೆಂಬ ನಿರ್ಬಂಧವಿಲ್ಲ. ಆಹಾರ ಸ್ವೀಕಾರಕ್ಕಾಗಿ ಮುನಿಗಳು ಶ್ರಾವಕರ ಬಳಿಗೆ ಬರಲೇಬೇಕಾಗುತ್ತದೆ; ಜಿನಮಂದಿರಗಳಲ್ಲಿ ವಾಸಿಸಬೇಕಾಗುತ್ತದೆ. ಆದಕ್ಕೋಸ್ಕರವಾಗಿ ಮುನಿಗಳು ಶ್ರಾವಕರಿಗೆ ಋಣಿಯಾಗಿರಬೇಕಾಗುತ್ತದೆಂಬ ಭಾವ ನೆಯೇ ಇರುವುದಿಲ್ಲ. ಇಷ್ಟೇಅಲ್ಲ, ಮುನಿಗಳು ಅರಣ್ಯದಿಂದ ಮಂದಿರಕ್ಕೆ ಬರುವುದು, ಆಹಾರ ಸ್ವೀಕಾರಕ್ಕೆ ಶ್ರಾವಕರ ಬಳಿಗೆ ಬರುವುದು ಶ್ರಾವಕರ ಭಾಗ್ಯವಿಶೇಷದಿಂದ, ಪುಣ್ಯದ ಫಲದಿಂದ—ಎಂಬ ಭಾವನೆಯಿದೆ. ತೀರ್ಥಂಕರರು ಆಹಾರ ಸ್ವೀಕರಿಸಿದವರ ಮನೆಯ ಮುಂದೆ ಪಂಚಾಶ್ಚರ್ಯಗಳಾಗುತ್ತವೆ. ಆಹಾರದಾನ ನೀಡಿದವರು ಸ್ವರ್ಗ ಮೋಕ್ಷಾದಿಗಳನ್ನು ಹೊಂದುತ್ತಾರೆಂಬುದು ಸರ್ವಶ್ರುತವಾದುದು. ಇಂದು 'ಪಂಚಾ ಶ್ಚರ್ಯ'ದ ಮಾತು ಕಾಲ್ಪನಿಕವೆನಿಸಿದರೂ ಪುಣ್ಯ ಲಭಿಸುವುದೆಂಬ ಭಾವನೆ ಮಾತ್ರ ಸ್ಥಿರ ವಾಗಿದೆ.

ಮಠಾಧಿಪತಿಗಳು : ಭಟ್ಟಾರಕರು : ಬ್ರಹ್ಮಚಾರಿ, ಕ್ಷುಲ್ಲಕ, ಐಲಕ, ದಿಗಂಬರ ಸನ್ಯಾಸಿಗಳೆಲ್ಲ ಸಂಚಾರಿಗಳು. ಇವರ ಮಾರ್ಗವೇ ಶ್ರೇಷ್ಠವಾದುದಾಗಿದ್ದರೂ ಶ್ರಾವಕರನ್ನು ಧರ್ಮಮಾರ್ಗದಲ್ಲಿ ನಡೆಯಿಸಿಕೊಂಡು ಹೋಗಲು, ಸಾಮಾಜಿಕ ಸಂಬಂಧ

ವನ್ನು ಸುಸ್ಥಿತಿಯಲ್ಲಿ ಇಡಲು, ಜೈನ ಮಠಾಧಿಪತಿಗಳ ಇನ್ನೊಂದು ವರ್ಗವಿದೆ. ಇವರಿಗೆ ಭಟ್ಟಾರಕ ಸ್ವಾಮಿಗಳೆಂದು ಕರೆಯುವ ವಾಡಿಕೆ ಇದೆ. ಇವರು ಬ್ರಹ್ಮಚಾರಿಗಳಾಗಿ ಕಷಾಯವಸ್ತ್ರಧಾರಿಗಳಾಗಿರುತ್ತಾರೆ; 'ಕ್ಷುಲ್ಲಕ ಸನ್ಯಾಸಿ' ಯಾಗಿಯೂ ಮುಂದುವರಿಯ ಬಹುದು. ಆದರೆ ಐಲಕ ಸನ್ಯಾಸಿಯಾಗಬೇಕೆನಿಸಿದರೆ ಮಠ ತೊರೆಯಬೇಕಾಗುತ್ತದೆ. "ಐಲಕ", "ದಿಗಂಬರ" ಸನ್ಯಾಸಿಗಳು ಒಂದೆಡೆ ನಿಲ್ಲುವುದು ಸಾಧ್ಯವಿಲ್ಲ. ಭಟ್ಟಾರಕರು ಸನ್ಯಾಸಮಾರ್ಗದಲ್ಲಿ 'ಐಲಕ' ಮತ್ತು 'ದಿಗಂಬರ' ಅವಸ್ಥೆಗಳನ್ನು ಹೊಂದಲಿಕ್ಕೆ ಯಾವ ಆತಂಕಗಳು ಇಲ್ಲದಿದ್ದರೂ ಮಠಾಧಿಪತಿಯಾಗಿದ್ದುಕೊಂಡು ಆ ಧರ್ಮವನ್ನು ನಡೆಸು ವುದು ಸಾಧ್ಯವಿಲ್ಲ.

ಪ್ರಾಚೀನಕಾಲದಿಂದಲೂ ದಿಲ್ಲಿ-ಕಂಚಿ-ಪೆನುಗೊಂಡೆ-ಕೊಲ್ಹಾಪೂರ ಚತುಃಸಿಂಹಾ ಸನಾಧೀಶ್ವರರಾಗಿ ಭಟ್ಟಾರಕ ಸ್ವಾಮಿಗಳು ಇರುವುದು ವಾಡಿಕೆ. ಆದರೆ ಈಚೆಗೆ ಈ ನಾಲ್ಕೂ ಸ್ಥಳಗಳಲ್ಲಿ ಒಬ್ಬನೇ ಅಧಿಕಾರಿಯಾಗಿರುವುದು ಕಂಡುಬರುವುದಿಲ್ಲ, ಆದರೆ ಆಯಾ ಸ್ಥಳಗಳಲ್ಲಿ ಭಟ್ಟಾರಕ ಸ್ವಾಮಿಗಳು ಪ್ರತ್ಯೇಕವಾಗಿ ಮಠಾಧಿಪತಿಗಳಾಗಿ ಇಂದಿಗೂ ಇರುವುದುಂಟು. ಕೊಲ್ಹಾಪೂರದಲ್ಲಿ ಲಕ್ಷ್ಮೀಸೇನ ಮತ್ತು ಜಿನಸೇನ ಭಟ್ಟಾರಕರ ಎರಡು ಬೇರೆಬೇರೆ ಮಠಗಳುಂಟು. ಅವರಿಬ್ಬರ ಮುಖ್ಯ ಪೀಠಗಳು ಕೊಲ್ಹಾಪೂರದಲ್ಲಿ ಇದ್ದರೂ ಬೇರೆಬೇರೆ ಕಡೆಗೆ ಶಾಖೆಗಳೂ ಇವೆ. ಅದರಂತೆ ಶ್ರವಣ ಬೆಳುಗೊಳ, ಹುಮ್ಮಚ, ಕಾರ್ಕಳ, ಮೂಡಬಿದ್ರಿ, ಸಿಂಹನಗದ್ದೆಗಳಲ್ಲಿಯೂ ಭಟ್ಟಾ ರಕ ಸ್ವಾಮಿಗಳ ಬೇರೆಬೇರೆ ಮಠಗಳುಂಟು. ಇವೆಲ್ಲ ಕರ್ನಾಟಕದ ಮಠಗಳು. ಇದ ರಂತೆ ಮಹಾರಾಷ್ಟ್ರ, ಗುಜರಾತ, ರಾಜಸ್ಥಾನ, ಬಿಹಾರ ಪ್ರಾಂತಗಳಲ್ಲಿಯೂ ಉಂಟು. ಈಗ ನಾನು ಉಲ್ಲೇಖ ಮಾಡಿದ್ದು ದಿಗಂಬರ ಸಂಪ್ರದಾಯದ ಮಠಗಳನ್ನು. ಅದರಂತೆ ಶ್ವೇತಾಂಬರ, ಸ್ಥಾನಕವಾಸಿ, ತೇರಾಪಂಥೀ ಮಠಗಳೂ ಉಂಟು. ಸನ್ಯಾಸಮಾರ್ಗವೂ ಅವುಗಳಲ್ಲಿ ಸ್ವಲ್ಪ ಭಿನ್ನವಾಗಿದೆ. 'ದಿಗಂಬರತ್ವ'ವನ್ನು ಹೊಂದಲೇಬೇಕೆನ್ನುವ ಕಟ್ಟು ಇಲ್ಲ.

ಯಾವುದೇ ಉಪಪಂಗಡದ ಜೈನ ಸಾಧುಗಳನ್ನು ತೆಗೆದುಕೊಂಡರೂ ಆಚಾರ್ಯ ಪದವಿಯವರೆಗೆ ಮಾತ್ರ ಮೇಲಕ್ಕೇರುವುದು ಸಾಧ್ಯ. ಅದರಾಚೆಗೆ ಅರಿಹಂತರು, ಸಿದ್ಧರು ಎಂಬ ಅವಸ್ಥೆಗಳು ಉಂಟು. ತೀರ್ಥಂಕರರು 'ಅರಿಹಂತ' ಅವಸ್ಥೆಯನ್ನೂ ಹೊಂದುತ್ತಾರೆ. ಆಮೇಲೆ ನಿರ್ದೇಹಿಗಳಾಗಿ ಸಿದ್ಧಾವಸ್ಥೆಯನ್ನೂ ಹೊಂದಬಹುದು.

ಪಂಚನಮೋಕಾರ ಮಂತ್ರದಲ್ಲಿ ಹೇಳಿದ (೧) ಅರಿಹಂತರು (೨) ಸಿದ್ಧರು (೩) ಆಚಾರ್ಯರು (೪) ಉಪಾಧ್ಯಾಯರು (೫) ಸರ್ವಸಾಧುಗಳು–ಪಂಚಪರಮೇಷ್ಠಿ ಗಳೆನಿಸಿಕೊಂಡಿದ್ದಾರೆ. ಅರಿಹಂತರಿಗೆ ೩೪ ಅತಿಶಯಗಳು, ಎಂಟು ಪ್ರಾತಿಹಾರ್ಯ ಗಳು, ನಾಲ್ಕು ಚತುಷ್ಟಯಗಳೂ ಸೇರಿ ೪೬ ಒಟ್ಟು ಗುಣಗಳು. ಸಿದ್ಧರಿಗೆ ಸಮ್ಯಗ್

ದರ್ಶನ, ಜ್ಞಾನ, ಚಾರಿತ್ರ ವೀರ್ಯ, ಸೂಕ್ಷ್ಮತ್ವ, ಅಗುರುತ್ವ, ಅಲಘುತ್ವ, ಅವ್ಯಾಬಾಧತ್ವ-ಎಂದು ಎಂಟು ಗುಣಗಳುಂಟು. ಆಚಾರ್ಯರಿಗೆ ೧೨ ತಪಗಳು, ೬ ಆವಶ್ಯಕಗಳು, ೫ ಆಚಾರಗಳು, ೧೦ ಧರ್ಮಗಳು, ೩ ಗುಪ್ತಿಗಳು ಸೇರಿ ಒಟ್ಟು ೩೬ ಗುಣಗಳು. ಉಪಾಧ್ಯಾಯರಿಗೆ ೧೨ ಅಂಗಗಳು, ೧೪ ಪೂರ್ವಗಳು ಒಟ್ಟು ೨೬ ಗುಣಗಳು. ಸರ್ವ ಸಾಧುಗಳಿಗೆ ೫ ಮಹಾವ್ರತಗಳು, ೫ ಸಮಿತಿಗಳು, ೫ ಇಂದ್ರಿಯ ನಿರೋಧಗಳು, ೬ ಆವಶ್ಯಕಗಳು, ೭ ಆಚರಣೆಗಳು ಒಟ್ಟು ೨೮ ಗುಣಗಳು. ಹೀಗೆ ಪಂಚಪರಮೇಷ್ಠಿಗಳು ಗುಣಗಳಿಂದ ಗುರುತಿಸಲ್ಪಡುತ್ತಾರೆ.

ಣಮೋಕಾರವೇ ಬೀಜಮಂತ್ರ. ಅದರ ಸಹಾಯದಿಂದ ಸಕಲ ಜಪತಪ ಅನುಷ್ಠಾನಾದಿಗಳನ್ನು ಮಾಡಿ ಇಷ್ಟಪ್ರಾಪ್ತಿಯನ್ನು ಹೊಂದಬಹುದು. ಸ್ವರ್ಗ-ಮೋಕ್ಷಗಳನ್ನೂ ಹೊಂದಬಹುದು. ಹೀಗೆ ಮುನಿಧರ್ಮವು ಸರ್ವ ಆದರ್ಶಗಳನ್ನು ಹೊಂದಿ ಶಾಸ್ತ್ರಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ●

ಕನ್ನಡಭಾಷೆಯ ಅಧ್ಯಯನ

ಚಿ. ರಾಮಸ್ವಾಮಿ

ಮಾನವನು ಇಂದು ಹೊಂದಿರುವ ಸ್ವತ್ತುಗಳಲ್ಲಿ ಬಹುಶಃ ಬಹಳ ಹಳೆಯದಾದದ್ದು ಭಾಷೆಯೆನ್ನಬಹುದು. ಭಾಷೆಯು ಉಗಮಿಸಿದ ಕಾಲವನ್ನು ಖಚಿತವಾಗಿ ಹೇಳಲು ಅಸಾಧ್ಯ. ಆಕಾಶದಿಂದ ಮಳೆ ಬಂದಂತೆ, ಭಾಷೆ ಏಕಾಏಕಿ ಉಗಮಿಸಿದ್ದೋ ಅಥವಾ ಉದ್ಭವಿಸಿದ್ದೋ ಅಲ್ಲ. ಹನಿಯಾಗಿ ಉರುಳಿ, ಹಳ್ಳವಾಗಿ ಪ್ರವಹಿಸುವ ನದಿಯಂತೆಯೇ ಭಾಷೆ ಕೂಡ. ಮಾನವನು ತಾನು ಹೊರಡಿಸುವ ಒಂದೊಂದು ಶಬ್ದಕ್ಕೆ ಒಂದೊಂದು ಸಂಕೇತವನ್ನು ಕೊಟ್ಟನು. ಈ ಕ್ರಿಯೆ ಸತತವಾಗಿ ನಡೆದು ಸಂಸ್ಕಾರ ಹೊಂದಿ, ಕಾಲಕಾಲದ ಕೊಡುಗೆಗಳೊಡಗೂಡಿ ಇಂದಿನ ಅವಸ್ಥೆಯನ್ನು ತಲುಪಿದೆ. ಇಂದಿನ ಭಾಷೆ, ಸಾವಿರಾರು ವರ್ಷಗಳ ಮಾನವ ಪ್ರಯತ್ನ: ಸಂಸ್ಕೃತಿ, ಶ್ರಮದ ಫಲ. ಈ ಜಗತ್ತಿನಲ್ಲಿ ಬಾಳಿದ, ಬಾಳುತ್ತಿರುವ, ಬಾಳುವ ಎಲ್ಲ ಮಾನವರಿಗೂ ಒಂದು ಕೊಂಡಿಯಾಗಿ, ಮಣಿಮಾಲೆಯ ದಾರದಂತೆ, ಭಾಷೆ ಕೆಲಸ ಮಾಡುತ್ತಿದೆ. ಹಿಂದಿನವರ ಭಾವನೆಗಳನ್ನು ಇಂದಿಗೂ ಇಂದಿನವರ ಭಾವನೆಗಳನ್ನು ಮುಂದಿನವರಿಗೂ ತಲುಪಿಸುವ ಒಂದು ವಾಹನ, ಭಾಷೆ. ಆದ್ದರಿಂದ ಭಾಷೆ ಮಾನವನ ಜೀವನದಲ್ಲಿ ಅತಿ ಮಹತ್ವ ಸ್ಥಾನ ವಹಿಸುತ್ತದೆ. ಅನುದಿನವೂ ಬಳಸುವ ಇಂತಹ ಭಾಷೆಯ ಬಗ್ಗೆ, ಅದರ ಕ್ರಿಯೆಗಳ ಬಗ್ಗೆ ನಾವು ಯೋಚಿಸದೇ ಇರುವುದು ಆಶ್ಚರ್ಯಕರವಾದ ವಿಷಯ. ಹಿಂದಿನ ಕಾಲದಿಂದಲೂ, ನಮ್ಮವರು ಸಾಹಿತ್ಯಕ್ಕೆ ನೀಡಿದಷ್ಟು ಗಮನವನ್ನು, ಅದರ ವಾಹನವಾದ ಅಥವಾ ಸಾಹಿತ್ಯದ ಒಡಲಾದ ಭಾಷೆಗೆ ನೀಡದೇ ಇರುವುದು ನಿಜಕ್ಕೂ ಸೋಜಿಗವಾಗಿದೆ.

ಪ್ರಪಂಚದ ಇತರ ಭಾಗ(ಗ್ರೀಕನ್ನು ಹೊರತುಪಡಿಸಿ)ಗಳನ್ನು ಗಮನದಲ್ಲಿಟ್ಟುಕೊಂಡು ನಾವು ಭಾರತದ ಭಾಷಾ ಅಧ್ಯಯನದ ಇತಿಹಾಸವನ್ನು ಹಿಂತಿರುಗಿ ನೋಡಿದಲ್ಲಿ, ಭಾರತದ ಸ್ಥಿತಿ ಸಮಾಧಾನಕರವಾಗಿಯೇ ಇದೆ. ಪಾಶ್ಚಿಮಾತ್ಯರ ಭಾಷಾ ಅಧ್ಯಯನ ಇತಿಹಾಸದಷ್ಟು ಭಾರತದ ಭಾಷಾಪ್ರಜ್ಞೆ ನಿರ್ವೀರ್ಯವಾಗಿಲ್ಲ. ಇಂದು ಭಾಷಾ ಅಧ್ಯಯನದಲ್ಲಿ ಪಾಶ್ಚಿಮಾತ್ಯರು ತಲುಪಿರುವ ಮಟ್ಟವನ್ನು ನಾವು ತಲುಪಿಲ್ಲದಿದ್ದರೂ ನಮಗಿಂದು ಭಾಷೆಯ ಬಗ್ಗೆ ಇರುವ ಎಚ್ಚರ ಸಮಾಧಾನಕರವಾಗಿಯೇ ಇದೆ.

* ಈ ಲೇಖನವನ್ನು ಓದಿನೋಡಿ ಹಲವು ಉಪಯುಕ್ತ ಸಲಹೆಗಳನ್ನಿತ್ತ ನನ್ನ ಗುರುಗಳಾದ ಡಾ. ಕೆ. ಕುಶಾಲಪ್ಪಗೌಡ ಅವರಿಗೆ ಕೃತಜ್ಞನಾಗಿದ್ದೇನೆ.

ನಮ್ಮ ಕಲ್ಪನೆಗೂ ಎಟುಕದ ವೇದಕಾಲದಲ್ಲಿಯೇ, ಭಾಷಾಧ್ಯಯನದ ಬಗ್ಗೆ ಕೆಲವು ಸೂಚನೆಗಳು ಕಂಡುಬರುತ್ತವೆ. ವೇದಗಳ ಅಧ್ಯಯನದ ಫಲವಾಗಿ ಸಂಸ್ಕೃತ ವ್ಯಾಕರಣ ಹುಟ್ಟಿತು. ಈ ಪವಿತ್ರ ಶ್ಲೋಕಗಳಲ್ಲಿ ಬಳಸಲಾದ ಭಾಷೆಗೂ ಅನಂತರದ ವಿವಿಧ ಕಾಲಗಳ ಗ್ರಾಂಥಿಕ ಸಂಸ್ಕೃತಗಳಿಗೂ ಇರುವ ವ್ಯತ್ಯಾಸಗಳನ್ನು ಗುರುತಿಸಿ, ಧಾರ್ಮಿಕ ಭಾವನೆಯಿಂದ ವಿದ್ವಾಂಸರು ಕಾದಿರಿಸಿದರು. ಮೊಟ್ಟಮೊದಲ ವ್ಯಾಕರಣ ಪ್ರಬಂಧಗಳಾದ 'ಪ್ರಾತಿಶಾಖ್ಯ'ಗಳು ಈಗಲೂ ನಮಗೆ ಉಪಲಬ್ಧವಿವೆ. ಪುರಾತನ ವೇದಭಾಷೆಯ ಸರಿಯಾದ ಉಚ್ಚಾರಣೆಗೆ ಇವು ನಿಯಮಗಳನ್ನು ನೀಡುವುದರ ಜೊತೆಗೆ, ವ್ಯಾಕರಣ ವಿಶೇಷಗಳ ಬಗ್ಗೆಯೂ ಸೂಚನೆಗಳನ್ನು ನೀಡುತ್ತವೆ. ಇವುಗಳ ಭದ್ರ ಅಡಿಪಾಯದ ಮೇಲೆ ಸಂಸ್ಕೃತ ವ್ಯಾಕರಣವು, ವಿವಿಧ ಕಾಲಗಳ ವಿದ್ವಾಂಸರ ಕೊಡುಗೆಗಳೊಡಗೂಡಿ 'ಪಾಣಿನಿ'ಯ "ಅಷ್ಟಾಧ್ಯಾಯಿ"ಯಲ್ಲಿ ಒಂದು ಪೂರ್ಣತ್ವವನ್ನು ಪಡೆಯಿತು.

ಸಂಸ್ಕೃತಕ್ಕೆ ಪಾಣಿನಿ ಹೇಗೋ ಹಾಗೆ ದಕ್ಷಿಣಭಾಷೆಗಳಿಗೆ ವಿವಿಧ ಕಾಲಗಳಲ್ಲಿ ವಿವಿಧ ವೈಯ್ಯಾಕರಣಿಗಳು ಶ್ರಮಿಸಿದ್ದಾರೆ. ತಮಿಳಿನಲ್ಲಿ ತೊಲ್ಕಾಪ್ಪಿಯರ್ (ತೊಲ್ಕಾಪ್ಪಿಯಮ್ ಕ್ರಿ. ಪೂ. ಒಂದನೆಯ ಶತಮಾನ, ಪವಣಂದಿ (೧೨ನೆಯ ಶತಮಾನ) ಪ್ರಮುಖರು. ಕನ್ನಡದಲ್ಲಿ ಕೇಶಿರಾಜನಿಗಿಂತ ಮೊದಲೇ ಕೆಲವು ವ್ಯಾಕರಣಗಳು ದೊರೆತರೂ ಕೇಶಿರಾಜನ "ಶಬ್ದಮಣಿದರ್ಪಣ"ದಲ್ಲಿ ಕಾಣುವ ಸಮಕಾಲಪ್ರಜ್ಞೆ, ವೈಜ್ಞಾನಿಕ ದೃಷ್ಟಿ ಬೇರೆ ಕೃತಿಗಳಲ್ಲಿ ಕಾಣಬರುವುದಿಲ್ಲ.

ಹತ್ತೊಂಬತ್ತನೆಯ ಶತಮಾನದ ಆದಿಯವರೆಗಿನ ಕನ್ನಡ ವ್ಯಾಕರಣ ಪರಂಪರೆಯನ್ನು ಗಮನಿಸಿದರೆ, ಸ್ವಲ್ಪ ನಿರಾಶೆಯೇ ಆಗುತ್ತದೆ. ಉಪಲಬ್ಧವಿರುವ ಕೃತಿಗಳು ವಿರಳ. ಅಂದಮಾತ್ರಕ್ಕೆ ಇವಿಷ್ಟೇ ಎಂದು ಹೇಳಲಾಗುವುದಿಲ್ಲ. ಎಷ್ಟೋ ವ್ಯಾಕರಣ ಕೃತಿಗಳೂ ಸಾಹಿತ್ಯ ಕೃತಿಗಳಂತೆ ಕಾಲಚಕ್ರದಿಂದ ಅಳಿದುಹೋಗಿರಬಹುದು. ಉಪಲಬ್ಧ ಆದ್ಯ ಗ್ರಂಥವಾದ "ಕವಿರಾಜಮಾರ್ಗ" ಲಕ್ಷಣ ಗ್ರಂಥ. ಕವಿರಾಜಮಾರ್ಗದ ನಂತರ ನಾಗವರ್ಮನ "ಕರ್ನಾಟಕ ಭಾಷಾಭೂಷಣ" (ಸಂಸ್ಕೃತದಲ್ಲಿ), "ಕಾವ್ಯಾವಲೋಕನ" (ಕನ್ನಡದಲ್ಲಿ), ಕೇಶಿರಾಜನ "ಶಬ್ದಮಣಿದರ್ಪಣ". ಭಟ್ಟಾಕಳಂಕನ "ಕರ್ನಾಟಕ ಶಬ್ದಾನುಶಾಸನ" ಎಂಬವುಗಳು ಮುಖ್ಯ ವ್ಯಾಕರಣ ಕೃತಿಗಳು. ಆದರೆ ಇವುಗಳಲ್ಲಿ ಶಬ್ದಮಣಿದರ್ಪಣವನ್ನುಳಿದು ಮಿಕ್ಕವು ಹೆಚ್ಚುಕಮ್ಮಿ ಸಂಸ್ಕೃತ ವ್ಯಾಕರಣವನ್ನು ಆಧರಿಸಿ ಆ ಚೌಕಟ್ಟಿಗೆ ಕನ್ನಡವನ್ನು ಹೊಂದಿಸಲು ಮಾಡಿದ ಪ್ರಯತ್ನವಷ್ಟೇ. ಶಬ್ದಮಣಿದರ್ಪಣ ಇದಕ್ಕೆ ಸ್ವಲ್ಪ ಹೊರತಾಗುತ್ತದೆ. ಭಾಷೆಯನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಲು, ಕೇಶಿರಾಜ ಮಾಡಿರುವ ಪ್ರಯತ್ನವನ್ನು ಇಲ್ಲಿ ಕಾಣಬಹುದು. ಜೊತೆಗೆ ಸಾಹಿತ್ಯಭಾಷೆಯನ್ನಲ್ಲವೆ, ಆಡು(ದೇಶಿ)ನುಡಿಯ ಕಡೆಗೂ ಕೇಶಿರಾಜನು ಗಮನ ಹರಿಸಿರುವುದು ಸಂತೋಷಕರವಾದ ವಿಷಯ. ಹಳಗನ್ನಡ ಭಾಷಾಲಕ್ಷಣಗಳ ಮತ್ತು ಕನ್ನಡಭಾಷಾ ಇತಿಹಾಸ

ದಲ್ಲಿ ಕಾಲದಿಂದಾದ ಭಾಷಾ ಬದಲಾವಣೆಗಳ ಮೇಲೆ ಬೆಳಕು ಚೆಲ್ಲಿ, ಇಂದಿಗೂ ಕೇಶಿರಾಜನ ಕೃತಿ ಬೆಲೆಯುಳ್ಳದ್ದಾಗಿದೆ" ಎಂಬ ಡಾ. ಕುಶಾಲಪ್ಪ ಗೌಡರ ಮಾತನ್ನು ಇಲ್ಲಿ ಸ್ಮರಿಸಬಹುದು.

ಕನ್ನಡ ವ್ಯಾಕರಣ ಪ್ರಪಂಚದಲ್ಲಿ, ಮೊದಲು ಹೇಳಿದಂತೆ ೧೯ನೆಯ ಶತಮಾನದ ಆದಿಯವರೆಗೆ ಕಾಣಸಿಗುವ ಕೃತಿಗಳು ನಾಲ್ಕು. ಆದರೂ ೧೯ನೆಯ ಶತಮಾನದಿಂದೀಚೆಗೆ ವಿಪುಲವಾದ ಕೃತಿಗಳು ದೊರೆಯುತ್ತವೆ. ೧೯ನೆಯ ಶತಮಾನದಲ್ಲಿ ಕರ್‍ರೆಯವರ (1814) "Grammar of Karnataka language", ಮೆಕೆರೆಲ್‌ರ (1820) "A Grammar Carnataka language", ಹಡ್ಸನ್ ಅವರ ಕನ್ನಡ ವ್ಯಾಕರಣ (1855), "Canarese Grammar" (1859). ಜಿ, ಕೋಯಿರಥ್ ಅವರ ಕನ್ನಡ ಬಾಲವ್ಯಾಕರಣ (1868), ಕೃಷ್ಣಮಾಚಾರ್ಯರ ಅವರ "Grammar of the Modern Canerese language (1882), ವೆಂಕಟ ರಂಗೋ ಕಟ್ಟಿ ಅವರ ಕನ್ನಡ ಲಘುವ್ಯಾಕರಣ (1886), Out lines of Kanarese Grammar (1895), ಕ್ಯಾಂಪ್ಬೆಲ್, ಸಿ ಅವರ "Elements of Kanerese Grammer (1893) ಮುಂತಾದ ಕೃತಿಗಳು ದೊರೆಯುತ್ತವೆ. ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಕಿಟೆಲ್ (1903) ಅವರ "Grammar of the Kannada language in English" ರೆ. ಕಾಲ್ಡವೆಲ್ ಅವರ "ದ್ರಾವಿಡ ಅಥವಾ ದಕ್ಷಿಣ ಭಾರತೀಯ ಭಾಷೆಗಳ ತುಲನಾತ್ಮಕ ವ್ಯಾಕರಣ (1913) ಬೆಳಕಿಗೆ ಬಂದವು. ದ್ರಾವಿಡ ಭಾಷಾ ವಿಜ್ಞಾನ ಪ್ರಪಂಚದಲ್ಲಿ ಕಾಲ್ಡವೆಲ್‌ರ ಕೃತಿ ಇಂದಿಗೂ ಮಹತ್ವದ್ದಾಗಿದೆ. ಈ ಮಹಾ ಕೃತಿ ದ್ರಾವಿಡ ಭಾಷೆಗಳ ಬಗ್ಗೆ ಒಂದು ಹೊಸ ಎಚ್ಚರ ನೀಡಿತೆನ್ನಬಹುದು.

ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಕನ್ನಡ ವ್ಯಾಕರಣ ಪ್ರಪಂಚದಲ್ಲಿ ಅಂತಹ ಗಮನಾರ್ಹ ಕೆಲಸವೇನೂ ನಡೆದಿಲ್ಲ. ಅದು ಸ್ವಾತಂತ್ರ್ಯ ಹೋರಾಟದ ಬಿಸಿಯೇರುತ್ತಿದ್ದ ಕಾಲ. ಆಗ ಜನರ ಮನಸ್ಸಿನಲ್ಲಿ ಸಾಹಿತ್ಯವನ್ನು ಒಂದು ಸಾಧನವನ್ನಾಗಿಸಿ ವಿದ್ವಾಂಸರು ತಮ್ಮ ಹೋರಾಟ ಪ್ರಾರಂಭಿಸಿದುದು ಇದಕ್ಕೆ ಕಾರಣವಿರಬಹುದು. ಸಾಹಿತ್ಯದ ಎಲ್ಲ ಪ್ರಾಕಾರಗಳೂ ಇದಕ್ಕೆ ಮೀಸಲಾದವು. ಈ ಸ್ಥಿತಿ ಸುಮಾರು 1940ರ ವರೆಗೆ ಮುಂದುವರಿಯಿತೆನ್ನಬಹುದು. ಅಲ್ಲಿಂದ ಮುಂದೆ ವೈಜ್ಞಾನಿಕ ರೀತಿಯಲ್ಲಿ ಕನ್ನಡ ಭಾಷೆಯನ್ನು ವಿಶ್ಲೇಷಿಸುವ ಅರಿವು ನಮಗೆ—ಪಾಶ್ಚಿಮಾತ್ಯ ಭಾಷಾವಿಜ್ಞಾನದ ಪ್ರಗತಿಯ ಸಹಾಯದಿಂದ— ಮೂಡಿತು. ಇದಕ್ಕೆ ಸಾಕ್ಷಿಯಾಗಿ, ಎ. ಎನ್. ನರಸಿಂಹಯ್ಯನವರ "A Grammar of oldest Kanarese inscriptions" 1941 ರಲ್ಲಿ ಹೊರಬಂದಿತು. ಈ ಕೃತಿಯಲ್ಲಿ ನರಸಿಂಹಯ್ಯನವರು ಆಧುನಿಕ ಭಾಷಾವಿಜ್ಞಾನವನ್ನು ದೃಷ್ಟಿಯಲ್ಲಿಟ್ಟುಕೊಂಡು. ಕ್ರಿ. ಶ. 6-7 ಶತಮಾನಗಳ ಕನ್ನಡ ಶಾಸನಭಾಷೆಯನ್ನು. ವರ್ಣನಾತ್ಮಕ ವಿಧಾನದಲ್ಲಿ ಶಾಸ್ತ್ರೀಯವಾಗಿ ವಿಶ್ಲೇಷಿಸಿದರು. ಇದರ

ಮೂಲಕ ಮೊಟ್ಟಮೊದಲ ಬಾರಿಗೆ ಕನ್ನಡ ಭಾಷೆಯ ಶಾಸ್ತ್ರೀಯ ಅಭ್ಯಾಸಕ್ಕೆ ನಾಂದಿ ಹಾಕಿದರು.

ಎ. ಎನ್. ನರಸಿಂಹಯ್ಯನವರ ಕೃತಿಯನ್ನೇ ಮಾದರಿಯಾಗಿರಿಸಿಕೊಂಡು 1946 ರಲ್ಲಿ ಡಾ. ಜಿ. ಎಸ್. ಗಾಯಿಯವರು ತಮ್ಮ "Historical grammar of old Kannada" ವನ್ನು ಬೆಳಕಿಗೆ ತಂದರು. ನರಸಿಂಹಯ್ಯನವರ ಕೆಲಸವನ್ನೇ ಮುಂದು ವರಿಸಿ ಡಾ. ಗಾಯಿಯವರು ಕ್ರಿ. ಶ. 8–9 ಮತ್ತು 10ನೇ ಶತಮಾನಗಳಲ್ಲಿ ಉಪಲಬ್ಧ ವಿರುವ ಎಲ್ಲ ಶಾಸನಗಳ ಭಾಷೆಯನ್ನು ವಿಶ್ಲೇಷಿಸಿದ್ದಾರೆ.

ಇದರಲ್ಲಿ ಒಂದು ಅಚ್ಚುಕಟ್ಟುತನವನ್ನು ಕಾಣಬಹುದು. ಕನ್ನಡದಲ್ಲಿ ಉಪಲಭ್ದ ವಿರುವ ಮೊಟ್ಟಮೊದಲ (ಕಾಲದಿಂದ ಹಳೆಯದಾದ) ಶಾಸನದಿಂದ ಹಿಡಿದು, ಏಳನೆಯ ಶತಕದ ಅಂತ್ಯದವರೆಗೆ ದೊರಕುವ ಎಲ್ಲ ಶಾಸನಗಳನ್ನು ನರಸಿಂಹಯ್ಯನವರು ವಿಶ್ಲೇಷಿ ಸಿದರೆ, ಅದನ್ನು ಮುಂದುವರಿಸಿ ಡಾ. ಗಾಯಿಯವರು ಹತ್ತನೆಯ ಶತಮಾನದ ಅಂತ್ಯದ ವರೆಗೆ ಬಂದು ನಿಂತರು. ಕ್ರಿ. ಶ. ಹನ್ನೊಂದನೆಯ ಶತಮಾನದಿಂದ ಹತ್ತೊಂಬತ್ತನೆಯ ಶತಮಾನದವರೆಗಿನ, ಸಂಖ್ಯೆಯಿಂದ ಅಪಾರವಾದ ಶಾಸನಾಬ್ಧಿ ವಿದ್ವಾಂಸರಿಗಾಗಿ ಕಾಯುತ್ತಿತ್ತು, 1946 ರಿಂದ.

ಈ ಕಾಲದಲ್ಲಿ ಕನ್ನಡ ಸಾಹಿತ್ಯಭಾಷೆಯನ್ನು ವಿಶ್ಲೇಷಿಸುವ ಪ್ರಯತ್ನ ನಡೆ ಯಿತು. ಅದರ ಫಲವೇ "Descriptive Grammar of vadda:ra:dhane" ಡಾ. ಕೆ. ಕುಶಾಲಪ್ಪಗೌಡ (ಅಪ್ರಕಟಿತ ಎಂ. ಲಿಟ್. ಥೀಸಿಸ್, ಅಣ್ಣಾಮಲೈ ವಿಶ್ವ ವಿದ್ಯಾಲಯ), " Descriptive Grammar of pampa Bharata " ಬಿ. ಕೆ. ರಾಮಚಂದ್ರರಾವ್ (ಪ್ರಕಟಿತ, Ph. D. ಥೀಸಿಸ್), Grammar of Kumaravya:sa Bha:rata (ಅಪ್ರಕಟಿತ, ಡೆಕ್ಕನ್ ಕಾಲೇಜ್), "Grammar of vacana literature" ಬಿ. ವ್ಹಿ. ರಾಜಪುರೋಹಿತ್ (ಅಪ್ರಕಟಿತ, Ph. D ಥೀಸಿಸ್, ಕರ್ನಾಟಕ ವಿಶ್ವವಿದ್ಯಾಲಯ) ಮುಂತಾದ ಕೃತಿಗಳು.

ಇದೇ ಕಾಲದಲ್ಲಿ, ಹಾಗೂ ಇಂದಿನವರೆಗೂ ಪ್ರಾದೇಶಿಕ ಮತ್ತು ಸಾಮಾಜಿಕ ಪ್ರಭೇಧಗಳ ಅಭ್ಯಾಸ ವಿಶೇಷ ಆಸಕ್ತಿಯಿಂದ ನಡೆದುಬರುತ್ತಿದೆ. ಕನ್ನಡಭಾಷೆಯ ಪ್ರಾದೇಶಿಕ ಪ್ರಬೇಧಗಳ ಹಾಗೂ ಸಾಮಾಜಿಕ ಪ್ರಬೇಧಗಳನ್ನು ಕುರಿತಾದ ಅಭ್ಯಾಸ ಹಾಗೂ ಕೆಲಸ ಬಹುಶಃ ಇನ್ನಾವ ದ್ರಾವಿಡ ಭಾಷೆಗಳಲ್ಲಿಯೂ ನಡೆಯದೆ ಇರುವಷ್ಟು, ಇಲ್ಲಿ ನಡೆದಿರುವುದು ಹೆಮ್ಮೆಯ ವಿಷಯ. ಇದುವರೆಗೆ ಸಾಮಾಜಿಕ ಪ್ರಬೇಧಗಳನ್ನು ಕುರಿತು ಹೊರಬಂದಿರುವ ಕೃತಿಗಳಲ್ಲಿ, ಮೆಖಾರ್‌ಮೆಕ್ ಅವರ "Social dialects in Dharwar" (1960), ಡಾ. ಕುಶಾಲಪ್ಪಗೌಡರ "Gowda Konnada"

ಡಾ. ಕೆ. ಜಿ. ಶಾಸ್ತ್ರಿಯುವರ "The havyaka dialect of North Kanara" ಮುಂತಾದುವು ಮುಖ್ಯವಾದವು.

ಕನ್ನಡದ ಮುಖ್ಯ ಪ್ರಾದೇಶಿಕ ಪ್ರಬೇಧ(ಉಪಭಾಷೆ)ಗಳು ಮೂರು: ಮೈಸೂರು ಕನ್ನಡ, ಕರಾವಳಿ ಕನ್ನಡ ಮತ್ತು ಧಾರವಾಡ ಕನ್ನಡ. ಗುಲ್ಬರ್ಗ ಕನ್ನಡವನ್ನೂ ಕೂಡ ಕೆಲವು ವಿದ್ವಾಂಸರು ಮುಖ್ಯ ಪ್ರಾದೇಶಿಕ ಉಪಭಾಷೆಯಾಗಿ ಭಾವಿಸುತ್ತಾರೆ. ಆದರೆ ಇದು ಎಷ್ಟರಮಟ್ಟಿಗೆ ಧಾರವಾಡಕನ್ನಡದಿಂದ ಸಿಡಿದು ತಾನೇ ಒಂದು ಉಪಭಾಷೆಯಾಗಿ ನಿಲ್ಲುವಷ್ಟು ಬದಲಾವಣೆಯನ್ನು ಹೊಂದಿದೆಯೆಂಬುದನ್ನು ಗಮನಿಸಬೇಕು. ಆರ್. ಮಹದೇವನ್ ಅವರ "ಗುಲ್ಬರ್ಗ ಕನ್ನಡ" (ಬ್ರಾಹ್ಮಣರ ಉಪಭಾಷೆ) ಎಂಬ ವರ್ಣನಾತ್ಮಕ ಅಭ್ಯಾಸವನ್ನು ಅವಲೋಕಿಸಿದಾಗ, ಗುಲ್ಬರ್ಗದ ಬ್ರಾಹ್ಮಣರ ಉಪಭಾಷೆಗೂ, ಧಾರವಾಡದ ಬ್ರಾಹ್ಮಣರ ಉಪಭಾಷೆಗೂ ಅಂತಹ ಮಹತ್ತರವಾದ ವ್ಯತ್ಯಾಸವೇನೂ ಕಂಡುಬರುವುದಿಲ್ಲ. ಹೀಗಿರುವಾಗ ಇವುಗಳನ್ನು ಬೇರೆ ಬೇರೆ ಉಪಭಾಷೆಗಳನ್ನಾಗಿ ಭಾವಿಸುವುದಾದರೂ ಹೇಗೆ ?

ಪ್ರಾದೇಶಿಕ ಉಪಭಾಷೆಗಳ ಬಗ್ಗೆ ಕೃತಿಗಳು ಬಂದಿವೆಯಾದರೂ, ಇವು ನಿಜಕ್ಕೂ ಪ್ರಾದೇಶಿಕ ಉಪಭಾಷೆಯ ಅಥವಾ ಆ ಪ್ರದೇಶದ ಪ್ರಮಾಣಭಾಷೆಯನ್ನು ಪ್ರತಿನಿಧಿಸದೇ, ಆ ಪ್ರದೇಶದ ಒಂದು ಸಾಮಾಜಿಕ ಉಪಭಾಷೆಯನ್ನೆ ಪ್ರತಿನಿಧಿಸುತ್ತವೆ. ವಿಲ್ಯಂ ಬ್ರೈಟ್ (1958) ಅವರ "An outline of Colloquial Kannada" ಸಾಧಾರಣವಾಗಿ ಮೈಸೂರು ಪ್ರದೇಶದ ಎಲ್ಲ ವರ್ಗದ ಸುಶಿಕ್ಷಿತರ ಭಾಷೆಯನ್ನು ಪ್ರತಿನಿಧಿಸುತ್ತದೆ. ಮತ್ತಿತರ ಮುಖ್ಯ ಕೃತಿಗಳೆಂದರೆ—ಡಾ. ಆರ್. ಸಿ. ಹಿರೇಮಠ ಅವರ (1961) "The Structure of Kannada" (ಧಾರವಾಡ ಲಿಂಗಾಯತರ ಭಾಷೆ), ರಂಗನಾಥ್ ಅವರ "The Mysore and Dharwar Kannada dialects–A Comparative Lingistic study" (1964) (ಅಪ್ರಕಟಿತ Ph. D. ಥೀಸಿಸ್), ಬಿ. ಬಿ. ರಾಜಪುರೋಹಿತ (1965) ಅವರ "South Canara dialects of Kannada", ಡಾ. ಹಾ. ಮಾ. ನಾಯಕರ (1967) "Kannada literary and Colloquial", ಯು. ಪಿ. ಉಪಾಧ್ಯಾಯರ (1968) "A comparative study of four Kannada dialects" ಇವುಗಳು, ಡೆಕ್ಕನ್ ಕಾಲೇಜ್, ಪೂನಾದಿಂದ ಕೆಲವು ಕೃತಿಗಳು ಹೊರಬಂದಿವೆ. ಅವೆಂದರೆ— ಎ. ಎಸ್. ಆಚಾರ್ಯ (1967) ಅವರ "ಹಾಲಕ್ಕಿ ಕನ್ನಡ", ಯು. ಪಿ. ಉಪಾಧ್ಯಾಯ ಅವರ (1968) "ನಂಜನಗೂಡು ಕನ್ನಡ", ಆರ್. ಮಹದೇವನ್ ಅವರ (1968) "ಗುಲ್ಬರ್ಗ ಕನ್ನಡ", ಎ. ಎಸ್. ಆಚಾರ್ಯ ಅವರ "ಬಕ್ಕೂರು ಕನ್ನಡ" (1971), "ತಿಪಟೂರು ಕನ್ನಡ" (1971), ಯು. ಪಿ. ಉಪಾಧ್ಯಾಯ ಅವರ (1971) ಕೂರ್ಗ್ ಕನ್ನಡ" ಮುಂತಾದವು. ಇನ್ನು ಇದೇ ಸಂಸ್ಥೆಯಿಂದ, ವಿಜಾಪೂರ ಕನ್ನಡ, ಬಳ್ಳಾರಿ

ಕನ್ನಡ, ಮಧುರೈ ಕನ್ನಡ ಮತ್ತು ಕೋಯಂಬತ್ತೂರು ಕನ್ನಡ ಮೊದಲಾದ ಕೃತಿಗಳು ಹೊರಬರಲಿವೆ. ಬೀದರ್ ಕನ್ನಡದ ಬಗ್ಗೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ನಡೆಯುತ್ತಿದೆ. ಕನ್ನಡ ಭಾಷೆ ಇಷ್ಟು ಸಮೃದ್ಧಿಯಾದದ್ದು, ಇಷ್ಟು ವಿಶಿಷ್ಟವಾದದ್ದು ಎಂಬುದರ ಕಲ್ಪನೆ ಕೂಡ ನಮಗಿರಲಿಲ್ಲ. ಇಂದು ಇಷ್ಟೆಲ್ಲವನ್ನು ಕಂಡು ಬೆರಗಾಗುತ್ತೇವೆ. ನಿಜಕ್ಕೂ ಇದೆಲ್ಲಾ ಭಾಷಾವಿಜ್ಞಾನದ ಕೊಡುಗೆ.

ಇದೆಲ್ಲದರ ಜೊತೆಗೆ ಕನ್ನಡ ಭಾಷೆ ನಡೆದುಬಂದ ದಾರಿಯನ್ನು ಕೂಡ ವಿದ್ವಾಂಸರು ಗುರುತಿಸಲು ಪ್ರಯತ್ನಿಸಿ ಯಶಸ್ವಿಯಾದರು. ಅದರ ಫಲವೇ, ಧಾರವಾಡಕರ ಅವರ (1950) "ಕನ್ನಡ ಭಾಷಾಶಾಸ್ತ್ರ", ಕೈಪಿಡಿಕಾರರ (ಕುವೆಂಪು, ಬಿ. ಎಂ. ಶ್ರೀ, ಟಿ. ಎಸ್. ವಿ.) (1955) "ಕನ್ನಡ ಭಾಷೆಯ ಚರಿತ್ರೆ", ಪ್ರ. ಗೋ. ಕುಲಕರ್ಣಿಯವರ (1969)"ಕನ್ನಡ ಭಾಷೆಯ ಚರಿತ್ರೆ", ನರಸಿಂಹಾಚಾರ್ ಅವರ (1969) "History of Kannada Language", ವ್ಹಿ. ಆರ್. ಉಮರ್ಜಿ ಅವರ(1969) Kannada language–its origin and development" ಮುಂತಾದ ಕೃತಿಗಳು.

ಎ. ಎನ್. ನರಸಿಂಹಯ್ಯನವರ "ಕನ್ನಡ ಪ್ರಥಮ ವ್ಯಾಕರಣ", ತಿಂನಂಶ್ರೀಯವರ 'ಕನ್ನಡ ಮಧ್ಯಮ ವ್ಯಾಕರಣ' ಬೆಳಕಿಗೆ ಬಂದದ್ದು ಈ ಕಾಲದಲ್ಲೇ.

ಈ ಕೆಲಸ ಭರದಿಂದ, ವಿಪುಲವಾಗಿ ನಡೆದದ್ದು ವ್ಯಾಕರಣಪ್ರಪಂಚದ ಆರೋಗ್ಯವನ್ನು ಸೂಚಿಸುತ್ತದೆ.

ಆದರೆ ಅದೇ ಸಮಯದಲ್ಲಿ ಶಾಸನಭಾಷೆಯ ವಿಶ್ಲೇಷಣೆ ಹತ್ತನೆಯ ಶತಮಾನಕ್ಕೇ ನಿಂತು ಹೋಗಿತ್ತು. ಇದನ್ನು ಗಮನಿಸಿಯೋ ಏನೋ ಈ ಕೆಲಸವನ್ನು ಕೈಗೆತ್ತಿಕೊಳ್ಳಲು ಡಾ. ಕುಶಾಲಪ್ಪಗೌಡರು 1968 ರ ಸುಮಾರಿನಲ್ಲಿ ನಿಶ್ಚಯಿಸಿದರು. ಡಾ. ನರಸಿಂಹಯ್ಯ ಹಾಗೂ ಡಾ. ಗಾಯಿ ಅವರು ಆರಿಸಿಕೊಂಡ ಕಾಲದಲ್ಲಿ ಶಾಸನಗಳ ಸಂಖ್ಯೆ ಕಡಿಮೆ. ಆದರೆ, ಹತ್ತನೆ ಶತಮಾನದಿಂದ ಈಚೆಗೆ ಹದಿನಾಲ್ಕನೇ ಶತಮಾನದವರೆಗೆ ಮಾತ್ರ ಸುಮಾರು ಐದುಸಾವಿರ ಶಾಸನಗಳು ದೊರಕುತ್ತವೆ. ಆದ್ದರಿಂದ ಡಾ. ಗೌಡರು ರಾಜ್ಯವನ್ನು ನಾನಾ ವಿಭಾಗ (ಏಕಗಳು)ಗಳನ್ನಾಗಿಸಿಕೊಂಡು ಅದರಲ್ಲಿ ಒಂದು ಭಾಗವಾದ ಕರಾವಳಿಕನ್ನಡವನ್ನು ಕ್ರಿ. ಶ. 1000 ದಿಂದ 1400 ವರೆಗೆ (ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ) ದೊರಕುವ ಶಾಸನಗಳ ಭಾಷೆಯನ್ನು ವಿಶ್ಲೇಷಿಸಿದ್ದಾರೆ. ಈ ದೀರ್ಘ ಶ್ರಮದ ಫಲವೇ ೧೯೭೨ರಲ್ಲಿ ಹೊರಬಂದ "A Grammar of Kannada". ಡಾ॥ ಗೌಡರು ಈಗ ಇದೇ ಜಿಲ್ಲೆಗಳಲ್ಲಿ ಕ್ರಿ.ಶ. ೧೪೦೦ರಿಂದ ಈಚೆಗೆ ದೊರಕುವ ಶಾಸನಗಳ ಭಾಷೆಯ ಅಭ್ಯಾಸವನ್ನು ಮುಂದುವರಿಸುತ್ತಿದ್ದಾರೆ. ಮತ್ತು ಹತ್ತನೆಯ ಶತಮಾನದಿಂದ ಹದಿನಾಲ್ಕನೆಯ ಶತಮಾನದ ವರೆಗಿನ ಉತ್ತರ ಕರ್ನಾಟಕದ ಶಾಸನಗಳ ಭಾಷಾ ಸಂಶೋಧನೆ ಡಾ। ಗೌಡ ಅವರ ಮಾರ್ಗ

ದರ್ಶನದಲ್ಲಿ ಈ ಲೇಖಕನಿಂದ ನಡೆಯುತ್ತಲಿದೆ. ಹೀಗೆ ಶಾಸನ ಭಾಷೆಯ ಅಭ್ಯಾಸ ಅಚ್ಚುಕಟ್ಟಾಗಿ ನಡೆಯುತ್ತಿರುವುದು, ಕನ್ನಡದಲ್ಲಿ ಮಾತ್ರ ಎನ್ನುವ ವಿಷಯ ತುಂಬಾ ಸಂತೋಷಕರವಾಗಿದೆ.

ಇನ್ನೂ ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪಿಸದಿದ್ದರೆ ಈ ಲೇಖನದ ಉದ್ದೇಶ ಪೂರ್ಣವಾಗುವುದಿಲ್ಲ. ಆಧುನಿಕ ಭಾಷಾವಿಜ್ಞಾನದ ಕುರಿತು ಗ್ರಂಥಗಳು ಆಂಗ್ಲಭಾಷೆಯಲ್ಲಿ ಅಪಾರವಾಗಿದ್ದರೂ ಕನ್ನಡದಲ್ಲಿ ವಿರಳವಾಗಿವೆ. ಇದನ್ನು ಕನ್ನಡಕ್ಕೆ ಪರಿಚಯಿಸುವ ದಿಸೆಯಲ್ಲಿ ವಿದ್ವಾಂಸರು ದುಡಿದಿದ್ದಾರೆ. ಪ್ರೊ. ಮರಿಯಪ್ಪ ಭಟ್, ಡಾ. ಚಿದಾನಂತ ಮೂರ್ತಿ, ಡಾ| ಕುಳ್ಳಿ, ಡಾ| ಬಿಳಿಗಿರಿ, ಹಂಪ ನಾಗರಾಜಯ್ಯ, ಧಾರವಾಡಕರ ಮುಂತಾದವರು ಈ ಕೊರತೆಯನ್ನು ಹೋಗಲಾಡಿಸಲು ಶ್ರಮ ಪಟ್ಟಿದ್ದಾರೆ.

ಇಲ್ಲಿಯವರೆಗೆ ನಡೆದಿರುವ ದಾರಿ ಸಮಾಧಾನಕರವಾಗಿದ್ದರೂ, ನಡೆಯಬೇಕಾದದ್ದು ಇನ್ನೂ ಬಹಳ ಉಳಿದಿದೆ. ಇನ್ನೂ ಎಷ್ಟೋ ಕೆಲಸ ಬಾಕಿ ಬಿದ್ದಿವೆ. ಈ ಅರಿವಿನೊಡನೆ, ಜವಾಬ್ದಾರಿಯೊಡನೆ, ಕಾರ್ಯರಂಗಕ್ಕೆ ಇಳಿಯಬೇಕಾಗಿದೆ. ನಮ್ಮ ಇನ್ನೂ ಎಷ್ಟೋ ಮಹಾನ್ ಕೃತಿಗಳ ಭಾಷಾ ವಿಶ್ಲೇಷಣೆ ನಡೆಯಬೇಕಾಗಿದೆ; ಇನ್ನು ಎಷ್ಟೋ ಶತಮಾನಗಳ, ಪ್ರದೇಶಗಳ ಶಾಸನಗಳು ಅಧ್ಯಯನಕ್ಕೆ ಕಾಯುತ್ತಿವೆ. ಇವಲ್ಲದೆ 'ರಚನಾಂತರ ಪದ್ಧತಿ'ಯ ದೃಷ್ಟಿಯಿಂದಲೂ ಕನ್ನಡವನ್ನು ಅಭ್ಯಸಿಸಬೇಕಾಗಿದೆ. [ಈ ದಿಶೆಯಲ್ಲಿ, ಎ. ಕೆ. ರಾಮಾನುಜನ್ ಅವರ "A Generative Grammar of Kannada" (Ph. D. Dissertation, Indiana University.) ಕೃತಿ ಮೊದಲನೆಯದೆನ್ನಬಹುದು. ಇದು ಮೈಸೂರು ಪ್ರದೇಶ ಸುಶಿಕ್ಷಿತರ ಆಡು ಮಾತನ್ನು ಅವಲಂಬಿಸಿದೆ.] ಭಾಷಾವಿಜ್ಞಾನದ ಇನ್ನೂ ಎಷ್ಟೋ ಶಾಖೆಗಳನ್ನು ನಾವು ಮುಟ್ಟಿಲ್ಲ. ಭಾಷಾ ವಿಜ್ಞಾನದ ಅಭ್ಯಾಸ, ಅದರ ಬಗ್ಗೆ ಆಳವಾದ ಜ್ಞಾನ, ಭಾಷಾಪ್ರಭುತ್ವವೆಲ್ಲ ಬೇಕಾಗಿದೆ. ಎಲ್ಲ ಜ್ಞಾನ ಶಾಖೆಗಳ ಮಾಧ್ಯಮ, ಭಾಷೆ ಅಂತಹ ಭಾಷೆಯ ಬಗ್ಗೆ ನಾವು ಸರಿಯಾದ ಜ್ಞಾನವನ್ನು ಹೊಂದಬೇಕಾದುದು ಅವಶ್ಯ. "ಇದಕ್ಕೆ, ತಾಳ್ಮೆಯಿಂದ, ಉತ್ಸಾಹದಿಂದ, ಕೆಲಸ ಮಾಡುವ ಭಾಷವಿಜ್ಞಾನಿಗಳ ಸೈನ್ಯವೇ ಸಿದ್ಧವಾಗಬೇಕು."

ಅನಾಥರು

ಪ್ರೇಮಾ ತಾಶೀಲದಾರ

ಈ ಇವರು
ದಿಕ್ಕೆಟ್ಟು ಹರಿದು, ಬೇಡವಾದರೂ ಬಂದು
ಸಾಗರದತ್ತಲೇ ಹೊರಟವರು. ಭರ್ತಿಪ್ರವಾಹ-
ದಲ್ಲೀಸಲಾರದೆ, ಸೆಳವಿನ ಗುಂಟ ಹರಿಯು-
ಲಾರದೆ ತಿರುಗುಣಿಯು ಹೆಣವಾಗಿ
ಮೇಲೆದ್ದು ಮುಂದೆ
ನಡೆದವರು.
ಹಗಲಿನಲ್ಲಿ
ಅವ್ವ-ಅಪ್ಪ ಎಲ್ಲರನೂ ಕಳಕೊಂಡು
ರಾತ್ರಿಯಾಕಾಶದಲ್ಲಿ
ಚಿಕ್ಕೆಗಳ ನೋಡಿ
ಬಿಕ್ಕಿದವರು.
ಸಿಡಿಮದ್ದು ನುಡಿಯಲ್ಲಿ ಕಟ್ಟಿಕೊಂಡೇ
ಭೂಮಿಗಿಳಿದರಾದರೂ, ಕಿಡಿಯಿಕ್ಕಲಾರದೆ
ಮುಗ್ಧ ನಂಬಿಕೆಯಲ್ಲೇ
ತೊದಲಿದವರು.
ಯಾವ ಭಾಷೆಯಲ್ಲೋ ಕವನ ಬರೆದು
ಅರ್ಥವನ್ನಿಲ್ಲೇ ಹೂಳಿಬಿಟ್ಟು
ಅಲ್ಲಿ ಆ-
ಕಾಶವನೆಲ್ಲ ತಟ್ಟಿ
ಅಭಿವ್ಯಕ್ತಿಸುವರು.
ಭಾವಗಳಿಗೆಲ್ಲ ಮೂಕತೆಯ ಭಂಗಿಯನ್ನಿತ್ತು
ರಂಗಮಂಚದ ತುಂಬು ಬೆಳಕಿನಲ್ಲಿ
ನೆರಳಿಲ್ಲದೆ ಅಭಿನಯಿಸಿ
ಮನರಂಜಿಸುವರು-ಹೀಗೇ ದಿಕ್ಕೆಟ್ಟು ಹರಿದು....!

ಪ್ರೊಬೇಶನ್ :
ಒಂದು ಸುಧಾರಣಾ ಚಿಕಿತ್ಸೆ

ಎಸ್. ಎಫ್. ಪೂಜಾರ

'ಪ್ರೊಬೇಶನ್' (Probation) ಇಂಗ್ಲೀಷ್ ಶಬ್ದದ ಕನ್ನಡ ಅರ್ಥ ನೀತಿ ಅಥವಾ ನಡತೆಯ ಪರೀಕ್ಷೆ ಎನ್ನಬಹುದು. ಇದು ಅದರ ಶಬ್ದಶಃ ಅರ್ಥವಾಯಿತು. ಅಪರಾಧೀ ಸುಧಾರಣಾ ಕಾರ್ಯದಲ್ಲಿ ಇದಕ್ಕೆ ಒಂದು ವಿಶಿಷ್ಟ ಅರ್ಥವನ್ನು ಕೊಟ್ಟಿದ್ದಾರೆ. ಅಂದರೆ ಕೆಲವು ಆಯ್ದ ಅಪರಾಧಿಗಳನ್ನು, ಅದರಲ್ಲೂ ತರುಣ ಹಾಗು ಬಾಲ ಅಪರಾಧಿಗಳನ್ನು ನ್ಯಾಯಾಲಯಗಳಿಂದ ಶಿಕ್ಷೆ ವಿಧಿಸಿ ಸೆರೆಮನೆಗೆ ಕಳಿಸದೆ, ಅವರಿಗೆ ಕೆಲವೊಂದು ಕಟ್ಟುಕರಾರುಗಳನ್ನು ವಿಧಿಸಿ ಬಿಡುಗಡೆ ಮಾಡುವರು. ಹೀಗೆ ಬಿಡುಗಡೆ ಮಾಡಿದಾಗ ನಿರ್ಧಿಷ್ಟ ಅವಧಿಯವರೆಗೆ ಪ್ರೊಬೇಶನ್ ಅಧಿಕಾರಿಯು ಅಪರಾಧಿಯ ಮೇಲ್ವಿಚಾರಣೆ ಮಾಡುವನು; ಗೆಳೆಯನಾಗಿ ಮಾರ್ಗದರ್ಶನ ಮಾಡುವನು; ತೊಂದರೆಗಳನ್ನು ನಿವಾರಿಸಲು ನೆರವಾಗುವನು; ಉದ್ಯೋಗಶೀಲನನ್ನಾಗಿ ಮಾಡಿ ಉದ್ಯೋಗ ದೊರಕಿಸಿಕೊಡುವನು: ಪುನರ್ನಿವೇಶನಕ್ಕೆ ನೆರವಾಗುವನು. ಮತ್ತು ಸಮಾಜದಲ್ಲಿರುವ ಕಾಯ್ದೆ, ನಿಯಮ, ನಿಬಂಧನೆಗಳನ್ನು ಪರಿಪಾಲಿಸುವ, ಸ್ವಾವಲಂಬಿ ನಾಗರಿಕನನ್ನಾಗಿ ಮಾಡುವನು. ಹೀಗೆ ಬಿಡುಗಡೆ ಮಾಡಿದ ಅಪರಾಧಿಗೆ ಪ್ರೊಬೇಶನರ್ (Probationer) ಅಥವಾ ಅರ್ಥಿ ಎನ್ನುವರು. ಅರ್ಥಿಯು ನಾಗರಿಕನಾಗಿ ಬಾಳಲು ಸಮರ್ಥನು; ಅವನು ಅಪರಾಧ ಬಿಟ್ಟು, ಮರೆತು, ಯೋಗ್ಯ ನಾಗರಿಕನಾಗಿ ಬಾಳಬಲ್ಲನೆಂಬುದನ್ನು ಸಿದ್ಧಮಾಡಲು ಕೊಡುವ ಒಂದು ಸದವಕಾಶವೇ ಈ ಪದ್ಧತಿ. ನ್ಯಾಯಾಲಯವು ವಿಧಿಸಿದ ಕಟ್ಟುಕರಾರುಗಳನ್ನು ಅಪರಾಧಿಯು ಮುರಿದರೆ ಮತ್ತೆ ಯಾವ ವಿಚಾರಣೆಯೂ ಇಲ್ಲದೆ ಅವನು ನೇರವಾಗಿ ಸೆರೆಮನೆಗೆ ಹೋಗಬೇಕಾಗಿ ಬರುವುದು.

ಪ್ರೊಬೇಶನ್ ಉಪಚಾರದ ಅರ್ಥವನ್ನು ಅನೇಕರು ಇನ್ನೂ ಬೇರೆಬೇರೆ ವಿಧದಲ್ಲಿ ಮಾಡುವರು. ಪ್ರೊಬೇಶನ್ ಅಧಿಕಾರಿಯು ಒಂದುರೀತಿ ಅರ್ಥ ಮಾಡಿದರೆ, ಅರ್ಥಿಯು ಮತ್ತೊಂದು ರೀತಿಯಲ್ಲಿ ತಿಳಿದುಕೊಳ್ಳುತ್ತಾನೆ. ನ್ಯಾಯಾಧೀಶರಿಗೆ ಒಂದು ಅರ್ಥವಾದರೆ ಪೋಲೀಸರಿಗೆ ಇನ್ನೊಂದು ಅರ್ಥ. ಕೆಲವರು ಅಪರಾಧಿಗಳನ್ನು ಹೀಗೇ ಬಿಟ್ಟರೆ ಅವರಿಗೆ ತಕ್ಕ ಶಿಕ್ಷೆಯಾದಂತಾಗದೆ, ಅಪರಾಧಕ್ಕೆ ಪ್ರಚೋದನೆಯನ್ನಿತ್ತಂತಾಗುತ್ತದೆ-ಎಂದು ತಿಳಿಯುತ್ತಾರೆ. ಕೆಲವರು ಅಪರಾಧಿಯನ್ನು ನ್ಯಾಯವಾಗಿ ಸೆರೆಮನೆಯಲ್ಲಿಟ್ಟು ಕಠಿಣವಾಗಿ ಶಿಕ್ಷಿಸದೆ, ಅವನ ಮೇಲೆ ದಾಕ್ಷಿಣ್ಯ ತೋರಿಸಿದಂತಾಗುತ್ತದೆ ಎನ್ನುತ್ತಾರೆ; ಕಳ್ಳನನ್ನು, ಕೊಳ್ಳಿ ಇಟ್ಟವನನ್ನು, ಅಪರಾಧ ಮಾಡಿದವನನ್ನು ಹೀಗೆ ಬಿಡು

ವದು ನ್ಯಾಯವೇ ? ಎಂದು ಪ್ರಶ್ನಿಸುತ್ತಾರೆ; ಇಂಥವರ ವಿಷಯದಲ್ಲಿ ನ್ಯಾಯಾಲಯವು ನಿಷ್ಠುರವಾಗಬೇಕು; ಶಿಕ್ಷೆಯನ್ನು ವಿಧಿಸಬೇಕು ಎನ್ನುತ್ತಾರೆ. ಕೆಲವರು, ಇದನ್ನೂ ಒಂದು ಶಿಕ್ಷೆ ಎಂತಲೇ ಭಾವಿಸುತ್ತಾರೆ. ಮತ್ತೆ ಕೆಲವರು, ಇದಕ್ಕೆ ಒಂದು ಶಿಷ್ಟಾಚಾರ ಪದ್ಧತಿ ಎಂದೆನ್ನುತ್ತಾರೆ. ಪ್ರೊಬೇಶನ್ ಅಧಿಕಾರಿಯು ಅರ್ಥಿಯ ಮೇಲೆ ಕಣ್ಣಿಟ್ಟು ಕಾಯುತ್ತಾನೆ; ಅವನು ಒಬ್ಬ ಮಾನಸಿಕ ಪೋಲೀಸನಾಗಿರುತ್ತಾನೆ; ಮತ್ತು ಅರ್ಥಿಯು ಒಳ್ಳೆಯ ನಾಗರಿಕನಾಗಬಲ್ಲನೆಂಬುದನ್ನು ಸಿದ್ಧಮಾಡಿ ತೋರಿಸುತ್ತಾನೆ. ಒಂದುವೇಳೆ ಅರ್ಥಿಯು ಇದಕ್ಕೆ ತಪ್ಪಿದರೆ ನ್ಯಾಯಾಲಯದಿಂದ ಮರಳಿ ಶಿಕ್ಷೆ ಪಡೆಯಬೇಕಾಗುತ್ತದೆ ಎನ್ನುತ್ತಾರೆ. ಆದರೆ ಪ್ರೊಬೇಶನ್ ಅಧಿಕಾರಿಯು ಅರ್ಥಿಗೆ ಮಾರ್ಗದರ್ಶನ ಮಾಡುತ್ತಾನೆ; ಗೆಳೆಯನೋಪಾದಿಯಲ್ಲಿ ಸಲಹೆಯನ್ನು ಮತ್ತು ನೆರವನ್ನು ನೀಡುತ್ತಾನೆ ಎಂಬುದನ್ನು ಅವರು ಗಮನಕ್ಕೆ ತಂದುಕೊಳ್ಳುವುದಿಲ್ಲ.

ಇನ್ನು ಕೆಲವರ ಪ್ರಕಾರ ಪ್ರೊಬೇಶನ್ ಒಂದು ಸುಧಾರಣಾ ಚಿಕಿತ್ಸೆ ಅಥವಾ ಉಪಚಾರ. ಇದರ ಉದ್ದೇಶವೆಂದರೆ ಸಮಾಜವನ್ನು ಅಪರಾಧದಿಂದ ರಕ್ಷಿಸುವುದು; ಅಪರಾಧಿಗಳ ಪುನರ್ವಸತಿ ಮಾಡುವದು; ಅರ್ಥಿಯು ಮನಃಪರಿವರ್ತನೆ ಮಾಡಿ ಒಳ್ಳೆಯ ನಡತೆಯನ್ನು ಕಲಿಯಲು ಅವನಿಗೆ ಅವಕಾಶ ನೀಡುವದು. ಹೊಸ ಜೀವನ ಧ್ಯೇಯವನ್ನು ಅವನ ಮುಂದಿರಿಸಿ ಅವನು ಪ್ರಾಮಾಣಿಕ ಹಾಗು ಸ್ವಾವಲಂಬಿ ನಾಗರಿಕನಾಗಿ ಬಾಳುವಂತೆ ಮಾಡುವದು ಎಂದು ಮುಂತಾಗಿ ತಿಳಿಯುತ್ತಾರೆ. ಇದು ಬಹುಮಟ್ಟಿಗೆ ಒಂದು ಸರಿಯಾದ ಅರ್ಥವಾಗಬಹುದು.

ಈ ಚಿಕಿತ್ಸೆಯನ್ನು, ಅಪರಾಧಿಯ ವಿಷಯದಲ್ಲಿ ಸರಿಯಾದ ತನೀಖೆಮಾಡಿ, ಅವನು ಯೋಗ್ಯ ಅರ್ಥಿ ಎಂದು ಕಂಡುಬಂದಾಗ ಕೊಡಲಾಗುತ್ತದೆ. ಇದು ಅಪರಾಧೀ ಸುಧಾರಣಾ ಕಾರ್ಯದಲ್ಲಿ ಒಂದು ಮುನ್ನಡೆ. ಶಿಕ್ಷಾ ಕಾಯ್ದೆ (Penal law) ಮತ್ತು ಶಿಕ್ಷಾ ಪದ್ಧತಿಯಲ್ಲಿ ಪ್ರೊಬೇಶನ್ ಅಧಿಕಾರಿಯು ಅಪರಾಧಿಯ ಸಾಮಾಜಿಕ ಹಾಗು ಆರ್ಥಿಕ ಹಿನ್ನೆಲೆ, ಅವನ ಹಿಂದಿನ ಚರಿತ್ರೆ, ನಡತೆ ಮತ್ತು ವ್ಯಕ್ತಿತ್ವದ ಬಗ್ಗೆ ಸರಿಯಾದ ತನೀಖೆ ನಡೆಸಿ ಆ ಬಗ್ಗೆ ನ್ಯಾಯಾಧೀಶರ ಮುಂದೆ ಒಂದು ವರದಿಯನ್ನಿಡುತ್ತಾನೆ. ನ್ಯಾಯಾಧೀಶರು, ಅಪರಾಧಿಯನ್ನು ಸೆರೆಮನೆಗೆ ಕಳಿಸಿದರೆ ಹಿತಕರವೋ ಅಥವಾ ಕೆಲವು ಕಟ್ಟುಕರಾರುಗಳನ್ನು ವಿಧಿಸಿ ಸಮುದಾಯದಲ್ಲಿಯೇ ಬಿಟ್ಟು ಉಪಚಾರ ಮಾಡುವದು ಲಾಭದಾಯಕವೋ ಎಂದು ನಿರ್ಧರಿಸುತ್ತಾರೆ; ನಿರ್ಣಯಿಸುತ್ತಾರೆ. ಅರ್ಥಿಯನ್ನು ಸಮುದಾಯದಲ್ಲಿಯೇ ಬಿಟ್ಟಾಗ ಅಧಿಕಾರಿಯು ಅವನ ಪ್ರಗತಿಯ ಬಗ್ಗೆ ನ್ಯಾಯಾಧೀಶರಿಗೆ ಆಗಾಗ್ಗೆ ತಿಳಿಸಬೇಕಾಗುತ್ತದೆ. ಅಂದರೆ ಇದು ಸೆರೆಮನೆಯಲ್ಲಿ ಒದಗಿಸುವ ಸುಧಾರಣಾ ಚಿಕಿತ್ಸೆಯಾಗದೆ ಸಮುದಾಯದಲ್ಲಿಯೇ ಒದಗಿಸುವ ಚಿಕಿತ್ಸೆಯಾಗಿದೆ. ಅಂದಮೇಲೆ ಇದು ಸಂಸ್ಥೇತರ (Non-institutional) ಚಿಕಿತ್ಸೆಯಾಯಿತು. ಈ ಚಿಕಿತ್ಸೆಗಾಗಿ ಸಮುದಾಯದಲ್ಲಿಯೇ ಬಿಟ್ಟಾಗ, ನ್ಯಾಯಾಲಯವು ವಿಧಿಸಿದ ಕರಾರು

ಗಳನ್ನು ಅರ್ಥಿಯು ಮುರಿದರೆ ಅವನು ಕಾಯ್ದೆಯ ಪ್ರಕಾರ ಶಿಕ್ಷೆಯನ್ನು ಅನುಭವಿಸಲು ಸೆರೆಮನೆಗೆ ಹೋಗಬೇಕಾಗುತ್ತದೆ ಎಂದು ಈ ಹಿಂದೆಯೇ ಹೇಳಿದೆ. ಕಾರಣ ಪ್ರೊಬೇಶನ್ ಪದ್ಧತಿಯು ಅಪರಾಧಿಗೆ ದಾಕ್ಷಿಣ್ಯ ತೋರುವ ಪದ್ಧತಿ ಅಥವಾ ಅಪರಾಧಿಯನ್ನು ಶಿಕ್ಷಿಸದೆ ಹಾಗೇ ಬಿಟ್ಟುಬಿಡುವುದು, ಎಂದು ಅರ್ಥ ಮಾಡಿದರೆ ತಪ್ಪಾಗುವುದು.

ಪ್ರೊಬೇಶನ್ ಚಿಕಿತ್ಸೆಯ ಅರ್ಥ, ಇನ್ನೂ ವಿಶಾಲವಾಗಿದ್ದು ಅದಕ್ಕೆ ಹೆಚ್ಚಿನ ಮುಂದುವರಿದ ಅರ್ಥವನ್ನು ಕೊಡಲಾಗುತ್ತದೆ. ಅದರ ಪ್ರಕಾರ, ಶಿಕ್ಷೆಯು ಅಪರಾಧಿಯನ್ನು ತಕ್ಕ ನಾಗರಿಕನನ್ನಾಗಿ ಅಥವಾ ಯೋಗ್ಯ ಮನುಷ್ಯನನ್ನಾಗಿ ಮಾಡುವ ಹೇತುವುಳ್ಳದ್ದಾಗಿರಬೇಕೇ ವಿನಃ ಅಪರಾಧಿಯನ್ನಲ್ಲ. ಈ ಮಾತನ್ನೇ ಇಂಗ್ಲೀಷಿನಲ್ಲಿ ಹೀಗೆ ಹೇಳಲಾಗಿದೆ : Sentence should fit the offender & not the offence). ಅಪರಾಧವು ಒಂದು ಸಾಮಾಜಿಕರೋಗವೆಂದಮೇಲೆ ಅದು ತಗಲುವ ಮುನ್ನವೆ ಅದನ್ನು ತಡೆಯುವುದು ಹಿತ. ಪ್ರೊಬೇಶನ್ ಚಿಕಿತ್ಸೆಯು ಈ ಕಾರ್ಯವನ್ನು ಕೂಡ ಮಾಡಬಲ್ಲುದು. ಅಂದರೆ ಅಪರಾಧಿಗಳ ಲೇಸಬಯಸುವುದು ಮತ್ತು ಅಪರಾಧವನ್ನು ತಡೆಯುವುದು ಪ್ರೊಬೇಶನ್ ಪದ್ಧತಿಯ ಉದ್ದೇಶ.

ಪ್ರೊಬೇಶನ್ ಚಿಕಿತ್ಸೆಯ ತತ್ವ ಹಾಗು ಉದ್ದೇಶಗಳು :

೧. ಅಪರಾಧದಿಂದ ಸಮಾಜದ ರಕ್ಷಣೆಯನ್ನು ಮಾಡುವುದು.

೨. ಅಪರಾಧಗೈದ ಪ್ರತಿಯೊಬ್ಬ ವ್ಯಕ್ತಿಗೂ ನ್ಯಾಯ ನೀಡುವುದು.

೩. ಅಪರಾಧಗೈದ ವ್ಯಕ್ತಿಯನ್ನು ತನ್ನ ಕುಟುಂಬದೊಡನೆ, ತನ್ನ ಸಹೋದ್ಯೋಗಿಗಳೊಡನೆ ಸ್ನೇಹಿತರೊಡನೆ. ಮತ್ತು ಸಮುದಾಯದೊಡನೆ ಮಧುರ ಸಂಬಂಧವನ್ನು ಬೆಳೆಸಿಕೊಳ್ಳುವಂತೆ ಮತ್ತು ಅವರೊಡನೆ ಒಂದಾಗಿ ಜೀವಿಸುವಂತೆ ಮಾಡುವದು; ಅಲ್ಲದೆ ಅವನು ಜೀವಿಸುವ ಹಕ್ಕನ್ನು ನೀಡುವುದು.

೪. ಅಪರಾಧಗೈದ ವ್ಯಕ್ತಿಯು. ಸಮಾಜದಲ್ಲಿ ಉದ್ಯೋಗಶೀಲ ಮತ್ತು ನೀತಿವಂತ ನಾಗರಿಕನಾಗಿ ಬಾಳುವಂತೆ ಮಾಡುವುದು.

೫. ಪ್ರಜಾಸತ್ತಾತ್ಮಕ ಸಮಾಜವು ಅದರ ಸದಸ್ಯರಿಗೆ ಸ್ವತಂತ್ರವಾಗಿ ಜೀವಿಸುವ ಮತ್ತು ಸುಖ, ನೆಮ್ಮದಿಗಳಿಂದ ಬಾಳುವ ಹಕ್ಕುಗಳನ್ನು ನೀಡುತ್ತದೆ. ಅಂಥ ಹಕ್ಕುಗಳನ್ನು ಅನುಭವಿಸಲು, ಕರ್ತವ್ಯವನ್ನು ಪರಿಪಾಲಿಸಲು ಪ್ರೊಬೇಶನ್ ಪದ್ಧತಿಯು ನೆರವಾಗುವುದು.

೬. ಅಪರಾಧಗೈದ ವ್ಯಕ್ತಿಯನ್ನು ಶಿಕ್ಷಿಸದೆ. ಅವನಿಗೆ ಪುನರ್ಶಿಕ್ಷಣವನ್ನಿತ್ತು, ಸುಧಾರಿಸಿ, ಸಮಾಜದಲ್ಲಿ ಸ್ವಾವಲಂಬಿಯಾಗಿ ಬಾಳುವುದನ್ನು ಕಲಿಸುವುದು ಇತ್ಯಾದಿ.

ಇದರಿಂದಾಗುವ ಸಾಮಾಜಿಕ ಹಾಗೂ ಆರ್ಥಿಕಲಾಭ

ಮಾನವನು ತನ್ನ ಸಮಾಜದಲ್ಲಿ ಕೆಲವು ಒತ್ತಡಗಳಿಗೆ ಸಿಲುಕಿ, ಕೆಟ್ಟ ಪರಿಸರದ ಪ್ರಭಾವಕ್ಕೊಳಗಾಗಿ ಸಹವಾಸದೋಷ, ಮತ್ತು ಬಡತನಗಳಿಂದಾಗಿ ಅಥವಾ ಇನ್ನಾವುದೇ ಊನತೆಯಿಂದಾಗಿ ಅಪರಾಧಗೈಯುತ್ತಾನೆಂಬ ತತ್ವವನ್ನು ನಂಬಿದ್ದೇವೆ. ಅಂದಮೇಲೆ ಅಪರಾಧಿಯನ್ನು ಒಮ್ಮೆಲೆ ಶಿಕ್ಷೆವಿಧಿಸಿ ಸೆರೆಮನೆಗೆ ನೂಕಬಾರದು. ಅವನಿಗಿರುವ ತೊಂದರೆಗಳನ್ನು ನಿವಾರಿಸಿ ಸಮುದಾಯದಲ್ಲಿ ಬೆರೆಯುವಂತೆ ಮಾಡಬೇಕು. ಕಾರಣ ಪ್ರೊಬೇಶನ್ ಚಿಕಿತ್ಸೆಯು ಅಪರಾಧಿಯನ್ನು ಒಮ್ಮೆಲೆ ಶಿಕ್ಷೆವಿಧಿಸಿ ಸೆರೆಮನೆಗೆ ನೂಕದೆ, ಸಮುದಾಯದಲ್ಲಿಯೇ ಬಿಟ್ಟು ಅವನು ಸರಿಯಾದ ಜೀವನವನ್ನು ಸಾಗಿಸಲು ಸದವಕಾಶವನ್ನು ಕೊಡುತ್ತದೆ. ಅವನು ತನ್ನ ನಡತೆಯನ್ನು ಸುಧಾರಿಸಿಕೊಂಡು ತನ್ನ ಕುಟುಂಬ, ಸಹೋದ್ಯೋಗಿ ಮತ್ತು ಸ್ನೇಹಿತರುಗಳೊಡನೆ ಹೊಂದಿಕೊಂಡುಹೋಗಲು ಇದು ಬಹಳ ಸಹಾಯಕಾರಿಯಾಗುತ್ತದೆ. ಇದರಿಂದ ಅಪರಾಧಿಯು ಸಮಾಜದಲ್ಲಿಯ ನಿಯಮನಿಬಂಧನೆಗಳನ್ನು ಪಾಲಿಸುವ. ನಾಗರಿಕನಾಗಿ ಪರಿವರ್ತನೆ ಹೊಂದಲು ಸಾಧ್ಯವಾಗುತ್ತದೆ. ಈ ಚಿಕಿತ್ಸೆಯ ಸದುದ್ದೇಶಗಳನ್ನು ತಿಳಿದು ಇದರ ಸದುಪಯೋಗವನ್ನು ಮಾಡದೆ. ಅಪರಾಧಿಯನ್ನು ಸೆರೆಮನೆಗಟ್ಟಿದರೆ ಏನನ್ನೂ ಸಾಧಿಸಿದಂತಾಗುವುದಿಲ್ಲ. ಆದರೆ ಆರ್ಥಿಕವಾಗಿ, ಸಾಮಾಜಿಕವಾಗಿ ಹಾನಿಯಾಗುವುದು ಖಂಡಿತ. ಅಪರಾಧಿಗೆ ಶಿಕ್ಷೆವಿಧಿಸಿ ಸೆರೆಮನೆಗೆ ಕಳಿಸಿದರೆ ಅವನ ಮೇಲೆ ದುಷ್ಪರಿಣಾಮಗಳಾಗುವುದೇ ಹೆಚ್ಚು. ಇದೂ ಅಲ್ಲದೆ, ಅಪರಾಧಿಯು ಸೆರೆಮನೆಯಲ್ಲಿರುವ ಸೇವಾಲಾಭಗಳನ್ನು ಪಡೆಯುವ ಭರವಸೆಯೂ ಇರುವುದಿಲ್ಲ. ಅವನು ಸೆರೆಮನೆಯಲ್ಲಿರುವ ಇನ್ನಿತರ ಅಪರಾಧಿಗಳ ಸಹವಾಸದಿಂದ ಮತ್ತಷ್ಟು ಕೆಡಲೂ ಸಾಧ್ಯ. ಅವನಿಗೆ ಮಾನಸಿಕ ಪರಿಣಾಮವೂ ಆಗದಿರದು; ಎಂದು ಮಾನಸಶಾಸ್ತ್ರಜ್ಞರು ಮತ್ತು ಅಪರಾಧಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ.

ಸೆರೆಮನೆಯಿಂದ ಅವನ ಬಿಡುಗಡೆಯಾದಾಗ ಅವನು ಕುಟುಂಬಸಮುದಾಯ ಹಾಗು ಸಮಾಜಕ್ಕೆ ಹೊಂದಿಕೊಳ್ಳುವ ಸಾಮರ್ಥ್ಯವನ್ನು ಕಳೆದುಕೊಳ್ಳಬಹುದು. ಅಲ್ಲದೆ ಸಮಾಜವು ಅವನಿಗೆ. ಕಳ್ಳನೆಂದು ಕಲಂಕ ಬಳಿದು ಸರಿಯಾಗಿ ಜೀವಿಸಲು ಅವಕಾಶವನ್ನೇ ಕೊಡುವುದಿಲ್ಲ. ಸಮಾಜದಲ್ಲಿ ಅವನಿಗೆ ಯಾರೂ ಉದ್ಯೋಗ ಕೊಡಲು ಮುಂದೆ ಬರುವುದಿಲ್ಲ. ಸೆರೆಮನೆಯಲ್ಲಿದ್ದಾಗ. ಕುಟುಂಬಸಮುದಾಯಗಳ ಸಂಬಂಧ ಹಾಗು ಸಂಪರ್ಕಗಳನ್ನು ಕಳೆದುಕೊಂಡದ್ದರಿಂದ ಮರಳಿ ಬಂದಾಗ ಅವನು ಒಬ್ಬ ಅಪರಿಚಿತ ವ್ಯಕ್ತಿಯಂತೆ ಆಗುವುದೂ ಸಾಧ್ಯ.

ಒಂದುವೇಳೆ ಸೆರೆಮನೆಗೆ ಹೋದ ಅಪರಾಧಿಯು ಹಿರಿಯನಾಗಿದ್ದರೆ, ಮನೆಯಲ್ಲಿ ಎಲ್ಲರಿಗೂ ದುಡಿದು ಹೊಟ್ಟೆಗೆ ಹಾಕುವ ಸದಸ್ಯನಾಗಿದ್ದರೆ, ಅವನ ಹೆಂಡತಿ-ಮಕ್ಕಳು

ಬೀದಿಪಾಲಾಗಬಹುದು: ಭಿಕಾರಿಗಳಾಗಬಹುದು ಮತ್ತು ಅಪರಾಧಿಗಳೂ ಆಗ ಬಹುದು. ಅಲ್ಲದೆ ಅವನ ಆಸ್ತಿಪಾಸ್ತಿಗೂ ಧಕ್ಕೆ ಉಂಟಾಗಬಹುದು. ಅಪರಾಧಿಗಳು ತರುಣವಯಸ್ಕರಿದ್ದರೆ ಅವರ ಶಿಕ್ಷಣ ಅರ್ಧಕ್ಕೆ ನಿಲ್ಲಬಹುದು; ಅಥವಾ ಮುಂದುವರಿ ಸಲು ತೊಂದರೆಗಳು ಬರಬಹುದು. ಒಂದುವೇಳೆ ಇವೆಲ್ಲ ಸೆರೆಮನೆಯ ಕಲ್ಯಾಣಸೇವೆ ಹಾಗು ಸಂಸ್ಥಾಪಶ್ಚಾತ್ (After care) ಸೇವೆಗಳು ಇವೆಲ್ಲವುಗಳನ್ನು ನೋಡಿ ಕೊಂಡಾಗ್ಯೂ ಆರ್ಥಿಕ ಮತ್ತು ಇತರ ತೊಂದರೆಗಳು ಇದ್ದೇಇವೆ. ಸೆರೆಮನೆಯಲ್ಲಿ ಅವರಿಗೆ ಕಲ್ಯಾಣ ಸೇವೆಗಳನ್ನೊದಗಿಸಿದರೆ, ಅನಾವಶ್ಯಕವಾಗಿ ಹೆಚ್ಚು ಹಣ ವ್ಯಯವಾಗು ವುದು: ಇದರ ಭಾರವು ನಮ್ಮೆಲ್ಲರ ಮೇಲೆಯೇ ಬೀಳುವುದು.

ಆದರೆ ಪ್ರೊಬೇಶನ್ ಚಿಕಿತ್ಸೆಯಿಂದ ಈ ಎಲ್ಲ ಹಾನಿಗಳನ್ನೂ ದೂರಮಾಡ ಬಹುದು. ಒಬ್ಬ ಅರ್ಥಿಗೆ ಖರ್ಚುಮಾಡುವ ಎಷ್ಟೋ ಪಟ್ಟು ಹಣವನ್ನು ಒಬ್ಬ ಸೆರೆಯಾಳಿಗೆ ಖರ್ಚುಮಾಡುವುದು ವ್ಯರ್ಥವೆನಿಸದಿರದು. ಕಾರಣ ಪ್ರೊಬೇಶನ್ ಪದ್ಧತಿಯು ಆರ್ಥಿಕ ದೃಷ್ಟಿಯಿಂದ ಮಿತವ್ಯಯವಾದದ್ದು: ಸಾಮಾಜಿಕ ದೃಷ್ಟಿಯಿಂದ ಹಿತಕರವಾದದ್ದು ಒಬ್ಬ ಸೆರೆಯಾಳಿಗೆ ಖರ್ಚುಮಾಡುವ ಪ್ರತಿಶತ ಎಂಟು ಇಲ್ಲವೆ ಹತ್ತರಷ್ಟು ಹಣವನ್ನು ಅಮೇರಿಕೆ ಮತ್ತು ಇಂಗ್ಲಂಡಗಳಲ್ಲಿ ಒಬ್ಬ ಪ್ರೊಬೇಶನರ್‌ಗೆ ಖರ್ಚುಮಾಡಲಾಗುತ್ತದೆ. ನಮ್ಮ ದೇಶದಲ್ಲಿ ಅದರ ಪ್ರಮಾಣ ಇನ್ನೂ ಕಡಿಮೆ. ಅಂದರೆ ಪ್ರತಿಶತ ಮೂರರಷ್ಟು ಹಣವನ್ನು ಒಬ್ಬ ಅರ್ಥಿಗೆ ಖರ್ಚುಮಾಡಲಾಗುತ್ತದೆ. ನಮ್ಮ ದೇಶದಲ್ಲಿ ಇದರ ಸದುಪಯೋಗವಾದರೆ, ಪ್ರತಿವರ್ಷ ಒಂದೂವರೆಲಕ್ಷ ರೂಪಾ ಯಿಯು ಉಳಿತಾಯವಾಗಲು ಸಾಧ್ಯವೆಂದು ಲೆಕ್ಕಮಾಡಲಾಗಿದೆ. ಅಂದಮೇಲೆ ನಾವು ಪ್ರೊಬೇಶನ್ ಚಿಕಿತ್ಸೆಯನ್ನು ಅಪರಾಧಿಗಳಿಗೆ ಒದಗಿಸಿದರೆ, ಸಾಮಾಜಿಕ ಹಾಗು ಆರ್ಥಿಕ ಲಾಭವಾಗುವುದು. ಆದರೆ ಕೆಲವೊಂದು ಅಪರಾಧಿಗಳನ್ನು ಮಾತ್ರ ಅನಿವಾರ್ಯವಾಗಿ ಶಿಕ್ಷೆವಿಧಿಸಿ ಸೆರೆಮನೆಗೆ ಕಳಿಸಲೇಬೇಕಾಗುವುದು. ಅಲ್ಲಿ ಸೆರೆಮನೆ, ಕಲ್ಯಾಣಸೇವೆಗಳು ಅವರನ್ನು ಸುಧಾರಿಸಲು ನೆರವಾಗುವುವು.

ಪ್ರೊಬೇಶನ್ ಉಪಚಾರದ ಉದಯ :

ಪ್ರೊಬೇಶನ್ ಉಪಚಾರ ಉದ್ದೇಶಪೂರ್ವಕವಾಗಿ ಮಾಡಿದ ಕಾನೂನು ಅಥವಾ ನ್ಯಾಯಾಧೀಶನ ಉಪಕ್ರಮದಿಂದಾದ ನ್ಯಾಯಸಭೆಯ ಸಂಶೋಧನೆಯಲ್ಲ. ಇದರ ಉದಯ, ಒಬ್ಬ ದಯಾಳುವಾದ ಸಾಮಾನ್ಯ ನಾಗರಿಕನಿಂದಾಯಿತು. ಇವನೇ ಜಾನ್ ಅಗಸ್ಟಸ್(John Augustus)ನು. ಇವನು ಮೆಸೆಚುಸೆಟ್ಸ(Massachusetts)ದ ಒಬ್ಬ ಚಮ್ಮಾರ (Cobbler) ಎಂದರೆ ನಮಗೆ ಆಶ್ಚರ್ಯವಾಗದಿರದು. ಅಪರಾಧಿಗಳ ಬಗ್ಗೆ ಇಂಥವನಲ್ಲಿದ್ದ ದಯಾಗುಣ, ಅವರ ಒಳಿತನ್ನು ಸಾಧಿಸುವ ಬಯಕೆ ಪ್ರಶಂಸ ನಾರ್ಹ. ಇಂಥ ದಯೆಯುಳ್ಳ ಧರ್ಮಿಯಿಂದ ೧೮೪೧ರಲ್ಲಿ, ಪ್ರೊಬೇಶನ್ ಉಪಚಾರದ ಉದಯವಾಯಿತು. ಕಾರಣ ಜಾನ್ ಅಗಸ್ಟಸ್‌ನೇ ಪ್ರೊಬೇಶನ್ ಪದ್ಧತಿಯ ಜನಕನು.

ಜಾನ್ ಆಗಸ್ಟಸ್‌ನು ಮೊದಲು, ಸಾಮಾನ್ಯ ಕುಡುಕರನ್ನು ಜಾಮೀನಾಗಿ ಪೋಲೀಸ್ ನ್ಯಾಯಾಲಯದಿಂದ ಬಿಡಿಸಿದನು. ನ್ಯಾಯಾಲಯದ ಕರಾರಿನಂತೆ ಮೂರು ವಾರಗಳ ನಂತರ ಇವರನ್ನು ಮರಳಿ ನ್ಯಾಯಾಲಯಕ್ಕೆ ಕರೆದೊಯ್ದನು. ಹೀಗೆ ನಿರ್ಧರಿಸಿದ ವೇಳೆಗೆ ಅಪರಾಧಿಗಳು ನ್ಯಾಯಾಲಯಕ್ಕೆ ಬಂದದ್ದು, ಸುಧಾರಣೆಯ ಒಂದು ಲಕ್ಷಣವೇ ಸರಿ. ನ್ಯಾಯಾಧೀಶರು ಇದನ್ನು ಕಂಡು ಅಪರಾಧಿಗಳನ್ನು ಸೆರೆಮನೆಗೆ ಕಳಿಸದೆ ಅವರಿಗೆ ಸಣ್ಣ ಪ್ರಮಾಣದಲ್ಲಿ ದಂಡ ಮತ್ತು ನ್ಯಾಯಾಲಯದ ಖರ್ಚನ್ನು ಕೊಡಲು ಆಜ್ಞೆವಿಧಿಸಿ ಬಿಡುಗಡೆಮಾಡಿದರು. ಅವರು ಅಪರಾಧಿಗಳಿಗಲ್ಲದೆ ಸಮುದಾಯ, ಆದೇಕೆ ಸಮಾಜಕ್ಕೇ ಉಪಕಾರ ಮಾಡಿದರು.

ಜಾನ್ ಆಗಸ್ಟಸ್‌ನು ಅನುಭವದ ಬಲದಿಂದ, ವಿಚಾರಣೆಯಿಲ್ಲದೆ ಬಂಧನದಲ್ಲಿದ್ದ ಕೈದಿಗಳಿಗೂ ಜಾಮೀನಾಗಿ ಬಿಡಿಸಲು ಮುಂದಾದನು. ಇಷ್ಟೇ ಅಲ್ಲದೆ ಅವರ ಮೇಲ್ವಿಚಾರಣೆ, ಸುಧಾರಣೆ ಹಾಗು ಮಾರ್ಗದರ್ಶನಗಳನ್ನು ಮಾಡುವ ಹೊಣೆಯನ್ನೂ ಹೊತ್ತನು. ಹೀಗೆ ಅವನು ಕುಡುಕರಿಂದ ಪ್ರಾರಂಭಮಾಡಿ, ಅನೇಕ ಬಗೆಯ ಅಪರಾಧಗೈದು ಬಂಧನಪಲ್ಲಿದ್ದ ಮಹಿಳೆಯರ, ಮಕ್ಕಳ ಹಾಗು ಪುರುಷರ ಚಿಕಿತ್ಸೆಯ ಭಾರವನ್ನೂ ಹೊತ್ತನು. ಅವನು ಪೋಲೀಸ ನ್ಯಾಯಾಲಯದಿಂದ ನಗರಾಡಳಿತ ನ್ಯಾಯಾಲಯದವರೆಗೂ ಈ ಕಾರ್ಯಕ್ಷೇತ್ರವನ್ನು ವಿಸ್ತರಿಸಿದನು. ಇವನು ಯಾವದೇ ತರಬೇತಿ ಮತ್ತು ಶಾಸ್ತ್ರೀಯ ಜ್ಞಾನವಿಲ್ಲದಿದ್ದಾಗ್ಯೂ, ಇಂಥ ಅಮೂಲ್ಯವಾದ ಸುಧಾರಣಾ ಚಿಕಿತ್ಸೆಯನ್ನು ಜಗತ್ತಿಗೆ ಕಾಣಿಕೆಯಾಗಿ ಕೊಟ್ಟ ಮಹಾಪುರುಷನು. ಇವನು ೧೮೫೯ ರಲ್ಲಿ ಮರಣಹೊಂದಿದನು. ಇವನಿಂದ ಒಟ್ಟು ಎರಡುಸಾವಿರ ಜನರು ಈ ಚಿಕಿತ್ಸೆಯ ಪ್ರಯೋಜನ ಪಡೆದಿದ್ದಾರೆ. ಇವರಲ್ಲಿ ಯಾರೂ ಮುಂದೆ ಅಪರಾಧದ ದಾರಿಯನ್ನು ಹಿಡಿಯಲಿಲ್ಲವೆಂದರೆ ಈ ಚಿಕಿತ್ಸೆಯ ಪ್ರಭಾವವೆಷ್ಟೆಂಬುದನ್ನು ಕಾಣಬಹುದು. ಸುಧಾರಣಾ ಕಾರ್ಯಕರ್ತನು ಅಪರಾಧಿಗಳಿಗೆ ಮಾನವೀಯ ದಯೆ, ತಿಳುವಳಿಕೆ ಮತ್ತು ಮಾರ್ಗದರ್ಶನಗಳನ್ನು ಕೊಟ್ಟರೆ ಸಾಕು; ಅವರು ಮತ್ತೇನನ್ನು ಬೇಡಲಾರರು.

ಹೀಗೆಯೇ ಇದು ಮುಂದೆ ಸುಧಾರಣೆಗೆ ದಾರಿಮಾಡಿತು. ಈ ಪದ್ಧತಿಯು ನಿಧಾನವಾಗಿ ಅಮೇರಿಕ. ಇಂಗ್ಲಂಡ ಮತ್ತಿತರೆಡೆಗಳಲ್ಲಿ ಶಿಕ್ಷಾಕಾಯ್ದೆ (Penal laws) ಗಳಲ್ಲಿ ಆಡಳಿತದ ಮನ್ನಣೆ ಪಡೆಯಿತು. ಪ್ರೊಬೇಶಸ್ ಅಧಿಕಾರಿಯು ನ್ಯಾಯಾಲಯಕ್ಕೆ ಸಂಬಂಧಿಸಿದ ಒಬ್ಬ ಅಧಿಕಾರಿಯಾದನು. ಹೀಗೆ ಪ್ರಪಂಚದ ಎಲ್ಲೆಡೆಯಲ್ಲೂ ಪ್ರೊಬೇಶನ್ ಅಧಿಕಾರಿಯು ನ್ಯಾಯಾಲಯಕ್ಕೆ ಸಂಬಂಧಿಸಿದ ಒಬ್ಬ ಅಧಿಕಾರಿಯಾದನು. ಪ್ರಪಂಚದ ಎಲ್ಲೆಡೆಯಲ್ಲೂ ಪ್ರೊಬೇಶನ್ ಉಪಚಾರದ ಅವಕಾಶವಾದಂತಾಯಿತು. ಮುಂದೆ ಪ್ರೊಬೇಶನ್ ಪದ್ಧತಿಯು ಸಂಸ್ಥೇತರ ಉಪಚಾರದಲ್ಲಿ ಒಂದು ಪ್ರಾಥಮಿಕ ಕಾರ್ಯಕ್ರಮವಾಯಿತು.

ಭಾರತದಲ್ಲಿ ಇದರ ಹುಟ್ಟು ಹಾಗೂ ಆಗುಹೋಗು :

ಭಾರತದಲ್ಲಿ ಸುಮಾರು ೭೫ ವರ್ಷಗಳ ಹಿಂದೆಯೇ ಪ್ರೊಬೇಶನ್ ಉಪಚಾರವು ಅಪರಾಧಿಗಳಿಗೆ ನೀಡುವ ಒಂದು ಸಂಸ್ಥೇತರ ಉಪಚಾರವೆಂದು ತಿಳಿಯಲ್ಪಟ್ಟಿತು. ಆದರೆ ಅದನ್ನು ಅಪರಾಧಿಯ ಸಮಸ್ಯೆ ಮತ್ತು ಅವನ ಪುನರ್ನಿವೇಶನ ಸಮಸ್ಯೆಗಳನ್ನು ನಿವಾರಿಸುವ ಪರಿಣಾಮಕಾರಿ ಹಾಗು ಶಕ್ತಿಶಾಲಿಯಾದ ಒಂದು ಸಾಧನವೆಂದು ಇತ್ತಿತ್ತಲಾಗಿ ಗುರುತಿಸಲಾಗಿದೆ. ಈಗ ಎರಡು ದಶಕಗಳಲ್ಲಿ, ಇದು ದೇಶದ ಎಲ್ಲೆಡೆಗಳಲ್ಲೂ ಮಹತ್ವಗಳಿಸಿದೆ.

ಎರಡು ವರ್ಷಗಳ ಶಿಕ್ಷೆಗೆ ಅರ್ಹವಾಗುವ ಯಾವುದೇ ಅಪರಾಧವನ್ನು ಯಾರಾದರೂ ಪ್ರಥಮಬಾರಿಗೆ ಮಾಡಿದರೆ ಅಂಥ ಅಪರಾಧಿಗಳ ವಯಸ್ಸು, ನಡತೆ, ಹಿಂದಿನ ಚರಿತ್ರೆ, ಅಪರಾಧದ ಸ್ವರೂಪ, ಭೌತಿಕ ಇಲ್ಲವೆ ಮಾನಸಿಕ ಸ್ಥಿತಿ ಅಥವಾ ಇನ್ನಾವುದೇ ಇಂಥ ಪರಿಸ್ಥಿತಿಗಳನ್ನು ಗಮನಿಸಿ ನ್ಯಾಯಾಲಯಗಳು ಅವರಿಗೆ ಮುನ್ನೆಚ್ಚರಿಕೆ ಕೊಟ್ಟು ಬಿಡುಗಡೆಮಾಡಲು ಭಾರತದ ಅಪರಾಧಿಕಾಯ್ದೆಯ ಕೆಲಭಾಗಗಳಲ್ಲಿ ಸದವಕಾಶವಿದ್ದುದು ಕಂಡುಬರುತ್ತದೆ. ಪುರುಷನು ಇಪ್ಪತ್ತೊಂದು ವರ್ಷದೊಳಗಿನವನಿದ್ದು, ಸ್ತ್ರೀಯು ಯಾವುದೇ ವಯಸ್ಸಿನವಳಿದ್ದು, ಮರಣದಂಡನೆ ಅಥವಾ ಜೀವಾವಧಿ ಗಡಿಪಾರು ಶಿಕ್ಷೆಗೆ ಗುರಿಯಾಗದ ಯಾವುದೇ ಅಪರಾಧವನ್ನು ಪ್ರಥಮಬಾರಿಗೆ ಮಾಡಿದ್ದರೆ ನ್ಯಾಯಾಲಯಗಳು ಕಟ್ಟು-ಕರಾರುಗಳನ್ನು ವಿಧಿಸಿ ಅವರನ್ನು ಬಿಡುಗಡೆಮಾಡಬಹುದು. ಹೀಗೆ ಬಿಡುಗಡೆಯಾಗುವಾಗ ನ್ಯಾಯಾಲಯದ ಆಜ್ಞೆಯ ಮೇರೆಗೆ, ಜಾಮೀನು ಕೊಡಲಿ ಇಲ್ಲವೆ ಕೊಡದಿರಲಿ ಅವರು ಕೆಲವೊಂದು ಕಟ್ಟು-ಕರಾರುಗಳಿಗೆ ಒಪ್ಪಿ ಅವುಗಳಂತೆ ನಡೆಯಲು ಸಿದ್ಧರಿರಬೇಕು. ಮತ್ತು ಅವರು ಮೂರುವರ್ಷದ ಅವಧಿಯಲ್ಲಿ ನ್ಯಾಯಾಲಯಕ್ಕೆ ಆಗಾಗ್ಗೆ ತಪ್ಪದೇ ಬರಬೇಕಲ್ಲದೆ, ಶಿಕ್ಷೆವಿಧಿಸಬೇಕೆಂದು ನ್ಯಾಯಾಲಯವು ಕರೆದಾಗಲೂ ಬರಬೇಕು. ಅದೇ ವೇಳೆಗೆ ಅವರು ಶಾಂತಿಯಿಂದಿರಬೇಕಲ್ಲದೆ ಒಳ್ಳೆಯ ನಡತೆಯವರೂ ಆಗಬೇಕು, ಎಂದು ಮುಂತಾಗಿ ಕಟ್ಟುಕರಾರುಗಳನ್ನು ಹಾಕಿ ಅಪರಾಧಿಗಳನ್ನು ಬಿಡುಗಡೆಮಾಡುವ ಸದವಕಾಶವನ್ನು ಕಾಯ್ದೆಯು ಒದಗಿಸಿದ್ದರೂ ನ್ಯಾಯಾಲಯಗಳು ಅಪರಾಧಿಗಳಿಗೆ ಈ ಸೌಕರ್ಯಗಳನ್ನು ಅತಿ ಕ್ವಚಿತ್ತಾಗಿ ಒದಗಿಸುತ್ತಿದ್ದವು. ಮುಂದೆ 1923 ರಲ್ಲಿ ಅಪರಾಧಿ ಕಾಯ್ದೆಯ (Cr. P. C.) 582 ನೆಯ ಭಾಗದ ತಿದ್ದುಪಡಿಯನ್ನು ಮಾಡಲಾಯಿತು. ಇದರಿಂದಾಗಿ ಕೆಲವು ಕಟ್ಟು-ಕರಾರುಗಳ ಮೇಲೆ ಅಪರಾಧಿಗಳ ಬಿಡುಗಡೆ ಮಾಡಲು, ಅವರಿಗೆ ಕೊಡಬೇಕಾದ ಶಿಕ್ಷೆಯನ್ನು ಕೊಡದಿರಲು ಅಥವಾ ಮುಂದೆ ಮಾಡಲು, ನ್ಯಾಯಾಲಯಗಳಿಗೆ ಅಧಿಕಾರವನ್ನು ಕೊಟ್ಟಂತಾಯಿತು. ಅನಂತರ ಈ ಶತಮಾನದ ಮೂರನೆಯ ದಶಕದ ಕೊನೆಯಲ್ಲಿ (.930 ರ ದಶಕದ ಕೊನೆಗೆ) ಉತ್ತರಪ್ರದೇಶ, ಮುಂಬಯಿ, ಮದ್ರಾಸ, ಪಶ್ಚಿಮ ಬಂಗಾಲ, ಬಿಹಾರ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಆಯಾ ರಾಜ್ಯದ ಅಪರಾಧಿ

ಗಳ ಪ್ರೊಬೇಶನ್ ಕಾಯ್ದೆ (State probation of offenders Act) ಗಳು ರೂಪಿತವಾದುವು.

ಸ್ವಾತಂತ್ರ್ಯಾನಂತರ ಭಾರತದ ಸೆರೆಮನೆ ಆಡಳಿತವನ್ನು ಅಭ್ಯಸಿಸಿ, ಪರಿಶೀಲಿಸಿ, ಸಲಹೆ–ಸೂಚನೆಗಳನ್ನು ಕೊಡಲು ಭಾರತ ಸರಕಾರವು ಪ್ರಸಿದ್ಧ ಅಪರಾಧ ಶಾಸ್ತ್ರಜ್ಞ ರಲ್ಲೊಬ್ಬರಾದ ಡಾ. ಡಬ್ಲ್ಯು. ಸಿ. ರೆಕ್ಲೆಸ್ (Dr. W. C. Recless)ರನ್ನು ಬರಮಾಡಿ ಕೊಂಡಿತು. ಅವರು ೧೯೫೨ರ ಸುಮಾರಿಗೆ ತಮ್ಮ ವರದಿಯನ್ನು ಒಪ್ಪಿಸಿದರು. ಈ ವರದಿಯ ಶಿಫಾರಸುಗಳೇನಂದರೆ: ಭಾರತದಲ್ಲೂ ಸೆರೆಮನೆ ಶಿಕ್ಷೆಯ ಬದಲು ಪ್ರೊಬೇಶನ್ ಉಪಚಾರವನ್ನು ಉಪಯೋಗಿಸಲಿಕ್ಕೆ ಯಾವ ಅಡ್ಡಿಯೂ ಇಲ್ಲ; ಬಾಲ, ತರುಣ ಹಾಗು ಪ್ರೌಢ ಅಪರಾಧಿಗಳ ಸುಧಾರಣೆಯನ್ನು ಮಾಡಲಿಕ್ಕೆ ಅತ್ಯಂತ ತೃಪ್ತಿಕರ, ಶಕ್ತಿಶಾಲಿ ಹಾಗು ಮಿತವ್ಯಯವಾದ ಸಾಧನವಾಗಲು ಇಲ್ಲಿಯೂ ಸಾಕಷ್ಟು ಆಧಾರ ಗಳಿವೆ. ಇದು ಪ್ರಥಮಬಾರಿಗೆ ಅಪರಾಧಮಾಡುವವರಿಗಷ್ಟೇ ಮೀಸಲಾಗಿರಬೇಕೆಂದೇ ನಲ್ಲ. ಯೋಗ್ಯಕಂಡ ಹಾಗು ಇದರ ಲಾಭ ಪಡೆಯಬಹುದಾದ ಯಾವುದೇ ಅಪರಾಧಿಗೂ ಇದನ್ನು ಒದಗಿಸಬಹುದು.

ಭಾರತದ ಪಾರ್ಲಿಮೆಂಟ್ ಸಭೆಯು ಪಾಸುಮಾಡಿದ ಅಪರಾಧಿಗಳ ಪ್ರೊಬೇಶನ್ ಕಾಯ್ದೆ 1958 (Probation of offenders Act 1958) ಒಂದು ಸವಿಸ್ತಾರ ವಾದ ಅಪರಾಧ ನಿವಾರಣೋಪಾಯವಾಗಿದೆ. ಈಗ ಈ ಕಾಯ್ದೆಯು ಆಸಾಮ, ಆಂಧ್ರಪ್ರದೇಶ, ಕರ್ನಾಟಕ, ಓರಿಸಾ, ಹರಿಯಾನಾ, ಕೇರಳ, ಮಧ್ಯಪ್ರದೇಶ, ಮತ್ತು ರಾಜಸ್ತಾನ ರಾಜ್ಯಗಳಲ್ಲಿ, ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ದಿಲ್ಲಿ. ಹಿಮಾಚಲ ಪ್ರದೇಶ, ತ್ರಿಪುರ, ಮಣಿಪುರ ಮತ್ತು ಗೋವಾಗಳಲ್ಲಿ ಜಾರಿಯಲ್ಲಿದೆ. ರಾಜ್ಯ ಕಾಯ್ದೆಯು ಜಾರಿಯಲ್ಲಿರುವ ರಾಜ್ಯಗಳಾದ ಗುಜರಾತ, ಮಹಾರಾಷ್ಟ್ರ, ತಮಿಳ್ನಾಡು ಮತ್ತು ಪಶ್ಚಿಮ ಬಂಗಾಲಗಳು ಕೇಂದ್ರ ಕಾಯ್ದೆಯನ್ನು ಹಂತಹಂತವಾಗಿ ಜಾರಿಗೆ ತರಲು ಆರಂಭಿಸಿವೆ.

ನಮ್ಮ ದೇಶದಲ್ಲಿ ೧೯೬೮ರ ಸುಮಾರಿಗೆ ೩೭೯ ಸರಕಾರಿ ಪ್ರೊಬೇಶನ್ ಅಧಿಕಾರಿ ಗಳೂ, ೧೧೧ ಸ್ವಯಂಸೇವಕ ಪ್ರೊಬೇಶನ್ ಅಧಿಕಾರಿಗಳೂ ದೇಶದ ೨೧೬ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿದ್ದರು. ಆದರೆ ಇಲ್ಲಿ ಸ್ವಯಂಸೇವಕ ಪ್ರೊಬೇಶನ್‌ಅಧಿಕಾರಿಗಳಿಗೆ ಯಾವ ತರಬೇತಿಯೂ ಇಲ್ಲ. ದೇಶದ ವಿವಿಧ ರಾಜ್ಯಗಳಲ್ಲಿ ಹಾಗು ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು ೫೧೦೧೦ ಅಪರಾಧಿಗಳ ಸಾಮಾಜಿಕ ತನಿಖೆಯನ್ನು ನಡೆಸಲಾ ಗಿದೆ. ಹಾಗು ೧೩೭೮೨ ಅಪರಾಧಿಗಳನ್ನು ಪ್ರೊಬೇಶನ್ ಮೇಲ್ವಿಚಾರಣೆಯ ಮೇಲೆ ಬಿಡುಗಡೆ ಮಾಡಲಾಗಿದೆ. ಕರ್ನಾಟಕ ರಾಜ್ಯದ ೧೩ ಜಿಲ್ಲೆಗಳಲ್ಲಿ ೧೯೬೮ ರ ಸುಮಾರಿಗೆ ೨೧ ಪ್ರೊಬೇಶನ್ ಅಧಿಕಾರಿಗಳಿದ್ದರು. ಆದರೆ ಇಲ್ಲಿ ಒಬ್ಬ ಸ್ವಯಂಸೇವಕ

ಪ್ರೊಬೇಶನ್‌ಅಧಿಕಾರಿಯೂ ಮುಂದೆ ಬರದಿರುವುದು ಖೇದದ ಸಂಗತಿ. ಪ್ರೊಬೇಶನ್ ಅಧಿಕಾರಿಗಳು ಆ ವರ್ಷದಲ್ಲಿ (೧೯೬೮ರಲ್ಲಿ) ೧೭೭೯ ಅಪರಾಧಿಗಳ ಸಾಮಾಜಿಕ ತನಿಖೆ ಮಾಡಿದ್ದಾರೆ. ಹಾಗು ೨೬೮ ಅರ್ಥಿಗಳನ್ನು ಪ್ರೊಬೇಶನ್ ಮೇಲ್ವಿಚಾರಣೆಯ ಮೇಲೆ ಬಿಡುಗಡೆ ಮಾಡಲಾಗಿದೆ. ಮಧ್ಯಪ್ರದೇಶದಲ್ಲಿ ಎಲ್ಲ ೯೧ ಅಧಿಕಾರಿಗಳೂ ಸ್ವಯಂ ಸೇವಕ ಅಧಿಕಾರಿಗಳಾಗಿದ್ದಾರೆ. ಆದರೆ ಜಪಾನದಂಥ ಮುಂದುವರಿದ ಚಿಕ್ಕ ರಾಷ್ಟ್ರಗಳಲ್ಲೂ ಸಾವಿರಾರು ಜನ ಸ್ವಯಂಸೇವಕ ಪ್ರೊಬೇಶನ್ ಅಧಿಕಾರಿಗಳಿರುವುದನ್ನು ನೋಡಿದರೆ ನಮ್ಮಲ್ಲಿಯ ಸಂಖ್ಯೆ ತೀರ ಕಡಿಮೆ.

ಭಾರತದಲ್ಲಿ ಇದರ ಇತಿ-ಮಿತಿ :

ಪ್ರೊಬೇಶನ್ ಕಾರ್ಯಕ್ರಮವನ್ನು ಭಾರತದಲ್ಲಿ ಯಶಸ್ವಿಯಾಗಿ ಕಾರ್ಯಾಚರಣೆಗೆ ತರಬೇಕಾದರೆ ಅನೇಕ ಕುಂದು ಕೊರತೆಗಳಿವೆ. ಅಂದರೆ ಪ್ರೊಬೇಶನ್ ಮೇಲ್ವಿಚಾರಣೆಯ ಮೇಲೆ ಬಿಡುಗಡೆಯಾಗುವ ಅರ್ಥಿಗಳ ಸಂಖ್ಯೆಯೇ ಅತಿ ಕಡಿಮೆ: ಹಾಗೆ ನೋಡಿದರೆ ಇದರ ಲಾಭ ಪಡೆಯಬಹುದಾದ ಕೈದಿಗಳು ಸಾಕಷ್ಟಿದ್ದಾರೆ. ಅನೇಕಾನೇಕ ಅಪರಾಧಿಗಳು ಒಂದೆರಡು ದಿನ ಹಾಗು ಒಂದೆರಡು ವಾರಗಳ ಶಿಕ್ಷೆ ಪಡೆದು ಸೆರೆಮನೆಗೆ ಹೋಗುತ್ತಿದ್ದಾರೆ ಒಟ್ಟು ಸೆರೆಯಾಳುಗಳ ಪ್ರತಿಶತ ೮೫ರಷ್ಟು ಅಪರಾಧಿಗಳು ಬರಿ ಆರು ತಿಂಗಳಿಗಿಂತ ಕಡಿಮೆ ಅವಧಿಯ ಶಿಕ್ಷೆಯನ್ನು ಪಡೆದವರಾಗಿದ್ದಾರೆ. ಅಲ್ಲದೆ ಪ್ರತಿಶತ ೨೦ ಬಾಲಾಪರಾಧಿಗಳಿದ್ದಾರೆ. ಇದನ್ನು ನೋಡಿದರೆ, ಪ್ರೊಬೇಶನ್ ಕ್ಷೇತ್ರದಲ್ಲಿ ಕೆಲಸ ಮಾಡಲು ಹೆಚ್ಚಿನ ಅವಕಾಶವಿದೆ ಎಂದಂತಾಯಿತು. ಇದರ ಪ್ರಯೋಜನ ಸರಿಯಾಗಿ ಆದರೆ ರಾಷ್ಟ್ರಕ್ಕೆ ಪ್ರತಿವರ್ಷ ೧॥ ಲಕ್ಷ ರೂಪಾಯಿಗಳ ಉಳಿತಾಯವಾಗುವದಂ ಸಾಧ್ಯ. ಸಾವಧಾನವಾಗಿಯಾದರೂ ಪ್ರಗತಿಯಾಗುತ್ತಿರುವುದಕ್ಕೆ ಆಧಾರಗಳಿವೆ ಅಂದರೆ ೧೯೬೫ರಲ್ಲಿ ೭೯೨೪ ಅಪರಾಧಿಗಳನ್ನು. ಪ್ರೊಬೇಶನ್ ಮೇಲೆ ಬಿಡುಗಡೆ ಮಾಡಲಾಗಿತ್ತು. ಆದರೆ ೧೯೬೬ರಲ್ಲಿ ಅರ್ಥಿಗಳ ಸಂಖ್ಯೆ ೮೦೪೪ಕ್ಕೆ ಏರಿತು. ಅಲ್ಲದೆ ೧೯೬೫ರಲ್ಲಿ ೩. ೬೭. ೯೯೫ ಅಪರಾಧಿಗಳು ಸೆರೆಮನೆಗೆ ಹೋದರೆ ೧೯೬೬ರಲ್ಲಿ. ೩, ೭೪, ೮೬೨ ಅಪರಾಧಿಗಳು ಸೆರೆಮನೆಗೆ ಹೋಗಿದ್ದರು. ಇದರಿಂದ ಪ್ರೊಬೇಶನ್ ಸೇವೆಯು ಮುನ್ನಡೆ, ಸಾವಧಾನವಾಗಿ ನಡೆದಿದೆ ಎಂದು ಕಂಡಂತಾಯಿತು. ಈ ದಿಶೆಯಲ್ಲಿ ತಮಿಳ್ನಾಡು, ಉತ್ತರಪ್ರದೇಶ, ಕೇರಳ ಮತ್ತು ಪಂಜಾಬ ರಾಜ್ಯಗಳು ಉಳಿದ ರಾಜ್ಯಗಳಿಗಿಂತ ಹೆಚ್ಚಿನ ಕಾರ್ಯ ಮಾಡುತ್ತಿವೆ. ಆದರೂ ಇದು ಹೇಳಿಕೊಳ್ಳುವಂಥ ಪ್ರಗತಿ ಏನಲ್ಲ.

ಈ ಉಪಚಾರವು ಅಷ್ಟೊಂದು ಪ್ರಗತಿಯನ್ನು ಪಡೆಯದಿರುವದಕ್ಕೆ ಕಾರಣಗಳೂ ಇಲ್ಲದಿಲ್ಲ. ನಮ್ಮ ದೇಶದಲ್ಲಿ ಈ ಕ್ಷೇತ್ರದಲ್ಲಿ ಸೇವೆ ಮಾಡಲು ಬೇಕಾಗುವಷ್ಟು ಪ್ರೊಬೇಶನ್ ಅಧಿಕಾರಿಗಳಿಲ್ಲ. ಇದ್ದವರಿಗೆ ಸಾಕಷ್ಟು ಸಂಬಳ-ಸಾರಿಗೆ ಮತ್ತು ಸರಿಯಾದ ಸ್ಥಾನಮಾನಗಳಿಲ್ಲ. ಮೇಲಾಗಿ ಇವರಲ್ಲಿ ಹೆಚ್ಚಿನ ಅಧಿಕಾರಿಗಳು ಸಮಾಜಕಾರ್ಯ

ಅಥವಾ ಸುಧಾರಣಾ ಕಾರ್ಯ (Correctional work) ದಲ್ಲಿ ಶಿಕ್ಷಣ ಮತ್ತು ತರಬೇತಿಯನ್ನು ಪಡೆದಿಲ್ಲ. ಅಲ್ಲದೆ ರಾಜ್ಯಸರಕಾರಗಳು ಈ ಕಾರ್ಯಕ್ಕೆ ಅಷ್ಟೊಂದು ಪ್ರಾಶಸ್ತ್ಯವನ್ನು ಕೊಟ್ಟಿಲ್ಲ. ಸರಕಾರವು ಇದಕ್ಕೆ ಹೆಚ್ಚು ಹಣ ಖರ್ಚುಮಾಡಲೂ ಮುಂದಾಗಿಲ್ಲ. ಅಲ್ಲದೆ ನ್ಯಾಯಾಲಯ, ಪೋಲೀಸ ಶಾಖೆಗಳು ಇನ್ನಿತರ ಸಂಬಂಧಪಟ್ಟ ಸಂಘ-ಸಂಸ್ಥೆಗಳು ಇದರ ಬಗ್ಗೆ ಸಾಕಷ್ಟು ಆಸ್ಥೆವಹಿಸಿಲ್ಲ.

ಸಂಬಂಧಪಟ್ಟ ಅಧಿಕಾರಿಗಳು ಹಾಗು ಸಂಘ-ಸಂಸ್ಥೆಗಳು ಈ ದಿಶೆಯಲ್ಲಿ ಮಾಡಬೇಕಾದ ಕಾರ್ಯ :

ಪ್ರೊಬೇಶನ್ ಅಧಿಕಾರಿ :

ಇವರು ಅಭಿರುಚಿಯುಳ್ಳ, ಶಿಕ್ಷಣ, ವೃತ್ತಿಶಿಕ್ಷಣವನ್ನು ಪಡೆದ, ಉತ್ಸಾಹೀ ಕಾರ್ಯಕರ್ತರಾಗಿರಬೇಕು. ಇವರು ಸಮಾಜಕಾರ್ಯದ ವಿಧಾನಗಳಿಂದ ವ್ಯಕ್ತಿಗತ ಕಾರ್ಯ, ಸಮುದಾಯ ಸಂಘಟನೆ, ಸಮಾಜಕಲ್ಯಾಣ ಆಡಳಿತ ಮತ್ತು ಸುಧಾರಣಾ (Correctional Administration) ಗಳಲ್ಲಿ ತರಬೇತಿಪಡೆದವರಾಗಿರಬೇಕು. ಮಾನವನ ಹುಟ್ಟು ಹಾಗು ಬೆಳವಣಿಗೆ ಮತ್ತು ಸಾಮಾಜಿಕ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಿರಬೇಕು. ಸಮಾಜ ಕಾರ್ಯದಲ್ಲಿ ಒಂದು ವಿಶೇಷ ಕ್ಷೇತ್ರವಾದ ಸುಧಾರಣಾ ಕಾರ್ಯದಲ್ಲಿ ತರಬೇತಿಪಡೆದರೆ ಇನ್ನೂ ಒಳ್ಳೆಯದು. ಹೀಗೆ ಶಿಕ್ಷಣ ಮತ್ತು ತರಬೇತಿ ಪಡೆದು, ಶ್ರದ್ಧೆ ಹಾಗು ಅರ್ಪಣ ಭಾವದಿಂದ ದುಡಿಯಬೇಕು. ಅವರು ಸರಿಯಾದ ಸಾಮಾಜಿಕ ತನಿಖೆ ನಡೆಸಿ, ಅಪರಾಧಿಗಳ ಬಿಡುಗಡೆಯ ಸಲುವಾಗಿ ತನ್ನ ಶಿಫಾರಸುಗಳನ್ನೊಳಗೊಂಡ ವರದಿಯನ್ನು ನ್ಯಾಯಾಲಯಗಳಿಗೆ ಅರ್ಪಿಸಬೇಕು. ನ್ಯಾಯಾಲಯವು ವಿಧಿಸಿದ ಅವಧಿಯಲ್ಲಿ ಅಧಿಕಾರಿಯು ಬಿಡುಗಡೆಯಾದ ಅರ್ಥಿಗಳ ಗೆಳೆಯನಾಗಿ, ಮಾರ್ಗದರ್ಶನಮಾಡಿ ಪುನರ್ಶಿಕ್ಷಣ ಕೊಟ್ಟು, ಅವರ ಪುನರ್ನಿವೇಶನಕ್ಕೆ ನೆರವಾಗಬೇಕು. ಅಧಿಕಾರಿಯು ಮೇಲ್ವಿಚಾರಣೆ ಮಾಡುವಾಗ ಅರ್ಥಿಯಿಂದ ಹಿಡಿದು ಅವನ ಕುಟುಂಬ, ಸ್ನೇಹಿತರು, ಸಹೋದ್ಯೋಗಿಗಳು, ಸಂಬಂಧಿಕರು ಶಾಲಾಮಾಸ್ತರರು, ಅವನ ಮೇಲಧಿಕಾರಿಗಳು, ನೆರೆಹೊರೆಯರು ಅಲ್ಲದೆ ಇಡೀ ಸಮುದಾಯದೊಡನೆ ಅವನು ಮಧುರ ಸಂಬಂಧವನ್ನು ಬೆಳೆಸುವಂತೆ, ಹೊಂದಿಕೊಂಡು ಬಾಳುವಂತೆ ಮಾಡಬೇಕು. ಇಲ್ಲಿ ಕಾರ್ಯಕರ್ತನು (ಅಧಿಕಾರಿಯು) ತಾನು ಕಲಿತ ಸಮಾಜಕಾರ್ಯ ಸಾಧನಗಳ ನೆರವು ಪಡೆಯುವನು. ಇದಲ್ಲದೆ ಸಮುದಾಯದಲ್ಲಿರುವ ಸಂಘ-ಸಂಸ್ಥೆಗಳ ನೆರವನ್ನೂ ಪಡೆಯುವನು. ಉದಾ : ಮಾನಸಿಕ ತೊಂದರೆಗಳಿಗೀಡಾದ ಮತ್ತು ಶಾಲೆಯಲ್ಲಿ ಪ್ರಗತಿ ತೋರಿಸದ ಮಕ್ಕಳಿಗೆ, ಮಕ್ಕಳ ಮಾರ್ಗದರ್ಶನ ಕೇಂದ್ರಗಳ ನೆರವು ಅವಶ್ಯ. ಅಧಿಕಾರಿಯು ಮಕ್ಕಳ ಮಾರ್ಗದರ್ಶನಕೇಂದ್ರದೊಡನೆ ಸರಿಯಾದ ತಿಳುವಳಿಕೆಯ ಸಂಬಂಧಗಳನ್ನು ಇಟ್ಟುಕೊಂಡರೆ ಅರ್ಥಿಗಳ ಚಿಕಿತ್ಸೆ ಸುಲಭವಾಗುವುದು. ಇನ್ನು

ಕೆಲವರಿಗೆ ಉದ್ಯೋಗ ದೊರಕಿಸಿಕೊಡಬೇಕಾಗುವುದು. ಆಗ ಅಧಿಕಾರಿಯು ಉದ್ಯೋಗ ವಿನಿಮಯ ಕಚೇರಿ ಮತ್ತು ಕೆಲಸವನ್ನು ಕೊಡುವ ಅನೇಕ ಸಂಘ–ಸಂಸ್ಥೆಗಳ ನೆರವನ್ನು ಪಡೆಯಲಿಕ್ಕೆ ಅರ್ಥಿಗೆ ಮಾರ್ಗದರ್ಶನ ಮಾಡುವನು. ಇಲ್ಲಿ ಅಧಿಕಾರಿಯು ಯಾವುದನ್ನೂ ನೇರವಾಗಿ ಅರ್ಥಿಗೆ ನೀಡುವುದಿಲ್ಲ. ತನ್ನಷ್ಟಕ್ಕೆ ತಾನೇ ಅರ್ಥಿಯು ಮುನ್ನಡೆದು ಇಂಥ ಅವಕಾಶಗಳನ್ನು ಪಡೆಯಲು ದಾರಿ ತೋರುತ್ತಾನೆ. ಆದರೆ ಅಧಿಕಾರಿಯು, ಅಭ್ಯರ್ಥಿಗಳ ಹಾಗು ಸಮುದಾಯದಲ್ಲಿರುವ ಸಂಪನ್ಮೂಲಗಳಿಗೆ ಸಂಬಂಧಪಟ್ಟ ಅಧಿಕಾರಿಗಳ ಪರಿಪೂರ್ಣ ಜ್ಞಾನವನ್ನು ಹೊಂದಿರುತ್ತಾನೆ. ಒಳ್ಳೆಯ ಮನರಂಜನೆಯು ಮತ್ತು ಮನಪರಿವರ್ತನೆಯಾಗುವ ರೀತಿಯನ್ನು ತೋರಿಸುತ್ತಾನೆ. ಈ ಎಲ್ಲವುಗಳ ಪರಿಣಾಮದಿಂದ ಅರ್ಥಿಯು ನಿಯಮ, ನಿರ್ಬಂಧನೆಗಳನ್ನು ಪರಿಪಾಲಿಸುವ ನಾಗರಿಕನಾಗಲಾರನೇ ?

ಒಂದು ವೇಳೆ ಅರ್ಥಿಗಳು ಸರಿಯಾದ ಪ್ರಗತಿಯನ್ನು ತೋರಿಸದಿದ್ದಲ್ಲಿ, ಅಧಿಕಾರಿಯು ಅವರ ಬಗ್ಗೆ ನ್ಯಾಯಾಲಯಗಳಿಗೆ ವರದಿ ಒಪ್ಪಿಸುತ್ತಾನೆ. ಆಗ ಅರ್ಥಿಗಳು ಬೇರಾವ ವಿಚಾರಣೆ ಇಲ್ಲದೆ ನೇರವಾಗಿ ಸೆರೆಮನೆಗೆ ಹೋಗಬೇಕಾಗುತ್ತದೆ. ನ್ಯಾಯಾಲಯವು ಅನೇಕ ಸಲ ಈ ಉಪಚಾರದ ಗೋಜಿಗೆ ಹೋಗದೆ, ಅನೇಕರನ್ನು ನೇರವಾಗಿ ಸೆರೆಮನೆಗೆ ಕಳಿಸಿಬಿಡುತ್ತದೆ. ಏಕೆಂದರೆ ಅಪರಾಧಿಗಳ ಪ್ರೊಬೇಶನ್ ಕಾಯ್ದೆ ೧೯೫೮ ರ ೩ ಮತ್ತು ೪ನೇ ಭಾಗದಲ್ಲಿ ಹೇಳಿರುವಂತೆ ನ್ಯಾಯಾಲಯವು, ಪ್ರೊಬೇಶನ್ ಅಧಿಕಾರಿಯ ವರದಿಯನ್ನು ಕೇಳಬಹುದು. ಇಲ್ಲವೇ ಕೇಳದೆಯೆ ಶಿಕ್ಷೆಯನ್ನು ವಿಧಿಸಬಹುದು. ಕಾರಣ ನ್ಯಾಯಾಧೀಶರು ಪ್ರೊಬೇಶನ್‌ಉಪಚಾರದ ಬಗ್ಗೆ ವಿಚಾರಮಾಡುವ ಗೋಜಿಗೆ ಹೋಗದಿರಬಹುದು. ಈ ಪ್ರಸಂಗಗಳಲ್ಲಿ ಅಧಿಕಾರಿಯು ಮುಂದಾಗಿ ನ್ಯಾಯಾಧೀಶರಿಗೆ ಮನಗಾಣಿಸಬೇಕು; ಅಪರಾಧಿಗಳಿಗೆ ಇದರ ಪ್ರಯೋಜನವಾಗುವಂತೆ ಮಾಡಬೇಕು. ಅಂದರೆ ಇಪ್ಪತ್ತೊಂದು ವರ್ಷದೊಳಗಿನ ಯಾವುದೇ ಅಪರಾಧಿಯನ್ನು ಮತ್ತು ಯೋಗ್ಯ ಕಂಡ ಪ್ರೌಢಅಪರಾಧಿಯನ್ನು ಪ್ರೊಬೇಶನ್‌ಮೇಲೆ ಬಿಡುವಂತೆ ಮಾಡಲು ಅಧಿಕಾರಿಯು ನ್ಯಾಯಾಲಯಕ್ಕೆ ಅರ್ಜಿ ಮಾಡಿ, ಅಂಥ ಅಪರಾಧಿಗಳ ಬಗ್ಗೆ ಪುನರಾವಲೋಕಿಸಲು ತಿಳಿಸಬೇಕು. ಹೀಗಾದಾಗ ಈ ಉಪಚಾರದ ಪ್ರಯೋಜನ ಯೋಗ್ಯರಾದ ಅನೇಕರಿಗೆ ಮುಟ್ಟುತ್ತದೆ.

ನ್ಯಾಯಾಲಯ :

ಅಪರಾಧಿಗಳಿಗೆ ಎಚ್ಚರಿಕೆಯನ್ನು ಕೊಟ್ಟು, ಕಟ್ಟು ಕರಾರುಗಳನ್ನು ಹಾಕಿ ಯಾವ ಜಾಮೀನೂ ಇಲ್ಲದೆ, ಪ್ರೊಬೇಶನ್ ಅಧಿಕಾರಿಯಿಂದ ಶಿಕ್ಷಾಪೂರ್ವ ಸಾಮಾಜಿಕ ತನಿಖೆಯ ವರದಿಯನ್ನು ಕೇಳದೆ ೨೧ ವರ್ಷದೊಳಗಿನ ಬಾಲಾಪರಾಧಿಗಳನ್ನು ಬಿಡುಗಡೆ ಮಾಡುವ ಅಧಿಕಾರವು ನ್ಯಾಯಾಲಯಗಳಿಗಿದೆ. ಅಂದರೆ ಇಪ್ಪತ್ತೊಂದು ವರ್ಷದೊಳಗಿನ ಅಪರಾಧಿಯನ್ನು ಸೆರೆಮನೆಗೆ ಅಥವಾ ಯಾವುದೇ ಸುಧಾರಣಾ ಸಂಸ್ಥೆಗೆ ಕಳಿಸ

ಕೂಡದು. ಒಂದು ವೇಳೆ ಅಂಥ ಒತ್ತಾಯಿಸುವ, ಮತ್ತು ಅನಿವಾರ್ಯ ಪರಿಸ್ಥಿತಿಗಳು ಕಂಡುಬಂದಾಗ ಮಾತ್ರ ನ್ಯಾಯಾಲಯವು ಹಾಗೆ ಮಾಡಬಹುದು. ಕೇಂದ್ರ ಕಾಯ್ದೆಯ ಪ್ರಕಾರ ಹೇಳುವದಾದರೆ, ೨೧ ವರ್ಷದೊಳಗಿನ ಅಪರಾಧಿಯನ್ನು ಸುಧಾರಣಾ ಸಂಸ್ಥೆಗೆ ಕಳಿಸಬೇಕಾದರೆ, ನ್ಯಾಯಾಲಯವು ಅವನ ನಡತೆ, ಭೌತಿಕ ಮತ್ತು ಮಾನಸಿಕ ಸ್ಥಿತಿ ಹಾಗು ಸಾಮಾಜಿಕ, ಆರ್ಥಿಕ ಪರಿಸ್ಥಿಗಳ ಬಗ್ಗೆ ಪ್ರೊಬೇಶನ್ ಅಧಿಕಾರಿಯಿಂದ ವರದಿಯನ್ನು ಕೇಳಬೇಕಾಗುತ್ತದೆ. ಆಗ್ಗ ಒಂದು ವೇಳೆ ಶಿಕ್ಷೆ ವಿಧಿಸಿ ಸಂಸ್ಥೆಗೆ ಕಳಿಸುವುದಾದರೆ ಆ ಕಾರಣಗಳನ್ನು ಬರೆದು ದಾಖಲೆ ಮಾಡಬೇಕಾಗುತ್ತದ. ಆದರೆ ನ್ಯಾಯಾಧೀಶರು ಪ್ರೊಬೇಶನ್‌ಚಿಕಿತ್ಸೆಯಿಂದಾಗುವ ಸಾಮಾಜಿಕ ಹಾಗು ಆರ್ಥಿಕಲಾಭಗಳನ್ನು ತಿಳಿದು ಅನೇಕರಿಗೆ ಇದರ ಪ್ರಯೋಜನವಾಗುವಂತೆ ಮಾಡಬೇಕು. ಅಂದರೆ ಅವರು ಸುಧಾರಣಾ ಕಾರ್ಯ ಮತ್ತು ಅದರ ತಾಂತ್ರಿಕತೆಯ ಬಗ್ಗೆ ಜ್ಞಾನಪಡೆಯುವುದು ಅವಶ್ಯವೆನಿಸದಿರಲಾರದು.

ಪೋಲೀಸ :

ಪೋಲೀಸ ಅಧಿಕಾರಿಗಳೂ ಕೂಡ ಅಪರಾಧಿಯನ್ನು ಕೈದುಮಾಡುವ ಮತ್ತು ಜಾಮೀನಿನ ಮೇಲೆ ಬಿಡುವ ಅಧಿಕಾರವನ್ನು ಪಡೆದಿದ್ದಾರೆ. ಅಪರಾಧಿಯ ಕಾಯ್ದೆ (Cr. P.C) ಯ ೫೫, ೧೦೯ ಹಾಗು ೧೧೦ ನೇ ಭಾಗಗಳ ಪ್ರಕಾರ ಹಣದ ಜಾಮೀನಿನೊಂದಿಗೆ ಒಳ್ಳೆಯ ನಡತೆಯ ಬಗ್ಗೆ ಬಾಂಡ್‌ಕೊಡಲು ಅಸಮರ್ಥರಾದ ಬಾಲಅಪರಾಧಿಗಳನ್ನು ಕೈದುಮಾಡುವ ಅಧಿಕಾರ ಪೋಲೀಸರಿಗಿದೆ. ಆಗ ಪೋಲೀಸರಿಗೆ ಪ್ರೊಬೇಶನ್‌ಉಪಚಾರದ ಬಗ್ಗೆ ಸರಿಯಾದ ತಿಳುವಳಿಕೆ ಇರುವುದು ಅವಶ್ಯ. ಪ್ರಾಮುಖ್ಯವಾಗಿ ಕಾಯ್ದೆಯ ಈ ಭಾಗಗಳನ್ನು ೨೧ ವರ್ಷದ ಕೆಳಗಿನ ಬಾಲಾಪರಾಧಿಗಳಿಗೆ ಉಪಯೋಗಿಸಲೇ ಕೂಡದು. ಒಂದು ವೇಳೆ ಪೋಲೀಸರು ಇದನ್ನು ಲೆಕ್ಕಿಸದೆ ಕೈದು ಮಾಡಿದರೆ, ಪ್ರೊಬೇಶನ್ ಅಧಿಕಾರಿಯು ಅಪರಾಧಿಗಳ ವಿಷಯಕ್ಕೆ ಪುನರಾವಲೋಕನ ಮಾಡುವಂತೆ ಮನಗಾಣಿಸಿ, ಬಿಡುಗಡೆ ಮಾಡುವಂತೆ ಪೋಲೀಸ ಅಧಿಕಾರಿಗಳಿಗೆ ತಿಳಿಸಬೇಕು. ಪೋಲೀಸ ಅಧಿಕಾರಿಗಳೂ ಈ ಉಪಚಾರದ ವಿಷಯದಲ್ಲಿ ತಾತ್ಸಾರ ಭಾವನೆ ತಳೆಯಬಾರದು.

ಸೆರೆಮನೆ ಅಥವಾ ಸುಧಾರಣಾ ಸಂಸ್ಥೆ :

ಸೆರೆಮನೆಅಧಿಕಾರಿಗಳು ಯಾವುದೇ ಕಾರಣದಿಂದಲೂ ಸೆರೆಮನೆಯಲ್ಲಿ ಇಪ್ಪತ್ತೊಂದು ವರ್ಷದ ಕೆಳಗಿನ ಬಾಲಾಪರಾಧಿಗಳನ್ನು ಪ್ರೌಢಅಪರಾಧಿಗಳೊಡನೆ ಸೇರಿಸದೆ, ಅವರನ್ನು ಪ್ರತ್ಯೇಕವಾಗಿಡುವ ವ್ಯವಸ್ಥೆ ಮಾಡಬೇಕು. ಪ್ರೊಬೇಶನ್ ಕಾನೂನಿನ ೧೧ನೇ ಭಾಗದಲ್ಲಿ ಹೇಳಿದಂತೆ ಸೆರೆಮನೆ ಅಧಿಕಾರಿಗಳಾಗಲಿ, ಕಲ್ಯಾಣಾಧಿಕಾರಿಗಳಾಗಲಿ ಯೋಗ್ಯ ಕಂಡ ಅಪರಾಧಿಯನ್ನು ಬಿಡುಗಡೆ ಮಾಡಲು ಮನವಿ ತಯಾರು ಮಾಡಬೇಕಾಗುವುದು. ಹೀಗೆ ಮಾಡುವಲ್ಲಿ ವಕೀಲರ ನೆರವೂ ಅವಶ್ಯ. ವಕೀಲರು ಇಂಥ

ನೆರವು ನೀಡುವುದಕ್ಕೆ ಮುಂದಾಗಬೇಕು. ಸೆರೆಮನೆಯ ಅಧಿಕಾರಿಗಳಾಗಲಿ, ಕಲ್ಯಾಣಾಧಿಕಾರಿಗಳಾಗಲಿ ಪ್ರೊಬೇಶನ್ ಅಧಿಕಾರಿಗಳೊಡನೆ ಸಂಬಂಧವನ್ನಿಟ್ಟುಕೊಳ್ಳಬೇಕು. ಮತ್ತು ಸೆರೆಯಾಳುಗಳು ಅವರ ಕುಟುಂಬದೊಡನೆ ಮತ್ತು ಹೊರಜಗತ್ತಿನೊಡನೆ ಅಲ್ಲದೆ ನ್ಯಾಯಾಲಯಗಳೊಂದಿಗೆ ಸಂಪರ್ಕವನ್ನಿಟ್ಟುಕೊಳ್ಳುವಂತೆ ನೆರವಾಗಬೇಕು.

ಸರಕಾರ :

ಅಪರಾಧಿಯನ್ನು ಸೆರೆಮನೆಗೆ ಕಳಿಸಿದಾಗ ಆಗುವ ನಷ್ಟ ಮತ್ತು ತಗಲುವ ಖರ್ಚು ಹೆಚ್ಚು ಎಂದು ಕಂಡುಬಂದಗ ಅವನನ್ನು ಸಮುದಾಯದಲ್ಲಿಯೇ, ಅವನ ಕುಟುಂಬದಲ್ಲಿಯೇ ಇರಿಸಿ ಸರಿಯಾದ ಮಾರ್ಗದರ್ಶನ ಮಾಡುವ ತರಬೇತಿಪಡೆದ ಕಾರ್ಯಕರ್ತನನ್ನು ನೇಮಿಸಲು ಮುಂದಾಗಬೇಕು. ಈ ದಿಶೆಯಲ್ಲಿ ಹಣಖರ್ಚು ಮಾಡಲು ಹಿಂಜರಿಯಬಾರದು. ಇದರಿಂದ ಸಾಕಷ್ಟು ಹಣದ ಉಳಿತಾಯವಾಗುವದರಲ್ಲಿ ಸಂದೇಹವಿಲ್ಲ. ಸರಕಾರವು ಅಧಿಕಾರಿಗಳಿಗೆ ಸರಿಯಾದ ಸಂಬಳ ಸಾರಿಗೆ ಹಾಗು ಸ್ಥಾನಮಾನಗಳನ್ನು ಕೊಡಬೇಕು.

ಸಮುದಾಯ :

ಸಮುದಾಯವು ಅಪರಾಧ ನಿರೋಧ ಮತ್ತು ಸಮಾಜ ರಕ್ಷಣೆಯನ್ನು ಮಾಡಲು ಹಿರಿದಾದ ಪಾತ್ರವನ್ನು ವಹಿಸಿಕೊಳ್ಳಬಹುದು. ಇದು ಅಪರಾಧಿಗಳಿಗೆ ಮತ್ತು ಸಮಾಜಕ್ಕೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯಗಳಿಗೂ ನೆರವಾಗಬಲ್ಲುದು. ಸಮುದಾಯದಲ್ಲಿಯ ಜನರು ಸ್ವಯಂಸೇವಕ ಅಧಿಕಾರಿಗಳಾಗಿ ಸೇವೆಮಾಡಲು ಮುಂದೆ ಬರಬೇಕು. ಇವರು ತಮ್ಮ ಸಮುದಾಯದಲ್ಲಿ ಅರ್ಥಿಗಳಿಗೆ ಉದ್ಯೋಗ ದೊರಕಿಸಿ ಕೊಡುವಲ್ಲಿ ಮತ್ತು ಪುನರ್ನಿವೇಶನಕ್ಕೆ ನೆರವಾಗುವಲ್ಲಿ ಮುಂದಾಗಬೇಕು. ಸಮುದಾಯದ ಜನರೇ ಸ್ವಯಂಸೇವಕಅಧಿಕಾರಿಗಳಾದರೆ ಈ ಕಾರ್ಯಗಳು ಸುಲಭವಾಗಿ ನೆರವೇರುವವು. ಜಪಾನಗಳಂಥ ರಾಷ್ಟ್ರಗಳಲ್ಲಿ ಸಾವಿರಾರು ಸ್ವಯಂಸೇವಕ ಅಧಿಕಾರಿಗಳಿದ್ದಾರೆ. ಇವರು ಯಾವ ದುಡ್ಡಿನ ಅಪೇಕ್ಷೆಯೂ ಇಲ್ಲದೆ ಅನೇಕ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ನಮ್ಮ ದೇಶದಲ್ಲಿ ಇವರು ಕೇವಲ ೧೦೦ ಜನರಿದ್ದಾರೆ. ಜಪಾನದಂತೆ ಮುಂದುವರಿಯಲು ನಮಗಿನ್ನೂ ಬಹುಕಾಲ ಬೇಕಾಗಬಹುದು. ಆದರೆ ನಿರಾಶೆ ಹೊಂದಬೇಕಾಗಿಲ್ಲ.

ನಮ್ಮ ಸಮುದಾಯವು ಅರ್ಥಿಗಳ ಬಗ್ಗೆ, ಅಪರಾಧಿಗಳ ಬಗ್ಗೆ ದಯೆ ತೋರಿಸಿ, ಕಲಂಕರಹಿತರಾಗುವಂತೆ ನೋಡಿಕೊಳ್ಳಬೇಕು ಅವರಿಗೆ ದುಡಿಯುವ ಅವಕಾಶವನ್ನು ಒದಗಿಸಿಕೊಡಬೇಕು. ಒಮ್ಮೆ ಎಡವಿದವನು ನೊಂದು, ಜೀವನವನ್ನು ನಂಬಿ ಸರಿಯಾದ ಬಾಳನ್ನು ಬಾಳಲು ಮುಂದಾಗಬಹುದು, ಆಗ ಸಮುದಾಯ ನೆರವಾಗಬೇಕು. ಎಡವಿದವನನ್ನು ಎತ್ತಿ ಹಿಡಿಯದೆ ಮತ್ತೊಮ್ಮೆ ಎಡವಿ ಬೀಳುವಂತೆ ಮಾಡ

ಬಾಡಬಾರದು. ಸಮುದಾಯವು ದಯೆಯನ್ನು ತೋರಿಸಬೇಕು. ದಯೆ ಇರಬೇಕು ಈ ಪ್ರಾಣಿಗಳಲ್ಲಿ.

ಈ ಉಪಚಾರದ ಪ್ರಚಾರ ಸಮಾಜಕ್ಕೆ ಹಿತಕರ :

ಈ ಉಪಚಾರದ ಪ್ರಚಾರ ಅತ್ಯವಶ್ಯಕ ಹಾಗು ಲಾಭದಾಯಕ. ಕಾರಣ ಇದರಲ್ಲಿ ಪ್ರೊಬೇಶನ್ ಅಧಿಕಾರಿ, ನ್ಯಾಯಾಲಯ, ಪೋಲೀಸ, ಶಿಕ್ಷಕ, ಸೆರೆಮನೆ, ಅಧಿಕಾರಿ, ಸಮುದಾಯ ಮತ್ತು ಸರಕಾರ–ಸಕ್ರಿಯವಾಗಿ ಭಾಗವಹಿಸಬೇಕು. ಅಲ್ಲದೆ ಇವರೆಲ್ಲರೂ ಪ್ರೊಬೇಶನ್ ಪದ್ಧತಿಯ ಅರ್ಥ, ಮುನ್ನಡೆ ಮತ್ತು ಬೆಳವಣಿಗೆಗಳ ಬಗ್ಗೆ ತಿಳಿದುಕೊಳ್ಳುವುದು ಅವಶ್ಯ. ಈ ಚಿಕಿತ್ಸೆಯ ವಿಷಯದಲ್ಲಿ ಸಂಶೋಧನೆ ನಡೆಸಬೇಕು; ಸಮಸ್ಯೆ ಮತ್ತು ನಿವಾರಣೋಪಾಯಗಳನ್ನು ಅರಿಯಬೇಕು; ಕಾರ್ಯಗತ ಮಾಡಲು ಶ್ರಮಿಸಬೇಕು.

ಆಗಾಗ್ಗೆ ಸಭೆ-ಸಮ್ಮೇಳನ, ಚರ್ಚೆ, ಶಿಬಿರ ಹಾಗು ತರಬೇತಿ ಶಿಬಿರಗಳನ್ನೇರ್ಪಡಿಸಬೇಕು. ಅಂದರೆ ಸಂಬಂಧಪಟ್ಟ ಎಲ್ಲ ಅಧಿಕಾರಿಗಳು, ಸಂಘ-ಸಂಸ್ಥೆಗಳು, ಸರಕಾರ ಮತ್ತು ಸಮುದಾಯಗಳೂ ಇವುಗಳಲ್ಲಿ ಭಾಗವಹಿಸಬೇಕು. ಹೀಗಾದಾಗ ಪ್ರೊಬೇಶನ್ ಉಪಚಾರದ ಮುನ್ನಡೆ ಸಾಧ್ಯ. ದೇಶಕ್ಕೆ. ಸಮಾಜಕ್ಕೆ ಲಾಭವೂ ಸಾಧ್ಯ. ನಮ್ಮ ದೇಶದಲ್ಲಿ 1961 ರಲ್ಲಿ ಕೇಂದ್ರಸುಧಾರಣಾ ಸೇವಾಬ್ಯೂರೋ (Central Bureau of Correctional Services) ಸ್ಥಾಪಿತವಾಯಿತು. ಇದು ಸುಧಾರಣಾಕಾರ್ಯ ಹಾಗು ಆಡಳಿತಗಳ ವಿಷಯಗಳಲ್ಲಿ ಚರ್ಚೆ. ಸಂಶೋಧನೆ ಮತ್ತು ತರಬೇತಿ ನಡೆಸುವ ಹೊಣೆಯನ್ನು ಹೊತ್ತಿದೆ.

ಈ ಬ್ಯೂರೋ ಮತ್ತು ಕರ್ನಾಟಕದ ಪ್ರೊಬೇಶನ್ ಹಾಗು ಸಂಸ್ಥಾಪಶ್ಚಾತ್ ಸೇವಾ ವಿಭಾಗಗಳು (Probation & After care Services, Karnataka) ರಾಜ್ಯದ, ಜಿಲ್ಲಾ ಪ್ರೊಬೇಶನ್ ಅಧಿಕಾರಿಗಳಿಗೆ ಹದಿನೈದು ದಿವಸಗಳ ಒಂದು ತರಬೇತಿ ಶಿಬಿರವನ್ನು ನಡೆಸಿಕೊಡಲು, ಕರ್ನಾಟಕ ವಿಶ್ವವಿದ್ಯಾಲಯದ ಸಮಾಜಕಾರ್ಯ ವಿಭಾಗಕ್ಕೆ ಕೇಳಿಕೊಂಡವು. ಸಮಾಜಕಾರ್ಯ ವಿಭಾಗವು ವಿಶ್ವವಿದ್ಯಾಲಯದಿಂದ ಅನುಮತಿ ಪಡೆದು ಅದಕ್ಕೆ ಒಪ್ಪಿ 1972 ರಲ್ಲಿ ಮಾರ್ಚ 11 ರಿಂದ 25 ರ ವರೆಗೆ ಈ ತರಬೇತಿ ಕಾರ್ಯವನ್ನು ನಡೆಸಿ ಯಶಸ್ವಿಯಾಗಿ ಮುಗಿಸಿತು. ಇದರಲ್ಲಿ ಸಂಬಂಧಪಟ್ಟ ಅನೇಕ ಅಧಿಕಾರಿಗಳೂ, ಶಿಕ್ಷಕರೂ ಮತ್ತು ಸಂಸ್ಥೆಗಳೂ ಭಾಗವಹಿಸಿದ್ದವು. ಅಂದರೆ ನ್ಯಾಯಾಧೀಶರು, ಪೋಲೀಸ ಅಧಿಕಾರಿಗಳು, ಸೆರೆಮನೆಅಧಿಕಾರಿಗಳು, ವಕೀಲರು, ಸಮಾಜಶಾಸ್ತ್ರ, ಸಮಾಜಕಾರ್ಯ ಹಾಗು ಕಾಯಿದೆ ವಿಭಾಗದ ಶಿಕ್ಷಕರು ಮತ್ತು ಈ ಕ್ಷೇತ್ರದಲ್ಲಿ ಪ್ರಾತ್ಯಕ್ಷಿಕೆಯ ಅನುಭವಪಡೆದವರು ಪ್ರೊಬೇಶನ್ಅಧಿಕಾರಿಗಳಿಗೆ ತಾತ್ವಿಕಜ್ಞಾನ ಕೊಡುವುದರ ಜೊತೆಗೆ, ಪ್ರಾತ್ಯಕ್ಷಿಕೆಯ ತೊಂದರೆಗಳ ಬಗ್ಗೆ ವಿವರವಾಗಿ ಚರ್ಚಿಸಿದರು.

ಪ್ರೊಬೇಶನ್‌ಅಧಿಕಾರಿಗಳಿಗಷ್ಟೆ ಅಲ್ಲದೆ ಇದರಲ್ಲಿ ಭಾಗವಹಿಸಿದ ಉಳಿದವರೆಲ್ಲರಿಗೂ ತರಬೇತಿಯಾದಂತಾಯಿತು ಎಂದು ಎಲ್ಲರೂ ಮನಗಂಡರು. ಅಲ್ಲದೆ ನ್ಯಾಯಾಧೀಶರಿಗೆ, ಪೋಲೀಸರಿಗೆ, ಸೆರೆಮನೆ ಅಧಿಕಾರಿಗಳಿಗೆ ಮತ್ತು ಸಂಬಂಧಪಟ್ಟ ಇತರರಿಗೂ ಈ ಬಗೆಯ ತರಬೇತಿಯನ್ನು ನಡೆಸಬೇಕೆಂದು ಅಭಿಪ್ರಾಯಪಟ್ಟರು. ಅಂದರೇನೆ ಇಂಥ ಸುಧಾರಣಾ ಉಪಚಾರದ ಮುನ್ನಡೆ ಸಾಧ್ಯ; ಅಪರಾಧ ನಿರೋಧವೂ ಸಾಧ್ಯವೆಂದು ಕೊಂಡರು.

ಇವರಲ್ಲದೆ ಸಮುದಾಯದ ಜನಸಾಮಾನ್ಯರೂ ಇದರ ಬಗೆಗೆ ತಿಳಿದುಕೊಳ್ಳುವುದು ಅವಶ್ಯ. ಸಮುದಾಯದ ಜನರಿಗೆ ಚಲನಚಿತ್ರ, ಪತ್ರಿಕೆ, ಭಾಷಣ ಹಾಗು ವ್ಯಾಖ್ಯಾನ ಮುಂತಾದವುಗಳ ಮುಖಾಂತರ ಇದರ ತಿಳುವಳಿಕೆ ಕೊಟ್ಟು, ಜನಜಾಗ್ರತೆಯಾಗುವಂತೆ ಮತ್ತು ಸಹಕರಿಸುವಂತೆ ಮಾಡಬೇಕು. ಅಪರಾಧಿಗಳ ಬಗೆಗೆ ಮತ್ತು ಶಿಕ್ಷೆಯ ಬಗೆಗೆ ಇರುವ ಸಾಂಪ್ರದಾಯಿಕ ಅಭಿಪ್ರಾಯಗಳ ಹಾಗು ವಿಚಾರಗಳ ಬದಲಾವಣೆಮಾಡಿ, ಅವರ ಮನಪರಿವರ್ತಿಸುವಂತೆ ಮಾಡಬೇಕು. ಹೀಗಾದಾಗ ದೇಶಕ್ಕೆ ಮತ್ತು ಜನತೆಗೆ ಆಗುವ ಹಾನಿಯನ್ನು ತಡೆದು, ಅಪರಾಧವನ್ನು ನಿರೋಧಿಸಿ, ಸಮಾಜದ ರಕ್ಷಣೆಮಾಡುವುದು ಸಾಧ್ಯ. ಇದು ಸಾಧ್ಯವಾಗಲೆಂದು ಹಾರೈಸೋಣ. ●

ಆಧಾರ ಗ್ರಂಥಗಳು

1) Paul. w. Tappan (Ed)— Contemporary Correction
Mcgraw-Hill Book Company
In C New York

2) H. E. Barnes & N. K. Teeters — New Horizens incriminology
Prentice-Hall of India
Private Ltd., New Delhi 1966

3) Govt. of India — Social defence in India 1970

4) Govt. of India — Probation Year 1971

ನಮ್ಮ ಶ್ರೀಸಾಮಾನ್ಯ ಮತ್ತು ಕನ್ನಡಪ್ರಜ್ಞೆ

ರಾವಬಹಾದ್ದೂರ

ಇಂದು ಕರ್ನಾಟಕ ರಾಜ್ಯರಚನೆಯ ಕನಸು ನನಸಾಗಿದೆ. ರಾಜಕೀಯಪ್ರಜ್ಞೆ ತನ್ನ ಕೆಲಸ ಮಾಡಿದೆ; ಆದರೆ ಕನ್ನಡಪ್ರಜ್ಞೆ ಮುಸಳಿಸಿದೆ. ಸುಶಿಕ್ಷಿತ ವರ್ಗದಲ್ಲಿ ಹಿಂದೆ ಮರಾಠಿಭಾಷಾ ವ್ಯಾಮೋಹವಿದ್ದರೆ, ಈಗ ಇಂಗ್ಲೀಷಭಾಷಾ ವ್ಯಾಮೋಹ ಹೆಚ್ಚಿದೆ. ಸುಶಿಕ್ಷಿತರೆನ್ನಿಸಿಕೊಳ್ಳುವ ಜನರು ಕನ್ನಡದಲ್ಲಿ ಮಾತನಾಡುವದು ಅನಾಗರಿಕತೆಯ ಲಕ್ಷಣವೆಂದು, ಭ್ರಾಮಕ ಕಲ್ಪನೆಯನ್ನು ತಲೆಯಲ್ಲಿ ತುಂಬಿಕೊಂಡಿರುವರು. ತಮ್ಮ ಮಕ್ಕಳನ್ನು ಇಂಗ್ಲೀಷ ಮಾಧ್ಯಮ ಶಾಲೆಗಳಲ್ಲಿ ಹೆಸರು ಹಚ್ಚಲು ಶತಪ್ರಯತ್ನ ಮಾಡುವರು. ಇಂಗ್ಲೀಷರು ಹೊರಟುಹೋದರೂ ಅವರ ಭಾಷೆ ನಮ್ಮ ತಲೆಯಮೇಲೆ ಕುಳಿತಿದೆ. ಇಂಗ್ಲೀಷ ಭಾಷೆ, ವೇಷ–ಭೂಷಣ, ಆಚಾರ–ವಿಚಾರ, ಆಡಳಿತಪದ್ಧತಿ, ನ್ಯಾಯದಾನಪದ್ಧತಿ, ಶಿಕ್ಷಣಪದ್ಧತಿ ನಮ್ಮನ್ನು ಬೆಂಬಿಡದ ಭೂತದಂತೆ ಆವರಿಸಿಕೊಂಡಿವೆ. ಇಂಗ್ಲೀಷ ಬಲ್ಲವರು ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಸಾವಿರಕ್ಕೆ ಒಬ್ಬರಂತೆ ಇರಬಹುದು. ಆದರೂ ಅವರು ಅಡ್ಡಾಡುವ ಲೈನಮಾರ್ಗಗಳಲ್ಲಿ ಇಂಗ್ಲೀಷ ಲಿಪಿಯಲ್ಲಿ, ಇಂಗ್ಲೀಷ ಅಂಕಿಯಲ್ಲಿ ಕೆತ್ತಿದ ಮೈಲುಗಲ್ಲುಗಳು ನಿಂತಿವೆ. ಈ ಲೈನ ಮಾರ್ಗದಲ್ಲಿ ಇಂಗ್ಲಂಡದಿಂದ ಬಂದ ಜನರು ಅಡ್ಡಾಡುತ್ತಿರಬೇಕು. ಇಲ್ಲವೆ ಇಲ್ಲಿ ವಾಸಿಸುವ ಜನರೆಲ್ಲ ಇಂಗ್ಲೀಷರ ಸಂತಾನವಿರಬೇಕು ಎಂಬ ಭ್ರಮೆ ಹುಟ್ಟಿಸುವ ಕಾರ್ಯ. ಈ ಮೈಲುಗಲ್ಲುಗಳಿಂದಾಗಬಹುದು. ಹಳ್ಳಿಗರಿಂದಲೇ ನಡೆಯುವ ಸಂತೆ ಪೇಟೆಗಳಲ್ಲಿ, ಅಂಗಡಿಕಾರರು ತಮ್ಮ ಅಂಗಡಿಗಳ ಮುಂದೆ ಇಂಗ್ಲೀಷಲಿಪಿಯಲ್ಲಿ ಬರೆಸಿದ ಬೋರ್ಡುಗಳನ್ನು ನೇತುಹಾಕಿ, ತಮ್ಮ ಇಂಗ್ಲೀಷಭಾಷಾ ವ್ಯಾಮೋಹವನ್ನು ಪ್ರದರ್ಶಿಸುವರು. ಹಳ್ಳಿಯ ಪಕ್ಷಕಾರರಿಂದ ತಮ್ಮ ವೃತ್ತಿಯ ಆದಾಯ ಪಡೆಯುವ ಡಾಕ್ಟರರು, ವಕೀಲರು, ತಮ್ಮ ಮನೆಯ ಮುಂದೆ ಇಂಗ್ಲೀಷಲಿಪಿಯಲ್ಲಿ ತಮ್ಮ ಹೆಸರು ಬರೆಸಿದ ಬೋರ್ಡು ನೇತಾಡಿಸುತ್ತಿರುವರು. ಸರಕಾರೀ ಕಚೇರಿಕಟ್ಟಡಗಳಂತೂ ಇಂಗ್ಲೀಷರಿದ್ದಾಗಿನ ಬೋರ್ಡುಗಳನ್ನೇ ಇಂದಿಗೂ ಹೊತ್ತುನಿಂತಿವೆ

ಇದೆಲ್ಲಾ ಏನು ಸೂಚಿಸುತ್ತದೆ ? ನಮ್ಮ ಜನದ ಕನ್ನಡಪ್ರಜ್ಞೆ ಸುಪ್ತಾವಸ್ಥೆಯಲ್ಲಿದೆ. ಇದನ್ನು ಬಡಿದೆಬ್ಬಿಸದಿದ್ದರೆ ಕನ್ನಡವೆಂಬ ಭಾಷೆಯನ್ನು ಕೃಷ್ಣಾ–ಕಾವೇರಿ ನಡುವಿನ ಪ್ರದೇಶದಲ್ಲಿ ಜನರು ಆಡುವ ಕಾಲವೊಂದು ಇತ್ತು ಎಂದು ಇತಿಹಾಸದಲ್ಲಿ ಓದುವ ಕಾಲ, ನೂರಾರುವರ್ಷಗಳ ನಂತರ ಬಂದರೆ ಆಶ್ಚರ್ಯ ಪಡಬೇಕಾಗಿಲ್ಲ.

ಮೂಕರಿಗೆ ಎಲ್ಲ ಭಾಷೆಗಳೂ ಒಂದೇ. ಕಿವುಡರಿಗೆ ಎಲ್ಲ ನಾದಗಳೂ ಅಷ್ಟೇ. ಕುರುಡರಿಗೆ ಯಾವ ಬಣ್ಣವಾದರೂ ಸರಿ. ಮಾತನಾಡಬಲ್ಲ ಜನರಿಗೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಭಾಷೆಯು ಒಂದು ಸಾಧನ. ಇಷ್ಟೇ ಆಗಿದ್ದರೆ ಕನ್ನಡ ಏನು? ಮರಾಠಿ ಏನು ? ಹಿಂದೀ ಏನು? ಉರ್ದು ಏನು ? ಇಂಗ್ಲೀಷ ಏನು ? ಯಾವ ಭಾಷೆ ಯಾವರೂ ಸರಿ. ಅದರ ಮೂಲಕ ವ್ಯವಹಾರ ಸಾಗಿದರೆ ಸಾಕು ಎಂದು ಸಮಾಧಾನ ಹೇಳಬಹುದು. ಆದರೆ ನಮ್ಮ ಧರ್ಮ–ಸಂಸ್ಕೃತಿಗಳ ವಾಹಕವೂ ನಮ್ಮ ಭಾಷೆಯೇ ಆಗಿರುವುದರಿಂದ ಅದು ನಮ್ಮ ಜೀವನದ ಜೀವಾಳವಾಗಿದೆ.

ಕನ್ನಡಭಾಷೆ ಹೇಳಹೆಸರಿಲ್ಲದಂತಾದರೆ ನಮ್ಮ ಬಸವಣ್ಣನವರ ವಚನಗಳಿಗೆ ನಾವು ಎರವಾಗುವೆವು. ನಮ್ಮ ಪುರಂದರದಾಸರ ಪದಗಳು ಹೇಳಹೆಸರಿಲ್ಲದಂತಾಗುವವು. ನಮ್ಮ ಕವಿಗಳು, ದಾರ್ಶನಿಕರು, ಸಾಧುಸಂತರು ನಮ್ಮ ಪಾಲಿಗೆ ಇಲ್ಲದಂತಾಗುವರು. ನಮ್ಮ ಕನ್ನಡಪ್ರಜ್ಞೆ, ನಮ್ಮ ಸಾಹಿತ್ಯ, ಸಂಸ್ಕೃತಿಗಳು ಉಳಿದು, ಬೆಳೆಯಲು ಅಗತ್ಯ ಎಂದು ಇದರಿಂದ ಮನದಟ್ಟಾಗಲು ಸಾಕು.

ಶ್ರೀ ಸಾಮಾನ್ಯನೆಂದರೆ ಯಾರು ? ಯಾರನ್ನು ಕುರಿತು ಈ ಪದಪ್ರಯೋಗ ? ಎಂಬ ಪ್ರಶ್ನೆಗಳಿಗೆ ಉತ್ತರಕೊಡದೆ ಮುಂದೆ ಸಾಗುವಂತಿಲ್ಲ. ನನ್ನ ದೃಷ್ಟಿಯಲ್ಲಿ ಶ್ರೀಸಾಮಾನ್ಯ ಯಾರು ಅಲ್ಲ, ಇದನ್ನು ಹೇಳುವದು ಸೂಕ್ತ.

ಕಾರಿನಲ್ಲಿ ಕುಳಿತು, ಬೀದಿಗುಂಟ ನಡೆದ ಜನರ ಕಣ್ಣಲ್ಲಿ ಧೂಳೆರಚುತ್ತ ಸಾಗಿದವ ಶ್ರೀಸಾಮಾನ್ಯನಲ್ಲ: ಪಾಶ್ಚಾತ್ಯರಂತೆ ವೇಷಭೂಷಣ ಧರಿಸಿ, ಇಲ್ಲವೆ ಆದಿಮಾನವನಂತೆ ಕೇಶರಾಶಿ ಬೆಳೆಸಿ, ಹೀಪ್ಪೀಜನರ ಅನುಕರಣಮಾಡಿ ಅಲೆಯುವವ ಶ್ರೀಸಾಮಾನ್ಯನಲ್ಲ. ಕತ್ತಿಯ ಭಾರದ ಹೊತ್ತಿಗೆ ಓದಿ, ಜನರಿಗೆ ತಿಳಿಯದ ಭಾಷಣ ಭೂಷಿತನಾದವ ಶ್ರೀಸಾಮಾನ್ಯನಲ್ಲ. ಸಂಘಟನೆಯ ಬಲದಿಂದ ಉಬ್ಬಿ, ಸಂಪಿನ ಬ್ರಹ್ಮಾಸ್ತ್ರದ ಬಲದಿಂದ ಕೊಬ್ಬಿ, ಕಾರ್ಮಿಕ ಪ್ರಧಾರಿ, ಬಂಡವಲುದಾರರ ಸ್ವಪ್ನಸಿಂಹ ಶ್ರೀಸಾಮಾನ್ಯನಲ್ಲ. ನಿರ್ಧಿಷ್ಟ ತಾಸುಗಳ ಸ್ಕೇಲು, ಗ್ರೇಡುಗಳ ಭದ್ರತೆಯೊಂದಿಗೆ ಮಾಸಿಕಸಂಬಳ, ತುಟ್ಟಿಭತ್ತೆ' ಪ್ರವಾಸ ಭತ್ತೆ, ಓವ್ಹರಟಾಯಿಮು ಭತ್ತೆ, ನಗರವಾಸದ ಭತ್ತೆ, ಅಲ್ಲದೆ ಅರ್ಜಂಟಾಗಿ ಕೆಲಸಮಾಡಿಕೊಡಲು ಗಿಟ್ಟಿಸುವ ಗಿಂಬಳ–ಈ ಸೌಕರ್ಯಪಡೆದ ನೌಕರಶಾಹಿವರ್ಗಕ್ಕೆ ಸೇರಿದವನೂ ಶ್ರೀಸಾಮಾನ್ಯನಲ್ಲ. ಹಣದಿಂದ ಹಣ ಗಳಿಸುವ ಬಂಡವಲುದಾರ, ಸಾಹುಕಾರ, ಪರಿಸ್ಥಿತಿಯ ಪ್ರಯೋಜನಪಡೆದು ಲಾಭಗಿಟ್ಟಿಸುವ ವ್ಯಾಪಾರಿ ಇದ್ದವರಿಂದ ಇಲ್ಲದರಿವಗೆ ಸರಕುಮಾರಿಸಿದ ಉಪಕಾರಿ ಎಂದು ಹೇಳಿಕೊಂಡು ಇಬ್ಬರಿಂದಲೂ ತನ್ನ ಕಮೀಶನ್ ಕಿತ್ತುವ ಕಮೀಶನ್ ಏಜಂಟ, ದಲ್ಲಾಳಿ ಶ್ರೀಸಾಮಾನ್ಯನಲ್ಲ. ಹಾಗಾದರೆ ಶ್ರೀಸಾಮಾನ್ಯನೆಂದರೆ ಯಾರು ?

ನಿರ್ಧಿಷ್ಟವಾದ ವರಮಾನದ ಭರವಸೆ ಇಲ್ಲದೆ ತನ್ನ ದುಡಿಮೆಯಿಂದ ಭೂಮಿ ತಾಯಿ ಕೊಡುವ ಫಸಲಿನಿಂದ ಲಭ್ಯವಾಗುವ ಆದಾಯದಲ್ಲಿ ತನ್ನ ಜೀವನನಿರ್ವಾಹ

ಮಾಡುವ ರೈತ, ಮತ್ತು ಕಾರ್ಮಿಕ, ಕಾನೂನಿನ ರಕ್ಷಣೆ ಇಲ್ಲದ ಕೃಷಿಕಾರ್ಮಿಕ, ಹಮಾಲಿ, ಕೂಲಿ–ಕುಂಬಳಿಮಾಡಿ ಜೀವಿಸುವ ಶ್ರಮಜೀವಿ. ಯಾವ ಉದ್ಯೋಗವೂ ಇಲ್ಲದೆ ಬಳಲುವ ನಿರುದ್ಯೋಗಿ, ಕೆಲಸ ಸಿಕ್ಕಾಗ ನಿಷ್ಠೆಯಿಂದಮಾಡಿ ತನ್ನ ದುಡಿತಕ್ಕೆ ದೊರೆತಷ್ಟೇ ತನ್ನ ಆದಾಯವೆಂದು ಭಾವಿಸಿ ಅದರಲ್ಲಿಯೇ ಜೀವನ ನಿರ್ವಾಹಮಾಡುವ ನೇಕಾರ ಕುಂಬಾರಾದಿ ಕುಶಲಕೆಲಸಗಾರರು, ಇವರೆಲ್ಲರ ಸಮೂಹಕ್ಕೆ ಶ್ರೀಸಾಮಾನ್ಯನೆಂದು ಶಬ್ದ ಅನ್ವಯಿಸುವುದು. ಯಾವ ವೃತ್ತಿಯೂ ಇಲ್ಲದೆ. ತಮ್ಮ ನಿರುದ್ಯೋಗವನ್ನೇ ಸಮಾಜ ಸೇವೆ ಎಂಬ ಗೌರವದ ಹೆಸರಿಟ್ಟು ಹೇಳಿಕೊಳ್ಳುವ ಜನರು. ಶ್ರೀಸಾಮಾನ್ಯರ ವರ್ಗದಲ್ಲಿ ಬರುವುದಿಲ್ಲವೆ ? ಎಂದು ಕೇಳಬಹುದು. ದೇಶಸೇವೆಯೇ ಈಶಸೇವೆ ಎಂದು ಹೇಳಿಕೊಳ್ಳುವ ಜನತಾಜನಾರ್ಧನನ ಪೂಜಾರಿಗಳ ವರ್ಗ ಶ್ರೀಸಾಮಾನ್ಯನ ಹಣೆಬರಹ ಬರೆಯುವ ಬ್ರಹ್ಮರು. ಅವರು ಹೇಗೆ ಶ್ರೀಸಾಮಾನ್ಯನೆನಿಸಿಕೊಳ್ಳಲು ಒಪ್ಪಿಕೊಂಡಾರು. ಪುಢಾರಿ, ದೋಬಿ, ಸಮಾಜಸೇವಕ, ಸೊಸಾಯಿಟಿ ಡಾಯರೆಕ್ಟರ ಹೀಗೆ ಗೌರವ ನಾಮ ಧರಿಸಿದ ಪ್ರತ್ಯೇಕವಾದ ವರ್ಗವೇ ಇರುವಾಗ ಶ್ರೀಸಾಮಾನ್ಯರೆಂದು ಯಾವ ಬಾಯಿಂದ ಹೇಳಲಿಕ್ಕಾದೀತು ?

ಈ ವಿವರಣೆಯಿಂದ ಶ್ರೀಸಾಮಾನ್ಯನು ಬಡತನ-ಸಿರಿತನ ಗಣಿಸದೆಯೆ ತನ್ನ ಪರಂಪರಾಗತ ವೃತ್ತಿಯನ್ನು ಅವಲಂಬಿಸಿ. ತನ್ನ ಸಂಸ್ಕೃತಿಗನುಗುಣವಾಗಿ ಜೀವನ ನಿರ್ವಾಹ ನಡೆಸುತ್ತಿರುವ ವ್ಯಕ್ತಿ ಎಂದು ಸಂಕ್ಷಿಪ್ತ ವ್ಯಾಖ್ಯೆಯನ್ನು ಕೊಡಬಹುದು.

ಇನ್ನು ಪ್ರಜ್ಞೆ ಶಬ್ದದಿಂದ ನಾವು ಗ್ರಹಿಸುವ ಅರ್ಥವೇನು ? ಪ್ರಜ್ಞೆ ಅಂದರೆ ಎಚ್ಚರ ಎಂದು ಶಬ್ದಾರ್ಥವಿದೆ. ಯಾವನೊಬ್ಬನು ಕುಡಿದು ಅಮಲೇರಿ ಎಚ್ಚರತಪ್ಪಿ ಬಿದ್ದುದು ಕಂಡಾಗ, ಅವನು ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿರುವನು ಎಂದು ಹೇಳುವೆವು. ಅವನಿಗೆ ತಾನಾರು, ತಾನೆಲ್ಲಿ ಬಿದ್ದುಕೊಂಡಿರುವೆನು. ಯಾವ ಸ್ಥಿತಿಯಲ್ಲಿ ಬಿದ್ದುಕೊಂಡಿರುವೆ, ಇದಾವುದರ ಎಚ್ಚರವಿಲ್ಲವೆಂಬ ಕಾರಣದಿಂದ. ಅವನಿಗೆ ಪ್ರಜ್ಞಾಹೀನ ಸ್ಥಿತಿಯಲ್ಲಿರುವನೆಂದು ಹೇಳುವೆವು. ಹಾಗಾದರೆ ಪ್ರಜ್ಞೆ ಶಬ್ದದ ಅರ್ಥ ಬರೀ ಎಚ್ಚರದಿಂದ ಇರುವುದಿಷ್ಟೇ ಅಲ್ಲ; ತನ್ನತನದ ಅರಿವು ಇರುವುದು ಎಂದಂತಾಯಿತು. ತನ್ನತನದ ಅರಿವು ಅಂದರೇ ತನ್ನ ಬಗ್ಗೆ ಅಭಿಮಾನ, ತನ್ನದೆನ್ನುವದರ ಬಗ್ಗೆ ಅಭಿಮಾನವಿರುವದು ಎಂದು ಅರ್ಥ. ಇದನ್ನೇ ಸ್ವಾಭಿಮಾನ ಎಂಬ ಶಬ್ದ ಸೂಚಿಸುವದು.

ಪ್ರಜ್ಞಾಹೀನನಾಗಿ ಬಿದ್ದ ಕುಡುಕನಿಗೆ ಎಚ್ಚರ ಬಂದಕೂಡಲೇ ಅವನು ತನ್ನ ಮರ್ಯಾದೆ ಮುಚ್ಚಿಕೊಳ್ಳಲು ಅಸ್ತವ್ಯಸ್ತವಾಗಿರುವ ಧೋತರವನ್ನು ಸರಿಪಡಿಸಿಕೊಳ್ಳುವನು. ಆಗ ಕಿಡಿಗೇಡಿಗಳು ಅವನನ್ನು ನಗೆಪಾಟಲು ಮಾಡಲು ಅವನ ವಸ್ತ್ರಗಳನ್ನು ಜಗ್ಗಿದರೆ ಅವನು ಕೂಡಲೇ ಪ್ರತಿಭಟಿಸುವನು. ತನ್ನದೆನ್ನುವುದರ ಮೇಲೆ ಅನ್ಯರು ಎಸಗುವ ಆಕ್ರಮಣವನ್ನು ಪ್ರತಿಭಟಿಸುವದೂ ಪ್ರಜ್ಞೆಯ ಅರ್ಥದಲ್ಲಿ ಸಮಾವೇಶಗೊಂಡ ಅಂಶವೆಂದು ಮನದಟ್ಟಾಗಬಹುದು. ಪೂರ್ತಿ ನಿಶೆ ಇಳಿದು ಕುಳಿತು

ಮೈಮೇಲೆ ಪೂರ್ತಿ ಎಚ್ಚರ ಬಂದಾಗ ಅದೇ ವ್ಯಕ್ತಿ ಎದ್ದು “ಛೇ, ನಾನೆಂಥ ದೊಡ್ಡ ಮನೆತನದಲ್ಲಿ ಹುಟ್ಟಿ ಬಂದವ, ಈ ಹಾಳು ಗಟಾರದ ಬದಿಗೆ ನಾಯಿಯಂತೆ ಬಿದ್ದು, ಕೊಂಡದ್ದು ಎಂಥ ಮರ್ಯಾದೆಗೇಡಿತನ’ ಎಂದುಕೊಂಡು, ತಟ್ಟನೆ ಎದ್ದು ತಾನುಟ್ಟ ಧೋತರವನ್ನು ಸರಿಯಾಗಿ ಉಟ್ಟುಕೊಂಡು ಅದಕ್ಕೆ ತಗಲಿದ ಮಣ್ಣನ್ನು ಝಾಡಿಸಿ, ತಾನು ಹೀಗೆ ರಸ್ತೆಯಲ್ಲಿ ಬಿದ್ದ ಸಂಶಯ ಯಾರಿಗೂ ಬಾರದಂತೆ ದಕ್ಷತೆವಹಿಸಿ ಮರ್ಯಾದಸ್ಥರಿಗೆ ಒಪ್ಪುವ ರೀತಿಯಲ್ಲಿ ದಾರಿಹಿಡಿದು ಸಾಗುವನು. ಆಗ ಅವನನ್ನು ನೋಡಿದವರಾರೂ ಅವನನ್ನು ‘ಪ್ರಜ್ಞಾಹೀನ’ ನೆಂದು ಅನ್ನರು.

ಈ ಅಂಶವನ್ನು ಗಮನಿಸಿದಾಗ ಪ್ರಜ್ಞೆ ಅಂದರೆ ತನ್ನತನದ ಅರಿವು ಇರುವುದಷ್ಟೇ ಅಲ್ಲ. ತನ್ನದೆನ್ನುವುದರ ಅರಿವೂ ಅದನ್ನು ಕಾಪಾಡಿಕೊಳ್ಳಬೇಕೆಂಬ ಅಭಿಮಾನವೂ ಅದರ ಮೇಲೆ ಅನ್ಯರಿಂದ ಆಕ್ರಮಣ ನಡೆದರೆ, ಅದನ್ನು ಪ್ರತಿಭಟಿಸುವ ಎಚ್ಚರವೂ ಅಲ್ಲದೆ ಸಮಾಜದಲ್ಲಿ ತನ್ನತನದ ಗೌರವ ಉಳಿಸಿಕೊಳ್ಳಲು ಇತರರೊಡನೆ ಸರಿಸಮಾನನಂತೆ ಬಾಳಬೇಕೆಂಬ ಪ್ರವೃತ್ತಿಯೂ ಜಾಗೃತವಾಗಿರಬೇಕೆಂಬ ಮಾತೂ ಅಡಕವಾಗಿರುವುದೆಂಬ ಮಾತು ಸ್ಪಷ್ಟವಾಗುವುದು.

ಸತ್ತವನು ಎಚ್ಚರಗೊಳ್ಳನು. ಸಜೀವನಿದ್ದವನು ಎಚ್ಚರಗೊಳ್ಳಬಲ್ಲನು. ಅಂತೆಯೇ ಪ್ರಜ್ಞೆ ಸಜೀವವಿರುವ ಲಕ್ಷಣ. ಪ್ರಜ್ಞೆ ಪ್ರಕಟವಾಗಿರದೆ ಕೆಲವೊಂದು ಕಾಲ ಸುಪ್ತಾವಸ್ಥೆಯಲ್ಲಿರಬಹುದು. ಸಜೀವಪ್ರಾಣಿಯ ವಿಷಯದಲ್ಲಿ ಮಾತ್ರ ಇದು ಸತ್ಯವೆನಿಸಬಹುದು. ಕನ್ನಡಪ್ರಜ್ಞೆ ಎಂದು ನಾನು ಹೇಳುವಾಗ ಕನ್ನಡವು ನನ್ನದು; ಅದು ನನ್ನ ಜೀವನದ ಜೀವಾಳ. ಅದರಮೇಲೆ ಅನ್ಯರ ಆಕ್ರಮಣವನ್ನು ಪ್ರತಿಭಟಿಸಿ ಅದನ್ನು ಉಳಿಸಿಕೊಳ್ಳಬೇಕು; ಬೆಳೆಸಬೇಕು ಎಂಬುದನ್ನು ಪ್ರಜ್ಞೆ ಎಂಬ ಅರ್ಥದಲ್ಲಿ ಬಳಸುವೆ.

ಕನ್ನಡಭಾಷೆ ನನ್ನದೆನ್ನುವ ಅಭಿಮಾನವಿದ್ದರೆ, ಕನ್ನಡ ಸಾಹಿತ್ಯವು ತನ್ನದೆನ್ನುವ ಭಾವನೆ ಜಾಗೃತವಾಗಿ ಉಳಿಯುವುದು. ಸಾಹಿತ್ಯಭಾಷೆಯ ಉಸಿರು. ಸಾಹಿತ್ಯವಿಲ್ಲದ ಭಾಷೆ ಉಸಿರಾಡಿಸದ ಮನುಷ್ಯನಂತೆ. ಕನ್ನಡ ಪ್ರಜ್ಞೆ ಜಾಗೃತವಾಗಿದ್ದರೆ. ನಮ್ಮ ಕನ್ನಡ ಸಾಹಿತ್ಯ, ನಮ್ಮ ಪರಂಪರಾಗತ ಸಂಸ್ಕೃತಿ ಇವುಗಳ ಬಗ್ಗೆ ಅಭಿಮಾನ ತಾಳುವುದು. ಅದಕ್ಕಾಗಿ ಶ್ರಮಿಸುವುದು ತನ್ನ ಕರ್ತವ್ಯವೆಂಬ ಪ್ರಜ್ಞೆ ಊರ್ಜಿತದಲ್ಲಿರುವುದು. ಇಂಥ ಕನ್ನಡ ಪ್ರಜ್ಞೆ ಶ್ರೀಸಾಮಾನ್ಯನಲ್ಲಿದೆಯೆ ? ಎಂಬ ಪ್ರಶ್ನೆಗೆ ಈ ಅರ್ಥದಲ್ಲಿ ನಮ್ಮ ಶ್ರೀಸಾಮಾನ್ಯನಲ್ಲಿ ಕನ್ನಡಪ್ರಜ್ಞೆ ಇಲ್ಲವೆಂದೇ ನನ್ನ ಅಭಿಪ್ರಾಯ.

ನನ್ನ ಈ ಮಾತು ನಿಮ್ಮನ್ನು ಕೆರಳಿಸಬಹುದು. ಇದೇನು ಹೀಗೆ ಹೇಳುವಿರಿ. ನಮ್ಮ ಜನಪದ ಸಾಹಿತ್ಯ ಸೃಷ್ಟಿಯಾದುದು ಶ್ರೀಸಾಮಾನ್ಯನಿಂದ. ಇಂದಿಗೂ ಕನ್ನಡ ಭಾಷೆಯನ್ನು ಬಿಟ್ಟು ಅನ್ಯಭಾಷೆಯನ್ನು ಶ್ರೀಸಾಮಾನ್ಯ ಬಳಸುವುದಿಲ್ಲ. ಕನ್ನಡ ಉಳಿದದ್ದು ಶ್ರೀಸಾಮಾನ್ಯನಲ್ಲಿ ಮಾತ್ರ. ಅವನು ಕನ್ನಡ ರಕ್ಷಾಮಣಿಯಾಗಿರುವಾಗ ಅವನಲ್ಲಿ ಕನ್ನಡಪ್ರಜ್ಞೆ ಇಲ್ಲವೆಂದು ಹೇಳುವುದು ಶ್ರೀಸಾಮಾನ್ಯನಿಗೆ ಘೋರಅನ್ಯಾಯ ಮಾಡಿ

ದಂತೆ' ಎಂದು ನನ್ನ ಅಭಿಪ್ರಾಯವನ್ನು ಖಂಡಿಸಲು ನಿಮ್ಮಲ್ಲಿ ಹಲವರು ಕಾತರರಾಗಿರ ಬಹುದು.

ಇಂಥವರು ಒಂದು ಮಾತನ್ನು ದಯವಿಟ್ಟು ಗಮನಿಸಬೇಕು. ನಮ್ಮ ಶ್ರೀಸಾಮಾನ್ಯನಲ್ಲಿ ನಾನು ಇದೀಗ ವಿವರಿಸಿದ ಅರ್ಥದಲ್ಲಿ ಕನ್ನಡಪ್ರಜ್ಞೆ ಇದ್ದುದೇ ಆಗಿದ್ದರೆ, ಕನ್ನಡವು ಎಂದೋ ಆಡಳಿತ ಭಾಷೆಯಾಗುತ್ತಿತ್ತು: ಕನ್ನಡವೇ ಶಿಕ್ಷಣದ ಮಾಧ್ಯಮವಾಗಿರುತ್ತಿತ್ತು. ಕನ್ನಡ ಭಾಷೆ ತಿಳಿಯದವರು—ಅವರೆಷ್ಟೇ ಬುದ್ಧಿವಂತರಿರಲಿ-ನಮ್ಮ ರಾಜ್ಯಸರಕಾರದ ಅಧಿಕಾರ ಸ್ಥಾನದಲ್ಲಿರಲು ಅರ್ಹರೆನಿಸುತ್ತಿರಲಿಲ್ಲ. ಬ್ರಿಟೀಶರು ಭಾರತದಿಂದ ತೊಲಗಿದ ದಿನದಿಂದ ಅವರ ಆಡಳಿತದ ಅವಶೇಷಗಳಾಗಿ ಮೆರೆಯುವ ಇಂಗ್ಲೀಷ ಬೋರ್ಡುಗಳು ಎಲ್ಲಿಯೂ ಕಣ್ಣಿಗೆ ಬೀಳದೆ ಕಣ್ಮರೆಯಾಗುತ್ತಿದ್ದುವು. ಇದಾವುದೂ ಆಗಿಲ್ಲ. ಇದು ವಸ್ತುಸ್ಥಿತಿ. ಇದರಿಂದ ಶ್ರೀಸಾಮಾನ್ಯನಲ್ಲಿ ಕನ್ನಡ ಪ್ರಜ್ಞೆ ಜಾಗೃತವಾಗಿಲ್ಲ. ಅದು ಸುಪ್ತವಾಗಿ ಇದೆ. ಸುಶಿಕ್ಷಿತರಲ್ಲಿ ಅದು ಸುಪ್ತವಾಗಿಯೂ ಉಳಿಯದೆ ಲುಪ್ತವಾಗಿದೆ ಎಂದು ನಿಮಗೆ ಅನಿಸುವುದಿಲ್ಲವೆ ?

ಆಡಳಿತಭಾಷೆ ಯಾವುದಿರಬೇಕೆಂಬುದನ್ನು ನಿರ್ಧರಿಸುವವರು ಅಧಿಕಾರದಲ್ಲಿರುವ ಎಂ.ಎಲ್.ಎ.ಗಳು, ರಾಜ್ಯಸರಕಾರ ನಡೆಸುವ ಮಂತ್ರಿಮಂಡಲದವರು. ಶ್ರೀಸಾಮಾನ್ಯನಿಗೆ ಅದರಲ್ಲಿ ಬದಲಾವಣೆ ಮಾಡಲು ಅಧಿಕಾರವಿಲ್ಲ. ಅವನಲ್ಲಿ ಕನ್ನಡಪ್ರಜ್ಞೆ ಜಾಗೃತವಾಗಿಲ್ಲವೆಂದು ಈ ಕಾರಣ ತೋರಿಸುವುದು ಸಮಂಜಸವೆನಿಸದು ಎಂದು ಹೇಳುವವರೂ ಇಲ್ಲಿರಬಹುದು.

ಭಾಷಾಪ್ರಜ್ಞೆ ಜಾಗೃತವಾಗಿರುವ ಪ್ರಜಾಕೋಟಿಯು ಏನನ್ನು ಸಾಧಿಸಬಹುದು? ಇದರ ಕಲ್ಪನೆ ನನಗೆ ಬಾಂಗ್ಲಾದೇಶದ ಪ್ರವಾಸದಲ್ಲಿ ಮನವರಿಕೆಯಾಯಿತು. ಅದನ್ನು ಸ್ವಲ್ಪದರಲ್ಲಿ ವಿವರಿಸುವೆ. ಆಗ ನಮ್ಮ ಶ್ರೀಸಾಮಾನ್ಯನಲ್ಲಿ ಕನ್ನಡಪ್ರಜ್ಞೆ ಎಷ್ಟರಮಟ್ಟಿಗೆ ಇದೆ ಅಥವಾ ಇಲ್ಲ ಎಂಬುದು ಗೊತ್ತಾಗುವುದು.

ಪಾಕಿಸ್ತಾನ ಸ್ಥಾಪನೆಯಾದಾಗ. ಬಂಗಾಲ ವಿಭಜನೆಯಾಗಿ ಪೂರ್ವಬಂಗಾಲವು ಪೂರ್ವಪಾಕಿಸ್ತಾನವೆಂದು ಹೆಸರು ತಾಳಿ, ಪಾಕಿಸ್ತಾನದ ಭಾಗವಾಗಿ ಪರಿಣಮಿಸಿತು. ಪೂರ್ವಪಾಕಿಸ್ತಾನದಲ್ಲಿ ನೂರಕ್ಕೆ ೮೫ ರಷ್ಟು ಮುಸಲ್ಮಾನರ ಜನಸಂಖ್ಯೆ. ಪಾಕಿಸ್ತಾನದ ರಾಷ್ಟ್ರಭಾಷೆ ಉರ್ದು ಎಂದು ೧೯೪೮ರಲ್ಲಿ ಸಾರಿದಾಗ. ಇಡೀ ಪೂರ್ವಪಾಕಿಸ್ತಾನವೇ ಬಂಡೆದ್ದಿತು. ಬಂಗಾಲಿ ಭಾಷೆಯೂ ಉರ್ದುವಿನೊಂದಿಗೆ ಪಾಕಿಸ್ತಾನದ ರಾಷ್ಟ್ರಭಾಷೆ ಎಂದು ಪಾಕಿಸ್ತಾನ ಸರಕಾರವು ಒಪ್ಪಬೇಕಾಗಿ ಬಂತು. ಆದರೂ ಪಾಕಿಸ್ತಾನದ ಆಗಿನ ಪ್ರಧಾನಮಂತ್ರಿ ಲಿಯಾಕತ ಅಲೀಖಾನರು ತಮ್ಮ ಮುಖಭಂಗವಾದುದನ್ನು ತಪ್ಪಿಸಿಕೊಳ್ಳಲು, ಉರ್ದು ಲಿಪಿಯಲ್ಲಿ ಬರೆದ ಬಂಗಾಲಿ ಪಾಕಿಸ್ತಾನದ ಎರಡನೇ ರಾಷ್ಟ್ರಭಾಷೆ ಎಂದು ವಿವರಣೆ ನೀಡಿದರು. ಆಗ ಇಡೀ ಪೂರ್ವಪಾಕಿಸ್ತಾನದಲ್ಲಿ ಶ್ರೀಸಾಮಾನ್ಯರು ಉಗ್ರಚಳುವಳಿ ನಡೆಸಿ, ಬಂಗಾಲಿ ಲಿಪಿಯಲ್ಲಿ ಬರೆದ ಬಂಗಾಲಿ ಭಾಷೆಯು ಪಾಕಿಸ್ತಾನದ

ರಾಷ್ಟ್ರಭಾಷೆ ಎಂದು, ಉರ್ದುವಿನ ಸರಿಸಮಾನ ಸ್ಥಾನನೀಡಿ ಪಾಕಿಸ್ತಾನ ಸರಕಾರವು ತನ್ನ ಮೊದಲಿನ ಆಜ್ಞೆಯನ್ನು ಹಿಂತೆಗೆದುಕೊಳ್ಳಬೇಕಾಗಿ ಬಂತು.

ಪಾಕಿಸ್ತಾನ ಸರಕಾರವು, ಪೂರ್ವಪಾಕಿಸ್ತಾನವನ್ನು ೨೫ ವರ್ಷ ತನ್ನ ಆಡಳಿತ ದಲ್ಲಿಟ್ಟುಕೊಂಡು ಆಡಳಿತ ನಡೆಸಿದರೂ ಕೇಂದ್ರಸರಕಾರದ ಕಚೇರಿಗಳ, ರೇಲ್ವೆ ಸ್ಟೇಶನ್ನು ಗಳ, ಅಂಚೆ ಕಚೇರಿಗಳ ಹೆಸರನ್ನು ಉರ್ದುಲಿಪಿಯಲ್ಲಿ ಬರೆಸಿದ ಬೋರ್ಡನ್ನು ನೇತಂ ಹಾಕಲು ಸಾಧ್ಯವಾಗಲಿಲ್ಲ. ಇಡೀ ಬಂಗ್ಲಾದಲ್ಲಿ ಬಂಗಾಲಿ ಲಿಪಿಯಲ್ಲಿ ಬರೆದ ಬೋರ್ಡು ಗಳನ್ನು ಬಿಟ್ಟು ಬೇರೆ ಯಾವುದೇ ಲಿಪಿಯಲ್ಲಿ ಬರೆದ ಒಂದೂ ಬೋರ್ಡು ಕಣ್ಣಿಗೆ ಬೀಳು ವುದಿಲ್ಲ. ವಿದೇಶಿ ಪ್ರವಾಸಿಕರೇ ಹೆಚ್ಚಿಗೆ ಬರುವ ಹೊಟೆಲ್ ಪೂರ್ಬಾನಿಯಲ್ಲಿ ಪಾವತಿ ಪುಸ್ತಕ ಛಾಪಿಸಿದ್ದು. ಬರೆದು ಕೊಡುವುದು ಬಂಗಾಲಿ ಲಿಪಿಯಲ್ಲಿ. ಇಂಗ್ಲೀಷ ಲಿಪಿ ಹೋಗಲಿ, ಅಂಕಿಯ ಬಳಕೆಯನ್ನು ಇಡೀ ಬಂಗ್ಲಾದೇಶದಲ್ಲಿ ಯಾರೂ ಬಳಸುವುದಿಲ್ಲ.

ಶ್ರೀಸಾಮಾನ್ಯನಲ್ಲಿ ಭಾಷಾಪ್ರಜ್ಞೆ ಜಾಗೃತವಾದುದಾಗಿದ್ದರೆ ಎಂಥ ಹಟವಾರಿ ಸರಕಾರವನ್ನೂ ತನಗೆ ತಿಳಿಯದ ಭಾಷೆಯಲ್ಲಿ ಆಡಳಿತ ನಡೆಸದಂತೆ, ತನಗೆ ತಿಳಿಯುವ ಭಾಷೆಯಲ್ಲಿ ಆಡಳಿತ ನಡೆಸಲು ಹಚ್ಚುವಂತೆ ಮಾಡಬಲ್ಲುದು ಎಂಬುದಕ್ಕೆ ಬಂಗ್ಲಾ ದೇಶದ ಶ್ರೀಸಾಮಾನ್ಯ. ಶ್ರೇಷ್ಠ ಉದಾಹರಣೆಯಾಗಿದ್ದಾನೆ.

ಭಾರತದಲ್ಲಿ ನಮ್ಮ ಕರ್ನಾಟಕರಾಜ್ಯವನ್ನುಳಿದು ಉಳಿದ ರಾಜ್ಯಸರಕಾರಗಳಂ ತಮ್ಮ ರಾಜ್ಯದ ಶ್ರೀಸಾಮಾನ್ಯನಿಗೆ ತಿಳಿಯುವ ಭಾಷೆಯನ್ನೇ ಆಡಳಿತಭಾಷೆ ಎಂದು ಭಾಷಾವಾರ ರಾಜ್ಯರಚನೆ ಆದೊಡನೆ ಸಾರಿದ್ದನ್ನು ನೋಡಿದರೆ, ನಮ್ಮ ಶ್ರೀಸಾಮಾನ್ಯ ನಲ್ಲಿ ಕನ್ನಡಪ್ರಜ್ಞೆ ಇಲ್ಲವೆಂದು ಹೇಳುವುದು ತಪ್ಪೆ ?

ಪ್ರಜ್ಞೆಯ ಮೊದಲನೆ ಲಕ್ಷಣ ತನ್ನದೆನ್ನುವುದರ ಬಗ್ಗೆ ಅಭಿಮಾನ. ಅದು ನಮ್ಮ ಶ್ರೀಸಾಮಾನ್ಯನಲ್ಲಿ ಸೂಕ್ಷ್ಮವಾಗಿದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಲು ದೂರ ಹೋಗಬೇಕಿಲ್ಲ. ನಮ್ಮ ನಾಟಕ, ಸಿನೇಮಾಥೇಟರಗಳನ್ನು ನೋಡಿದರೆ ಸಾಕಂ. ಮರಾಠಿನಾಟಕ ಕಂಪನಿ ಬಂದರೆ ತೀರಿತು. ನಾಟಕದ ಮರಾಠಿಭಾಷೆ ವಿಷ್ಣೂ ತಿಳಿಯದ ಹಳ್ಳಿಗರು, ಗಾಡೀ ಹೂಡಿಕೊಂಡು ಹಿಂಡುಗಟ್ಟಿ ಬರುವರು. ತಿಕೀಟಿಗಾಗಿ ಥೇಟರಿನಲ್ಲಿ ತಾಸುಗಟ್ಟಲೆ ಕ್ಯೂ ನಿಂತು ತಿಕೀಟು ಪಡೆದು ನಾಟಕ ನೋಡುವುದುಂಟು. ಕೆಲವರು ತಿಕೀಟು ಸಿಗದೆ ಹತಾಶರಾಗಿ ಮರಳುವಾಗ ಕಳ್ಳಪೇಟೆಯಲ್ಲಿ ತಿಕೀಟುಕೊಂಡು ನಾಟಕ ನೋಡಿದ್ದನ್ನು ಅಭಿಮಾನದಿಂದ ಹೇಳಿಕೊಳ್ಳುವುದೂ ಉಂಟು.

ಹಿಂದೆ ನಾವು ವಿದ್ಯಾರ್ಥಿಗಳಿದ್ದಾಗ. ಬಾಲಗಂಧರ್ವರ ನಾಟಕದ ಹುಚ್ಚು ಹಿಡಿಯ ದವರೇ ಇರಲಿಲ್ಲ. ಆ ಕಂಪನಿ ಹುಬ್ಬಳ್ಳಿ ಮಲ್ಲಿಕಾರ್ಜುನಥಿಯಟರಿನಲ್ಲಿ ನಾಟಕ ಮಾಡುವ ಜಾಹೀರಾತು ಪ್ರಕಟವಾದರೆ ತೀರಿತು. ಕಂಪನಿ ಹುಬ್ಬಳ್ಳಿಗೆ ಬರುವ

ಮೊದಲೇ ನಾಟಕದ ಎಲ್ಲಾ ವರ್ಗದ ತಿಕೀಟುಗಳು ರಿರ್ಝರ್ವ ಆಗುತ್ತಿದ್ದುವು. ಹರಿಹರ, ದಾವಣಗೇರಿ, ವಿಜಾಪುರ, ಬಾಗಲಕೋಟಿ–ಹೀಗೆ ದೂರದೂರದ ಪಟ್ಟಣವಾಸಿ ರಸಿಕರು ತಾರಿನಿಂದ ಮನಿಯಾರ್ಡರ ಮಾಡಿ, ತಿಕೀಟು ರಿರ್ಝರ್ವ ಮಾಡಿಸುತ್ತಿದ್ದರು. ಹಳ್ಳಿಗಳಿಂದ ಹಿಂಡುಗಟ್ಟಿ ಬರುವ ಶ್ರೀಸಾಮಾನ್ಯರಿಗೆ ನಿರಾಶೆ ಕಟ್ಟಿಟ್ಟದ್ದು. ಆಗ ಒಂದಕ್ಕೆ ರಡು ಹಣತೆತ್ತು ನಾಟಕನೋಡಿ ಧನ್ಯರಾದೆವೆಂದು ಅನ್ನುತ್ತಿದ್ದುದುಂಟು. ಶ್ರೀಸಾಮಾನ್ಯರು ನಾಟಕ ಮುಗಿದನಂತರ ಹೊರಗೆ ಬಂದು "ರೊಕ್ಕ ಹೋದರೆ ಹೋಗಲಿ ಏನು ಬಂಗಾರ ಕಿರೀಟ, ಬೆಳ್ಳಿಯ ಗದೆ, ಸೀನಸೀನರಿ ಎಷ್ಟು ಛಂದ, ಗಂಧರ್ವ ಹಾಕಿದ ಟೋಪಣ ಪ್ಯಾರಿಸಿನಿಂದ ತರಿಸ್ಯಾರಂತೆ, ಅವನುಟ್ಟ ಸೀರೆಗೆ ಸಾವಿರ ರೂ. ಬೆಲೆ ಕೊಟ್ಟಾರಂತೆ, ಅವನು ಹೆಣ್ಣುವೇಷ ಹಾಕಿದ್ದು ನೋಡಿ ಜನ್ಮಸಾರ್ಥಕ ಆಯಿತು." ಎಂದು ನಾಟಕದ ವರ್ಣನೆ ಮಾಡುತ್ತ ಸಾಗಿದ ಶ್ರೀಸಾಮಾನ್ಯರ ಮಾತುಗಳನ್ನು ನಾನು ಕಿವಿಯಾರೆ ಕೇಳಿದ್ದೇನೆ. ನಾಟಕದ ಭಾಷೆ ತಿಳಿಯುತ್ತಿದ್ದರೆ ಏನು ಹೇಳುತ್ತಿದ್ದರೋ ದೇವರೇ ಬಲ್ಲ.

ಅದೇ ಕಾಲಕ್ಕೆ ಕನ್ನಡನಾಟಕ ಕಂಪನಿಗಳು ಪ್ರೇಕ್ಷಕರಿಲ್ಲದೆ ನೊಣಜಾಡಿಸುತ್ತ, ಖಾಲಿ ಥೇಟರಿನಲ್ಲಿ ನಾಟಕ ಆಡಿ ಬಾಡಿಗೆಕೊಡಲು ಗತಿ ಇಲ್ಲದೆ, ಪಡದೆ ಒತ್ತಿಯಿಟ್ಟು ಕ್ಯಾಂಪಕಿತ್ತಿದ್ದೂ ಉಂಟು. ನಮ್ಮ ಶ್ರೀಸಾಮಾನ್ಯನಲ್ಲಿ ಕನ್ನಡಪ್ರಜ್ಞೆ ಯಾವ ಮಟ್ಟದ್ದು ಎಂಬುದಕ್ಕೆ ಇಷ್ಟು ಸಾಕು.

ನಿರಕ್ಷರ ಕುಕ್ಷಿಗಳಾದ ಗ್ರಾಮಾಂತರ ಶ್ರೀಸಾಮಾನ್ಯರು ಮನರಂಜನೆಗಾಗಿ ತಮಗಿಷ್ಟ ಬಂದ ನಾಟಕ ಕಂಪನಿಗೆ, ಸರ್ಕಸ್‌ನೋಡಿ ಸಂತೋಷಪಡುವಂತೆನೆ ಓಡಲು ಹೋಗುವರು. ಅವರಿಗೆ ತಮ್ಮ ಹೊಟ್ಟೆಪಾಡಿಗಾಗಿ ದುಡಿಯುವುದರಲ್ಲಿಯೇ ಜೀವನ ಹಣ್ಣಾಗುವ ಪರಿಸ್ಥಿತಿಯಲ್ಲಿ ಅವರು ಇರುವಾಗ, ಭಾಷಾಪ್ರಜ್ಞೆ ತಮಗೆ ಎಷ್ಟೂ ಸಂಬಂಧವಿಲ್ಲದ ವಿಷಯ. ಎಲ್ಲ ಭಾಷೆಗಳೂ ಅವರಿಗೆ ಅಷ್ಟೇ. ಆದರೆ ಓದುಬರೆಹ ಬಲ್ಲ ಕಾಲೇಜದಲ್ಲಿ ಶಿಕ್ಷಣ ಪಡೆಯುತ್ತಿರುವ ಸುಶಿಕ್ಷಿತರಲ್ಲಿಯೂ ಭಾಷಾಪ್ರಜ್ಞೆಯ ಅಭಾವ ಒಡೆದು ಕಾಣುವುದು ನಮ್ಮ ಕನ್ನಡ ಭಾಷೆಯ ದುರ್ದೈವವೇ ಸರಿ. ಕಾಲೇಜ ವಿದ್ಯಾರ್ಥಿಗಳು ಕನ್ನಡ ಪತ್ರಿಕೆ ಕೊಂಡು ಓದುವುದು ತಮ್ಮ ಪ್ರತಿಷ್ಠೆಗೆ ಕುಂದು ಎಂಬ ಭಾವನೆ ತಳೆದಂತೆ, ಅವರು ಇಂಗ್ಲೀಷ ಪತ್ರಿಕೆಯನ್ನು ಹಣತೆತ್ತು ಕೊಂಡು ಆಢ್ಯತೆಯಿಂದ ಸಾಗುವುದನ್ನು ನೋಡಿದಾಗ ಯಾರಿಗಾದರೂ ಕೆಡುಕೆನಿಸುವುದು ಸಹಜ. ಸಿನೇಮಾ ನಟನಟಿಯರ ಚಿತ್ರಗಳಿಂದ, ತಮ್ಮ ಕೋಣೆಯ ಗೋಡೆಗಳನ್ನು ಅಲಂಕರಿಸಲು ಪತ್ರಿಕೆ ಕೊಳ್ಳುವುದಿದ್ದರೆ ರದ್ದೀಪೆಪರ ಕೆ. ಜಿ. ಗಟ್ಟಲೆ ತೂಕಮಾಡಿ ಕೊಂಡರೂ ಆ ಕೆಲಸ ಸಾಧಿಸುವುದು. ಆದರೆ ಅವರು ತಾವು ಸುಶಿಕ್ಷಿತರೆಂಬ ಭಾವನೆ ತಳೆದವರಾಗಿರುವುದರಿಂದ. ಇಂಗ್ಲೀಷಪತ್ರಿಕೆ ಕೈಯಲ್ಲಿರುವುದು ವಿಹಿತವೆಂದು ಅದನ್ನು ಕೊಳ್ಳುವರು. ಅದರಂತೇ ಇಂಗ್ಲೀಷ ಪುಸ್ತಕಗಳ ಖರೀದಿ. ಕನ್ನಡ ತನ್ನ ಭಾಷೆ ತನ್ನದರ ಬಗ್ಗೆ ಅಭಿಮಾನಪಡುವುದು ತನ್ನಲ್ಲಿ ಭಾಷಾಪ್ರಜ್ಞೆಯಿದ್ದ ಲಕ್ಷಣವೆಂದು ಅವರಿಗೆ ಹೊಳೆಯುವುದೇ ಇಲ್ಲ. ಕೆಲವರು ಮರಾಠಿ

ಪೇಪರ ಓದುವುದು ಪ್ರತಿಷ್ಠೆಯ ಲಕ್ಷಣವೆಂದು ತಲೆಯಲ್ಲಿ ತುಂಬಿಕೊಂಡವರೂ ನಮ್ಮಲ್ಲಿ ಇಲ್ಲದಿಲ್ಲ. ಹೀಗಾಗಿ ಕನ್ನಡ-ಮರಾಠಿ ಎರಡೂ ಭಾಷೆ ಗೊತ್ತಿದ್ದವರು ಕನ್ನಡಕ್ಕಿಂತ ಮರಾಠಿ ಪತ್ರಿಕೆ, ಮರಾಠಿ ಸಾಹಿತ್ಯಪುಸ್ತಕ ಕೊಂಡು ಓದುವುದಾಗಿ ಅಭಿಮಾನದಿಂದ ಹೇಳಿಕೊಳ್ಳುವರು. ಅಂಥ ಮಿತ್ರರನ್ನು ನಾನು ವಿಚಾರಿಸಿದಾಗ ಕನ್ನಡದಲ್ಲಿ ಓದುವಂಥ ದೇನಿದೆ? ಮರಾಠಿ ಸಾಹಿತ್ಯ ಉಚ್ಚಮಟ್ಟದ್ದು. ನಮ್ಮ ಜ್ಞಾನಾನುಭವ ಹೆಚ್ಚಲು ಅದೇ ತಕ್ಕದ್ದು ಎಂದು ತಮ್ಮ ವರ್ತನವನ್ನು ಸಮರ್ಥಿಸಿಕೊಳ್ಳುವರು. ಕನ್ನಡದಲ್ಲಿ ಏನಿಲ್ಲ? ಮರಾಠಿಯಲ್ಲಿ ಏನಿದೆ? ಎಂದು ಕೇಳಿದಾಗ ನಿರುತ್ತರರಾಗುವರು. ಯಾಕಂದರೆ ಅವರಿಗೆ ಕನ್ನಡ ಸಾಹಿತ್ಯದಷ್ಟೇ ಮರಾಠಿ ಸಾಹಿತ್ಯವೂ ಅಪರಿಚಿತ!

ಈ ದೃಷ್ಟಿಯಿಂದ ನೋಡಿದಾಗ, ಶ್ರೀಸಾಮಾನ್ಯನಲ್ಲಿ ಕನ್ನಡಭಾಷೆ-ಸಾಹಿತ್ಯಗಳ ಬಗ್ಗೆ ಅವನು ನಿರಕ್ಷರಕುಕ್ಷಿಯಾಗಿದ್ದರೂ ಸದಭಿರುಚಿ ಇದೆ. ನೃಪತುಂಗನು ಅಂದು ಹೇಳಿದ 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಎಂಬ ಮಾತು ಸಾರ್ಥಕವೆನಿಸುವುದು. ಲಾವಣಿಕಾರರು, ಗೀಗೀ ಮೇಳದವರು ಹಾಡುವ ಪದಗಳನ್ನು ಕೇಳಲು, ಕೃಷ್ಣಪಾರಿಜಾತ, ಸಂಗ್ಯಾಬಾಳ್ಯಾನ ಆಟ ಇಂಥ ಜಾನಪದ ಬಯಲಾಟ ಗಳನ್ನು ನೋಡಿ ಸಂತೋಷಪಡಲು. ಹಿಂಡುಗಟ್ಟಿಕೊಂಡು ಊರಿಂದ ಊರಿಗೆ ನಾಲ್ಕೆಂಟು ಮೈಲು ನಡೆದುಬಂದು, ಇಡೀರಾತ್ರಿ ನಿದ್ರೆಗೆಟ್ಟು ಬೆಳಕು ಹರಿಯುವ ಸುಮಾರಿಗೆ ತಮ್ಮ ಕೃಷಿ ಕೆಲಸಕ್ಕೆಂದು ಎದ್ದು ಹೋಗುವುದು ಇಂದಿಗೂ ಗ್ರಾಮಾಂತರ ಪ್ರದೇಶಗಳಲ್ಲಿ ಕಂಡುಬರುವ ದೃಶ್ಯ. ಶ್ರೀಸಾಮಾನ್ಯನಿಗೆ ಸಾಹಿತ್ಯದಲ್ಲಿ ಆಸಕ್ತಿ ಇದ್ದರೂ ಭಾಷಾಭಿಮಾನದಲ್ಲಿ ಅವನು ನಿರಾಸಕ್ತ. ತನಗೆ ಅನಿಸಿದ್ದನ್ನು ತನ್ನದೇ ಆದ ರೀತಿಯಲ್ಲಿ ಅಭಿವ್ಯಕ್ತಪಡಿಸುವುದು ಅವನಿಗೆ ಸ್ವಭಾವ ಸಹಜವಾಗಿ ಬಂದುದು. ತನ್ನ ಮನಸ್ಸಿನ ಮೇಲೆ ಪರಿಣಾಮ ಬೀರಿದ ಸಂಗತಿಯನ್ನು ಕೇಳುವವರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ವಿವರಿಸಬಲ್ಲ. ಶ್ರೀಸಾಮಾನ್ಯ ತೋರುವ ಆಸ್ಥೆ ಮೆಚ್ಚುವಂತ ಹದು. ಭಾಷೆಯ ಶುದ್ಧತೆ, ವ್ಯಾಕರಣದ ತೊಡಕು ಅವನ ದಾರಿಯಲ್ಲಿ ಅಡ್ಡಿಯಾಗಿ ನಿಲ್ಲವು. ಕನ್ನಡ ಶಬ್ದ, ಮರಾಠಿ ಶಬ್ದ, ಉರ್ದುಶಬ್ದ ಯಾವ ಶಬ್ದವಾದರೂ ಅವನ ಜಾನಪದಕಾವ್ಯಧಾರೆಯಲ್ಲಿ ಕೊಚ್ಚಿಕೊಂಡು, ಅವು ಸಾಹಿತ್ಯಸಿರಿಮುಡಿಯನ್ನು ಅಲಂಕರಿಸುವವು.

ಅಸಿಮಿಸಿ ಇಲ್ಲದೆ ಆಸಲಪದಾ ಶಾಂವಿಗಿ ಬಸದಾಂಗ।
ಕಸವಿಸಿಪಟ್ಟು ಹೊಸ ಮೊದಲಗಿತ್ತಿ ನಸುನಾಚಿ ಗಂಡನ
ಹೆಸರ ಹೇಳುವಾಗ ತಿಣಕಿ ತಿಣಕಿ ಹೊಸ ಶಬ್ದ ಹುಡಿಕಿ ಕೈ
ಕೊಸರಿ ಬಸರುಮಾ ಗಡಿಗಿಹಾಂಗ ಬದಿವಾರ ಮಾಡಜ್ಯಾಡಾ ಶಾಹೀರಾ॥

ಶ್ರೀಸಾಮಾನ್ಯನಲ್ಲಿ ಲಾವಣಿ ಪದ ಕಟ್ಟಿ ಹಾಡುವವನ ವಾಣಿಯು, ಒಂದು ಉದಾ ಹರಣೆ ಇದು. ಅವನು ಬಳಸುವ ಶಬ್ದ, ಅವನ ಭಾವವನ್ನು ಶ್ರೋತೃಗಳ ಮನಮುಟ್ಟಿ

ಸುವ ಸಾಧನ. ಕನ್ನಡ ಭಾಷೆ ಬೆಳೆಯಲು, ಇಂಥ ಶ್ರೀಸಾಮಾನ್ಯ ಜಾನಪದ ಕವಿಗಳು ಬಳಸಿದ ಶಬ್ದ, ಕನ್ನಡ ಶಬ್ದಭಾಂಡಾರದಲ್ಲಿರುವ ಸಂಪತ್ತು ಎಂದು ಗಣಿಸಲ್ಪಡಬೇಕು. ಪರಭಾಷೆಯ ಶಬ್ದಗಳನ್ನು ಅರಗಿಸಿಕೊಳ್ಳುವ ಶಕ್ತಿಯನ್ನು, ಕನ್ನಡ ಭಾಷೆಗೆ ಒದಗಿಸುವ ಕಾರ್ಯವನ್ನು ಶ್ರೀಸಾಮಾನ್ಯ ತನಗರಿಯದೇ ಮಾಡುತ್ತಿರುವನು. ಸಾಹಿತ್ಯಕ್ಕಾಗಿ ಸಾಹಿತ್ಯ, ಭಾಷೆಗಾಗಿ ಭಾಷೆ–ಈ ವಿಚಾರ ಸರಣಿ ಶ್ರೀಸಾಮಾನ್ಯನಿಗೆ ಅಪರಿಚಿತ. ಬಾಳು ವೆಗಾಗಿ ಭಾಷೆ, ಬದುಕಿಗಾಗಿ ಸಾಹಿತ್ಯ–ಇದು ಅವನ ವಿಚಾರ. ಅಂತೆಯೇ ಅವನು ಓದುಬರೆಹ ಕಲಿಯದಿದ್ದರೂ ಪುರಾಣ ಕೀರ್ತನಶ್ರವಣದಿಂದ, ತನ್ನ ಸಂಸ್ಕೃತಿಯ ಮಟ್ಟವನ್ನು ಉಳಿಸಿಕೊಂಡು ಬದುಕನ್ನು ಅರ್ಥಪೂರ್ಣವನ್ನಾಗಿಸಿದ್ದಾನೆ.

ನಾವು ಅಪೇಕ್ಷಿಸುವಂಥ ಭಾಷಾಪ್ರಜ್ಞೆ ಅವನಿಂದ ಗಾವುದ ಗಾವುದ ದೂರ. ಅವನ ಭಾಷೆ, ಸಾಹಿತಿಗಳು ತಮ್ಮದೆಂದು ಒಪ್ಪಿಕೊಂಡಾಗ, ಅವನಿಗೂ ಸಾಹಿತಿಗಳ ಭಾಷೆ, ತನ್ನ ಜೀವನದ ಆಗುಹೋಗುಗಳಿಗೆ ಸಂಬಂಧಿಸಿದ್ದು ಎಂಬ ಅರಿವು ಮೂಡೀತು. ಆಗ ಅವನಲ್ಲಿ ಭಾಷಾಪ್ರಜ್ಞೆ ನಾವು ಕಲ್ಪಿಸುವ ಅರ್ಥದಲ್ಲಿ ಅವನಲ್ಲಿ ಜಾಗೃತವಾದೀತು.

ಇದು ತಾನಾಗಿಯೇ ಸಾಧಿಸುವ ಕಾರ್ಯವೆಂದು ನನಗನಿಸುವುದಿಲ್ಲ. ಸಾಹಿತಿಗಳೆಂದು ಹೇಳಿಕೊಳ್ಳುವ ನಾವು, ಶ್ರೀಸಾಮಾನ್ಯನಿಂದ ಪ್ರತ್ಯೇಕಿಸಲ್ಪಟ್ಟವರಾಗಿ ಉಳಿದದ್ದಾದರೆ, ಶ್ರೀಸಾಮಾನ್ಯನಲ್ಲಿ ಭಾಷಾಪ್ರಜ್ಞೆ, ಸಾಹಿತ್ಯಾಭಿಮಾನ ಹುಟ್ಟಲಾರವು. ಸಾಹಿತಿಗಳು ತನ್ನವರು, ತನ್ನ ಭಾಷೆಯನ್ನು ಬಳಸುವವರು, ತನ್ನ ಜೀವನವನ್ನು ಸಮೃದ್ಧಿಗೊಳಿ ಸುವವರು ಎಂಬ ಭಾವನೆ ಶ್ರೀಸಾಮಾನ್ಯನಲ್ಲಿ ಹುಟ್ಟುವಂತೆ ನೋಡಿಕೊಳ್ಳುವುದು ಸಾಹಿತಿಗಳ ಪಾಲಿನ ಕೆಲಸ.

ಧನಾಢ್ಯರಾದ ಶ್ರೀಮಂತರ, ದೊಡ್ಡ ಸಂಬಳದ ನೌಕರದಾರರ, ವಿದ್ವಾನ್ನರೆನಿ ಸುವ ಸುಶಿಕ್ಷಿತರ, ಕಲಾವಿದರ ಜೀವನವನ್ನು ಚಿತ್ರಿಸುವ ಸಾಹಿತ್ಯ, ಶ್ರೀಸಾಮಾನ್ಯನಿಗೆ ತನ್ನದಲ್ಲವೆಂದೆನಿಸುವುದು. ಅಂಥ ಸಾಹಿತ್ಯದಲ್ಲಿ ಅವನಿಗೆ ಆಸ್ಥೆಯು ಹುಟ್ಟಲಾರದು.

ಶ್ರೀಸಾಮಾನ್ಯನು ಎದುರಿಸುತ್ತಿರುವ ಸಮಸ್ಯೆಗಳ ಸ್ವರೂಪದರ್ಶನ, ಅವನ ಆಸೆ-ಆಕಾಂಕ್ಷೆಗಳು, ಅವನನ್ನು ಮೆಟ್ಟುವ ಶಕ್ತಿಗಳು, ಹೂಡುವ ಕಾರಸ್ಥಾನ, ಮಾಡುವ ಕುತಂತ್ರ, ಅವನು ಸಮಾಜಜೀವಿಯಾಗಿ ಗೌರವದಿಂದ ಬಾಳಲು ಅನುಸರಿಸಬೇಕಾದ ರೀತಿ ನೀತಿ, ಆಚಾರ–ವಿಚಾರ, ಅವನ ಸಂಸಾರದ ಸಮಸ್ಯೆಗಳನ್ನು ಎದುರಿಸಲು ಜೀವನದ ಬಗ್ಗೆ ತಳೆಯಬೇಕಾದ ನಿಲುಮೆ, ಅಳವಡಿಸಿಕೊಳ್ಳಬೇಕಾದ ಗುಣಗಳು, ನೆರೆಹೊರೆಯವರೊಡನೆ, ಮಿತ್ರರೊಡನೆ ವ್ಯವಹರಿಸಬೇಕಾದ ವಿಧಾನ, ಇವುಗಳ ಚಿತ್ರಣವುಳ್ಳ ಸಾಹಿತ್ಯವು, ಶ್ರೀಸಾಮಾನ್ಯನ ಮನವನ್ನು ಆಕರ್ಷಿಸುವುದು. ಇಂಥ ಸಾಹಿತ್ಯವು ತನ್ನದೆಂಬ ಆತ್ಮೀಯ ಭಾವನೆ ಅವನಲ್ಲಿ ಹುಟ್ಟುವುದು. ಇಂಥ ಸಾಹಿತ್ಯ ವನ್ನು ಓದಿ ಅರಗಿಸಿಕೊಳ್ಳಲು ಅವನು ಸ್ವಯಂ ಪ್ರೇರಣೆಯಿಂದ ಮುಂದೆ ಬರುವನು.

ಇಂದು ಸುಶಿಕ್ಷಿತರೇ ಸಾಹಿತ್ಯ ನಿರ್ಮಾಪಕರು. ಅವರು ಬೆಳೆದುದು, ಶಿಕ್ಷಣ ಪಡೆಯುವುದು ನಾಗರಿಕ ಜೀವನದ ನಗರದ ವಾತಾವರಣದಲ್ಲಿ. ಅವರು ಸೃಷ್ಟಿಸುವ ಸಾಹಿತ್ಯ, ಶ್ರೀಸಾಮಾನ್ಯನಿಗೆ ಸಂಬಂಧ ಬಾರದ ಸಮಾಜಜೀವನದ ಬಗ್ಗೆ. ಶ್ರೀಮಂತರ, ವ್ಯಾಪಾರಿಗಳ, ನೌಕರದಾರರ, ಕಾರಖಾನೆಯ ಕಾರ್ಮಿಕರ ಜೀವನ ಚಿತ್ರಣ, ಹಳ್ಳಿಯಲ್ಲಿ ಹುಟ್ಟಿ ಅಲ್ಲಿಯೇ ಬೆಳೆದು ಬಾಳುವೆನಡೆಸುವ ನಮ್ಮ ದೇಶದ ಜನಸಂಖ್ಯೆಯಲ್ಲಿ ನೂರಕ್ಕೆ ೭೦ ರಷ್ಟು ಇರುವ ಕೃಷಿಯನ್ನು ಅವಲಂಬಿಸಿದ ಶ್ರೀಸಾಮಾನ್ಯನಲ್ಲಿ ಯಾವ ಆಸ್ಥೆಯನ್ನೂ ಹುಟ್ಟಿಸಲಾರದು. ಅದು ತನಗೆ ಸಂಬಂಧಿಸಿದ್ದಲ್ಲ ಎಂದು ಅವನು ಭಾವಿಸುವನು. ಈ ಕಾರಣದಿಂದಲೇ ಇಂದು ಪ್ರಕಟವಾಗುವ ಸಾಹಿತ್ಯದತ್ತ ಅವನ ಗಮನ ಹರಿಯುವುದಿಲ್ಲ.

ಉತ್ತಮ ನವ್ಯ ಕವನ, ನವ್ಯ ಕಥೆ, ಇವು ಇಂಗ್ಲೀಷ ಭಾಷೆಯನ್ನು ಕಲಿತು ಆ ಭಾಷೆಯ ಸಾಹಿತ್ಯಸವಿದವರಿಗೆ ಮಾತ್ರ ಮೀಸಲಾದ ಸಾಹಿತ್ಯವೆನ್ನುವ ಪರಿಸ್ಥಿತಿ ನಮ್ಮಲ್ಲಿ ತಲೆದೋರಿದೆ.

ಶರಣರ ವಚನಗಳು, ಅನುಭಾವ ಪದಗಳು, ಪುರಂದರದಾಸರ ಪದಗಳು, ಲಾವಣಿಗಳು, ಗೀ ಪದಗಳು, ಬಯಲಾಟಗಳು ಶ್ರೀಸಾಮಾನ್ಯನ ಮನಸ್ಸನ್ನು ಎಂದಿನಂತೆ ಇಂದೂ ಸೆರೆ ಹಿಡಿಯುವವು. ಆದರೆ ಆಧುನಿಕಕಥೆ, ಕಾದಂಬರಿಗಳು ಶ್ರೀಸಾಮಾನ್ಯನಿಂದ ಬಹಳ ದೂರವಾಗಿಯೇ ಉಳಿದಿರುವವು. ಶ್ರೀಸಾಮಾನ್ಯನ ಜೀವನ ಚಿತ್ರಣವನ್ನು ನೀಡುವಂಥ ಸಾಹಿತ್ಯಸೃಷ್ಟಿಗೆ ಸಾಹಿತಿಗಳು ಗಮನಕೊಟ್ಟು, ಅವನ ಜೀವನವನ್ನು ಸಮೀಪದಿಂದ, ಸಹಾನುಭೂತಿಯಿಂದ, ಆತ್ಮೀಯತೆಯಿಂದ ಅರಿತು ಕೊಂಡು, ಸಾಹಿತ್ಯಸೃಷ್ಟಿಗಿಳಿಯದಿದ್ದರೆ ಶ್ರೀಸಾಮಾನ್ಯನಿಗೂ ನಮ್ಮ ಸಾಹಿತ್ಯಕ್ಕೂ ಇರುವ ಕೊರಕಲು ಹಾಗೆಯೇ ಉಳಿಯುವುದೆಂಬಲ್ಲಿ ಸಂದೇಹವಿಲ್ಲ.

ಶ್ರೀಸಾಮಾನ್ಯನಲ್ಲಿ ನಾವು ಅಪೇಕ್ಷಿಸುವ ಭಾಷಾಪ್ರಜ್ಞೆ ಜಾಗೃತವಾಗಲು, ಅವನಿಗೆ ಸಾಹಿತ್ಯದಲ್ಲಿ ಆತ್ಮೀಯಭಾವನೆ ಹುಟ್ಟುವಂತಾಗಬೇಕು. ಸಾಹಿತ್ಯದ ಸವಿಯನ್ನು ಉಂಡ, ಶ್ರೀಸಾಮಾನ್ಯನಲ್ಲಿ ಭಾಷಾಭಿಮಾನ, ಸಾಹಿತ್ಯಾಭಿಮಾನ ತಾವಾಗಿಯೇ ಜಾಗೃತ ವಾಗುವವು. ಕನ್ನಡ ತನ್ನ ಭಾಷೆ ಎಂಬ ಅರಿವು ಈಗ ಶ್ರೀಸಾಮಾನ್ಯನಲ್ಲಿದೆ. ಅವನು ತನ್ನ ವ್ಯವಹಾರವನ್ನು ತನ್ನ ಭಾಷೆಯ ಮೂಲಕವೇ ನಡೆಸುವನು. ತನ್ನ ಭಾಷೆಯ ಬಗ್ಗೆ ಅವನಲ್ಲಿ ಪ್ರೀತಿಯೂ ಉಂಟು. ಆದರೆ ಅದು ಅವನಲ್ಲಿ ಭಾಷಾಪ್ರಜ್ಞೆಯ ಮುಖ್ಯ ಲಕ್ಷಣವಾದ ಆತ್ಮೀಯತೆಯ ಮಟ್ಟದಲ್ಲಿ ಇಲ್ಲ. ರೈತನು ದನಕರುಗಳನ್ನು ತನ್ನ ಹೊಟ್ಟೆಮಕ್ಕಳಂತೆ ಪ್ರೀತಿಸುವನು. ಅವುಗಳ ಪಾಲನೆ ಪೋಷಣೆಗೆ ಆದ್ಯ ಗಮನ ಕೊಡುವನು. ತಾನು ಉಪವಾಸ ಬಿದ್ದರೂ ಅವುಗಳು ಹೊಟ್ಟೆತುಂಬ ಮೇದು, ನೀರು ಕುಡಿದು ಮೆಲುಕಾಡಿಸುತ್ತ ಮಲಗಿದ್ದನ್ನು ನೋಡಿ ಸಂತಸಪಡುವನು. ಸಾಕಿದ ದನ-

ಕರುಗಳ ಬಗ್ಗೆ ಅವನಲ್ಲಿ ಆಳವಾದ ಪ್ರೀತಿ ಇರುವ ದ್ಯೋತಕ ಇದು. ಈ ಪ್ರೀತಿಗೆ ಕಾರಣ ಏನು ? ಅವು ತನಗೆ ಭೂಮಿಯನ್ನು ಉತ್ತಲು, ಬಿತ್ತಲು ತನ್ನ ಮಕ್ಕಳಿಗೆ ಹಾಲು-ಹೈನ ಒದಗಿಸಲು ಉಪಯುಕ್ತ ಪ್ರಾಣಿಗಳೆಂಬ ಕಾರಣದಿಂದ. ಬೆಲೆ ಹೆಚ್ಚಿಗೆ ಬಂದರೆ ತಾನು ಪ್ರೀತಿಯಿಂದ ಸಾಕಿದ ಪಶುಗಳನ್ನು ಮಾರಲು ಅಗ್ಗಬೆಲೆಗೆ ಅಷ್ಟೇ ಉಪ ಯುಕ್ತ ಕಾರ್ಯ ಮಾಡಬಲ್ಲ ಬೇರೆ ಪಶುಗಳನ್ನು ಕೊಳ್ಳಲೂ ಅವನು ಹಿಂದುಮುಂದೆ ನೋಡುವುದಿಲ್ಲ. ಅದೇ ರೈತ ತನಗೆ ಎಷ್ಟು ಕಷ್ಟಬಂದರೂ ತನ್ನ ಮಕ್ಕಳನ್ನು ಅಗಲಲು ಒಪ್ಪುವುದಿಲ್ಲ. ಇಲ್ಲಿ ಪ್ರೀತಿ–ಆತ್ಮೀಯತೆ ಇವುಗಳ ಭೇಧ ಒಡೆದು ಕಾಣುವದು.

ಶ್ರೀಸಾಮಾನ್ಯನ ಭಾಷಾಪ್ರೀತಿ ಅದು ತನ್ನ ವ್ಯವಹಾರದಲ್ಲಿ ಅಗತ್ಯವೆಂಬ ಭಾವ ನೆಯ ಮೂಲಕ ಹುಟ್ಟಿದ್ದು. ಕನ್ನಡ ಭಾಷೆಯು ತನ್ನ ಮಾನಸಿಕ ಶಾಂತಿಗೆ, ಆತ್ಮೋನ್ನ ತಿಗೆ ಅಗತ್ಯವೆಂಬ ಮನವರಿಕೆ ಅವನಿಗೆ ಆದಾಗ. ಅವನಲ್ಲಿ ಭಾಷೆಯ ಬಗ್ಗೆ ಆತ್ಮೀಯ ಭಾವನೆ ಬೆಳಗುವುದು. ತನ್ನ ಮಕ್ಕಳಂತೆ ಭಾಷೆಯ ಬಗ್ಗೆಯೂ ಅವನು ಆತ್ಮೀಯ ಭಾವನೆ ತಾಳುವನು. ಅಂದರೆ ಅದರ ಅಳಿವು-ಉಳಿವು ಎಂಬ ಭಾವನೆಯಿಂದ ಪ್ರೇರಿತ ನಾಗುವನು. ಆಗ ಅವನಲ್ಲಿ ಭಾಷಾಪ್ರಜ್ಞೆ ಇರುವುದೆಂದು ಹೇಳಿದರೆ ಅದು ಸಾರ್ಥಕ ವೆನಿಸೀತು.

ಶ್ರೀಸಾಮಾನ್ಯನಲ್ಲಿ ಭಾಷಾಪ್ರಜ್ಞೆ ಕುದುರಲು, ಅವನು ಸಾಹಿತ್ಯರಸಾಸ್ವಾದನೆ ಮಾಡುವಂತಾಗಬೇಕಾದುದು ಅಗತ್ಯ ಎಂಬ ಮಾತು ಮನದಟ್ಟಾಗಬಹುದು.

ನಾನು ಇದೀಗ ಹೇಳಿದಂತೆ ಶ್ರೀಸಾಮಾನ್ಯನ ಮನಸ್ಸನ್ನು ಆಕರ್ಷಿಸುವಂಥ ಅವನ ಮನಸ್ಸಿನ ಭಾವನೆಗಳನ್ನು ಪ್ರತಿಬಿಂಬಿಸುವಂಥ ಸಾಹಿತ್ಯಕೃತಿಗಳು ಬೆಳಕಿಗೆ ಬರುವಂತೆ ಸಾಹಿತಿಗಳು ನೋಡಿಕೊಳ್ಳಬೇಕಾದುದು. ಶ್ರೀಸಾಮಾನ್ಯನಲ್ಲಿ ಭಾಷಾಪ್ರಜ್ಞೆ ಜಾಗೃತಗೊಳಿಸಲು ಅತ್ಯಗತ್ಯವಾಗಿ ಆಗಬೇಕಾದ ಕಾರ್ಯ.

ಸಾಹಿತ್ಯ ಸೃಷ್ಟಿಯಾಗಿ ಅದು ಮುದ್ರಣ ಹೊಂದಿ, ಹೊತ್ತಿಗೆ ರೂಪ ತಾಳಿ ಓದು ಗರಿಗೆ ಲಭ್ಯವಾದರೆ ಕೆಲಸ ತೀರಿತು ಎಂದು ಭಾವಿಸುವುದು ಶುದ್ಧ ಭ್ರಮೆಯೇ ಸರಿ. ಶ್ರೀಸಾಮಾನ್ಯನಲ್ಲಿ ಓದು ಬರೆಹ ಬಲ್ಲವರ ಸಂಖ್ಯೆ ತೀರ ಸ್ವಲ್ಪ. ಓದು ಬರೆಹ ಬಲ್ಲ ವರಿಗೂ ಪುಸ್ತಕ ಅಂಗಡಿಗೆ ಹೋಗಿ. ತನಗೆ ರುಚಿಸಬಹುದಾದ ಹೊತ್ತಿಗೆಯನ್ನು ಗುರು ತಿಸಿ ಕೊಂಡು ತಂದುಓದುವ ಹವ್ಯಾಸವೇ ಇಲ್ಲದಿರುವಾಗ ಸೃಷ್ಟಿಯಾದ ಸಾಹಿತ್ಯ ಶ್ರೀಸಾಮಾನ್ಯನ ಮನೆಗೆ ಮುಟ್ಟುವುದೇ ದುಸ್ತರವೆನಿಸುವ ಪರಿಸ್ಥಿತಿ ಇರುವಾಗ, ಅವನ ಮನಸ್ಸಿಗೆ ತಟ್ಟುವ ದಾರಿಯನ್ನು ಕಂಡುಹಿಡಿಯದೆ ವಿಧಿ ಇಲ್ಲ.

ಶ್ರೀಸಾಮಾನ್ಯನಲ್ಲಿ ಸಾಹಿತ್ಯಾಭಿರುಚಿ ಹುಟ್ಟಿಸಿ ಅವನಲ್ಲಿ ಭಾಷಾಪ್ರಜ್ಞೆಯನ್ನು ಜಾಗೃತಗೊಳಿಸಲು ಸಾಹಿತ್ಯಪ್ರಸಾರದ ಯೋಜನೆಯನ್ನು ಮಾಡಬೇಕಾಗುವುದು. ಇಂಥ ಯೋಜನೆಯ ಅಗತ್ಯ ಹಿಂದೆ ಎಂದೂ ಇಲ್ಲದಷ್ಟು ಈಗ ಇದೆ ಎಂದು ಹೇಳಬೇ

ಗಿವೆ. ಯಾಕೆಂದರೆ ಈಗ ನಾವು ಪ್ರಜಾಪ್ರಭುತ್ವ ರಾಜ್ಯಪದ್ಧತಿಯನ್ನು ಒಪ್ಪಿಕೊಂಡಿದ್ದೇವೆ. ನೂರಕ್ಕೆ ೮೦ ರಷ್ಟು ಸಂಖ್ಯಾಬಲ ಹೊಂದಿದ ಶ್ರೀಸಾಮಾನ್ಯನು. ಮಾತನಾಡುವ ಪಶುವಿನ ಸ್ಥಿತಿಯಲ್ಲಿ ಉಳಿಯುವುದು, ಪ್ರಜಾಪ್ರಭುತ್ವ ರಾಜ್ಯಪದ್ಧತಿಯ ಯಶಸ್ಸಿಗೆ ಮಾರಕವಾಗಿ ಪರಿಣಮಿಸಬಹುದು. ಅವನು ತನ್ನ ಒಳಿತು-ಕೆಡಕು, ಹಿತ-ಅಹಿತ, ತನ್ನ ಸಂಸ್ಕೃತಿ, ತನ್ನ ಭಾಷೆ, ತನ್ನ ಆಗು-ಹೋಗುಗಳ ಬಗ್ಗೆ ವಿಚಾರ ಮಾಡುವ ನಾಗರಿಕ ಜ್ಞಾನಸಂಪನ್ನನಾಗಬೇಕೆಂದು ಸರಕಾರವು, ಶಿಕ್ಷಣಕ್ಕಾಗಿ ಕೋಟಿಗಟ್ಟಲೆ ಹಣವನ್ನು ವೆಚ್ಚ ಮಾಡುತ್ತಿದೆ.

ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿರುವುದರಿಂದ ಹೇಗೋ ಸಾಲಿಗೆ ಹೋಗಿ ಅಕ್ಷರಜ್ಞಾನ ಸಂಪಾದಿಸಿ, ಸಾಲಿ ಬಿಟ್ಟನಂತರ ತನ್ನ ವ್ಯವಸಾಯಕ್ಕೆ ಹತ್ತುವವರ ಸಂಖ್ಯೆ ದೊಡ್ಡದಿದೆ. ಸಾಲಿ ಬಿಟ್ಟು ನಾಲ್ಕಾರು ವರ್ಷ ಮಣ್ಣಿನ ಮಗನಾಗಿ ಎತ್ತಿನ ಬೆನ್ನು ಹತ್ತಿದ ಯುವಕ, ಕಲಿತದ್ದನ್ನೆಲ್ಲ ಮರೆತು ತನ್ನ ಸಹಿ ಹಾಕುವ ಮಟ್ಟಿಗೆ ಅಕ್ಷರಾಭ್ಯಾಸದ ಪ್ರಯೋಜನ ಪಡೆಯುವ ಸ್ಥಿತಿಗಿಳಿಯುವನು. ಇವನ ಶಿಕ್ಷಣಕ್ಕಾಗಿ ಸರಕಾರವು ವೆಚ್ಚಮಾಡಿದ ಹಣವೆಲ್ಲ ಅಪವ್ಯಯವಾದಂತೆಯೇ ಸರಿ. ವರ್ಷಕ್ಕೆ ೬೦ ಕೋಟಿ ರೂ. ರಾಜ್ಯಸರಕಾರವು ಶಿಕ್ಷಣಕ್ಕಾಗಿ ವೆಚ್ಚಮಾಡುವುದು. ಇದರಲ್ಲಿ ಬಹುದೊಡ್ಡ ಭಾಗ ಪ್ರಾಥಮಿಕ ಶಿಕ್ಷಣಕ್ಕಾಗಿಯೇ ಇರುವುದರಿಂದ, ಅದರಲ್ಲಿ ಬಹಳಷ್ಟು ಹಣ ನಿರರ್ಥಕವಾಗಿ ವೆಚ್ಚವಾದಂತಾಗುವುದು ವಸ್ತುಸ್ಥಿತಿ. ಈ ಹಣವು ಸಾರ್ಥಕವೆನಿಸಬೇಕಿದ್ದರೆ, ಹಳ್ಳಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣ ಪಡೆದು ಸಾಲಿ ಬಿಟ್ಟ ಮಕ್ಕಳು ತಾವು ಪಡೆದ ಅಕ್ಷರಜ್ಞಾನದ ಸದುಪಯೋಗ ಮಾಡಿಕೊಳ್ಳುವಂತೆ, ಕಲಿತದ್ದು ಪೂರ್ತಿ ಮರೆತು ಹೋಗದಂತೆ, ಸಾಲಿ ಬಿಟ್ಟ ಮಕ್ಕಳಿಗೆ ಓದುವ ಚಟ ಹತ್ತುವಂತೆ, ಗ್ರಾಮಾಂತರ ಪ್ರದೇಶದ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸುವಂತೆ, ವಾಚನಾಲಯಗಳನ್ನು ಸ್ಥಾಪಿಸುವುದು ತನ್ನ ಕರ್ತವ್ಯವೆಂದು ಸರಕಾರವು ಒಪ್ಪಬೇಕು.

ಜನರ ಆರೋಗ್ಯ ಕಾಪಾಡಲು ಹೆಲ್ಥಸೆಸ್ ಹಾಕಿದಂತೆ, ಜನರ ಮಾನಸಿಕ ಸ್ವಾಸ್ಥ್ಯಕ್ಕಾಗಿ ವಾಚನಾಲಯ ಸ್ಥಾಪಿಸಲು, ವಾಚನಾಲಯಸೆಸ್ ಹೇರಿಹೇರಿ ಸಂಗ್ರಹಿಸಿದ ಹಣವು ಈಗ ಶಹರಗಳಲ್ಲಿ ವಾಚನಾಲಯ ತೆರೆಯಲು, ಅವುಗಳನ್ನು ಸುವ್ಯವಸ್ಥಿತವಾಗಿ ನಡೆಸಲು ವಿನಿಯೋಗಿಸಲ್ಪಡುವುದೆಂದು ಕೇಳಿದ್ದೇನೆ. ಈ ಹಣವನ್ನು ಗ್ರಾಮಪಂಚಾಯತಿಗಳಿಗೆ ಕೊಟ್ಟು, ಪ್ರತಿ ಹಳ್ಳಿಗೂ ಒಂದು ವಾಚನಾಲಯ ಸ್ಥಾಪಿಸುವುದು ಗ್ರಾಮಪಂಚಾಯತಿಗಳ ಆದ್ಯ ಕರ್ತವ್ಯವೆಂದು ಸರಕಾರವು ವಿಧಿಸಿದರೆ, ಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು ವ್ಯವಸಾಯ ರಂಗಕ್ಕಿಳಿದ ಯುವಕರು, ನಿರಕ್ಷರರ ಮಹಾಸಾಗರದಲ್ಲಿ ಸಮಾವೇಶವಾಗುವುದನ್ನು ತಪ್ಪಿಸಲು ಪ್ರಥಮ ಕ್ರಮ ಕೈಕೊಂಡಂತೆ ಆಗುವುದು.

ವಾಚನಾಲಯ ಸ್ಥಾಪಿಸಿದ ಮಾತ್ರಕ್ಕೆ ಏನನ್ನೂ ಸಾಧಿಸಿದಂತಾಗಲಾರದು. ಹಳ್ಳಿಯ ಜನರಿಗೆ ಅದು ತಮ್ಮದು; ತಮ್ಮ ಜ್ಞಾನಾರ್ಜನೆಗಾಗಿ ಸ್ಥಾಪಿತವಾದ ಸಂಸ್ಕೃತಿ ಮಂದಿರವದು ಎಂಬ ಆತ್ಮೀಯಭಾವನೆ ಅಕ್ಷರಸ್ಥರಲ್ಲಿ, ಸ್ತ್ರೀ-ಪುರುಷ, ಬಾಲಕ-

ಬಾಲಿಕೆ, ವೃದ್ಧ-ಯುವಕ ಎಲ್ಲರಲ್ಲಿ ಜಾಗೃತವಾಗುವಂತೆ ವಾಚನಾಲಯದಲ್ಲಿ ನಿತ್ಯವೂ ಸಾಯಂಕಾಲ ಪುರಾಣವಾಚನ, ಲಾವಣಿಗೀತ, ಕಥೆ ಹೇಳುವುದು. ಸುದ್ದಿಯನ್ನು ಓದಿ ವಿವರಣೆ ನೀಡುವುದು–ಮುಂತಾದ ಕಾರ್ಯಕ್ರಮಗಳು ನಡೆಯುವಂತೆ ಏರ್ಪಾಟು ಮಾಡಬೇಕು.

ಹಳ್ಳಿಯ ಕನ್ನಡ ಪ್ರಾಥಮಿಕ ಶಾಲಾಮಾಸ್ತರರಲ್ಲಿ ಒಬ್ಬರಿಗೆ ವಾಚನಾಲಯ ನಡೆಸಲು ವಿಶೇಷ ಭತ್ತೆ ನೀಡುವ ಯೋಜನೆ ಮಾಡಬೇಕು. ಅವರು ನಿತ್ಯವೂ ಒಂದು ತಾಸು ಸಾರ್ವಜನಿಕರನ್ನು ವಾಚನಾಲಯದ ಆವಾರದಲ್ಲಿ ಕಲೆಹಾಕಿ, ಈ ಕಾರ್ಯಕ್ರಮ ನಡೆಸುವುದು ತಮ್ಮ ಕರ್ತವ್ಯವೆಂದು ವಿಧಿಸಬೇಕು. ಶಾಲೆಬಿಟ್ಟ ಮಕ್ಕಳಿಗೆ ಓದಲು ಚಿಕ್ಕಪುಟ್ಟ ಪುಸ್ತಕಗಳನ್ನು ವಾಚನಾಲಯದಿಂದ ಕೊಟ್ಟು. ಅವರು ಅದನ್ನು ಓದಿ ತಾವು ಅರಿತುದನ್ನು ಸಭೆಯಲ್ಲಿ ವಿವರಿಸಿ ಹೇಳುವಂತೆ. ಪದಗಳನ್ನು ಕಂಠಪಾಡಿ ಹಾಡುವಂತೆ ಪ್ರೋತ್ಸಾಹಿಸಲು, ಕೆಲವೊಂದು ಪಾರಿತೋಷಕಗಳನ್ನು ಗ್ರಾಮದ ಹಿರಿಯರ ಹಸ್ತದಿಂದ ಕೊಡಿಸುವ ಏರ್ಪಾಟು ಮಾಡಬೇಕು.

ಈ ಬಗೆಯ ವ್ಯವಸ್ಥೆಮಾಡಿದ್ದಾದರೆ. ವಾಚನಾಲಯದಲ್ಲಿ ಪುಸ್ತಕಗಳು ಧೂಳು ತಿನ್ನುತ್ತ ಬೀಳುವುದು ತಪ್ಪಿ. ಅವು ಸಾರ್ವಜನಿಕರ ಗಮನಕ್ಕೆ ಬಂದು, ಅಭಿರುಚಿ ಇದ್ದವರು ಓದಿ, ಅದರ ಸಾರವನ್ನು ತಮ್ಮ ನೆರೆಹೊರೆಯ ಬಾಂಧವರಿಗೆ ತಿಳಿಸುವ ಸಂಪ್ರದಾಯ ಬಳಕೆಯಲ್ಲಿ ಬರುವುದು. ಆಗ ಶ್ರೀಸಾಮಾನ್ಯರು ನಿರಕ್ಷರಕುಕ್ಷಿಗಳಾಗಿ ಉಳಿಯುವುದು ತಪ್ಪಿ, ಓದುವ ಅಭಿರುಚಿಯನ್ನು ಮೈಗೂಡಿಸಿಕೊಂಡವರ ಸಂಖ್ಯೆ ಕ್ರಮೇಣ ಬೆಳೆಯುತ್ತ ನಡೆಯುವುದು.

ಶ್ರೀಸಾಮಾನ್ಯನಲ್ಲಿ ಭಾಷಾಪ್ರಜ್ಞೆಯನ್ನು ಜಾಗೃತಗೊಳಿಸಲು ಗ್ರಾಮವಾಚನಾಲಯಗಳು ಈ ರೀತಿ ಕೆಲಸಮಾಡುವುದಾದಲ್ಲಿ, ಅವು ಪ್ರಭಾವೀಪಾತ್ರವಹಿಸಬಲ್ಲವು. ಗ್ರಾಮವಾಚನಾಲಯಗಳಿಗೆ ಪೂರೈಸತಕ್ಕ ಸಾಹಿತ್ಯ, ಶ್ರೀಸಾಮಾನ್ಯನಮೇಲೆ ಹೇರಿದ ಅವನ ಮನಸ್ಸನ್ನು ಸೂರೆಗೊಳ್ಳದ ಸಾಹಿತ್ಯವಾದರೆ. ವಾಚನಾಲಯಗಳು ಕೋಂಡವಾಡೆಗಳಾಗುವ ಭಯವಿದೆ. ಅವು ಶ್ರೀಸಾಮಾನ್ಯನ ದೃಷ್ಟಿಯಲ್ಲಿ ಸರಸ್ವತೀ ಮಂದಿರಗಳಾಗಬೇಕಿದ್ದರೆ, ಅವುಗಳಲ್ಲಿಡುವ ಸಾಹಿತ್ಯಕೃತಿಗಳು ಶ್ರೀಸಾಮಾನ್ಯನ ಅಚ್ಚುಮೆಚ್ಚಿನವೆನಿಸುವಂಥವಾಗಿರಬೇಕು. ಪ್ರಕಾಶಕರು ಯಾರಿಂದಲೋ ಬರೆಸಿಮುದ್ರಿಸಿದ ಸಾಹಿತ್ಯವನ್ನು. ವಾಚನಾಲಯಗಳ ಚಾಲಕರಿಗೆ ಕಮೀಶನ್‌ಕೊಟ್ಟು, ಮಾರಾಟಮಾಡಿ ಜನರಿಗೆ ಬೇಡಾದ ಸಾಹಿತ್ಯವನ್ನು ವಾಚನಾಲಯದಲ್ಲಿ ಭರತಿಮಾಡುವುದಕ್ಕೆ ತಡೆಹಾಕುವುದು ನಿರೀಕ್ಷಿಸಿದಷ್ಟು ಸುಲಭವಲ್ಲ. ಆದರೆ ಭಾಷಾಪ್ರಜ್ಞೆಯನ್ನು ಶ್ರೀಸಾಮಾನ್ಯರಲ್ಲಿ ಜಾಗೃತಗೊಳಿಸುವ ಉದ್ದೇಶಸಾಧನೆಗಾಗಿ ಶ್ರಮಿಸುವ 'ವಿದ್ಯಾವರ್ಧಕ ಸಂಘ'ದಂಥ ಸಂಸ್ಥೆಗಳು. ಗ್ರಾಮಾಂತರ ವಾಚನಾಲಯಗಳಿಗಾಗಿ ಯೋಗ್ಯ ಸಾಹಿತ್ಯಕೃತಿಗಳನ್ನು ಸಂಪಾದಿಸಿ, ಪ್ರಕಟಿಸುವ ಒಗ್ಗ ಸಾಹಿತಿಗಳ ಒಂದು ಮಂಡಲವನ್ನು ರಚಿಸಿ ಅವರ ನೆರವಿನಿಂದ ಪ್ರಕಟಿಸಿದ ಸಾಹಿತ್ಯವನ್ನು

ಗ್ರಾಮಾಂತರ ವಾಚನಾಲಯಗಳು ಕೊಂಡರೆ, ಅರ್ಧ ಬೆಲೆಯನ್ನು ಸರಕಾರವು ವಾಚನಾಲಯಕ್ಕೆ ಗ್ರ್ಯಾಂಟರೂಪದಲ್ಲಿ ನೀಡುವ ಪರಿಪಾಠಹಾಕಿದರೆ, ಪ್ರಕಾಶಕರು ವಾಚನಾಲಯಗಳಲ್ಲಿ, ಸಲ್ಲದ ಸಾಹಿತ್ಯ ಒಯ್ದು ತುಂಬುವುದಕ್ಕೆ ತಡೆಬೀಳಬಹುದು ಎಂದು ನನ್ನ ಎಣಿಕೆ.

ಶತಮಾನಗಳಿಂದ ನಡೆದು ಬಂದ ರಾಜಕೀಯ. ಸಾಮಾಜಿಕ ಸ್ಥಿತ್ಯಂತರಗಳ ಫಲವಾಗಿ ಕರ್ನಾಟಕಪ್ರದೇಶದಲ್ಲಿ ಅದರಲ್ಲಿಯೂ ಉತ್ತರಕರ್ನಾಟಕದಲ್ಲಿ ಲುಪ್ತವಾಗಿರುವ ಭಾಷಾಪ್ರಜ್ಞೆ. ಇತ್ತೀಚೆಗೆ ರಾಜಕೀಯಪ್ರಜ್ಞೆ-ಸ್ವಾತಂತ್ರ್ಯ ಆಂದೋಲನದ ಅಂಗವಾಗಿ ಜಾಗೃತವಾದದ್ದು ನಿಜ. ಅಂತೆಯೇ ಹರಿದುಹಂಚಿಹೋದ ಕರ್ನಾಟಕ ಏಕೀಕರಣ ಸಾಧಿಸಲು, ರಾಜಕೀಯ ಮುಖಂಡರು ಹೋರಾಟಪ್ರಾರಂಭಿಸಿದರು. ಆದರೆ ಕನ್ನಡ ಭಾಷಾಪ್ರಜ್ಞೆಯು ಜಾಗೃತವಾಗದೆ, ರಾಜಕೀಯಪ್ರಜ್ಞೆಯಿಂದ ಒಂದಾದ ಕರ್ನಾಟಕ ರಾಜ್ಯದ ಶ್ರೀಸಾಮಾನ್ಯನ ಮಾನಸಿಕಉನ್ನತಿ. ಸಾಂಸ್ಕೃತಿಕ ಏಳಿಗೆ ಅಸಾಧ್ಯ. ರಾಜಕೀಯ ಮುಖಂಡರು ತತ್ವಶಃ ಈ ಮಾತನ್ನು ಒಪ್ಪಿದರೂ ಅವರಿಗೆ ಭಾಷಾಪ್ರಜ್ಞೆಯನ್ನು ಜಾಗೃತಗೊಳಿಸುವಂಥ ಕಾರ್ಯಕ್ರಮ ರೂಪಿಸಿ. ಕಾರ್ಯರೂಪಕ್ಕೆ ಇಳಿಸುವ ವ್ಯವಧಾನವಿಲ್ಲ. ಸಾಹಿತಿಗಳಾದವರು ಈ ಕೆಲಸ ಮಾಡಬೇಕಾಗಿದೆ.

ಶ್ರೀಸಾಮಾನ್ಯನ ಸ್ಥಿತಿಸುಧಾರಿಸಲು ಅವನಿಗೆ ತಿಳಿಯುವ ಭಾಷೆಯಲ್ಲಿ ಆಡಳಿತ ನಡೆಯುವಂತಾಗಿ, ಅವನು ಪರಕೀಯರ ಆಡಳಿತದಿಂದ ಮುಕ್ತನಾಗಿ. ಸ್ವತಂತ್ರನಾಗರಿಕನಂತೆ ಜೀವಿಸಲು, ರಾಜಕೀಯ ಸ್ವಾತಂತ್ರ್ಯ ಅಗತ್ಯ ಎಂದು ಸಾಹಿತಿಗಳು. ಸ್ವಾತಂತ್ರ್ಯ ಹೋರಾಟಕ್ಕೆ ಜನತೆಯನ್ನು ಪ್ರೇರೇಪಿಸಲು ತಮ್ಮ ಲೆಕ್ಕಣಿಕೆಯನ್ನು ಬಳಸಿದರು. ಕನ್ನಡನಾಡು ಒಂದಾಗಬೇಕೆಂದು ಹಂಬಲಿಸಿದರು. ಕರ್ನಾಟಕರಾಜ್ಯದ ಉದಯವಾಗುವ ಕನಸು ಕಂಡರು, ಇಂದು ಅವರ ಕನಸುನನಸಾಗಿದೆ. ಆದರೆ ಶ್ರೀಮಾನ್ಯನಿಗೆ ಪರಕೀಯ ಇಂಗ್ಲೀಷಭಾಷೆಯ ಆಡಳಿತದಿಂದ ಬಿಡುಗಡೆಹೊಂದಲಾಗಿಲ್ಲ. ತನ್ನ ಭಾಷೆ, ಸಂಸ್ಕೃತಿಗಳ ಪ್ರಜ್ಞಾಹೀನ ಸ್ಥಿತಿಯಿಂದ ಅವನನ್ನು ಎಚ್ಚರಿಸಲು. ರಾಜಕೀಯಸ್ವಾತಂತ್ರ್ಯದಿಂದ ಪ್ರಯೋಜನವಾಗಿಲ್ಲ. ಕೇವಲ ಮತಹಾಕುವ ಯಂತ್ರವಾಗಿ ಉಳಿಯುವ ಸ್ಥಿತಿಯಿಂದ ಶ್ರೀಮಾನ್ಯನು ಮುಕ್ತನಾಗಿ, ತಾನು ಈ ರಾಜ್ಯದ ಪ್ರಭು ಎಂಬ ಅರಿವುಳ್ಳವನಾಗುವಂತೆ ಪ್ರಜ್ಞಾವಂತ ನಾಗರಿಕನಾಗುವಂತೆ ಮಾಡುವ ಕೆಲಸ, ಸ್ವಾರ್ಥಬುದ್ಧಿಯ ಸಾಹಿತಿಗಳಿಂದಾಗಬೇಕು.

ಒಂಟಿಯಾಗಿ ಸಾಹಿತಿ, ತನ್ನ ಲೆಕ್ಕಣಿಕೆಯಿಂದ ಅದ್ಭುತಜನಜಾಗೃತಿ ಮಾಡಬಲ್ಲನೆಂಬುದು ಒಪ್ಪತಕ್ಕಮಾತು. ಆದರೂ ಇದು ಸಂಘಶಕ್ತಿಯ ಕಾಲ. ಸಾಹಿತಿಗಳು ಸಂಘ-ಸಂಸ್ಥೆಗಳ ಮುಖಾಂತರ. ಕಾರ್ಯಪ್ರವೃತ್ತರಾದರೆ ಅವರ ಧ್ವನಿಗೆ ಅರ್ಥಬರುತ್ತದೆ. ಶ್ರೀಸಾಮಾನ್ಯನೂ ಎಚ್ಚತ್ತು; ಅದರ ಮಾರ್ಗದರ್ಶನಕ್ಕಾಗಿ ಮುಂದೆ ಬರುವಂತಾದೀತು.

ಅನ್ಯಭಾಷಾ ಬೋಧನೆ :
೫. ಭಾಷಾ ಅಧ್ಯಾಪನ ತತ್ವಗಳು

ವಿಲ್ಯಂ ಮಾಡ್ತ

ಅನ್ಯಭಾಷೆ ಸ್ವಭಾಷೆಯಂತೆ ನಿರರ್ಗಳವಾಗಿ ಬಳಸಲು ಸಾಧ್ಯವಾದರೆ ವಿದ್ಯಾರ್ಥಿ ಆ ಭಾಷೆಯನ್ನು ಕಲಿತಂತಾಗುತ್ತದೆ. ಈ ರೀತಿಯಲ್ಲಿ ಒಬ್ಬ ವಿದ್ಯಾರ್ಥಿಗೆ ಭಾಷೆ ಕರಗತಗೊಳ್ಳಬೇಕಾದರೆ, ಕೆಲವು ತತ್ವಗಳನ್ನು ಅನುಸರಿಸಿ ಕಲಿಸಬೇಕಾಗುತ್ತದೆ. ಪ್ರಸ್ತುತದಲ್ಲಿ ರೊಬರ್ಟ್ ಲೆಡೊರವರು ಸೂಚಿಸಿದ ಭಾಷಾ ಅಧ್ಯಾಪನ ತತ್ವಗಳನ್ನು ಸ್ಥೂಲವಾಗಿ ಚರ್ಚಿಸಲಾಗಿದೆ.

೧. ಮಾತು ಮೊದಲು, ಬರಹ ಆಮೇಲೆ

ಭಾಷೆಯ ಹುಟ್ಟು ಮಾತಿನ ರೂಪದಲ್ಲಿ. ಅದರ ಸಾಹಿತ್ಯರೂಪ ಇತ್ತೀಚಿನದು. ಈಗಲೂ ಜಗತ್ತಿನ ಎಷ್ಟೋ ಭಾಷೆಗಳಿಗೆ ಲಿಪಿಯೇ ಇಲ್ಲ. ಆದರೂ ಅವು ಪರಸ್ಪರ ಸಂಪರ್ಕದ ವಿಷಯದಲ್ಲಾಗಲಿ, ವಿಶಿಷ್ಟವಾದ ಭಾಷಾರಚನೆಗಳಲ್ಲಾಗಲಿ ಇತರ ಭಾಷೆಗಳಿಗೆ ತಲೆಬಾಗಬೇಕಾಗಿಲ್ಲ. ಬರಹ ಭಾಷೆಯ ಒಂದು ಚಿತ್ರಮಾತ್ರ. ಅದರ ನೈಜಸ್ವರೂಪ ಮಾತು ಅರ್ಥಾತ್ ಆಡುನುಡಿ. ಕಾರಣ ಬರಹ ಆಡುನುಡಿಯನ್ನು ಎಂದೆಂದಿಗೂ ಸಂಪೂರ್ಣವಾಗಿ ಪ್ರತಿಬಿಂಬಿಸಲಾರದು. ಆದುದರಿಂದ ಭಾಷಾ ಅಧ್ಯಾಪನದಲ್ಲಿ ಸುರುವಿಗೆ ಆಡುಮಾತಿಗೆ ಪ್ರಾಧಾನ್ಯತೆ ಕೊಡುವುದು ಸ್ವಾಭಾವಿಕ.

ಬರಹವನ್ನು ಮೊದಲು ಕಲಿಸದೆ. ವಿದ್ಯಾರ್ಥಿಗೆ ಭಾಷಾರಚನೆಯ ಕಲ್ಪನೆ ಬರುವುದಿಲ್ಲ. ಯಾಕೆಂದರೆ, ಭಾಷೆ ತನ್ನ ಸರ್ವಲಕ್ಷಣಗಳನ್ನೆಲ್ಲ ಅಭಿವ್ಯಕ್ತಗೊಳಿಸುವುದು ಶ್ರಾವಣ ರೂಪದಲ್ಲಿಯೇ ಹೊರತು ಚಾಕ್ಷುಷ ರೂಪದಲ್ಲಿ ಅಲ್ಲ. ಭಾಷೆಯ ಅವಿಭಾಜಕ ಘಟಕಗಳಾದ ಸ್ವರ, ಆಘಾತ, ಏರಿಳಿತ, ವಿರಾಮ ಮೊದಲಾದವುಗಳನ್ನು ಬರಹದ ಮೂಲಕ ಕಲಿಸುವುದು ದುಸ್ಸಾಧ್ಯ. ಇವುಗಳನ್ನು ಆಡುಮಾತಿನ ಮೂಲಕವೇ ಕಲಿಯಬೇಕು. ಉದಾಹರಣಾರ್ಥವಾಗಿ ಕೆಳಗಿನ ಸಂಭಾಷಣೆಯನ್ನು ಗಮನಿಸಬಹುದು :

Othells — Have you to say anything...?
Iago — .... Nothing about it.
O — Nothing ?
I — No, nothing.
O — Nothing !
I — Nothing.

ಇಲ್ಲಿ Nothing ಎಂಬ ಶಬ್ದ ಸಂಭಾಷಣೆಯಲ್ಲಿ ಅಗ್ರಸ್ಥಾನ ಪಡೆದಿದೆ. ಬರೇ ಬರಹದ ಮೂಲಕ ವಿದ್ಯಾರ್ಥಿಗೆ Nothing ಎಂಬ ಪದದ ಅರ್ಥವಾಗದು. ಬೋಧಕನು ಸಂದರ್ಭಕ್ಕನುಗುಣವಾಗಿ ಧ್ವನಿ ವ್ಯತ್ಯಾಸಗಳನ್ನು ಬಳಸಿ ಪಾಠಮಾಡಿದಾಗ, ಪ್ರತಿಸಲವೂ ಬಳಸಲಾದ Nothing ಎಂಬ ಪದದ ವಿವಿಧಾರ್ಥಗಳು ವಿದ್ಯಾರ್ಥಿಗಳಿಗೆ ಹೊಳೆಯುತ್ತವೆ. ಭಾಷೆಯು ಏರಿಳಿತಗಳನ್ನು ಮಾತಿನಲ್ಲಿ ಪ್ರಕಟಗೊಳಿಸಬಹುದೇ ಹೊರತು, ಬರಹದಲ್ಲಿ ಸಾರ್ಥಕವಾಗಿ ಮೂಡಿಸುವದು ಅಸಾಧ್ಯ.

ಒಂದು ಭಾಷೆಯ ಪುಸ್ತಕಗಳನ್ನು ಓದಲು ಅಥವಾ ಬರೆಯಲು ಕಲಿತರೆ ಸಾಕಾಗದು. ಒಂದು ಭಾಷೆಯನ್ನಾಡುವ ಸಮಾಜದೊಡನೆ ನಾವು ಸುಪರಿಚಿತರಾಗಿ ಬೆರೆತು ಕಲಿಯಬೇಕಾದರೆ, ಅವರ ಆಡುಮಾತಿನ ಪರಿಚಯ ನಮಗಿರಲೇಬೇಕು. ಈ ಉದ್ದೇಶವನ್ನು ಸಾಧಿಸಲು, ಬೋಧಕನಿಗೂ ಆ ಭಾಷೆ ಸ್ವಭಾಷೆಯಾಗಿರುವುದು ಉತ್ತಮ. ಈ ವಿಷಯದಲ್ಲಿ ವಿದ್ಯಾರ್ಥಿ ಈ ಭಾಷೆಯನ್ನು ಕಲಿಯುವ ಉದ್ದೇಶವನ್ನೂ ತಿಳಿದುಕೊಳ್ಳುವುದು ಅವಶ್ಯವೇ. ವಿದ್ಯಾರ್ಥಿಗೆ ಬರಹವನ್ನೂ ಕಲಿಸುವ ಅವಶ್ಯಕತೆಯಿದ್ದರೆ ಮಾತು ಹಾಗೂ ಬರಹದೊಳಗಿನ ವಿಶೇಷ ಅಂತರವಿರದಂತೆ ನೋಡಿಕೊಳ್ಳಬೇಕು. ಆಡುಮಾತನ್ನು ಚೆನ್ನಾಗಿ ಕಲಿಸದೆ ಅದನ್ನು ಬರಹ ರೂಪಕ್ಕಿಳಿಸುವುದು ಸುಲಭ.

೨. ಭಾಷೆಯ ಮೂಲ ವಾಕ್ಯಗಳ ಮನನ

ಒಂದು ಭಾಷೆಯ ನೇರ ಹಾಗೂ ಸರಳ ವಾಕ್ಯಗಳೇ ಅದರ ಮೂಲವಾಕ್ಯಗಳು. ಇವು ವ್ಯವಹಾರದಲ್ಲಿ ಅತಿಯಾಗಿ ಬಳಸಲಾಗುತ್ತವೆಯಾದುದರಿಂದ ಅವುಗಳನ್ನು, ವಿದ್ಯಾರ್ಥಿಗಳು ರೂಢೀಕರಿಸುವಂತೆ ಪ್ರಯತ್ನ ನಡೆಯಿಸಬೇಕು. ಚಿಕ್ಕದಾದ ಈ ವಾಕ್ಯಗಳನ್ನು ಚೆನ್ನಾಗಿ ಕಲಿತ ವಿದ್ಯಾರ್ಥಿಗಳಿಗೆ ಸಾಧಿತ ವಾಕ್ಯಗಳನ್ನು ಕಲಿಸುವುದು ಸುಲಭವಾಗುತ್ತದೆ. ಉದಾಹರಣೆಗೆ 'ನಾನು ಹಾಲು ಕುಡಿಯುತ್ತೇನೆ', 'ನಾನು ಊಟ ಮಾಡುತ್ತೇನೆ' ಎಂಬ ಮೂಲವಾಕ್ಯಗಳನ್ನು ಕಲಿತ ವಿದ್ಯಾರ್ಥಿಗಳಿಗೆ 'ನಾನು ಹಾಲು ಕುಡಿಯುತ್ತೇನೆಯೊ ?' 'ನಾನು ಹಾಲು ಕುಡಿಯುವದಿಲ್ಲ'. 'ನಾನು ಊಟ ಮಾಡಲಾರೆ', 'ನಾನು ಊಟ ಮಾಡಲಿಲ್ಲ'-ಮೊದಲಾದ ಸಾಧಿತ ವಾಕ್ಯಗಳನ್ನು ಕಲಿಸುವುದು ಅಷ್ಟು ಕಷ್ಟಕರವಾಗಲಾರದು.

ಮೂಲವಾಕ್ಯಗಳನ್ನು ಸಂಭಾಷಣೆಯ ರೂಪದಲ್ಲಿ ಕಲಿಸಬೇಕು. ಸಂಭಾಷಣೆಯಲ್ಲಿ ಸಂಕೋಚ, ಸಂಶಯ, ಪ್ರಶ್ನೋತ್ತರಗಳು, ನಿಷೇಧರೂಪ ಮೊದಲಾದುವುಗಳು ಗದ್ಯಪದ್ಯಗಳಿಗಿಂತ ಸ್ಫುಟವಾಗಿ ಬರುತ್ತವೆಯಾದುದರಿಂದ, ಅವು ವಿದ್ಯಾರ್ಥಿಗೆ ಭಾಷೆಯ ಸರಿಯಾದ ಕಲ್ಪನೆ ಮಾಡಿಕೊಡುವುದರಲ್ಲಿ ಬಹು ಯಶಸ್ವಿಯಾದ ಮಾಧ್ಯಮವಾಗಿದೆ.

೩. ಭಾಷಾ ಮಾದರಿಗಳ ರೂಢೀಕರಣ

ಆಕೃತಿಮಾಗಳು, ವಾಕ್ಯಗಳು ಮತ್ತು ವ್ಯಾಕರಣ ನಿಯಮಗಳೇ ಭಾಷೆಯೆನಿಸುವದಿಲ್ಲ. ಭಾಷೆಯನ್ನು ಕಲಿಸುವಾಗ ಅದನ್ನು ರಚನಾತ್ಮಕವಾಗಿ ಕಲಿಸಬೇಕೇ ಹೊರತು,

ಭಾಷೆಯ ಬಗ್ಗೆ ಕಲಿಸುವುದೂ ಅಲ್ಲ. ವಿದ್ಯಾರ್ಥಿಯಾದವನು ಭಾಷೆಯನ್ನು ಬಳಸುವ ಶಕ್ತಿಯನ್ನು ಗಳಿಸಬೇಕು. ಒಂದು ಭಾಷೆಯನ್ನು ಹಲವಾರು ಮಾದರಿಗಳ ಮೂಲಕ ಸಂದರ್ಭೋಚಿತವಾಗಿ ಕಲಿಸಿದರೆ ವಿದ್ಯಾರ್ಥಿ ? ಅದನ್ನು ಸಹಜವಾಗಿ ಬಳಸಲು ಶಕ್ಯನಾಗುತ್ತಾನೆ. ಮಾದರಿಗಳನ್ನು ರೂಢೀಕರಿಸುವಲ್ಲಿ ಕೆಳಗಿನ ಈ ಮೂರು ನೈಪುಣ್ಯಗಳನ್ನು ಗಮನದಲ್ಲಿಡಬೇಕು :

ಅ) ರೂಪಾಂತರ ನೈಪುಣ್ಯ :

'ಅವನ ಹೆಸರು ಗಿರೀಶ' ಎಂಬ ಮೂಲವಾಕ್ಯವನ್ನು ವಿದ್ಯಾರ್ಥಿಗೆ ಕಲಿಸಿದರೆ, ಅದನ್ನು ಹಲವಾರು ರೀತಿಗಳಲ್ಲಿ ರೂಪಾಂತರಿಸಿ ವಿವಿಧ ವಾಕ್ಯಗಳನ್ನು ಉತ್ಪಾದಿಸುವ ಸಾಮರ್ಥ್ಯ ವಿದ್ಯಾರ್ಥಿಗೆ ಬರುತ್ತದೆ.

ಉದಾ:— ಅವನ ಹೆಸರು ಏನು ?
ಅವನ ಹೆಸರು ಗಿರೀಶನೆ ?
ಅವನ ಹೆಸರು ಗಿರೀಶನಲ್ಲ. ಇತ್ಯಾದಿ.

ಆ) ವಿಸ್ತರಣ ನೈಪುಣ್ಯ :

ಸಣ್ಣದೊಂದು ವಾಕ್ಯವನ್ನು ಹಿಗ್ಗಿಸುವ ಶಕ್ತಿ ವಿದ್ಯಾರ್ಥಿಗೆ ಮೈಗೂಡಬೇಕು.

೧. (ಇದು) ನೀರು.

೨. ಇದು ಸಿಹಿ ನೀರು.

೩. ಇದು ಬಾವಿಯ ಸಿಹಿ ನೀರು.

೪. ಇದು ನಮ್ಮ ಬಾವಿಯ ಸಿಹಿ ನೀರು.

೫. ಇದು ನಮ್ಮ ಊರಿನ ಬಾವಿಯ ಸಿಹಿ ನೀರು.

೬. ಇದು ನಮ್ಮ ಊರಿನ ಪ್ರಸಿದ್ಧ ಬಾವಿಯ ಸಿಹಿ ನೀರು.

ಈ ರೀತಿಯಾಗಿ ವಾಕ್ಯವನ್ನು ಬೆಳೆಯಿಸುವ ಕ್ರಮ ವಿದ್ಯಾರ್ಥಿಗೆ ಅಂತರ್ಗತವಾಗಬೇಕು.

ಇ) ಪದಬದಲಾವಣೆ ನೈಪುಣ್ಯ :

ಒಂದು ಮಾದರಿಯಲ್ಲಿ ಪದಗಳನ್ನು ಬದಲಾಯಿಸಿ ಹೊಸ ವಾಕ್ಯಗಳನ್ನು ರಚಿಸುವ ರೀತಿಯನ್ನು ಅಧ್ಯಾಪಕನು ವಿದ್ಯಾರ್ಥಿಗೆ ಕಲಿಸಬೇಕು.

ಅ) ಅದು ದೊಡ್ಡ	ಮರ	
	ಆನೆ	
	ಮನೆ	
	ಊರು	
	ಪಟ್ಟಣ	
	ಹಳ್ಳಿ	

ಆ) ಅದು	ದೊಡ್ಡ	ನಗರ
	ಸಣ್ಣ	
	ಚಿಕ್ಕ	
	ಚೊಕ್ಕ	
	ಹೊಸ	
	ಹಳೆಯ	

೪. ಧ್ವನಿವ್ಯವಸ್ಥೆಯ ಪ್ರಯೋಗ :

ಒಂದು ಭಾಷೆಯನ್ನು ಸರಿಯಾಗಿ ತಿಳಿದುಕೊಳ್ಳಬೇಕಾದರೆ. ಅದರ ಉಚ್ಚಾರಣಾ ರೀತಿಯನ್ನು ತಿಳಿದುಕೊಳ್ಳುವುದು ಅತಿ ಮುಖ್ಯ. ಧ್ವನಿ ಸ್ಥಾನಗಳು, ಧ್ವನ್ಯಂಗಗಳು, ಧ್ವನ್ಯುತ್ಪಾದನಾರೀತಿ ಮೊದಲಾದವುಗಳನ್ನು ಬೋಧಕನು ಚಾಚೂ ತಪ್ಪದೆ ಕಲಿಸಬೇಕು. ಅವುಗಳ ಸರಿಯಾದ ಉಚ್ಚಾರಣೆ ಬರುವವರೆಗೂ ಅವುಗಳ ಅಭ್ಯಾಸ ನಡೆಯಬೇಕು. ಕನಿಷ್ಟತಮಯುಗ್ಮಗಳ ಸಹಾಯದಿಂದ, ಧ್ವನಿಮಾತ್ಮಕ ವ್ಯತ್ಯಾಸಗಳನ್ನು ಕಲಿಸುವುದು ಸುಲಭಸಾಧ್ಯ. ಅಣ್ಣ–ಅನ್ನ; ಗದ್ದೆ–ಗಡ್ಡೆ; ಮೊಲೆ–ಮೊಳೆ; ಮಲೆ–ಮಳೆ; ಅಕ್ಕ–ಅಗ್ಗ–ಈ ರೀತಿಯಾಗಿ ಉದಾಹರಣೆಗಳನ್ನು ಕೊಟ್ಟು. ಧ್ವನಿ ಹಾಗೂ ಧ್ವನಿಮಾಗಳ ವ್ಯತ್ಯಾಸ ತೋರಿಸಿದಾಗ. ವಿದ್ಯಾರ್ಥಿಗೆ ಅದನ್ನು ತಿಳಿದುಕೊಳ್ಳುವುದು ಹಾಗೂ ನೆನಪಿನಲ್ಲಿಡುವುದು ತ್ರಾಸದಾಯಕವಾಗಲಾರದು.

೫. ಶಬ್ದ ಸಂಪತ್ತಿನ ನಿಯಂತ್ರಣ :

ಶಬ್ದಸಂಪತ್ತು ಹೆಚ್ಚಾದಂತೆ ಭಾಷಾಜ್ಞಾನ ಅಧಿಕವಾಗುತ್ತದೆಂದು ತಿಳಿದುಕೊಳ್ಳುವುದು ಶುದ್ಧ ತಪ್ಪು. ಭಾಷೆಯೆಂದರೆ ಬರಿಯ ಶಬ್ದಸಂಪತ್ತಲ್ಲ; ಮುಖ್ಯವಾಗಿ ಅದು ಶಬ್ದಗಳನ್ನು ಸಂಯೋಜಿಸುವ ಹಾಗೂ ಬಳಸುವ ರೀತಿ. ಶಿಕ್ಷಕನು ವಿದ್ಯಾರ್ಥಿಗಳಲ್ಲಿ ಭಾಷಾಪ್ರಜ್ಞೆಯನ್ನು ಬೆಳೆಯಿಸಬೇಕಾದರೆ, ಶಬ್ದಸಂಪತ್ತಿನ ನಿಯಂತ್ರಣ ಅತ್ಯಗತ್ಯ.

ಕೆಲವೇ ಕೆಲವು ಶಬ್ದಗಳ ಮೂಲಕ ಹಲವಾರು ವಾಕ್ಯರಚನಾ ವಿನ್ಯಾಸಗಳನ್ನು ಮಾಡುವ ಕಲೆಯನ್ನು ಅಥವಾ ಪ್ರಪಂಚವನ್ನು ವಿದ್ಯಾರ್ಥಿಗಳಿಗೆ ಕಲಿಸಿಕೊಟ್ಟರೆ, ಭಾಷಾ ಕೌಶಲ್ಯ ಅವರ ಕೈಸೇರುವುದರಲ್ಲಿ ಸಂಶಯವಿಲ್ಲ. ಉದಾಹರಣೆಗೆ: ಇದು, ದೇಶ, ಭಾರತ, ಯಾವುದು—ಇಷ್ಟೇ ಪದಗಳನ್ನು ಉಪಯೋಗಿಸಿ ಒಂದು ಪಾಠವನ್ನು ರಚಿಸಿ ಅದನ್ನು ಕಲಿಸಬಹುದು:

ಇದು ದೇಶ
ಇದು ನನ್ನ ದೇಶ
ನನ್ನ ದೇಶ ಭಾರತ
ಭಾರತ ನನ್ನ ದೇಶ
ನನ್ನ ದೇಶ ಯಾವುದು ?
ನನ್ನ ದೇಶ ಭಾರತ

ಈ ರೀತಿಯಲ್ಲಿ ಶಬ್ದಸಂಪತ್ತನ್ನು ನಿಯಂತ್ರಿಸಿ, ಭಾಷೆಯನ್ನು ಅಲ್ಪಾವಧಿಯಲ್ಲಿ ಕಲಿಸಬಹುದು. ಭಾಷೆಯ ಮೂಲರಚನೆಗಳ ಮೇಲೆ ಪ್ರಭುತ್ವವನ್ನು ಸಂಪಾದಿಸಿದ ಬಳಿಕ, ಶಬ್ದಸಂಪತ್ತನ್ನು ಬೆಳೆಯಿಸಕೊಳ್ಳಬೇಕಲ್ಲದೆ ಅದಕ್ಕಿಂತ ಮುಂಚಿತವಾಗಿ ಸರ್ವಥಾ ಅಲ್ಲ.

೬. ಭಾಷಾಸಮಸ್ಯೆಗಳ ಬಗ್ಗೆ ಚರ್ಚೆ :

ಸ್ವಭಾಷೆ ಹಾಗೂ ಅನ್ಯಭಾಷೆಗಳ ಘಟಕ ಹಾಗೂ ರಚನೆಗಳ ನಡುವಿನ ವ್ಯತ್ಯಾಸಗಳೇ ಭಾಷಾಸಮಸ್ಯೆಗಳು. ಅನ್ಯಭಾಷೆಯನ್ನು ಕಲಿಯುತ್ತಿರುವ ವಿಧ್ಯಾರ್ಥಿಯಲ್ಲಿ ಸ್ವಭಾಷೆ ಬೇರೂರಿಕೊಂಡಿರುತ್ತದೆ. ಕಾರಣ ಅನ್ಯಭಾಷಾರಚನೆಗಳನ್ನು ಬಳಸುವಲ್ಲಿ ಎಷ್ಟೋ ಸಲ ಅರಿವಿಲ್ಲದೆಯೇ ಸ್ವಭಾಷಾರಚನೆಗಳನ್ನು ಬಳಸುವುದೂ ಉಂಟು. ಇದರಿಂದಾಗಿ ಅವನಿಗೆ ಅನ್ಯಭಾಷೆಯ ಮೇಲಿನ ಹಿಡಿತ ಸಿಗುವುದಿಲ್ಲ. ಆದ್ದರಿಂದ ಅನ್ಯಭಾಷೆಯನ್ನು ಕಲಿಸುವಲ್ಲಿ ವೈದೃಶ್ಯಕ ವಿಶ್ಲೇಷಣೆಯ ಮೂಲಕ ಭಾಷಾಸಮಸ್ಯೆಗಳನ್ನು ಅಧ್ಯಾಪಕನು ಎತ್ತಿತೋರಿಸಬೇಕು, ಕಾಣಿಸಬೇಕು.

ಕನ್ನಡದಲ್ಲಿ, ಉದಾಹರಣೆಗೆ : [ṭ] ಟ್ ಮತ್ತು [ḍ] ಡ್ ಧ್ವನಿಗಳಿದ್ದರೆ ಇಂಗ್ಲೀಷಿನಲ್ಲಿ [t] ಮತ್ತು [ದ್] ಗಳೆಂಬ ಧ್ವನಿಗಳಿವೆ. ಆದುದರಿಂದ ಆಂಗ್ಲ ದೇಶದ ವಿದ್ಯಾರ್ಥಿ ಕನ್ನಡ ಕಲಿಯುವಾಗ [a : ṭa] ಆಟ, [a : ḍu] ಆಡು ರೂಪಗಳನ್ನು [a : ta], [a : du] ಎಂಬುದಾಗಿ ಸಹಜವಾಗಿ ಉಚ್ಚರಿಸುತ್ತಾನೆ. ಇಂತಹ ಪ್ರಸಂಗಗಳನ್ನು ನಿವಾರಿಸಬೇಕಾದರೆ, ಆತನಿಗೆ ಈ ಎರಡೂ ಭಾಷೆಗಳ ಧ್ವನಿ ವ್ಯವಸ್ಥೆಗಳನ್ನು ವಿವರಿಸಿ, ವೈದೃಶ್ಯಯುಗ್ಮಗಳ ಮೂಲಕ ವ್ಯತ್ಯಾಸಗಳನ್ನು ತೋರಿಸಿಕೊಡಬೇಕಾಗುತ್ತದೆ.

ಇಂಗ್ಲೀಷಿನಲ್ಲಿ ವ್ಯಂಜನಾಂತ ಪದಗಳು ಅನೇಕ ಇವೆ: [s k u : l] ಸ್ಕೂಲ್ 'ಶಾಲೆ' [s l e : t] 'ಸ್ಲೇಟ್' ಇತ್ಯಾದಿ. ಇಂದಿನ ಕನ್ನಡದಲ್ಲಿ ಅಂತಹ ಪದಗಳು ಇಲ್ಲ. ಸ್ವೀಕೃತ ವ್ಯಂಜನಾಂತ ಪದಗಳು ಕೂಡಾ ಉಕಾರಾಂತಗೊಳ್ಳುತ್ತವೆ: ಕಾಲೇಜು, ಮಿನಿಸ್ಕರ್ಟು, ಫ್ರೆಡ್ಡು, ಸಿಗರೇಟು...ಆದರೆ ಆಂಗ್ಲ ಹುಡುಗನು ತನ್ನ ಮಾತೃಭಾಷೆಯ ಪ್ರಭಾವದಿಂದಾಗಿ ಕನ್ನಡ ಪದಗಳನ್ನೂ ವ್ಯಂಜನಾಂತಗಳನ್ನಾಗಿ ಪರಿವರ್ತಿಸುವುದು ಸಾಧ್ಯವಿದೆ. ಕಾರಣ ಶಿಕ್ಷಕನು ಆತನಿಗೆ ಈ ಎರಡೂ ಭಾಷೆಗಳ ಅಕ್ಷರ ರಚನೆಯ ಬಗ್ಗೆ ವಿಶೇಷವಾದ ರೀತಿಯಲ್ಲಿ ವಿವರಣೆ ಕೊಡಬೇಕಾಗುತ್ತದೆ.

ವ್ಯಾಕರಣ ಸಂಬಂಧ ಸೂಚಿಸುವಲ್ಲಿಯೂ ಎರಡು ಭಾಷೆಗಳಲ್ಲಿ ವ್ಯತ್ಯಾಸವಿರಬಹುದು. ಇಂಗ್ಲೀಷಿನಲ್ಲಿ ಸಂಪ್ರದಾನಕಾರಕ ಸಂಬಂಧ ತೋರಿಸಲು ಅವ್ಯಯವನ್ನು ನಾಮರೂಪದ **ಪೂರ್ವ**ದಲ್ಲಿ ಬಳಸುತ್ತಾರೆ. ಆದರೆ ಕನ್ನಡದಲ್ಲಿ ಪ್ರತ್ಯಯವನ್ನು ನಾವು ಪ್ರಕೃತಿಗೆ ಸೇರಿಸುತ್ತಾರೆ: to vittal 'ವಿಟ್ಲಕ್ಕೆ'

ವಾಕ್ಯರಚನಾ ಕ್ರಮದಲ್ಲಿಯೂ ಭಿನ್ನವರ್ಗದ ಎರಡು ಭಾಷೆಗಳಿಗೆ ತಾರತಮ್ಯವಿರಬಹುದು. ಇಂಗ್ಲೀಷಿನ What is your name? ಎಂಬ ವಾಕ್ಯ ಕನ್ನಡಕ್ಕೆ ಬರುವಾಗ 'ನಿನ್ನ ಹೆಸರು ಏನು ?' ಎಂದಾಗುತ್ತದೆ. ಅರ್ಥಾತ್, ಇಂಗ್ಲೀಷಿನಲ್ಲಿ ಪದ ಸ್ಥಾನ ೧ ೨ ೩ ಎಂದಿಟ್ಟುಕೊಂಡರೆ ಕನ್ನಡದಲ್ಲಿ ಪದಗಳಲ್ಲಿ ಸ್ಥಾನಪಲ್ಲಟವಾಗಿ ೨, ೩, ೧ ಎಂದಾಗಂತ್ತದೆ.

ಈ ಎಲ್ಲ ಕಾರಣಗಳಿಂದಾಗಿ ಅನ್ಯಭಾಷೆಯನ್ನು ಕಲಿಸುವಲ್ಲಿ ಬರಬಹುದಾದ ಭಾಷಾ ಸಮಸ್ಯೆಗಳನ್ನು ವೈದೃಶ್ಯ ವಿಶ್ಲೇಷಣೆಯ ಮೂಲಕ ಹೋಗಲಾಡಿಸಬೇಕು.

೭. ಬರಹ ಮಾತಿನ ತದ್ರೂಪವಲ್ಲ :

ಮಾತನ್ನು ಬರಹಕ್ಕೆ ಸಂಪೂರ್ಣವಾಗಿ ಇಳಿಸುವುದು ಅಸಾಧ್ಯ. ಒಂದು ಭಾಷೆಯನ್ನು ಆ ಭಾಷೆಯ ಲಿಪಿಯ ಮೂಲಕ ಪರಿಪೂರ್ಣವಾಗಿ ಅಭಿವ್ಯಕ್ತಗೊಳಿಸುವುದು ಸಾಧ್ಯವೇ ಇಲ್ಲ. ಎಷ್ಟೋಸಲ ಒಂದೇ ಉಚ್ಚಾರಕ್ಕೆ ಹಲವಾರು ಲಿಪಿರೂಪಗಳಿವೆ. ಇಂಗ್ಲೀಷಿನ ಕೆಲವು ಪದಗಳನ್ನು ಗಮನಿಸಬಹುದು: tie, bye, time ಇವುಗಳ ಉಚ್ಚಾರ ಇಂತಿದೆ: [tai], [bai], [taim] ಮೇಲಿನ ಪದಗಳಲ್ಲಿ [ai] ಎಂಬ ಉಚ್ಚಾರಕ್ಕೆ ie, ye, i ಇವು ಲಿಪಿರೂಪಗಳು. ಹೀಗೆಯೇ ಹಲವಾರು ಉಚ್ಚಾರಗಳಿಗೆ ಒಂದೇ ಲಿಪಿರೂಪ ಇರುವುದೂ ಉಂಟು. ಕನ್ನಡದ [Λn̂ce] ಅಂಚೆ. [Λṇṭu] ಅಂಟು [Λṁka] ಅಂಕ [haṁsa] ಹಂಸ ಇಲ್ಲಿ ಬರುವ ನಾಸಿಕ ಉಚ್ಚಾರಗಳು [n̂,ṇ,ṁ,ṁ] ಬೇರೆಬೇರೆಯಾದರೂ ಲಿಪಿರೂಪದಲ್ಲಿ ಒಂದು ಮಾತ್ರ ಬರುವುದನ್ನು ಕಾಣಬಹುದು. ಈ ಎಲ್ಲ ಉದಾಹರಣೆಗಳನ್ನು ಪರಿಶೀಲಿಸಿದಾಗ ಬರಹ ಮಾತಿನ ತದ್ರೂಪವಲ್ಲ.

ಅರ್ಥಾತ್ ನಾವು ಸಾಮಾನ್ಯವಾಗಿ ಬಳಸುವ ಲಿಪಿ ಮಾತನ್ನು ಸಂಪೂರ್ಣವಾಗಿ ಪ್ರತಿಬಿಂಬಿಸುವುದಿಲ್ಲ ಎಂಬುದನ್ನು ಒಪ್ಪಬೇಕಾಗುತ್ತದೆ.

೮. ಭಾಷೆಯ ಹಂತಹಂತವಾದ ಕಲಿಸುವಿಕೆ :

ಅನ್ಯಭಾಷೆಯನ್ನು ಕಲಿಸುವಲ್ಲಿ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ನೋಡಿಕೊಂಡು ಅದಕ್ಕೆ ತಕ್ಕಂತೆ ಭಾಷಾ ರಚನೆಗಳನ್ನು ಕಲಿಸುತ್ತಾ ಮುಂದುವರಿಯಬೇಕು. ಅಷ್ಟೇ ಅಲ್ಲದೆ ಹಿಂದೆ ಕಲಿಸಿದ ಸರಳ ರಚನೆಗಳಿಗೆ ಹೊಸ ಅಂಶಗಳನ್ನು ಸೇರಿಸಿ ಕಲಿಸಿಸಿದರೆ ಭಾಷೆಯ ವಿವಿಧ ರಚನೆಗಳನ್ನು ಹಂತಹಂತವಾಗಿ ಕಲಿಸುವುದರಲ್ಲಿ ಯಶಸ್ವಿಯಾಗಬಹುದು.

ನನಗೆ	ಕಾಫಿ ಹಾಲು ಚಹಾ	ಬೇಕು

ಈ ಮೇಲಿನ ಮಾದರಿಯನ್ನು ಈ ಮೊದಲೇ ವಿದ್ಯಾರ್ಥಿಗೆ ಕಲಿಸಿದ್ದಾದರೆ ನಾಮವಿಶೇಷಣಗಳನ್ನು ಕೊಡಿಸುವ ವಿಧಾನವನ್ನು ಕಲಿಸುವುದು ಸರಳವಾಗುತ್ತದೆ.

ನನಗೆ	ಒಳ್ಳೆಯ ಬಿಸಿ ಸಿಹಿ ತಂಪು	ಕಾಫಿ ಹಾಲು ಚಹಾ	ಬೇಕು

ಆಮೇಲೆ ವಾಕ್ಯಗಳನ್ನು ನಿಷೇಧಿಸಲು ಕಲಿಸಬಹುದು. 'ಬೇಕು' ವಿನಸ್ಥಾನದಲ್ಲಿ 'ಬೇಡ' ಎಂಬ ಪದವನ್ನು ಹಾಕಿದರೆ ನಿಜಾರ್ಥಕ ವಾಕ್ಯಗಳು ನಿಷೇಧಾರ್ಥಕವಾಗುತ್ತವೆಂದು ಸೂತ್ರಪ್ರಾಯವಾಗಿ ಹೇಳಿದರೆ ಸಾಕಾಗುತ್ತದೆ.

೯. ಭಾಷಾಭ್ಯಾಸದಲ್ಲಿ ಭಾಷಾಂತರ ಸ್ಥಾನ :

ಅನ್ಯಭಾಷೆ ಸ್ವಭಾಷೆಯ ಭಾಷಾಂತರವಲ್ಲ. ಪ್ರತಿಯೊಂದು ಭಾಷೆಗೂ ತನ್ನತನವಿರುತ್ತದೆ. ಭಿನ್ನವರ್ಗಗಳಿಗೆ ಸೇರಿದ ಭಾಷೆಗಳಲ್ಲಿ ಎಷ್ಟೋ ಸಲ ಸಂವಾದಿರೂಪಗಳೇ ಸಿಗಲಾರವು. ಹಿಮ ಎಂಬ ಪದಕ್ಕೆ ಹಿಮಪ್ರದೇಶದ ಎಸ್ಕಿಮೋ ಭಾಷೆಯಲ್ಲಿಯೇ ಸಂವಾದಿರೂಪವಿಲ್ಲವಂತೆ. ಇಂಗ್ಲೀಷಿನಲ್ಲಿರುವ ಬೇರೆಬೇರೆ ಬಣ್ಣಗಳ ಹೆಸರುಗಳಿಗೆ ಕನ್ನಡದಲ್ಲಿ ತಕ್ಕುದಾದ ಪದಗಳು ದೊರೆಯುವುದಿಲ್ಲ. God, Incarnation Trinity Saint ಎಂಬೀ ಪದಗಳಿಗೆ ಒಂದೊಂದು ಭಾಷೆಯಲ್ಲಿ ಒಂದೊಂದು ಅರ್ಥ

ವಿದೆ. ಕಾರಣ ಭಾಷಾಂತರದ ಮೂಲಕ ಇನ್ನೊಂದು ಭಾಷೆಯನ್ನು ಸಂಪೂರ್ಣವಾಗಿ ಕಲಿಯುವುದು ದುಸ್ಸಾಧ್ಯ. ಅಷ್ಟೇ ಅಲ್ಲದೆ ಭಾಷಾಂತರದ ಮೂಲಕ ಕಲಿತ ಭಾಷೆ ಕೃತ್ರಿಮವಾಗಿರುವುದರಿಂದ ಅದನ್ನು ಜೀವನದ ಎಲ್ಲ ಸನ್ನಿವೇಶಗಳಲ್ಲಿ ಬಳಸಲು ಸಾಧ್ಯವಾಗದು. ವಸ್ತುಸ್ಥಿತಿ ಹೀಗಿರುವಾಗ ಭಾಷಾಂತರದ ಮೂಲಕ ಭಾಷೆಯನ್ನು ಕಲಿಯುವುದು ಬಹು ಅಪಾಯಕಾರಿ.

೧೦. ಸುಶಿಕ್ಷಿತರ ಭಾಷೆಯೇ ವಿದ್ಯಾರ್ಥಿಗೆ ಮಾದರಿ

ಸುಶಿಕ್ಷಿತರ ಭಾಷೆಯನ್ನು ಬಿಟ್ಟು ಗ್ರಾಮ್ಯ ಭಾಷೆಯನ್ನು ಮಾತ್ರ ಕಲಿಸಿದರೆ ವಿದ್ಯಾರ್ಥಿಗಳಿಗೆ ಸಾಹಿತ್ಯ ಓದಲು, ಉಪನ್ಯಾಸಗಳನ್ನು ಕೇಳಿ ತಿಳಿದುಕೊಳ್ಳುವುದು ಕಷ್ಟಸಾಧ್ಯವಾಗುವುದು. ಯಾವುದೇ ಒಂದು ಹಳ್ಳಿಯ ಅಲ್ಪಸಂಖ್ಯಾಕರ ಭಾಷೆಯಿಂದ ಅನ್ಯಭಾಷಾ ವಿದ್ಯಾರ್ಥಿಗೆ ಅಷ್ಟೊಂದು ಪ್ರಯೋಜನ ಸಿಗದು. ಆದರೆ ಇದು ವಿದ್ಯಾರ್ಥಿ ಭಾಷೆಯನ್ನು ಕಲಿಯುವ ಗುರಿಯನ್ನು ಹೊಂದಿಕೊಂಡಿದೆ ಎಂಬುದನ್ನು ಇಲ್ಲಿ ಗಮನಿಸಬೇಕಾದ ವಿಷಯ. ಒಂದುವೇಳೆ ಆತನ ಕಾರ್ಯಕ್ಷೇತ್ರ ಯಾವುದೇ ಒಂದು ಸಮಾಜಕ್ಕೆ ಅಥವಾ ಪ್ರದೇಶಕ್ಕೆ ಸೀಮಿತವಾದರೆ ಆಗ ಆ ಸಮಾಜದ ಅಥವಾ ಪ್ರದೇಶದ ಭಾಷೆಯೇ ಆತನಿಗೆ ಮಾದರಿಯಾಗಿರಬೇಕಾಗುತ್ತದೆ.

೧೧. ಸಾಧನೆ

ನಿರ್ದಿಷ್ಟ ಅವಧಿಯೊಳಗೆ ಒಂದು ಭಾಷೆಯ ಸಂಪೂರ್ಣ ಹಿಡಿತ ಸಿಗಬೇಕಾದರೆ ಸತತ ಸಾಧನೆ ಹಾಗೂ ಪರಿಶ್ರಮ ಅತ್ಯಗತ್ಯ. ಆಗಾಗ ಹಿಂದಿನ ಪಾಠದ ಪುನರಾವರ್ತನೆ ಮಾಡುವುದು ಅನುಕೂಲಕರವಾಗುತ್ತದೆ. ಈ ಕ್ರಮದಿಂದಾಗಿ ಭಾಷೆಯ ಜ್ಞಾನ ವಿದ್ಯಾರ್ಥಿಗೆ ಖಚಿತವಾಗುತ್ತದೆಯಲ್ಲದೆ ಬಹುಕಾಲದವರೆಗೆ ಅದು ಆತನ ಜ್ಞಾಪಕದಲ್ಲಿರುವುದೂ ಸಾಧ್ಯವಾಗುತ್ತದೆ. ಈ ತರಹದ ದೃಢೀಕರಣ ಮಾಡದ ಪಕ್ಷದಲ್ಲಿ ಕಲಿತ ವಿಷಯ ಬೇಗನೆ ಅಳಿದುಹೋಗಬಹುದು.

ಪುನರಾವರ್ತನೆ ಮಾಡುವಲ್ಲಿ ಬದಲಾವಣೆ ನೈಪುಣ್ಯವನ್ನು ಬಳಸುವುದು ಉತ್ತಮ. 'ನೀನು ರೊಟ್ಟಿ ತಿನ್ನುತ್ತಿಯೊ ?' ಎಂಬ ವಾಕ್ಯದ ಪುನರಾವರ್ತನೆ ನಡೆಯುವಾಗ 'ರೊಟ್ಟಿ' ಎಂಬ ಪದದ ಸ್ಥಾನದಲ್ಲಿ ಬರಬಹುದಾದ ಇತರ ರೂಪಗಳನ್ನೂ ಸೂಚಿಸಿದರೆ ವಿದ್ಯಾರ್ಥಿಗೆ ಹಲವು ವಾಕ್ಯಗಳನ್ನು ಅಲ್ಪಾವಧಿಯಲ್ಲಿ ಕಲಿಯುವುದು ಸಾಧ್ಯವಾಗುತ್ತದೆ :

ನೀನು	ರೊಟ್ಟಿ ದೋಸೆ ಕಡಲೆ ಹಣ್ಣು	ತಿನ್ನುತ್ತಿಯೇ ?

ಈ ರೀತಿಯ ಸಾಧನೆ ಸತತವಾಗಿ ನಡೆದರೆ ಮಾತ್ರ ಭಾಷೆ ವಿದ್ಯಾರ್ಥಿಗಳಿಗೆ ಶೀಘ್ರವಾಗಿ ಬರುವುದು.

೧೨. ಉತ್ತರಗಳನ್ನು ಹೊರಡಿಸುವ ಕ್ರಮ

ಅನ್ಯಭಾಷಾ ವಿದ್ಯಾರ್ಥಿಗೆ ಪ್ರಾರಂಭದಲ್ಲಿ ಅಧ್ಯಾಪಕನ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ಕೊಡುವುದು ಒಂದು ಸಾಹಸದ ಕಾರ್ಯವೆಂದರೆ ಅತಿಶಯೋಕ್ತಿಯಾಗಲಾರದು. ಈ ದಿಶೆಯಲ್ಲಿ ಆತ ಅನೇಕ ಎಡರು ತೊಡರುಗಳನ್ನು ಅನುಭವಿಸಬೇಕಾಗುತ್ತದೆ. ಕಾರಣ ಅಂತಹ ವಿದ್ಯಾರ್ಥಿಗಳಿಂದ ಉತ್ತರಗಳನ್ನು ಹೊರಪಡಿಸುವ ಜಾಣ್ಮೆ ಅಧ್ಯಾಪಕನಲ್ಲಿರಬೇಕು. ವಿದ್ಯಾರ್ಥಿಗೆ ಸುಲಭವಾಗಿ ಉತ್ತರಗಳು ಹೊಳೆಯುವಂತೆ ಪ್ರಶ್ನೆಗಳನ್ನು ಆತ ಕೇಳಬೇಕು. ಪ್ರಶ್ನೆಗಳ ಅಂಗಗಳನ್ನು ಬದಲಾಯಿಸುತ್ತಾ ಅವುಗಳನ್ನು ಕೇಳಿದರೆ ಪ್ರಶ್ನೆಗೆ ತಕ್ಕುದಾದ ಉತ್ತರ ತಟ್ಟನೆಕೊಡುವ ಸಾಮರ್ಥ್ಯವನ್ನು ವಿದ್ಯಾರ್ಥಿ ಬೆಳೆಯಿಸಿಕೊಳ್ಳುತ್ತಾನೆ. ಉದಾಹರಣೆಗೆ :

ಪ್ರಶ್ನೆ : ನೀನು **ಎಲ್ಲಿಗೆ** ಹೋಗುತ್ತಿ ?
ಉತ್ತರ : ನಾನು ಪೇಟೆಗೆ ಹೋಗುತ್ತೇನೆ.
ಪ್ರಶ್ನೆ : ನೀನು ಪೇಟೆಗೆ **ಯಾಕೆ** ಹೋಗುತ್ತಿ ?
ಉತ್ತರ : ನಾನು ಪೇಟೆಗೆ ವಸ್ತ್ರವನ್ನು ಕೊಂಡುಕೊಳ್ಳಲು ಹೋಗುತ್ತೇನೆ.
ಪ್ರಶ್ನೆ : ನೀನು ವಸ್ತ್ರವನ್ನು **ಎಲ್ಲಿಂದ** ಕೊಂಡುಕೊಳ್ಳುತ್ತಿ ?
ಉತ್ತರ : ನಾನು ವಸ್ತ್ರವನ್ನು ಅಂಗಡಿಯಿಂದ ಕೊಂಡುಕೊಳ್ಳುತ್ತೇನೆ.

೧೩. ವೇಗ ಮತ್ತು ರೀತಿ

ಅನ್ಯಭಾಷಾ ಅಧ್ಯಯನದ ಆರಂಭದಲ್ಲಿ ಅಧ್ಯಾಪನ ನಿಧಾನವಾಗಿ ಸಾಗತಕ್ಕದ್ದು. ಭಾಷೆಯನ್ನು ಉಚ್ಚರಿಸುವಲ್ಲಿಯೂ ವಿದ್ಯಾರ್ಥಿಯಲ್ಲಿ ಇದೇ ರೀತಿಯ ನಿಧಾನತೆ ಕಂಡು ಬರುವುದು ಸಹಜ; ಅರ್ಥಾತ್ ಮಾತೃಭಾಷಿಗನ ವೇಗ ಮತ್ತು ರೀತಿಯಲ್ಲಿ ಆತನಿಗೆ ಮಾತಾಡುವುದು ಸಾಧ್ಯವಾಗಲಾರದು. ಸಮಯ ಕಳೆದಂತೆ ಅಧ್ಯಾಪಕನು ವಿದ್ಯಾರ್ಥಿಯಲ್ಲಿ ಭಾಷೆಗೆ ಸಹಜವಾದ ವೇಗ ಹಾಗೂ ರೀತಿ ಬರುವಂತೆ ಪ್ರಯತ್ನಿಸಬೇಕು: ಸೂಕ್ತ ತರಬೇತಿಯನ್ನು ಕೊಡತಕ್ಕದ್ದು.

೧೪. ತೀವ್ರ ಪುರಸ್ಕಾರ

ಒಂದು ಭಾಷೆಯನ್ನು ಹೊಸದಾಗಿ ಕಲಿಯುತ್ತಿರುವ ವಿದ್ಯಾರ್ಥಿಯಲ್ಲಿ ಒಂದು ರೀತಿಯ ಅಂಜಿಕೆ ಇರುವುದು ಸ್ವಾಭಾವಿಕ ಅಂತಹ ವಿದ್ಯಾರ್ಥಿಗೆ ಎಲ್ಲ ರೀತಿಯಿಂದಲೂ ಉತ್ತೇಜನ ಕೊಡಬೇಕೇಹೊರತು ಆತನನ್ನು ಚೇಷ್ಟೆಗೆ ಗುರಿಮಾಡುವುದಾಗಲಿ ತಿರಸ್ಕಾರ

ಭಾವದಿಂದ ನೋಡುವುದಾಗಲಿ ಸಲ್ಲದು. ಹಗೆ ಮಾಡಿದ್ದಲ್ಲಿ ವಿದ್ಯಾರ್ಥಿಗಳ ಪ್ರಗತಿ ಕುಂಟುತ್ತದೆ.

ವಿದ್ಯಾರ್ಥಿಗಳ ಕಿರುಪ್ರಯತ್ನಗಳನ್ನು ಗುರುತಿಸಿ ಮನಸಾರೆ ಬಾಯಾರೆ ಕೊಂಡಾಡಿ ಉತ್ತೇಜನವನ್ನು ಕೊಟ್ಟು ಪುರಸ್ಕರಿಸಬೇಕು. ಆಗ ಅವರಿಗೆ ಅನ್ಯಭಾಷೆ ಕಲಿಯಲು ಪ್ರೋತ್ಸಾಹ ಸಿಗುತ್ತದೆ. ಹೆಚ್ಚಿನ ಪ್ರಯತ್ನಮಾಡಿ ಭಾಷೆಯಲ್ಲಿ ಪ್ರವೀಣನಾಗಲು ವಿದ್ಯಾರ್ಥಿಯಲ್ಲಿ ಆಸಕ್ತಿ ಹುಟ್ಟುತ್ತದೆ. ಇವೆಲ್ಲವುಗಳ ಪರಿಣಾಮವಾಗಿ ಹೊಸಭಾಷೆಯೊಂದನ್ನು ತೀವ್ರವಾಗಿ ಕಲಿಯುವುದರಲ್ಲಿ ಆತ ಯಶಸ್ವಿಯಾಗುತ್ತಾನೆ.

೧೫. ಕಲಿಸುವ ಭಾಷೆ ಸಂಸ್ಕೃತಿಯೊಡನೆ ಮೈತ್ರಿ

ಭಾಷೆಯೆಂಬುದು ಸಂಸ್ಕೃತಿಯ ಒಂದು ಅಂಗ. ಈ ಕಾರಣದಿಂದಾಗಿ ಭಾಷೆಯನ್ನು ಕಲಿಸುವಾಗ ಅದರ ಸಂಸ್ಕೃತಿಯ ಹಿನ್ನೆಲೆಯಲ್ಲಿ ಕಲಿಸುವುದು ಯೋಗ್ಯ. ಸಮಾಜದ ಜನರೊಡನೆ ಕಲೆತುಕೊಂಡು ಹೋಗಬೇಕಾದರೆ ಅವರ ಆಚಾರವಿಚಾರಗಳು ರೀತಿನೀತಿಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾಗುತ್ತದೆ. ಆಗ ಮಾತ್ರ ಅವರೊಂದಿಗೆ ಸಂಪರ್ಕ ಬೆಳೆಯಿಸಲು ಸುಲಭವಾಗುತ್ತದೆ. ತತ್ಫಲವಾಗಿ ಆ ಜನರ ಭಾಷೆ ಹೊಯ್‌ಕೈಯಾಗಿ ಅನ್ಯಭಾಷಿಗನಿಗೆ ಬರಲು ಸಾಧ್ಯವಾಗುತ್ತದೆ.

ಕೊಂಕಣಿ ಭಾಷೆಯನ್ನು ಕಲಿತುಕೊಳ್ಳಲು ಮನಸ್ಸು ಮಾಡಿದಾತನು ಆ ಸಮಾಜದ ಜನರೊಡನೆ ಬೆರೆತು ಅವರ ಸಾಮಾಜಿಕ ಧಾರ್ಮಿಕ ಹಬ್ಬ ಉತ್ಸವಾದಿಗಳಲ್ಲಿ ಪಾಲುಗೊಂಡರೆ ಆ ಭಾಷೆಯ ಸಂಪೂರ್ಣ ಅರಿವು ಆತನಿಗೆ ಸಹಜವಾಗಿ ಬರುತ್ತದೆ. ಬರಿಯ ಪಾಠಗಳ ಶುಷ್ಕ ಅಧ್ಯಯನದಿಂದ ಭಾಷೆ ಸಂಪೂರ್ಣವಾಗಿ ಬರಲಾರದು.

೧೬. ಸಂಸ್ಕೃತಿಯ ಹಿನ್ನೆಲೆಯಲ್ಲಿ ಅರ್ಥವಿವರಣೆ

ಭಾಷಾರೂಪಗಳ ಅರ್ಥವನ್ನು ತಿಳಿಸಲು ನಿಘಂಟನ್ನು ಮಾತ್ರ ಬಳಸಿದರೆ ಆ ಕಾರ್ಯ ಬಹುಮಟ್ಟಿಗೆ ಯಶಸ್ವಿಯಾಗಲಾರದು. ಎಷ್ಟೋ ರೂಪಗಳ ಅರ್ಥ ಸಂಸ್ಕೃತಿಯ ಹಿನ್ನೆಲೆಯಲ್ಲಿ ಮಾತ್ರ ಸರಿಯಾಗಿ ತಿಳಿದುಕೊಳ್ಳುವುದು ಸಾಧ್ಯವಾಗುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಮಹತ್ವವಾದ ಸ್ಥಾನವುಳ್ಳ ಕರಿಮಣಿಯನ್ನು a chain of black beeds ಎಂದರೆ ಅದರ ಮಹತ್ವಪೂರ್ಣ ಅರ್ಥ ಹೇಳಿದಂತಾಗದು. ಭಾರತೀಯ ಲಗ್ನ ಸಂಸ್ಕಾರದಲ್ಲಿ ಅದರ ಸ್ಥಾನವನ್ನು ಅರಿತರೆ ಮಾತ್ರ ಕರಿಮಣಿಯ ಅರ್ಥ ತಿಳಿದೀತು. ಅಂತೆಯೇ Holy Trinity ಎಂಬ ಕ್ರೈಸ್ತ ಧಾರ್ಮಿಕ ಪದವನ್ನು ತ್ರಿಮೂರ್ತಿ ಎಂದು ವಿವರಿಸಿದರೆ ಅರ್ಥ ಭಂಗವಾದೀತು! ಕಾರಣ ಸಮಗ್ರ ಸಂಸ್ಕೃತಿಯ ಹಿನ್ನೆಲೆಯಲ್ಲಿ ಶಬ್ದಾರ್ಥಗಳನ್ನು ಕೊಡಲು ಪ್ರಯತ್ನಿಸಬೇಕಾಗುತ್ತದೆ.

೧೭. ಭಾಷೆಯ ಸಂಪೂರ್ಣ ಜ್ಞಾನವೇ ಅಧ್ಯಾಪನದ ಉದ್ದೇಶ

ವಿದ್ಯಾರ್ಥಿಗೆ ಭಾಷೆಯ ಸಂಪೂರ್ಣ ಜ್ಞಾನವನ್ನು ನೀಡುವುದೇ ಅಧ್ಯಾಪಕನ ಮುಖ್ಯ ಗುರಿಯಾಗಬೇಕು. ಕಲಿತ ಭಾಷೆಯನ್ನು ವಿದ್ಯಾರ್ಥಿ ನಿರರ್ಗಳವಾಗಿ ಎಲ್ಲ ಸಂದರ್ಭಗಳಲ್ಲಿಯೂ ಬಳಸುವಂತೆ ಆತನಿಗೆ ಎಲ್ಲ ರೀತಿಯಿಂದ ಸಹಾಯ ಮಾಡುವುದೇ ಅಧ್ಯಾಪಕನ ಪರಮ ಕರ್ತವ್ಯ. ಇದನ್ನು ಬಿಟ್ಟು ಕ್ಲಾಸಿನಲ್ಲಿ ವಿದ್ಯಾರ್ಥಿಗಳಿಗೆ ಮನೋರಂಜನೆಯನ್ನು ಕೊಟ್ಟು ಕಾಲಹರಣ ಮಾಡುವುದು ಎಂದೆಂದಿಗೂ ಅಯೋಗ್ಯವೇ ಸರಿ.

ಭಾಷಾರಚನೆಗಳು ವಿದ್ಯಾರ್ಥಿಗೆ ತಿಳಿಯುವಂತೆ ಪಾಠಮಾಡುವ ಆತ್ಮನಿಷ್ಠೆ ಹಾಗೂ ಕರ್ತವ್ಯಪರತೆ ಬೋಧಕನಲ್ಲಿ ಇದ್ದರೆ ಮಾತ್ರ ಆತ ಶಿಕ್ಷಕನೆಂದು ಎಣಿಸಿಕೊಳ್ಳಲು ಅರ್ಹ.

ಹೆಚ್ಚುಕಡಿಮೆ ಈ ಎಲ್ಲ ತತ್ವಗಳೂ ಅನ್ಯಭಾಷಾ ಅಧ್ಯಾಪನದಲ್ಲಿ ಅಳವಡಿಸಲಾಗುತ್ತವೆ. ಆದರೂ ಸಂದರ್ಭೋಚಿತವಾಗಿ ಕೆಲವೊಮ್ಮೆ ಅವುಗಳನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ. ಈ ಸ್ವಾತಂತ್ರ್ಯ ಪ್ರತಿಯೊಬ್ಬ ಯೋಗ್ಯ ಶಿಕ್ಷಕನಿಗೆ ಇದೆ. ವಿದ್ಯಾರ್ಥಿಯ ವಯಸ್ಸು, ಭಾಷೆಯನ್ನು ಕಲಿಯುವಲ್ಲಿ ಆತನ ಉದ್ದೇಶ. ಆತನ ವಿದ್ಯಾಮಟ್ಟ, ಮಾನಸಿಕ ಅರ್ಹತೆ, ಪೀಠೋಪಕರಣಗಳ ಲಭ್ಯತೆ, ಶಿಕ್ಷಕನಿಗೆ ಸಿಗುವ ಸಮಯ ಹಾಗೂ ಸಮಾಜದಲ್ಲಿ ಆತನ ಸ್ಥಾನಮಾನ ಇತ್ಯಾದಿಗಳನ್ನು ಅವಲಂಬಿಸಿ ಈ ತತ್ವಗಳನ್ನು ಅವಲಂಬಿಸಬೇಕಾಗುತ್ತದೆ.

(ಮುಂದುವರಿಯುವುದು)

ಪಂಪಭಾರತದ ಪಾಠಾಂತರಗಳು:
ಚತುರ್ಥ, ಪಂಚಮ ಮತ್ತು ಷಷ್ಠಾಶ್ವಾಸಗಳು

ಹೇಮಲತಾ ಪದಕಿ

೪-೧೧ ಈ ಪದ್ಯದಲ್ಲಿಯ 'ಗುಣಮುಂಟೆಂದುಂಡು' ಎಂಬ ಪಾಠಕ್ಕೆ ಪಾಠಾಂತರಗಳಿಲ್ಲದಿದ್ದರೂ ಅದು ಅರ್ಥದೃಷ್ಟಿಯಿಂದ ಉಚಿತವಿರುವುದಿಲ್ಲವಾದ್ದರಿಂದ ಇದರ ವಿವೇಚನೆ ಮಾಡಬೇಕಾಗಿದೆ. ದುಷ್ಟರನ್ನು ಶಿಕ್ಷಿಸದೆ, ಶಿಷ್ಟರನ್ನು ರಕ್ಷಿಸದೆ, ಮುನಿಜನಗಳಿಗೆ ಉಂಟಾಗುವ ತೊಂದರೆಯನ್ನು ಹೋಗಲಾಡಿಸದೆ ಉಣಲುಂಟೆಂದುಂಡು ಮಲಗಿರುವ ನಿರುದ್ಯೋಗಿಯನ್ನು ಭೂಪನೆನ್ನುವರೇ ಎಂದು ಅರ್ಜುನ ತನ್ನಷ್ಟಕ್ಕೆ ತಾನೇ ವಿಚಾರಿಸಿ, ತಾನೂ ಉಂಡು ಮಲಗುವ ನಿರುದ್ಯೋಗಿಯಾಗಬಾರದೆಂದು, ದಿಗ್ವಿಜಯಕ್ಕೆ ಹೊರಡುವುದು ಈ ಪದ್ಯದ ಒಟ್ಟರ್ಥ. ದೀಪಿಕೆಯಲ್ಲಿ ಪಂಪಭಾರತದ ಪಾಠವನ್ನೇ ಇಟ್ಟುಕೊಂಡು 'ತನ್ನಲ್ಲಿ ಗುಣವಿದೆಯೆಂದು ಉಂಡು ಮಲಗಿರುವವನನ್ನು' ಎಂಬ ಅರ್ಥವನ್ನು ಕೊಡಲಾಗಿದೆ. ಗುಣವುಂಟೆಂದು ಉಂಡು ಮಲಗಿರುವವನನ್ನು ನಿರುದ್ಯೋಗಿಯೆಂದು ಕರೆಯುವುದಿಲ್ಲ. ಉಣಲು ಉಂಟು ಎಂದು ಕೆಲಸ ಮಾಡದೆ ಹಿಂದಿನವರ ಗಳಿಕೆಯನ್ನೇ ಅವಲಂಬಿಸಿ ಜೀವನ ಸಾಗಿಸುವವನಿಗೆ ನಿರುದ್ಯೋಗಿಯೆನ್ನುತ್ತಾರೆ. ಇದಕ್ಕೆ ಪೋಷಕವಾಗಿ 'ಕುಳಿತು ಉಂಡರೆ ಕುಡಿಕೆಹೊನ್ನು ಸಾಲದು' ಎಂಬ ಗಾದೆಯನ್ನು ತೆಗೆದುಕೊಳ್ಳಬಹುದು. ಈ ಪದ್ಯದಲ್ಲಿರಬೇಕಾದ ಅರ್ಥವೂ ಇದೇ. ಆದ್ದರಿಂದ 'ಗುಣಮುಂಟೆಂದುಂಡು' ಎಂಬ ಪಾಠವನ್ನು 'ಗುಣ[ಲು]ಂಟೆಂದುಂಡು' ಎಂದು ಪರಿಷ್ಕರಿಸಬೇಕಾಗುತ್ತದೆ. ಆಗ ಮಾತ್ರ ಅದು ಈ ಉಚಿತ ಅರ್ಥವನ್ನು ನೀಡುತ್ತದೆ, ಒರ್ವಂಗೆ ಉಣಲುಂಟೆಂದುಂಡು ಪಟ್ಟಿರ್ಪನನ್ ಅಣಮೆ ನಿರುದ್ಯೋಗಿಯಂ ಭೂಪನೆಂಬರ್ ? ಈ ಪರಿಷ್ಕರಣ ಒಂದು ಪ್ರಯತ್ನ ಮಾತ್ರ.*

೪-೧೭ ವಚನ : ಅರ್ಜುನ ದಿಗ್ವಿಜಯಾರ್ಥವಾಗಿ ಗಂಗಾದ್ವಾರಕ್ಕೆ ಬರುತ್ತಾನೆ. ಅಲ್ಲಿ ಅವನ ಗಂಡಗಾಡಿಯನ್ನು ಕಂಡ ನಾಗಕನ್ನೆ ಅವನನ್ನು ಪ್ರೇಮಿಸುತ್ತಾಳೆ. ಅವನನ್ನು ನಾಗಲೋಕಕ್ಕೆ ಕರೆದುಕೊಂಡು ಹೋಗಿ ತಮ್ಮ ವಿಲಾಸ, ವೈಭವಗಳನ್ನು ತೋರಿಸುತ್ತಾಳೆ. ಅವನ್ನನುಭವಿಸುವ ಹಾಗೆಯೂ ಮಾಡುತ್ತಾಳೆ. ಅವಳ ಮುದ್ದುವೆರೆಸಿದ ತೊಡಳ್ನುಡಿ, ಪೂಮಾಲೆವೆರಸಿದ ಬಳಲ್ಮುಡಿ......ಇತ್ಯಾದಿಗಳಿಗೆಲ್ಲ ಅರ್ಜುನ ಮರುಳಾಗುತ್ತಾನೆ. ಈ ಭಾಗದಲ್ಲಿ ಬರುವ 'ಕದ್ದವಣೆ' ಎಂಬ ಪಾಠಕ್ಕ ಪಂಪಭಾರತದ

---

*ಈ ಅರ್ಥ ನನಗೆ ತಿಳಿದುದು ಡಾ। ಕಲಬುರ್ಗಿಯವರಿಂದ. ಅವರು ಡಾ। ಚಿದಾನಂದಮೂರ್ತಿಯವರೊಡನೆ ಚರ್ಚಿಸುವಾಗ ಈ ಅಂಶ ಬೆಳಕಿಗೆ ಬಂದಿತಂತೆ.

ಮುದ್ರಿತ ಪ್ರತಿಯಲ್ಲಿ ಪ್ರಶ್ನಾರ್ಥಕ ಚಿಹ್ನೆ ಹಾಕಿ ಸಂಪಾದಕರು ಆ ಅರ್ಥದ ಬಗ್ಗೆ ತಮ್ಮ ಸಂದೇಹವನ್ನು ಸೂಚಿಸಿದ್ದಾರೆ. ಇದಕ್ಕಿರುವ ಪಾಠಾಂತರ 'ಗದ್ದವಣೆ' (ಕ,ಖ) ಡಿ. ಎಲ್. ಎನ್. ಅವರು 'ಲೀಲಾವತಿ'ಯಲ್ಲಿಯ 'ಕಡ್ಡವಣೆ' ಎಂಬ ಪಾಠದ ಆಧಾರ ದಿಂದ ಇದನ್ನೂ 'ಕಡ್ಡವಣೆ' ಎಂದೇ ಗ್ರಹಿಸಿದ್ದಾರೆ. ಅರ್ಥ ಸ್ಪಷ್ಟವಿಲ್ಲ ಎಂದೂ ಏಳಿತ, ಸೆಳೆತ ಇರಬಹುದು ಎಂದೂ ಹೇಳಿದ್ದಾರೆ. ಪಂಪಭಾರತದ ಕೋಶಕಾರರು ಇದಕ್ಕೆ 'ರೋಮಾಂಚ' ಎಂಬ ಅರ್ಥಹೇಳಿ ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಿದ್ದಾರೆ. ಕ, ಖ ಪ್ರತಿಗಳ ಪಾಠಕ್ಕೆ ಯಾವ ಅರ್ಥವೂ ಇಲ್ಲ. ಕಿಟೆಲ್ ಕೋಶದಲ್ಲಿ ಈ ಪದಕ್ಕೆ ಇಚ್ಛೆ, desire ಎಂಬ ಅರ್ಥ ದೊರೆಯುತ್ತದೆ. ಈ ಅರ್ಥ ಸಂದರ್ಭೋಚಿತವೆನಿಸುತ್ತದೆ. ಅವಳ 'ಇಚ್ಛೆವೆರೆಸಿದ ಸೋಂಕಿಂಗೆ' ಎಂಬ ಸ್ಪಷ್ಟವಾದ ಅರ್ಥವಾಗುತ್ತದೆ. ಆದ್ದರಿಂದ ಮುದ್ರಿತ ಪ್ರತಿಯಲ್ಲಿಯ ಪಾಠ ಉಚಿತವಾಗಿದೆಯೆಂದೂ ಅದರ ಮುಂದಿನ ಪ್ರಶ್ನಾ ರ್ಥಕ ಚಿಹ್ನದ ಅಗತ್ಯವಿಲ್ಲವೆಂದೂ ಹೇಳಬಹುದು.

೪-೨೪ ದಿಗ್ವಿಜಯಾರ್ಥವಾಗಿ ಹೊರಟ ಅರ್ಜುನನಿಗೆ ಸಮುದ್ರ ದರ್ಶನವಾಗು ತ್ತದೆ. ಈ ಪದ್ಯದಲ್ಲಿ ಸಮುದ್ರದ ವರ್ಣನೆಯನ್ನು ಮಾಡಲಾಗಿದೆ. 'ಬಂದುವಂ ದಿದಱಿಂ' ಮತ್ತು 'ತಪೋಪಳ' ಎಂಬ ಎರಡು ಪಾಠಗಳ ಸಮಸ್ಯೆ ತಲೆದೋರುವುದ ರಿಂದ ಪದ್ಯದ ಅರ್ಥ ಮಾಡುವುದು ತುಂಬ ಕಷ್ಟವಾದದ್ದು. ಡಿ. ಎಲ್ ಎನ್. ಅವರು 'ತಪೋಪಳ' ಪದಕ್ಕೆ ಅರ್ಥ ಹೇಳಿಲ್ಲ. "ಈ ಪದ್ಯದ ಮೂರನೆಯ ಪಾದ ಸ್ಪಷ್ಟವಾಗಿ ಅರ್ಥವಾಗುವುದಿಲ್ಲ. ಏನಾದರೂ ಪಾಠದೋಷ ಅಲ್ಲಿರಬಹುದು" ಎಂದು ಹೇಳಿದ್ದಾರೆ. ಪಂಪಭಾರತದ ಮುದ್ರಿತ ಪ್ರತಿಯಲ್ಲಿಯೂ 'ತಪೋಪಳ' ಪಾಠದ ಮುಂದೆ ಪ್ರಶ್ನಾರ್ಥಕ ಚಿಹ್ನೆಯನ್ನು ಪಯೋಗಿಸಿದ್ದಾರೆ. ಇದಕ್ಕೆ 'ತಪೋಬಳ' ಎಂಬ ಪಾಠಾಂತರವಿದ್ದು, ಅದೂ ಅರ್ಥದೃಷ್ಟಿಯಿಂದ ಉಚಿತವೆನಿಸುವುದಿಲ್ಲ. ತಪಸ್ಸಿನ ಕಲ್ಲು ಎಂಬರ್ಥ ನೀಡುವ 'ತಪೋಪಳ' ಪಾಠ ಸಂದರ್ಭೋಚಿತವೆನಿಸುವುದಿಲ್ಲ. ಅಲ್ಲದೆ ಸ್ಪಷ್ಟವಾದ ಅರ್ಥವನ್ನೂ ಕೊಡುವುದಿಲ್ಲ. ಆದ್ದರಿಂದ ಇದನ್ನು 'ತ[ಟೋ]ಪಳ' ಎಂದು ಊಹಾತ್ಮಕವಾಗಿ ಪರಿಷ್ಕರಿಸಬಹುದು. ಈರೀತಿಯ ಪರಿಷ್ಕರಣದಿಂದ ಉಂಟಾಗುವ ಅರ್ಥ ಸಂದರ್ಭೋಚಿತವಾದರೂ ಪರಿಷ್ಕರಣ ಆಧಾರರಹಿತವೆನಿಸುತ್ತದೆ. ಪರಿಷ್ಕರಣಕ್ಕೆ ತಕ್ಕ ಆಧಾರ ದೊರೆಯದಿದ್ದರೆ ಅದನ್ನು ಹಾಗೆಯೇ ಇಡಬೇಕೇದೇನೂ ಇಲ್ಲ. 'ಬಂದುವಂದಿದಱಿ' ಎಂಬ ಪಾಠ ದೀಪಿಕೆಯಲ್ಲಿ ಹಾಗೂ ಮುದ್ರಿತ ಪ್ರತಿಯಲ್ಲಿ ಈ ಪಾಠವೇ ಇದೆ 'ತಟೋಪಳ' ಪಾಠಕ್ಕೆ ಹೊಂದಿಕೊಳ್ಳುವ ಅರ್ಥವುಳ್ಳ ಪಾಠ 'ಕ' ಪ್ರತಿಯಲ್ಲಿರುವುದರಿಂದ 'ಬಂದುವಂದುದಱಿಂ' ಎಂಬ ಪಾಠ ಸ್ವೀಕಾರಾರ್ಹವೆನಿಸು ತ್ತದೆ. ಈರೀತಿ 'ತಪೋಪಳ' ವನ್ನು 'ತ[ಟೋ]ಪಳ' ವನ್ನಾಗಿ, 'ಬಂದುವಂದಿದಱಿಂ' ಎಂಬುದನ್ನು 'ಬಂದುವಂದುದಱಿಂ' ಎಂದು ಮಾಡಿಕೊಂಡರೆ ಪದ್ಯದ ಒಟ್ಟರ್ಥ ಈ ರೀತಿಯಾಗುತ್ತದೆ: ಎದುರಿನಲ್ಲಿ ನಿಂತುಕೊಂಡರೆ ಇಂದ್ರ ಸಹಿಸನು. ಅದ್ದರಿಂದ

ನವ್ಮೊಳಗೆ ಹೊಕ್ಕು ನಿಲ್ಲು ಎಂದು ಹೇಳಲು ಉತ್ಸಾಹದಿಂದ ಸಮುದ್ರದ ಅಲೆಗಳು (ಬೆಟ್ಟಗಳನ್ನು ಇಂದ್ರನಿಂದ ರಕ್ಷಿಸಬೇಕೆಂಬ ಉತ್ಕಟತೆಯಿಂದ) ಬೆಟ್ಟಗಳ ಕಾಲು ಹಿಡಿಯುವ ಹಾಗೆ (ಬೆಟ್ಟಕ್ಕೆ) ಬಂದುಬಂದು ತಾಗುತ್ತಿದ್ದುದರಿಂದ, ಆ ಹೊಡೆತದಿಂದ ಮೇಲೆ ಜಿಗಿಯುವ ದಡದ ಕಲ್ಲುಗಳು ಗಗನವನ್ನು ಎದುರಾಗಿ ಹೊಡೆಯುವಂತೆ ತೋರುತ್ತಿತ್ತು, ಮೇಲೆ ತೇಲಾಡುತ್ತಿರುವ ಅಸಂಖ್ಯ ಶಂಖಗಳಿಂದ ಬೆಳ್ಳಗಾಗಿರುವ ಸಮುದ್ರ ಕಣ್ಣಿಗೆ ಸೊಗಸೆನಿಸುವುದು."

೪–೮೧ : ಮಾಲೆಕಾರ್ತಿಯರ ವರ್ಣನೆಯನ್ನು ಈ ಪದ್ಯದಲ್ಲಿ ಮಾಡಲಾಗಿದೆ. ಅವರ ಎತ್ತಿದ ತೋಳಿನ ಬುಡಭಾಗ ಮನ್ಮಥನನ್ನು ಪಟವಿದ್ದೆಗೆತ್ತಿದಂತೆ ತೋರುತ್ತಿತ್ತಂತೆ. ಸರ್ವ ಪ್ರತಿಗಳಲ್ಲೂ ಇರುವ 'ಅಂಗಜನಂ ಪಟವಿದ್ದೆ' ಎಂಬ ಪಾಠವನ್ನು ಮುದ್ರಿತ ಪ್ರತಿಯ ಸಂಪಾದಕರು 'ಅಂಗಜ [ಲಂ]ಪಟವಿದ್ದೆ' ಎಂದು ಪರಿಷ್ಕರಿಸಿದ್ದಾರೆ, 'ಅಂಗಜನಂ ಪಟವಿದ್ದೆ' ಎಂಬ ಪಾಠವನ್ನೇ ದೀಪಿಕೆಯಲ್ಲಿಯೂ ಸ್ವೀಕರಿಸಲಾಗಿದೆ. ಅವರ ಎತ್ತಿದ ತೋಳಿನ ಬುಡಭಾಗ ಅಂಗಜನನ್ನು ಪಟವಿದ್ದೆಗೆ ಅಂದರೆ ಗಾಳಿಪಟ ಆಡಿಸುವ ಹಾಗೆ ಆಡಿಸುವುದಕ್ಕೆ ಎತ್ತಿದಂತೆ ತೋರುತ್ತಿತ್ತಂತೆ. ಈ ಅರ್ಥವನ್ನು ಕೊಡುವ 'ಅಂಗಜನಂ ಪಟವಿದ್ದೆಗೆತ್ತಿದಂತೆ' ಎಂಬ ಪಾಠವೇ ಉಚಿತವೆನಿಸುತ್ತದೆ. ಅಲ್ಲದೆ ಪಂಪ ಇತರೆಡೆಗಳಲ್ಲಿ (ಅ. ಪು. ೩-೪೫) ಪಟವಿದ್ದೆ ಎಂಬ ಪದವನ್ನು ಬಳಸಿರುವುದರಿಂದ ಇಲ್ಲಿಯೂ ಅದು ಪಟವಿದ್ದೆಯೇ ಹೊರತು ಲಂಪಟವಿದ್ದೆ ಇರಲಾರದು.

೪–೮೭ : ಈ ಪದ್ಯದಲ್ಲಿ ರಾಜವಿಟರ ವರ್ಣನೆಯಿದೆ. ಇಲ್ಲಿ 'ಚಾಪಿನಾಣ್' ಎಂಬುದು ಚರ್ಚಾಸ್ಪದ ಪಾಠ. ರಾಜವಿಟರೊಡನೆ ಚಾಪಿನಾಣ್, ಸೀಗುರಿ, ಗುಜ್ಜರಿಗಜ್ಜಿ, ಹೊಗಳುಭಟ್ಟರು ಇತ್ಯಾದಿ ಇರುತ್ತಿದ್ದರಂತೆ. 'ಚಾಪಿನಾಣ್' ಎಂಬ ಪಾಠದಿಂದ ಸ್ಪಷ್ಟವಾದ ಅರ್ಥ ಹೊರಡುವುದಿಲ್ಲ. ಡಾ. ಡಿ. ಎಲ್. ಎನ್. ಅವರು ಗ, ಘ ಪ್ರತಿಯ 'ಕಾಪಿನಾಣಿ' ಎಂಬ ಪಾಠವನ್ನಿಟ್ಟುಕೊಂಡು ಅದನ್ನೇ 'ಕಾಪಿನಾ[ಳ್]' ಎಂದು ಪರಿಷ್ಕರಿಸಿದ್ದಾರೆ. ಈ ಪಾಠ ಸ್ಪಷ್ಟ ಅರ್ಥವನ್ನು ನೀಡುತ್ತದೆ. ರಾಜವಿಟರು ತಮ್ಮ ರಕ್ಷಕರೊಡನೆ, ಸೀಗುರಿಯೊಡನೆ, ಗುಜ್ಜರಿಗಜ್ಜಿಗಳೊಡನೆ ವೇಶ್ಯೆಯರ ಬಳಿಗೆ ಹೋಗುತ್ತಿದ್ದರೆಂಬ ಸರಿಯಾದ ಅರ್ಥ ಹೊರಡುತ್ತದೆ. ಆದ್ದರಿಂದ ಡಾ. ಡಿ. ಎಲ್. ಎನ್; ಅವರು ಊಹಿಸಿದ ಪಾಠ ಉಚಿತವಾದುದೆನಿಸುತ್ತದೆ.

೫–೧೧ : ಈ ಪದ್ಯದಲ್ಲಿ ಅರ್ಜುನ ತನ್ನ ಕಾಮರಾಗ ಸಾಗರದ ಬಗ್ಗೆ ಹೇಳುತ್ತಾನೆ. ಅರಳಿದ ಹೂವಿನಲ್ಲಿ ತೆರತೆರನಾಗಿ ಹೊಳೆಯುವ ದುಂಬಿಗಳು, ಚಿಗುರಿದ ಎಳೆಮಾವು, ಮಾವಿನ ಚಿಗುರನ್ನು ಕಚ್ಚಿ ಜಿಜ್ಜಳಿಪ ಕೋಗಿಲೆ, ಹೂವಿನ ಸುವಾಸನೆಯನ್ನು ತೆಗೆದುಕೊಂಡು ದಾಟಿ ಬರುವ ಗಾಳಿ ಇವು ಯಾವುವೂ ಅರ್ಜುನನ ಮನಸ್ಸನ್ನು ಸೆರೆ ಹಿಡಿಯಲಿಲ್ಲ, ಅವುಗಳ ಬಗ್ಗೆ ಅವನ ಮನಸ್ಸಿನಲ್ಲಿ ಪ್ರೀತಿ ಉಂಟಾಗಲಿಲ್ಲ. ಆದರೆ ಅವನ ಕಾಮರಾಗ ಸಾಗರದ ಸಮೃದ್ಧಿಗೆ ಸುಭದ್ರೆಯ ನೋಟವೆಂಬ ಬೆಳುದಿಂಗಳೊಂದೇ ಸಾಕು.

ಇಲ್ಲಿ 'ಬಿಚ್ಚಟಿಪ' ಪದ ಚಿಂತನೀಯ. ಪಂಪಭಾರತದ ೧-೧೧ನೆಯ ಪದ್ಯದಲ್ಲಿಯೂ ಈ ಪದವನ್ನು 'ಬಿಚ್ಚಳಿಸು' ಎಂದು ತಿದ್ದಲಾಗಿದೆ. 'ಳ'ಕಾರಯುಕ್ತವಾದ ಪದವೇ ಹಲವು ಕವಿಗಳಿಂದ ಅನೇಕ ಕಡೆಗಳಲ್ಲಿ ಪ್ರಯೋಗಿಸಲ್ಪಟ್ಟಿರುವುದರಿಂದ, ಸಂಸ್ಕೃತದ 'ವಿಸ್ತರಿಸು' ಪದದ ತದ್ಭವ 'ಬಿಚ್ಚಳಿಸು' ಎಂದಿರುವುದರಿಂದ 'ಟ'ಕಾರ ಯುಕ್ತ ಪಾಠ, ಅಪಪಾಠ. ಡಾ. ಡಿ. ಎಲ್. ಎನ್. ಅವರೂ 'ಬಿಚ್ಚ[ಳಿ]ಸು' ಎಂದೇ ತಿದ್ದಿದ್ದಾರೆ. ಈ ಪದಕ್ಕೆ ಹಾಗೂ ಈ ಸಂದರ್ಭಕ್ಕೆ ಅವರು ಕೊಟ್ಟಿರುವ ಅರ್ಥ ವಿಸ್ತರಿಸಂ, ಉಬ್ಬು. ಈ ಅರ್ಥಗಳ ಜೊತೆಗೆ 'ಬಿಚ್ಚಳಿಸು' ಪದಕ್ಕೆ 'ಧ್ವನಿಮಾಡು' ಎಂಬ ಇನ್ನೊಂದು ಅರ್ಥವೂ ಇದೆ. ಈ ಅರ್ಥವೇ ಸಂದರ್ಭೋಚಿತವೆನಿಸುತ್ತದೆ. ಆದ್ದರಿಂದ ಇಲ್ಲಿರುವುದು 'ಬಿಚ್ಚಳಿಸು' ಪಾಠ. ಧ್ವನಿಮಾಡು ಎಂಬ ಅರ್ಥದಲ್ಲಿ.

೬-೨೯ ವಚನ : ರಾಜಸೂಯ ಯಾಗವನ್ನು ನೆರವೇರಿಸುವುದಕ್ಕಾಗಿ ಅರ್ಜುನ, ಭೀಮ, ನಕುಲ, ಸಹದೇವರು ಒಂದೊಂದು ದಿಕ್ಕಿಗೆ ದಿಗ್ವಿಜಯಾರ್ಥವಾಗಿ ಪ್ರಯಾಣ ಬೆಳೆಸುತ್ತಾರೆ. ಈ ವಚನದಲ್ಲಿ ಅರ್ಜುನನ ವಿಜಯದ ವರ್ಣನೆ. ಅವನು ಸೋಲಿಸಿದ ರಾಜರ ಪರಿಚಯವನ್ನು ಮಾಡಿಕೊಡಲಾಗಿದೆ. ಇಲ್ಲಿಯ 'ಅರಿ ನೃಪರಂ ಭೇದಿಸಿ' ಎಂಬ ಪಾಠಕ್ಕೆ ಬದಲಾಗಿ ಅಡಿಟಿಪ್ಪಣಿಯಲ್ಲಿ 'ಚೇದಿ ನೃಪರಂ ಭೇದಿಸಿ' ಎಂಬ ಪರಿಷತ್ತಿನ ಊಹಿತ ಪಾಠವಿದೆ. ಆತ ಪಾಂಚಾಳರನ್ನು ಜಾಳಿಸಿದ. ಗಾಂಧರ್ವರನ್ನು ವಿರಥರನ್ನಾಗಿ ಮಾಡಿದ, ಕಿಂಪುರಷರನ್ನು ಕಾಪುರುಷರನ್ನಾಗಿ ಮಾಡಿದ ಒಟ್ಟು ಒಬ್ಬೊಬ್ಬ ರಾಜರನ್ನು ಒಂದೊಂದು ರೀತಿಯಿಂದ ಗೆದ್ದ. ಇವೆಲ್ಲಕ್ಕಿಂತ ಮೊದಲೇ ಅರಿನೃಪರನ್ನು ಭೇದಿಸಿದ ವಿಷಯ ಬರುತ್ತದೆ. ವಿಜಯ ಚಿಹ್ನಗಳು ಆತನ ವಿಜಯವನ್ನು ಸಾರುತ್ತಿರಲಾಗಿ, ಆತ ವಿಜಯದ ಪತಾಕೆಯನ್ನು ಹಿಡಿಸಿ. ಅರಿನೃಪರನ್ನು ಭೇದಿಸಿ ಇಂದ್ರಪ್ರಸ್ಥಕ್ಕೆ ಬಂದ. ಅರಿನೃಪರನ್ನು ಭೇದಿಸಿ ನಂತರವೇ ಅಲ್ಲವೇ ವಿಜಯಪತಾಕೆಯನ್ನು ಹಿಡಿಯಿಸುವುದು ? ಇಲ್ಲೆಲ್ಲ ಅರಿನೃಪರನ್ನು ಸೋಲಿಸಿದ ರೀತಿಯೇ ವರ್ಣಿಸಲ್ಪಟ್ಟಾಗ ಪ್ರತ್ಯೇಕವಾಗಿ 'ಅರಿನೃಪರನ್ನು ಭೇದಿಸಿ' ಎಂದು ಹೇಳುವ ಅವಶ್ಯವಿಲ್ಲ. ಪಂಪ ಅನವಶ್ಯಕ ಶಬ್ದಗಳನ್ನೆಲ್ಲಿಯೂ ಬಳಸುವುದಿಲ್ಲ. ಆದ್ದರಿಂದ ಇಲ್ಲಿ 'ಚೇದಿ ನೃಪರಂ ಭೇದಿಸಿ' ಎಂಬ ಪರಿಷತ್ತಿನ ಊಹಿತಪಾಠವನ್ನಿಟ್ಟುಕೊಂಡರೆ ಉಚಿತವೆನಿಸುತ್ತದೆ. ಉಳಿದೆಲ್ಲ ರಾಜರನ್ನು, ಪ್ರತ್ಯೇಕವಾಗಿ ಹೆಸರಿಸಿದಾಗ ಇಲ್ಲಿಯೂ 'ಅರಿನೃಪರಂ' ಬದಲು 'ಚೇದಿ ನೃಪರಂ' ಎಂದೇ ಇರಬೇಕು ಎನಿಸುತ್ತದೆ.

೬-೩೫ : ಈ ಪದ್ಯದಲ್ಲಿ ಪಾಂಡವರು ನೆರವೇರಿಸಿದ ರಾಜಸೂಯ ಯಾಗದ ವರ್ಣನೆಯನ್ನು ಮಾಡಲಾಗಿದೆ. ಸುತ್ತುವರಿಯುವ ಮೋಡಗಳು ಮೇರುಪರ್ವತವನ್ನು ಸುತ್ತುವ ಹಾಗೆ. ಕನಕಯೂಪನವನ್ನು ಅಗ್ನಿಗೆ ಹಾಕಿದ ಆಹುತಿಗಳಿಂದುಂಟಾದ ಧೂಮಗಳು ಬಳಸಿದವು. ಪಂಪಭಾರತದ ಮುದ್ರಿತ ಪ್ರತಿಯಲ್ಲಿ 'ಬಳಸೆ ಮುಗಿಲ್ಗಳ್' ಎಂಬ ಪಾಠವಿದೆ. ಡಾ. ಡಿ. ಎಲ್. ಎನ್. ಅವರು ಇದನ್ನು ಅರ್ಥ ದೃಷ್ಟಿಯಿಂದ 'ಬಳ[ಸು]'

ಎಂದು ಪರಿಷ್ಕರಿಸಿದ್ದಾರೆ. 'ಬಳಸೆ' ಎಂಬ ಪಾಠದಿಂದ ಅರ್ಥ ಅಸ್ಪಷ್ಟವೆನಿಸುತ್ತದೆ. 'ಮೋಡಗಳು ಬಳಸಲಾಗಿ ಕನಕಾಚಳವನ್ನು ಬಳಸುವ ಹಾಗೆ' ಎಂಬ ಅರ್ಥದಿಂದ ಉಪಮಾಲಂಕಾರದ ಸ್ವಾರಸ್ಯವೇ ಹಾಳಾಗಿಬಿಡುತ್ತದೆ. 'ಬಳಸು' ಎಂಬ ಪಾಠವನ್ನಿಟ್ಟು ಕೊಂಡರೆ 'ಸುತ್ತುವರಿಯುವ ಮೋಡಗಳು ಕನಕಾಚಳವನ್ನು ಸುತ್ತುವರಿಯುವ ಹಾಗೆ' ಎಂಬರ್ಥವುಂಟಾಗಿ ಅಲಂಕಾರದ ಸ್ವಾರಸ್ಯಕ್ಕೆ ಧಕ್ಕೆಯುಂಟಾಗುವುದಿಲ್ಲ. ಆದ್ದರಿಂದ ಡಾ. ಡಿ. ಎಲ್. ಎನ್. ಅವರು ಊಹಿಸಿದ ಪಾಠ ಉಚಿತವಾದುದೆನಿಸುತ್ತದೆ.

೬–೪೬ : ಧರ್ಮರಾಯ ರಾಜಸೂಯ ಯಾಗವನ್ನು ನೆರವೇರಿಸಿದ ಮೇಲೆ ಭೀಷ್ಮನ ಸಲಹೆಯ ಮೇರೆಗೆ ಕೃಷ್ಣನಿಗೆ ಅನರ್ಘ್ಯದರ್ಘ್ಯವನ್ನು ಎತ್ತಿದಾಗ ಸಭೆಯಲ್ಲಿದ್ದ ಶಿಶುಪಾಲ ಕೋಪೋದ್ರಿಕ್ತನಾಗುತ್ತಾನೆ. ಆತ ಧರ್ಮರಾಯನ ಕಾರ್ಯವನ್ನು ಖಂಡಿಸುತ್ತ 'ಎಲೈ ಧರ್ಮರಾಯನೇ. ನೀನು ವ್ಯಕ್ತಿಗಳ ಸಾಮರ್ಥ್ಯವನ್ನು ಅರಿಯದೆ ನಿನ್ನ ದಡ್ಡತನ ದೊಡ್ಡದಾಗುವಂತೆ ದನ ಕಾಯುವವನಿಗೆ ಪ್ರಾಶಸ್ತ್ಯವಿತ್ತು ಈ ಸಭೆಯಲ್ಲಿ ಸೇರಿರುವ ಸಮಸ್ತ ರಾಜರಿಗೂ ಕೊರಳ ಪಳಿ (?) ಯನ್ನು ಕಟ್ಟಿದ್ದೀಯೆ' ಎಂದು ಆರೋಪಿಸುತ್ತಾನೆ. ಇಲ್ಲಿ 'ಪಳಿ' ಪಾಠ ವಿಚಾರಾರ್ಹ. ಪಂಪ ಕುಳಯುಕ್ತವಾದ ಈ ಪದವನ್ನು ಮತ್ತೆಲ್ಲಿಯೂ ಬಳಸಿಲ್ಲ. ಪಳಿ ಎಂದರೆ ರೀತಿ, ಕ್ರಮ ಎಂದರ್ಥ, ಆದರೆ ಪ್ರಸ್ತುತ ಪದ್ಯಕ್ಕೆ ಈ ಅರ್ಥ ಹೊಂದಿಕೆಯಾಗದು. ಆದ್ದರಿಂದ ಪರಿಷತ್ತಿನ ಪ್ರತಿಯ ಸಂಪಾದಕರು 'ಱಿ' ಎಂಬ ಸಲಹೆಯನ್ನು ಅಡಿ ಟಿಪ್ಪಣಿಯಲ್ಲಿ ಮಾಡಿದ್ದಾರೆ. ಪಂಪ ಸಾಮಾನ್ಯವಾಗಿ ಪ್ರಾಸ ನಿಯಮವನ್ನು ಉಲ್ಲಂಘಿಸಿಲ್ಲ. ಆದರೆ ಕೆಲವೆಡೆ ಮಾತ್ರ ಉಲ್ಲಂಘಿಸಿದ್ದು ಕಂಡುಬರುತ್ತದೆ. ಅಂಥ ಕೆಲವು ಪದ್ಯಗಳಲ್ಲಿ ಇದೂ ಒಂದು. ಪಱಿ ಎಂಬುದಕ್ಕೆ ನಿಂದಾಯಾಂ, ವಸ್ತ್ರ ವಿಶೇಷೇ ಚ ಎಂಬ ಎರಡು ಅರ್ಥಗಳಿವೆಯೆಂದು ಕೇಶಿರಾಜನ ವಿವರಣೆ. ಪಂಪನು ಪಱಿ ಎಂಬ ಪದವನ್ನು ಬಟ್ಟೆ, ವಸ್ತ್ರ ಎಂಬರ್ಥದಲ್ಲಿ ೩-೪೦, ೪-೬೩ ರಲ್ಲಿಯೂ; ನಿಂದೆ, ಬೈಗುಳ, ದೂಷಣೆ ಎಂಬರ್ಥದಲ್ಲಿ ೪-೯೧ವ, ೬-೫೯ರಲ್ಲಿಯೂ ಪ್ರಯೋಗಿಸಿದ್ದಾನೆ. ಹಾಗೆಯೇ ಈ ಮೇಲಿನ ಕಂದ ಪದ್ಯದಲ್ಲಿ ಅಪಮಾನ, ನಿಂದೆ ಎಂಬ ಅರ್ಥದಲ್ಲಿ 'ಪಱಿ' ಪದ ಪ್ರಯೋಗವಾಗಿದೆ. ರಾಜಸೂಯ ಯಾಗದ ಮಹಾಸಭೆಯಲ್ಲಿ ಸೇರಿದ ಪ್ರತಿಷ್ಠಿತ ರಾಜರ ಕೊರಳಿಗೆ ಪಱಿಯನ್ನು (ಅಪಮಾನ) ಕಟ್ಟಿದೆಯಾ ? ಎಂಬುದು ಶಿಶುಪಾಲನ ಆರೋಪ ಧರ್ಮರಾಯನ ಮೇಲೆ. ಆದ್ದರಿಂದ ಪಂಪನ ಈ ಪದ್ಯದಲ್ಲಿ ಳ. ಱಕಾರಗಳ ಪ್ರಾಸವಿದೆ; ಪಱಿ ಎಂಬ ಪಾಠವೇ ಸ್ವೀಕಾರಾರ್ಹವಾಗಿದೆ.*

೬–೫೩ : ಧರ್ಮರಾಜ ರಾಜಸೂಯಯಾಗಾನಂತರ ಕೃಷ್ಣನಿಗೆ ಅನರ್ಘ್ಯದರ್ಘ್ಯವನ್ನೆತ್ತಿದಾಗ ಶಿಶುಪಾಲ ಕೃಷ್ಣನನ್ನು ನಿಂದಿಸತೊಡಗುತ್ತಾನೆ. "ಹಿಂದೆ ಮುರನೆಂಬ

---

* 'ಪಂಪಭಾರತದ ಪಾಠಾಂತರಗಳು'—ಹಂಪನಾ

ರಕ್ಕಸ ನಿನ್ನ ಮೇಲೆ ಬಿದ್ದು ನಿನ್ನನ್ನು ಕಟ್ಟಿಹಾಕಿದ್ದನ್ನು ಮರೆತೆಯಾ ? ನಿನ್ನ ಹಿಂಗಟ್ಟು ಮುರಿಯನ್ನು ಭೀಷ್ಮ ಶರದಿಂದ ಬಿಡಿಸಿದನಲ್ಲವೆ ?" ಎಂದು ಹಿಂದೆ ಕೃಷ್ಣನಿಗಾದ ಅವಮಾನವನ್ನು ನೆನಪಿಸುತ್ತಾನೆ. ಇಲ್ಲಿ 'ಮುಳಿದೆ' ಎಂಬ ಪಾಠ ವಿಚಾರಾರ್ಹ. ಕ,ಖ,ಘ. ಪ್ರತಿಗಳಲ್ಲಿ 'ಮುಳಿದ' ಎಂಬ ಪಾಠಾಂತರವಿದೆ. ಆಚಾರ್ಯ ಡಿ. ಎಲ್. ಎನ್, ಅವರು ಮುಳಿದ ಎಂಬ ಪಾಠವನ್ನೇ ಸ್ವೀಕರಿಸಿದ್ದಾರೆ. ಈ ಪದ್ಯದಲ್ಲಿ ಒಟ್ಟು ಎರಡು ವಾಕ್ಯಗಳಿವೆ. ಎರಡನೆಯ ವಾಕ್ಯ ಪ್ರಶ್ನಾರ್ಥಕವಾಗಿದ್ದುದರಿಂದಲೇ ಮೂದಲಿಕೆ ಇನ್ನಷ್ಟು ಮರ್ಮಭೇದಕವೆನಿಸುತ್ತದೆ. ಎರಡನೆಯ ವಾಕ್ಯದಂತೆ ಮೊದಲನೆಯ ವಾಕ್ಯವೂ ಪ್ರಶ್ನಾರ್ಥಕವೇ ಆಗಿರಬಹುದೆಂದು ಅನಿಸುತ್ತದೆ. ಪ್ರಕಟಿತ ಭಾರತದಲ್ಲಿ 'ಮುಳಿದೆ' ಪಾಠವನ್ನಿಟ್ಟುಕೊಂಡಿರುವುದರಿಂದ ಮೂದಲಿಕೆ ಸಪ್ಪೆಯೆನಿಸುತ್ತದೆ. ಆದ್ದರಿಂದ ಡಾ. ಡಿ. ಎಲ್, ಎನ್. ಅವರು ಸ್ವೀಕರಿಸಿದ ಪಾಠ, ಕ, ಖ, ಘ. ಪ್ರತಿಗಳ ಪಾಠವೇ ಇಲ್ಲಿ ಉಚಿತವೆನಿಸುತ್ತದೆ.

೬–೫೯ ವಚನ: ಶಿಶುಪಾಲ ವಧೆಯ ಪ್ರಸಂಗವಿದು. ಶ್ರೀಕೃಷ್ಣನನ್ನು ಹೀಯಾಳಿಸುತ್ತ ಶಿಶುಪಾಲನು ಕೋಪದ ಕೆಂಡವಾದ ಸಂದರ್ಭ, ಸಭೆಯ ಮೇಲೆ ಮಾಡಿದ ಪರಿಣಾಮವನ್ನು ವರ್ಣಿಸಲಾಗಿದೆ ಈ ವಚನದಲ್ಲಿ. ಇಲ್ಲಿಯ 'ಎವೆ ಮಿಡುಕದೆ' ಎಂಬ ಪಾಠದ ಬಗ್ಗೆ ಡಾ. ಎಂ. ಎಂ. ಕಲಬುರ್ಗಿಯವರು 'ಕನ್ನಡ ಗ್ರಂಥಸಂಪಾದನ ಶಾಸ್ತ್ರ'ದಲ್ಲಿ ವಿವೇಚಿಸಿದ್ದಾರೆ. ಡಾ. ಡಿ. ಎಲ್. ಎನ್. ಅವರು 'ಎವೆ ಮಿಡುಕದೆ' ಪಾಠವನ್ನೇ ಸ್ವೀಕರಿಸಿದ್ದಾರೆ. ಈ ಪಾಠಕ್ಕೆ ಕ. ಗ. ಪ್ರತಿಗಳಲ್ಲಿ 'ಎಲ್ಲಂ ಮೇರೆ ಮಿಡುಕದೆ' ಮತ್ತು ಖ ಪ್ರತಿಯಲ್ಲಿ 'ಲಂ ಮೆಲೆಮಿಂಡುಕದೆ' ಎಂಬ ಭಿನ್ನಪಾಠಗಳಿವೆ. ಡಾ. ಕಲಬುರ್ಗಿಯವರು ಕನ್ನಡ ಕಾವ್ಯಾಂಜಲಿ ಸಂ–೨ ರಲ್ಲಿಯ 'ಎಲ್ಲಮೇಲೆಮಿಡುಕದೆ' ಎಂಬ ಪಾಠದ ಬಲದಿಂದ ಎಲಂ ಮೆಲೆಮಿಡುಕದೆ' ಎಂಬ ಅರ್ಥರಹಿತ ಪಾಠವನ್ನು 'ಎಲ್ಲಮೇಲೆ ಮಿಡುಕದೆ' ಎಂದು ಪರಿಭಾವಿಸಿದ್ದಾರೆ. ಆಗ 'ಎಲ್ಲಮೇವೆ ಮಿಡುಕದೆ', 'ಎಲ್ಲಂ ಮೇರೆ ಮಿಡುಕದೆ', 'ಎಲ್ಲಮೆಲೆ ಮಿಡುಕದೆ' ಎಂಬ ಮೂರು ಪಾಠಗಳನ್ನು ಸಿದ್ಧಮಾಡಿ 'ಎಲೆ ಮಿಡುಕದೆ' ಎಂಬ ಪಾಠವೇ ಉಚಿತವೆಂದೂ ಕವಿಪಾಠವೆಂದೂ ಆಧಾರ ಸಹಿತವಾಗಿ ಸಿದ್ಧಪಡಿಸಿದ್ದಾರೆ. ಯಶೋಧರ ಚರಿತೆಯ (೪-೨), ಕುಮಾರವ್ಯಾಸ ಭಾರತದ (೯-೩) ಲ್ಲಿಯ 'ಎಲೆಮಿಂಡುಕದೆ ನೆಸೆ', 'ಎಲೆ ಮಿಡುಕದಾಲಿಸು' ಎಂಬ ಪ್ರಯೋಗಗಳೂ ಇದನ್ನೇ ಬಲಪಡಿಸುತ್ತವೆ.*

(ಮುಂದುವರಿಯುವುದು)

* ನೋ– ಪಂಪಭಾರತದ ಕೆಲವು ಪದಪಾಠಗಳು. ಪ್ರ. ಕ. ೫೦–೨.

ಸುಖಾಂತನಾಟಕ :
ಮೆರಿಡಿಥ್‌ನ ವಿಚಾರಗಳು

ಚಂದ್ರಶೇಖರ
ಯರವಿನತೆಲಿಮಠ

ಜಾರ್ಜ ಮೆರಿಡಿಥ್ ಇಂಗ್ಲೀಷ್ ಶ್ರೇಷ್ಠ ಕಾದಂಬರಿಕಾರ ಮತ್ತು ಅಗ್ರವಿಮರ್ಶಕ. ಅವರು ೧೮೭೭ರಲ್ಲಿ ಲಂಡನ್ ಸಂಸ್ಥೆಯೊಂದರಲ್ಲಿ ಸಾದರಪಡಿಸಿದ "The Idea of Comedy and the Uses of the Comic Spirit" ಪ್ರಬಂಧ ಕೂಡಲೆ ಜಗತ್ಪ್ರಸಿದ್ಧಿ ಪಡೆಯಿತು. ಮೆರಿಡಿಥ್ ಅವರ ಈ ಪ್ರಬಂಧ, ಸುಖಾಂತನಾಟಕವನ್ನು ಕುರಿತ ಇಂಗ್ಲೀಷ ಬರವಣಿಗೆಗಳಲ್ಲಿಯೇ ಅದ್ವಿತೀಯವೆಂದರೆ ತಪ್ಪಾಗಲಿಕ್ಕಿಲ್ಲ. ಸುಖಾಂತನಾಟಕದ ಕಲ್ಪನೆ ಬಗೆಗೆ ಬಹು ವಿಶದವಾಗಿ, ಪಾಂಡಿತ್ಯಪೂರ್ಣವಾಗಿ ಬರೆದ ಈ ಪ್ರಬಂಧ, ಈ ಸಾಹಿತ್ಯಪ್ರಕಾರದ ಸಿದ್ಧಾಂತವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿದೆ.

ಸುಖಾಂತನಾಟಕ ಮತ್ತು ಸುಸಂಸ್ಕೃತ ಸಮಾಜ :

ಸುಸಂಸ್ಕೃತ ಸಮಾಜ, ಸುಖಾಂತನಾಟಕದ ಬೆಳವಣಿಗೆಗೆ ಅವಶ್ಯ. ಎಲ್ಲಿ ನಾಗರಿಕತೆ ನೆಲಿಸದೊ ಅಲ್ಲಿ ಸುಖಾಂತನಾಟಕ ಮೈದೋರದು. ಪ್ರಪಂಚದಲ್ಲಿ ಮೊಟ್ಟ ಮೊದಲು ನಾಗರಿಕತೆಯ ಬೆಳಕನ್ನು ಕಂಡವರೆಂದರೆ ಪಾಶ್ಚಿಮಾತ್ಯರು. ಅದರಲ್ಲಿಯೂ ಹೆಚ್ಚು ಮುಂದುವರಿದವರು ಗ್ರೀಕ ಮತ್ತು ಫ್ರೆಂಚರು. ಹೀಗಾಗಿ ಅವರು ಸೃಷ್ಟಿಸಿರುವ ಸುಖಾಂತನಾಟಕಗಳಲ್ಲಿ ಅವರ ನಾಗರಿಕತೆ ಒಡೆದುಕಾಣುತ್ತದೆ

ಪಾಶ್ಚಿಮಾತ್ಯರಲ್ಲಿ ನಾಗರಿಕತೆಯ ದೃಷ್ಟಿಯಿಂದ ಹಿಂದುಳಿದವರೆಂದರೆ ಸ್ಪೇನ್ ಮತ್ತು ಜರ್ಮನ್ ಜನರು. ಸ್ಪೇನದಲ್ಲಿ ಸ್ತ್ರೀಗೆ ಸಾಮಾಜಿಕ ಸ್ವಾತಂತ್ರ್ಯವಿಲ್ಲ: ಸ್ತ್ರೀ ಪುರುಷರ ಸಂಪರ್ಕ ನಿಷಿದ್ಧ. ಇಂಥ ಕಟ್ಟಿನಲ್ಲಿ ಬೆಳೆದ ಇವರು ಕಾಮಂದ ಕಿಚ್ಚಿನಲ್ಲಿ ಬೆಂದು ನಿರ್ಜೀವ ಗೊಂಬೆಗಳಾಗಿದ್ದಾರೆ. ತತ್‌ಪರಿಣಾಮವಾಗಿ ಅವರ ನಾಟಕದ ಪಾತ್ರಗಳು ನಿರ್ಜೀವವಾಗಿಬಿಟ್ಟಿವೆ. ಇವರ ಕೌಟುಂಬಿಕ ಜೀವನದಲ್ಲಿ ಕಾಣುವ ರುದ್ರಭಯಾನಕ ದೃಶ್ಯಗಳೇ ಇವರ ನಾಟಕಗಳಲ್ಲಿಯೂ ಎದ್ದುತೋರುತ್ತವೆ

ಸ್ಪೇನದವರಿಗಿಂತ ಜರ್ಮನ್ನರು ಇನ್ನೂ ಅಸಭ್ಯರು, ಅನಾಗರಿಕರು. ಇವರಿಗೆ ಹಾಸ್ಯದ ಕಲ್ಪನೆ ಹೊಳೆದೇ ಇಲ್ಲ; ಹಾಸ್ಯದ ಮಂದಹಾಸ ಅವರಿಗೆ ಗೊತ್ತೇ ಇಲ್ಲ. ಅವರು ನಕ್ಕರೆ ಜಗತ್ತು ನಡುಗುವಂತೆ ನಗುತ್ತಾರೆ. ಅವರ ನಗು ನಿಜಕ್ಕೂ ರಕ್ಕಸನಂತಿರುತ್ತದೆ. ಕಾರಣ ಅದು ಕರ್ಣಕರ್ಕಶವೂ, ಭಯೋತ್ಪಾದಕವೂ ಆಗಿರುತ್ತದೆ. ತಿಳಿ

ಹಾಸ್ಯ (the comic)ದ ಕಲ್ಪನೆಯೇ ಇಲ್ಲದ ಅವರ ಭಾವೋತ್ಕಟತೆ ಅವರನ್ನು ದಾರಿತಪ್ಪಿಸುತ್ತದೆ. ಹೀಗಾಗಿ ಸ್ಪೇನದವರ ಹಾಗೆ ಇವರ ಸುಖಾಂತನಾಟಕ ಕಲ್ಪನೆ ಹಾಸ್ಯಚೇತನೆಯನ್ನು ಬಿಟ್ಟೇ ಇರುತ್ತದೆ.

ಇನ್ನೂ ಪೂರ್ವಕ್ಕೆ ತಿರುಗಿದರೆ ಎಲ್ಲೆಲ್ಲಿಯೂ ಅನಾಗರಿಕತೆಯ ಅಂಧಃಕಾರ ತುಂಬಿದೆ. ಹಾಸ್ಯದ ಸೂಕ್ಷ್ಮ ಅಲೆ ತಾಗಿದರೂ ನಗೆಗಡಲಲ್ಲಿ ತೇಲುವಂಥ ಅರಬರು ಕೂಡ ಸುಖಾಂತನಾಟಕವನ್ನು ಬೆಳೆಸಲಿಲ್ಲ. ಅರಬ ಸಮಾಜ ನಾಗರಿಕತೆಯ ದೃಷ್ಟಿಯಿಂದ ಬಹಳ ಹಿಂದುಳಿದುದೇ ಇದಕ್ಕೆ ಕಾರಣ. ಅಲ್ಲಿಯ ಸ್ತ್ರೀಯರು ಇನ್ನೂ ಪರದೆಯಲ್ಲಿರುವುದುಂಟು. ಅರಬಸ್ತ್ರೀ ಉಪಯೋಗಿಸುವ ಪರದೆ, ಅರಬರ ಅನಾಗರಿಕತೆಯ ಪತಾಕೆ ಎಂದೇ ಹೇಳಬೇಕಾಗುತ್ತದೆ. ಎಲ್ಲಿಯವರೆಗೆ ಸ್ತ್ರೀ ಪರದೆಪ್ರಪಂಚದಲ್ಲಿ ಅಡಗಿ ಕೊಂಡಿರುವಳೋ ಅಲ್ಲಿಯವರೆಗೆ ಅರಬರಲ್ಲಿ ನಿಜವಾದ ನಾಗರಿಕತೆ ನೆಲೆಗೊಳ್ಳದು. ಹಾಸ್ಯಚೇತನೆ (the comic spirit) ಈ ಅನಾಗರಿಕತೆಯ ವಧ್ಯೆ ಬದುಕಿ. ಹೊಲಸನ್ನು ತಿಂದು, ಹೊಲಸನ್ನು ಕುಡಿದು ಜೀವಿಸುತ್ತಾಳೆ. ಅರಬಸ್ತ್ರೀಯರ ದಾರುಣ ಸ್ಥಿತಿಯೇ ಅವಳ ಸ್ಥಿತಿ. ಹೀಗಾಗಿ ಹಾಸ್ಯಚೇತನೆಯನ್ನು ಕಾಣುವ ಅರಬರ ಅನಾಗರಿಕ ರೀತಿ ಸ್ಪೇನ್ ಮತ್ತು ಜರ್ಮನ್ನರಿಗಿಂತ ತೀರ ಕೆಟ್ಟುದಾಗಿರುತ್ತದೆ.

ಒಮ್ಮೆ ಒಂದು ಮೋಜಿನ ಸಂಗತಿ ನಡೆಯಿತು—ಫ್ರೆಂಚ್ ವಿಮರ್ಶಕ ಸೇಂಟ ಮಾರ್ಕ್ ಜರಾರ್ಡಿನ್ ಒಬ್ಬ ಅರಬ ಗೃಹಸ್ಥನೊಡನೆ "ಪಾಶ್ಚಾತ್ಯರು ಮತ್ತು ಪೂರ್ವಾತ್ಯರು ಸ್ತ್ರೀಯರಲ್ಲಿ ನಡೆಸಿಕೊಳ್ಳುವ ರೀತಿ" ಈ ವಿಷಯದ ಚರ್ಚೆ ನಡೆಸಿ ಸ್ತ್ರೀ, ಸ್ವಾತಂತ್ರ್ಯದ ಫಲವಾಗಿ ಪಶ್ಚಿಮ ರಾಷ್ಟ್ರಗಳು ಜೀವನದ ವಿವಿಧ ರಂಗಗಳಲ್ಲಿ ಸಾಧಿಸಿದ ಮುನ್ನಡೆಯನ್ನು ವಿವರವಾಗಿ ತಿಳಿಸಿ ಹೇಳಿದ. ಆಗ ಆ ಅರಬ ಗೃಹಸ್ಥ. ಪಾಶ್ಚಿಮಾತ್ಯರ ಈ ಸ್ತ್ರೀಸ್ವಾತಂತ್ರ್ಯದ ಸತ್ ಪರಿಣಾಮ ಮತ್ತು ಸ್ತ್ರೀಯರೊಡನೆ ಮಾತನಾಡುವುದರಲ್ಲಿರುವ ಮಾಂತ್ರಿಕತೆಯನ್ನು ಬಹುವಾಗಿ ಮೆಚ್ಚಿ ಬಾಯಿತುಂಬ ಹೊಗಳಿದ. ಸೇಂಟ ಜರಾರ್ಡಿನ್—"ನೀವೇಕೆ ಸ್ತ್ರೀಗೆ ಸ್ವಾತಂತ್ರ್ಯ ಕೊಟ್ಟಿಲ್ಲ ? ಕೊಡುವ ಯೋಚನೆಯನ್ನು ಮಾಡಿಲ್ಲ ?" ಎನ್ನಲು ಆ ಅರಬ ತಾನು ಕುಳಿತಲ್ಲಿಯೇ ಹಾರಿಬಿದ್ದು ತನ್ನವರಂತೆ ಭಾವೋದ್ರಿಕ್ತನಾಗಿ ಹೀಗೆ ವಿಸ್ತರಿಸಿದ "ನೀವು ಯಾವುದೇ ಬಗೆಯ ಸಂಕೋಚವಿಲ್ಲದೆ, ಭಯವಿಲ್ಲದೆ ಸ್ತ್ರೀಯರ ಮುಖಾವಲೋಕನ ಮಾಡಬಲ್ಲಿರಿ.... ಆದರೆ...ನಾವು! ...ನಾವು .... ಸ್ತ್ರೀಯ ಮುಖಾವಲೋಕನವೆಂದರೆ ...... ಎಲ್ಲಿಲ್ಲದ ಭಯ ಮತ್ತು ಸಂಶಯ..." ಈ ರೀತಿ ಸಂಶಯ ಸ್ವಭಾವದ ಅರಬರು ಸ್ತ್ರೀಗೆ ಹೊದಿಸಿದ ಪರದೆಯನ್ನು ಹರಿದೊಗೆಯುವವರೆಗೆ ಅವರದು ನಾಗರಿಕ ಸಮಾಜವಾಗದು. ಅವರಲ್ಲಿ ಸುಖಾಂತನಾಟಕ ಬೆಳಕುಕಾಣದು.

ಹಾಸ್ಯಚೇತನೆ ಸ್ತ್ರೀಯರ ಆತ್ಮೀಯ ಸ್ನೇಹಿತೆಯರಲ್ಲಿ ಒಬ್ಬಳು. ಹೀಗಾಗಿ ಸ್ತ್ರೀ ಸ್ವಾತಂತ್ರ್ಯವಿಲ್ಲದ ನಾಡಿನಲ್ಲಿ ಹಾಸ್ಯಚೇತನೆಗೂ ಸ್ವಾತಂತ್ರ್ಯವಿಲ್ಲ. ಒಂದು ವೇಳೆ ಸ್ತ್ರೀಗೆ

ಪೂರ್ಣಕ್ಕೆ ಬದಲು ಅಲ್ಪ ಸ್ವಾತಂತ್ರ್ಯ ಕೊಟ್ಟರೆ ಅವರ ಪರಿಣಾಮ ಇನ್ನೂ ಗಂಡಾಂತರಕಾರಿ. ಅಂಥಲ್ಲಿ ಹಾಸ್ಯಚೇತನೆ ಕರಾಳರೂಪಿಯಾಗುತ್ತಾಳೆ; ಸುಖಾಂತನಾಟಕ ಭಯಾನಕ ನಾಟಕವಾಗುತ್ತದೆ. ಹೀಗಾಗಿ ಸ್ತ್ರೀ-ಪುರುಷರು ಸಮಾನವಾದ ಸಾಮಾಜಿಕ ಸ್ವಾತಂತ್ರ್ಯ ಅನುಭವಿಸುತ್ತಿರುವಲ್ಲಿ ಮಾತ್ರ ಹಾಸ್ಯವನಿತೆ ಲಾಸ್ಯವಾಡುತ್ತಾಳೆ; ಸುಖಾಂತ ನಾಟಕ ಮಧುರ ಮನರಂಜನೆಯು ಶುದ್ಧ ಸಂಸ್ಕಾರದ ಸಾಧನವಾಗಿ ಪರಿಣಮಿಸುತ್ತದೆ.

ಸುಖಾಂತ ನಾಟಕಗಳು ವಿರಳವಿರಲು ಕಾರಣಗಳು :

ಸುಖಾಂತನಾಟಕಗಳು ಸಾಕಷ್ಟು ಹುಟ್ಟಿಕೊಂಡಿವೆ. ಆದರೆ ಉತ್ತಮ ಸುಖಾಂತ ನಾಟಕಗಳು ವಿರಳ; ಶುದ್ಧ ಸುಖಾಂತನಾಟಕಗಳು ಇನ್ನೂ ವಿರಳ. ಉತ್ತಮ ಸುಖಾಂತನಾಟಕ ಸೃಷ್ಟಿಸುವವನು ಸಾವಿರಕ್ಕೋ, ಕೋಟಿಗೋ ಒಬ್ಬ. ಮೇಲು ನೋಟಕ್ಕೆ ಅನೇಕ ಕೃತಿಗಳು ಉತ್ತಮವಾಗಿ ಕಂಡರೂ ಒಳಹೊಕ್ಕು ಅವುಗಳನ್ನು ಪರೀಕ್ಷಿಸಿದಾಗ ಅವು ಆರ್ಥರ್ ದೊರೆಯ ಅರಮನೆಯ ಲಾವಣ್ಯವತಿಯರಂತೆ* ತೋರುತ್ತವೆ. ಶ್ರೇಷ್ಠ ಸುಖಾಂತನಾಟಕಗಳು ಇಷ್ಟೊಂದು ವಿರಳವಾಗಿರುವುದಕ್ಕೆ ಬಲವಾದ ಕಾರಣಗಳೂ ಇಲ್ಲದಿಲ್ಲ.

ಮೊದಲನೆಯದಾಗಿ ಹಾಸ್ಯಪ್ರತಿಭೆಯ ಕೊರತೆ ಮತ್ತು ಸುಖಾಂತನಾಟಕಕಾರನನ್ನು ಸಮಾಜ ಮುಕ್ತಮನಸ್ಸಿನಿಂದ ಬರಮಾಡಿಕೊಳ್ಳದಿರುವುದು. ಸುಖಾಂತ ನಾಟಕಕಾರನು ಹಾಸ್ಯ, ಪ್ರತಿಭಾವಂತನಾಗಿದ್ದು ವಿಶಿಷ್ಟ ಬುದ್ಧಿಸಂಸ್ಕಾರಪಡೆದಿರಬೇಕಾಗುತ್ತದೆ. ಪ್ರೇಕ್ಷಕರ ಮನೋಬುದ್ಧಿಗೆ ಸಂಸ್ಕಾರ ಒದಗಿಸುವುದು ಇವನ ಮುಖ್ಯ ಉದ್ದೇಶ. ಮನಸ್ಸನ್ನು ಛೇದಿಸುವ ಅವನ ಕಾರ್ಯ ವಿಶಿಷ್ಟವಿರುವಂತೆ ಕಠಿಣವೂ ಆಗಿರುತ್ತದೆ. ಮನುಷ್ಯನ ಮನಸ್ಸು ಮಹತ್ವವಾದುದೂ, ಸೂಕ್ಷ್ಮವಾದುದೂ ಆಗಿರುವುದರಿಂದ ಅದನ್ನು ಭೇದಿಸುವ ಕಲೆಯೂ ಬಹಳ ಜಾಣಾಕ್ಷವಾಗಿರಬೇಕಾಗುತ್ತದೆ. ಮೈಪೆಟ್ಟಿಗಿಂತ ಮನಸ್ಸಿನ ಪೆಟ್ಟು ಹೆಚ್ಚು ತೀಕ್ಷ್ಣವಾದುದು. ಅದನ್ನು ತಡೆದುಕೊಳ್ಳುವ ಶಕ್ತಿ ಬುದ್ಧಿಜೀವಿಗೆ ಅಧಿಕವಾಗಿರುತ್ತದೆ. ಮನೋಬುದ್ಧಿಗೆ ಗುರಿಯಿಟ್ಟು ಹೊಡೆಯುವ ಸುಖಾಂತನಾಟಕಕಾರನಿಂದ ತಲೆತಪ್ಪಿಸಲೆತ್ನಿಸುವ ಜನ ಹೆಚ್ಚು: ಅವನನ್ನು ಮುಕ್ತ ಮನಸ್ಸಿನಿಂದ ಬರಮಾಡಿಕೊಳ್ಳುವ ಬುದ್ಧಿವಂತರು ಬಹಳ ಕಡಿಮೆ.

ಎರಡನೆಯದಾಗಿ ತಕ್ಕ ಪರಿಸರದ ಅಭಾವ. ಎಂಥ ಪ್ರತಿಭಾವಂತ ಸುಖಾಂತ ನಾಟಕಕಾರನಿದ್ದರೂ ಆವಶ್ಯಕ ಪರಿಸರ ಅವನ ಸುತ್ತ ನಿರ್ಮಾಣವಾಗಿರದಿದ್ದರೆ ಅವನ ಪ್ರತಿಭೆಗೆ ಗ್ರಹಣಹಿಡಿಯುವುದು ಖಂಡಿತ. ಬೌದ್ಧಿಕ ಚಟುವಟಿಕೆಗಳಿಂದ ಕೂಡಿದ ಸಮಾಜ, ಸುಖಾಂತನಾಟಕಕಾರನಿಗೆ ಅಧಿಕ ಪ್ರೋತ್ಸಾಹ ನೀಡುತ್ತದೆ. ಬೌದ್ಧಿಕ ಚಟು

*ಆರ್ಥರ್ ದೊರೆಯ ಅಂತಃಪುರದ ಸ್ತ್ರೀಯರಾರೂ ಪಾತಿವ್ರತ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದಿಲ್ಲ,

ವಟಿಕೆಗಳು ನಾಗರಿಕ ಸಮಾಜದಲ್ಲಿ ಮುಕ್ತವಾಗಿ ನಡೆಯುವಷ್ಟು ಬೇರೆ ಎಲ್ಲಿಯೂ ನಡೆಯಲಾರವು ಸುಖಾಂತನಾಟಕದ ಬೆಳವಣಿಗೆಗೆ ಬೌದ್ಧಿಕಚಟುವಟಿಕೆಯಷ್ಟೇ ಸ್ತ್ರೀ ಸ್ವಾತಂತ್ರ್ಯ, ನಾಗರಿಕತೆಯ ದ್ಯೋತಕ. ಕಾರಣ ನಾಗರಿಕತೆ, ಸ್ತ್ರೀಸ್ವಾತಂತ್ರ್ಯಗಳಿಲ್ಲದ ಸಮಾಜದಲ್ಲಿ ಸುಖಾಂತನಾಟಕ ತಲೆಯೆತ್ತದು.

ಮೂರನೆಯದಾಗಿ ಸುಖಾಂತನಾಟಕಕಾರನ ಸುತ್ತಮುತ್ತಲೂ ವೈರಿಗಳೇ ವೈರಿಗಳು. ದುರಂತನಾಟಕಕಾರನಿಗೆ ಮತ್ತು ಭಾವಗೀತೆಯ ಕವಿಗಳಿಗೆ ಇಲ್ಲದ ವೈರಿಗಳು ಇವನಿಗಿರುತ್ತಾರೆ. ನಗೆ ತರಿಸುವುದು ಸುಖಾಂತನಾಟಕದ ಪ್ರಪ್ರಥಮ ಕಾರ್ಯವಾದುದರಿಂದ, ನಗದವರು ಅವರ ಮೊದಲ ವೈರಿಗಳು. ಹಾಸ್ಯಪ್ರವೃತ್ತಿಯಿಲ್ಲದ ಇವರಿಗೆ ನಗಲುಬಾರದು; ಹಾಸ್ಯ ಸೇರದು. ನಗೆಬೆಳಕನ್ನು ಕಂಡರಿಯದ ಇವರಿಗೆ ಜೀವನದಲ್ಲಿ ಕತ್ತಲೆಯೇ ಕತ್ತಲೆ. ಸಂಕುಚಿತ ಮತ್ತು ಸಂಶಯ ಸ್ವಭಾವದ ಇವರು, ಸುಖಾಂತ ನಾಟಕದಲ್ಲಿ ಬರುವ ಪಾತ್ರ ಮತ್ತು ಸನ್ನಿವೇಶಗಳನ್ನು ತುಂಬಾ ಸಂಶಯದಿಂದಲೇ ಕಾಣುತ್ತಾರೆ. ಈ ನಗೆಹೀನರು (agelasts) ಒಂದು ಪ್ರಕಾರದ ಅರಸಿಕರಾದರೆ, ಅತಿಯಾಗಿ ನಗುವವರು (hypergelasts) ಇನ್ನೊಂದು ಪ್ರಕಾರದ ಅರಸಿಕರು. ಎಳ್ಳಷ್ಟೂ ನಗದವರಂತೆ, ಈ ಅತಿಯಾಗಿ ನಗುವವರೂ ಸುಖಾಂತನಾಟಕಕಾರನ ವೈರಿಗಳೇ. ಹುಟ್ಟಿನಿಂದ ಹುಬ್ಬುಗಂಟಿಕ್ಕಿದವರನ್ನು ನಗಿಸುವುದು ಎಷ್ಟು ಕಠಿಣವೊ ಅಷ್ಟೇ ಕಠಿಣವಾದುದು. ಎಲ್ಲದಕ್ಕೂ ಯಾವಾಗಲೂ ನಗುವವರ ನಗುವನ್ನು ನಿಲ್ಲಿಸುವುದು. ಇಂಥವರಿಗೆ ವ್ಯವಹಾರಜ್ಞಾನವಿರದು, ಪ್ರಮಾಣಪ್ರಜ್ಞೆ ಇರದು, ತಮ್ಮ ಇಂದ್ರಿಯಗಳ ಮೇಲೆ ನಿಗ್ರಹವಿರದು. ಹುಚ್ಚುಪಟ್ಟೆ ನಗುವ ಇವರ ಮೇಲೆ ಸುಖಾಂತ ನಾಟಕ ಯಾವ ಪರಿಣಾಮವನ್ನೂ ಬೀರದು. ಇಂಥವರಿಂದ ಹಾಸ್ಯರಸಾಸ್ವಾದನೆಯೂ ಆಗದು; ಕೃತಿಪರೀಕ್ಷೆಯೂ ಆಗದು.

ಕೊನೆಯದಾಗಿ ಅರಸಿಕರಲ್ಲದಿದ್ದರೂ ತಕ್ಷಣ ಭಾವೋದ್ರಿಕ್ತರಾಗುವ (Sentimentalists) ಪ್ರೇಕ್ಷಕರೂ ಸುಖಾಂತನಾಟಕದ ವೈರಿಗಳೇ. ಇಂಥವರ ಮೇಲೂ ಸುಖಾಂತನಾಟಕಕಾರ ಸಾಕಷ್ಟು ಪ್ರಭಾವ ಬೀರಲಾರ. ಭಾವೋದ್ರೇಕತೆಯಿಂದ ಹೃದಯ ಜಡವಾಗುತ್ತದೆ. ಈ ಜಡಹೃದಯಿ ಹಾಸ್ಯರಸವನ್ನು ಸರಿಯಾಗಿ ಸವಿಯಲಾರ. ಬೌದ್ಧಿಕಜೀವಿಯಾದ ಸುಖಾಂತನಾಟಕಕಾರನಿಗೆ ಈ ಭಾವುಕರು (Sentimentalists) ಸಹಜ ವೈರಿಗಳೆಂದರೆ ತಪ್ಪಾಗಲಿಕ್ಕಿಲ್ಲ.

ಶುದ್ಧ ಸುಖಾಂತನಾಟಕ (Pure Comedy) :

ಶುದ್ಧ ಸುಖಾಂತನಾಟಕ ಬುದ್ಧಿಜನ್ಯ ತಿಳಿಹಾಸ್ಯ(The Comic)ದಿಂದ ತುಂಬಿರುತ್ತದೆ. ವಿಡಂಬನೆ (Satire), ವ್ಯಾಜಸ್ತುತಿ (Irony) ಮತ್ತು ಭಾವಜನ್ಯ ಹಾಸ್ಯ (Humour)ಗಳಿಗೆ ಅಲ್ಲಿ ಸ್ಥಾನವಿಲ್ಲ. ವಿಡಂಬನೆಯ ನಗು ಅನುಕಂಪವಿಲ್ಲದ ಕ್ರೂರ

ನಗು. ವಿಡಂಬನೆಯ ಕಪಿಮುಷ್ಟಿಯಲ್ಲಿ ಸಿಕ್ಕ ನಾಟಕಕಾರ ನಿರ್ದಯಿಯಾಗುತ್ತಾನೆ. ಆ ನಗುಮುಖದ ಮೇಲೆ ಇಲ್ಲವೆ ಬೆನ್ನಮೇಲೆ ಛಡಿಯಿಂದ ಏಟು ಕೊಟ್ಟಷ್ಟು ನೋವನ್ನುಂಟು ಮಾಡುತ್ತದೆ. ವ್ಯಾಜಸ್ತುತಿಯ ನಗು ವ್ಯಂಗ ನಗು. ವ್ಯಾಜಸ್ತುತಿ ಕಾರ ವ್ಯಕ್ತಿಯನ್ನು ನೇರವಾಗಿ ಬೆತ್ತದಿಂದ ಥಳಿಸಿ ಗಾಯಗೊಳಿಸುವುದಿಲ್ಲ. ಅವನು ಹುಸಿನಗು ನಕ್ಕು, ಅರೆಪ್ರೀತಿ ತೋರಿ, ತಕ್ಕೈಸಿ ಮುದ್ದಿಸುವಂತೆ ನಟಿಸಿ ಚೂರಿಕೊಳ್ಳು ತ್ತಾನೆ. ಅವನು ತೋರಿದ ಪ್ರೀತಿಯ ಮುಸುಕಿನಲ್ಲಿ ಚೂರಿದುದು ಮುಚ್ಚಿಹೋಗು ತ್ತದೆ. ಚೂರಿಸಿಕೊಂಡವನಿಗೆ ಏನಾಯಿತು, ಯಾರು ಚೂರಿದರು ಎಂಬುದು ಮೊದಲು ತಿಳಿಯದೆ ಹೋಗಬಹುದು. ಆದರೆ ತರೆದ ಕಲೆ ಮಾಸದೆ ಉಳಿಯುವುದು ನಿಶ್ಚಿತ. ಈ ವ್ಯಾಜಸ್ತುತಿಯ ಕುಹಕ ನಗು ವಿಡಂಬನೆಯ ನಗುವಿಗಿಂತ ಹೆಚ್ಚು ಗಾಯಮಾಡ ಬಲ್ಲುದು. ಇವೆರಡೂ ಒಳಸೇರಿದರೆ ಸುಖಾಂತನಾಟಕದ ಮನೋಧರ್ಮವೇ ಕೆಟ್ಟು ಹೋಗುತ್ತದೆ. ಸುಖಾಂತನಾಟಕಕಾರರಿಂದ ಇವೆರಡನ್ನೂ ಹೊರಗಿಡುವ ಪ್ರಯತ್ನ ಸತತವೂ ನಡದೇ ಇದೆ.

ಹೃದಯದಿಂದ ಹೊರಹೊಮ್ಮಿದ ಹಾಸ್ಯ(Humour) ಬುದ್ಧಿಜನ್ಯಹಾಸ್ಯ (The comic and the witty)ಕ್ಕಿಂತ ಸ್ವಲ್ಪ ಭಿನ್ನವಾಗಿರುತ್ತದೆ. ಬುದ್ಧಿ ಜನ್ಯಹಾಸ್ಯ ಮತ್ತು ಭಾವಜನ್ಯಹಾಸ್ಯಗಳು ಸೇರಿಕೊಂಡಿರುವುದು ಅಷ್ಟೇನೂ ಅಪಾಯ ಕರವಲ್ಲ. ಹೃದಯದಿಂದ ಹುಟ್ಟಿದ ಹಾಸ್ಯ, ಮಧುರಹಾಸ್ಯವಾಗಿದ್ದು ನಿಜಕ್ಕೂ ಬುದ್ಧಿಯಿಂದ ಹುಟ್ಟಿದ ಹಾಸ್ಯಕ್ಕಿಂತ ಹೆಚ್ಚು ಶ್ರೇಷ್ಠಹಾಸ್ಯ. ಆದರೆ ಸಾಮಾನ್ಯ ನಾಟಕಕಾರರು ಅದರ ದುರುಪಯೋಗ ಮಾಡಿಕೊಳ್ಳುವುದರಿಂದ ಹಾಸ್ಯಧರ್ಮ ಹದ ಗೆಡುವ ಸಂಭವ ಹೆಚ್ಚು. ಅದಕ್ಕಾಗಿ ಈ ಮಧುರಹಾಸ್ಯವನ್ನು ಕೂಡ ಮಿತವಾಗಿ ಬಳಸಿದಷ್ಟು ಒಳಿತು. ಇಷ್ಟೇ ಏಕೆ, ನಾಟಕ ತಿಳಿಹಾಸ್ಯದಿಂದ ತುಂಬಿ, ಶುದ್ಧಹಾಸ್ಯ ವನ್ನೊದಗಿಸಬೇಕಾದರೆ ಅದನ್ನು ಸಂಪೂರ್ಣ ಬಿಟ್ಟುಕೊಡುವುದೇ ಲೇಸೆಂದು ತೋರು ತ್ತದೆ. ಹೀಗಾಗಿ ಶುದ್ಧ ಸುಖಾಂತನಾಟಕಕ್ಕೆ ಬೇಕಾದುದು ಬುದ್ಧಿಮೂಲಹಾಸ್ಯ, ಚೊಕ್ಕಟ ತಿಳಿಹಾಸ್ಯ (The Comic). ಸಭ್ಯತೆಯ ಸಂಕೇತವಾಗಿರುವ ಈ ನಗು, ಬುದ್ಧಿ ಯನ್ನು ಉದ್ದೀಪನಗೊಳಿಸುತ್ತದೆ; ವಿಚಾರಪೂರ್ಣವಾಗಿರುವಂತೆ ವಿಚಾರಪ್ರಚೋ ದಕವೂ ಆಗಿರುತ್ತದೆ.

ಹಾಸ್ಯಚೇತನಾ (The Comic Spirit) :

ಶುದ್ಧ ಸುಖಾಂತನಾಟಕದ ಹಾಸ್ಯಚೇತನೆಯನ್ನು ವರ್ಣಿಸುವುದು ಕಷ್ಟಸಾಧ್ಯ. ನಾಗರಿಕತೆ ಇದ್ದಲ್ಲಿ ಈ ಹಾಸ್ಯಚೇತನೆ ರಾರಾಜಿಸುತ್ತಾಳೆ. ಮಿನುಗುದೀಪದಂತೆ ಜನ ಜನಸಾಮಾನ್ಯರ ತಲೆಯಮೇಲೆ ಬೆಳಗುವ ಈ ಚೇತನೆ, ಸುಶಿಕ್ಷಿತಮಾನವನ ಸಕಲ ವ್ಯಾಪಾರಗಳನ್ನು ದೂರದಿಂದ ನಿರೀಕ್ಷಿಸುತ್ತಾಳೆ; ದೂರದಿಂದಲೇ ನಿಯಂತ್ರಿಸುತ್ತಾಳೆ. ಇವಳು ಬಿಡುಗಣ್ಣೆ, ಕಿಡಿಗೇಡಿಯೂ ಅಹುದು; ಗಂಭೀರೆಯೂ ಅಹುದು. ಅವಳ

ಕಿಡಿಗೇಡಿ ಪ್ರವೃತ್ತಿ, ಗಂಭೀರ ಮತ್ತು ಸಾಧುಮುಖಮುದ್ರೆಯಲ್ಲಿ ಅಡಗಿಕೊಂಡಿರುತ್ತದೆ. ಇವಳ ನಗೆಗೆ ಅನಂತಮುಖ. ಅರೆನಾಗರಿಕ ಪಶುರೂಪಿಮಾನವನ (Satyre) ಅಟ್ಟ ಹಾಸ, ಬುದ್ಧಿಮತ್ತೆ ಮತ್ತು ಸಂಸ್ಕಾರ ಸೂಚಿಸುವ ಮಂದಹಾಸ ಎರಡೂ ಇವಳಿಗೆ ಸೇರಿದ್ದಾಗಿವೆ. ಆಕಾಶದಲ್ಲಿ ತೇಲುವ ಹದ್ದು ನೆಲದ ಮೇಲೆ ಕಣ್ಣಿರಿಸಿ, ತನಗೆ ಇಷ್ಟ ವಾದ ಬೇಟೆಯನ್ನು ಅರಸಿ, ಅದರ ಮೇಲೆ ಎರಗುವಂತೆ ಈ ಚೇತನೆ ಅವಿವೇಕವನ್ನು ಅರಸುತ್ತಾಳೆ, ಅದರಮೇಲೆ ಮಿಂಚಿನ ವೇಗದಿಂದ ಎರಗುತ್ತಾಳೆ. ಇವಳು ಮಾನ ವನ ಭವಿಷ್ಯದ ಬಗ್ಗೆ ಕುತೂಹಲಿಯಲ್ಲ. ವರ್ತಮಾನದ ಬಗ್ಗೆ ಮಾತ್ರ ಆಸಕ್ತಳು. ಮಾನವರು ಸಮಾಜದಲ್ಲಿ ಶಿಸ್ತುಪಾಲಿಸದೆ, ಆಚಾರವಿಚಾರಗಳನ್ನು ಅತಿಕ್ರಮಿಸಿ, ಅಹಂಭಾವ, ನಾಟಕೀಯತೆ, ಕಪಟ, ವಾಗಾಡಂಬರ, ವಿದ್ಯಾಗರ್ವಗಳ ಉಗಮಸ್ಥಾನ ವೆನಿಸಿದಾಗ; ಆತ್ಮವಂಚನೆ, ವ್ಯಕ್ತಿಪೂಜೆ, ಸಮ್ಯಕ್‌ದೃಷ್ಟಿರಾಹಿತ್ಯ, ಮತಿವೈಕಲ್ಯಗಳಿಗೆ ಗುಲಾಮರಾದಾಗ; ಸತ್ಯ, ಧರ್ಮ, ನ್ಯಾಯದಿಂದ ನಡೆಯದಿದ್ದಾಗ: ಇವಳು ತಕ್ಷಣ ತನ್ನ ವಕ್ರದೃಷ್ಟಿ ಬೀರಿ, ನಸುನಗೆಯ ವರ್ಷಾಧಾರೆಗರೆದು, ಅವರನ್ನು ತೋಯಿಸು ತ್ತಾಳೆ. ಸುಖಾಂತನಾಟಕದ ತುಂಬೆಲ್ಲ ಇಂಥ ಚೇತನೆ ಗಾಳಿಯಂತೆ ಸುಳಿದಾಡುತ್ತಾಳೆ, ನಾಟಕದ ಮನೋಧರ್ಮವನ್ನು ನಿರ್ಧರಿಸುತ್ತಾಳೆ. ಸುಖಾಂತನಾಟಕವನ್ನು ತಿಳಿದು ಕೊಳ್ಳಬೇಕಾದರೆ ಈ ಹಾಸ್ಯಚೇತನೆಯನ್ನು ಮೊದಲು ಗುರುತಿಸುವುದು ಅವಶ್ಯ.

ಹಾಸ್ಯಚೇತನೆ ಅವಿವೇಕ(Folly)ದ ಬೇಟೆ ಆಡುತ್ತಾಳೆ. ಅವಿವೇಕ ಅವಳ ಸಹಜ ಶಿಕಾರಿ. ಮಾನವನ ಅವಿವೇಕ ಅಪಾರ. ಹಾಸ್ಯಚೇತನೆ ಅದರ ಎಲ್ಲ ಮುಖವಾಡ, ಹಗರಣ ಬಲ್ಲಳು. ಅವಿವೇಕದ ಬೇಟೆಯಾಡಲು ಅವಳು ಉಪಯೋಗಿಸುವ ಮುಖ್ಯ ಆಯುಧಗಳೆಂದರೆ ತಿಳಿಹಾಸ್ಯ ಮತ್ತು ವ್ಯವಹಾರಜ್ಞಾನ. ರಣಹದ್ದು ಕೊಕ್ಕರೆಯ ಮೇಲೆ ಎರಗುವಂತೆ, ಬೇಟೆನಾಯಿ ನರಿಯನ್ನು ಬೆನ್ನಟ್ಟಿ ಹಿಡಿದು ಕಚ್ಚು ವಂತೆ ಈ ಹಾಸ್ಯಚೇತನೆ ಅವಿವೇಕದ ಬೇಟೆ ಆಡುತ್ತಾಳೆ. ಅವಿವೇಕ ರೂಪ ಬದಲು ಮಾಡಿದಂತೆ ಹಾಸ್ಯಚೇತನೆಯೂ ತನ್ನ ರೂಪ ಬದಲಾಯಿಸುತ್ತಾಳೆ. ಇವೆರಡರ ನಡು ವಿನ ವೈರ, ಸ್ವಭಾವ ವೈರ.

ಆಧುನಿಕ ಜಗತ್ತಿನಲ್ಲಿ ಅವಿವೇಕದ ವಿರಾಟರೂಪ ವರ್ಣಿಸಲು ಅಸಾಧ್ಯ. ಸಂಪತ್ತು ಮತ್ತು ಭೋಗವಿಲಾಸ ಸೌಕರ್ಯಗಳು ಹೆಚ್ಚಿರುವ ಈಗಿನ ಸಮಾಜದಲ್ಲಿ ಅವಿವೇಕ ತನ್ನ ಬುನಾದಿಯನ್ನು ಬದ್ರಪಡಿಸಿಕೊಂಡಂತೆ ತೋರುತ್ತದೆ ದುರ್ದೈವದಿಂದ ಸಭ್ಯರೆನಿಸಿ ಕೊಳ್ಳುವ ಈಗಿನ ಶ್ರೀಮಂತರು, ಅವಿವೇಕಕ್ಕೆ ಮಾರುಹೋಗಿ ಅದರ ಕೈಗೊಂಬೆ ಯಾಗಿದ್ದಾರೆ. ಅವಿವೇಕವನ್ನು ಬೀಜಾವಸ್ಥೆಯಲ್ಲಿ ಸುಟ್ಟುಹಾಕದೆ ಅದನ್ನು ಮರವಾಗ ಗೊಟ್ಟಿದ್ದಾರೆ. ಹಾಸ್ಯಚೇತನೆಯನ್ನು ಕಂಡು ಹೆದರುವ ಜನ, ಅವಳಿಗೆ ಸಮಾಜ ಸೇವೆಯ ಅವಕಾಶ ಕಲ್ಪಿಸಿಕೊಡುತ್ತಿಲ್ಲ.

ಅವಿವೇಕವನ್ನು ಆಲಿಂಗಿಸುವ ಜನರಿದ್ದಂತೆ, ಅದನ್ನು ಕಂಡು ಮೂಗುಮುರಿಯುವವರೂ ಇದ್ದಾರೆ. ಆದರೆ ಮೂಗುಮುರಿಯುವ ತಿರಸ್ಕಾರ ಭಾವನೆ ಹಾಸ್ಯಚೇತನಗೆ ಎಳ್ಳಷ್ಟೂ ಹಿಡಿಸದು. ಅವಿವೇಕ ಕಂಡು ತಿರಸ್ಕಾರ ವ್ಯಕ್ತಮಾಡುವುದಾಗಲಿ ಇಲ್ಲವೆ, ಅವರ ಮೇಲೆ ಕೆಂಡಕಾರುವುದಾಗಲಿ ಒಂದು ಬಗೆಯ ಅವಿವೇಕವೆಂದೇ ಅವಳ ಗ್ರಹಿಕೆ

ಆಧುನಿಕ ಜಗತ್ತಿನಲ್ಲಿ ಅವಿವೇಕದೊಂದಿಗೆ ಹೋರಾಡುವ ರೀತಿ, ರಕ್ಷಣಾವಿಧಾನವನ್ನು ಅನುಸರಿಸಲ್ಪಟ್ಟಿರುತ್ತದೆ. ಯುದ್ಧಯಂತ್ರಗಳನ್ನು ಸಜ್ಜುಗೊಳಿಸಿ ಕಾದಾಟಕ್ಕೆ ಅಣಿಯಾಗುವ ಮುನ್ನವೇ ಅವಿವೇಕ ಕಂದಕದಲ್ಲಿ ಸೇರಿ ಅವಿತುಕೊಳ್ಳುತ್ತದೆ. ವಿಜ್ಞಾನಿ, ಆಧುನಿಕ ಆಯುಧಗಳನ್ನು ಹೊತ್ತು ಹೈರಾಣಾಗಿ ಆ ಎಲ್ಲ ಶಸ್ತ್ರಾಸ್ತ್ರಗಳನ್ನು ಸಜ್ಜುಗೊಳಿಸುವಷ್ಟರಲ್ಲಿ. ಅವಿವೇಕ ಚೇತರಿಸಿಕೊಂಡು ಹೊರಬಂದು ಹೋರಾಟಕ್ಕೆ ಸಿದ್ಧವಾಗುತ್ತದೆ. ಇನ್ನೇನು ಯುದ್ಧ ಪ್ರಾರಂಭವಾಯಿತು ಎನ್ನುವಷ್ಟರಲ್ಲಿ ಒಬ್ಬೊಬ್ಬರಾಗಿ ವೈರಿಗಳಾಗಿದ್ದವರು ಅವಿವೇಕ ದಳದ ಕಡೆ ತಿರುಗಿಬಿಡುತ್ತಾರೆ. ಹೀಗೆ ಅವಿವೇಕದೆಡೆಗೆ ಓಡಿಬಂದವರಲ್ಲಿ ಅನೇಕ ಅಸಾಮಾನ್ಯ ವಿಜ್ಞಾನಿಗಳು, ಖ್ಯಾತ ಪತ್ರಿಕಾಕರ್ತರು ಸೇರಿಕೊಂಡಿರುತ್ತಾರೆ. ಅವಿವೇಕ ತೋರಿಸುವ ಆಶೆಗೆ ಬಲಿಯಾಗಿ, ಮತಿವಿಕಳರಾಗುವ ವಿಜ್ಞಾನಿಗಳನ್ನು ಕಂಡು ಖೇದವೂ ಆಶ್ಚರ್ಯವೂ ಆಗುತ್ತದೆ. ಈಗ ಅವಿವೇಕದ ರಾಜಕಾರಣಿಗಳನ್ನು ತನ್ನೆಡೆಗೆ ಎಳೆದುಕೊಂಡಂತೆ ತೋರುತ್ತದೆ. ಅವಿವೇಕವನ್ನು ಎದುರಿಸುವಲ್ಲಿ ವಿಜ್ಞಾನಿ, ಪತ್ರಿಕಾಕರ್ತ ಮತ್ತು ರಾಜಕಾರಣಿಗಳೆಲ್ಲ ವಿಫಲರಾಗಿದ್ದಾರೆ. ವ್ಯಕ್ತಿ ಮತ್ತು ಸಮಾಜದಲ್ಲಿಯ ಅವಿವೇಕವನ್ನು ಸೋಲಿಸಲು ಹಾಸ್ಯಚೇತನೆಯೊಬ್ಬಳನ್ನು ಬಿಟ್ಟು ಇನ್ನಾರಿಗೂ ಸಾಧ್ಯವಿಲ್ಲೆಂದು ತೋರುತ್ತದೆ. ಅವಳ ನಗೆ ರಾಮಬಾಣ. ಅದು ಅವಿವೇಕವನ್ನು ಸಹಜವಾಗಿ ಭೇದಿಸಬಲ್ಲುದು. ಕಾರಣ ಹಾಸ್ಯಚೇತನೆಯನ್ನು ಗುರುತಿಸಿ ಅವಳ ಸಹಾಯಕೋರುವುದು ಅತ್ಯವಶ್ಯ. ಹಾಸ್ಯಚೇತನೆಯನ್ನು ಅರಿತು ಅವಳ ಉಪಯೋಗ ಪಡೆಯದೆ ಹೋಗುವವರು ತಾವೇ ನಗೆಗೀಡಾಗುವುದುಂಟು. ಅವಳ ಸಾನಿಧ್ಯದ ಅರಿವು ವಿವೇಕಿಗಳಿಗಷ್ಟೇ ಸಾಧ್ಯ.

ಇಂಗ್ಲೀಷ ಸುಖಾಂತನಾಟಕ ಸಂಪ್ರದಾಯ :

ಇಂಗ್ಲೀಷಿನಲ್ಲಿ ಉತ್ತಮ ಸುಖಾಂತನಾಟಕಗಳು ಹುಟ್ಟಿಕೊಂಡಿಲ್ಲ. ಅದಕ್ಕೆ ಕಾರಣ ಇಂಗ್ಲೀಷಿನಲ್ಲಿ ಸುಖಾಂತನಾಟಕ ಸಂಪ್ರದಾಯ ಅಷ್ಟೊಂದು ಪ್ರಭಾವಪೂರ್ಣವಲ್ಲದಿರುವುದು. ಉಡಾಲ್ಫ್ ಮೊದಲಾದವರು ಪ್ರಾರಂಭಿಸಿದ ಸುಖಾಂತನಾಟಕಗಳು ಪ್ರಹಸನ(Force)ವಾಗಿಯೇ ಪರ್ಯವಸಾನಗೊಂಡಿವೆ. ಶೆಕ್ಸಪಿಯರನ ಸುಖಾಂತ ನಾಟಕಗಳು ಎಷ್ಟೇ ಶ್ರೇಷ್ಠವಿದ್ದರೂ ಶುದ್ಧ ಸುಖಾಂತ(pure comedy)ದ ಸಾಲಿನಲ್ಲಿ ನಿಲ್ಲಲಾರವು. ಅವನ ಸುಖಾಂತನಾಟಕದಲ್ಲಿ ಬುದ್ಧಿಜನ್ಯಹಾಸ್ಯಕ್ಕಿಂತ ಭಾವಜನ್ಯಹಾಸ್ಯವೇ ಹೆಚ್ಚು. ಹಾಸ್ಯಕ್ಕಿಂತ ರೋಚಕತೆ, ರೋಮಾಂಚಕತೆ(the Romantic) ಹೆಚ್ಚು. ತರುವಾಯದ ಬೆನ್ ಜಾನ್ಸನ್‌ನ ಪಾಂಡಿತ್ಯಪೂರ್ಣ ಸುಖಾಂತ

ನಾಟಕಗಳಿಗೆ ರೋಮನ್ ಸುಖಾಂತನಾಟಕಗಳು ಮಾದರಿಯಾಗಿವೆ. ಈತನು ರೋಮನ್ ನಾಟಕಗಳನ್ನು ಮಾದರಿಯನ್ನಾಗಿ ಇಟ್ಟುಕೊಳ್ಳಲು ಇಂಗ್ಲೀಷಿನಲ್ಲಿ ಸುಖಾಂತನಾಟಕದ ಸತ್ ಸಂಪ್ರದಾಯವಿಲ್ಲದುದೇ ಕಾರಣ. ಮೇಲಾಗಿ ವಿಡಂಬನೆಯಿಂದ ತುಂಬಿತುಳುಕುವ ಇವನ ನಾಟಕಗಳಾದರೂ ಹಾಸ್ಯಚೇತನೆಯಿಂದ ದೂರಸಿಲ್ಲುತ್ತವೆಯೆಂದೇ ಹೇಳಬೇಕಾಗುತ್ತದೆ.

ಒಮ್ಮೆ ಗ್ರೀಕರನ್ನು, ಇನ್ನೊಮ್ಮೆ ರೋಮನ್‌ರನ್ನು ಅನುಕರಣೆ ಮಾಡುತ್ತಿದ್ದ ಆಂಗ್ಲರು, ೧೭ನೆಯ ಶತಮಾನದ ಸುಮಾರಿಗೆ ಫ್ರೆಂಚರನ್ನು ಅನುಸರಿಸಲು ಪ್ರಾರಂಭಿಸಿದರು. **ರೆಸ್ಟೋರೇಶನ್** ಸಮಯದ ಶ್ರೀಮಂತವರ್ಗದವರ ನಡೆನುಡಿಗಳನ್ನು ಬಿಂಬಿಸುವ ಇವರ ಸುಖಾಂತನಾಟಕಗಳು ಫ್ರೆಂಚ್ ನಾಟಕಗಳ ಅಂಧಾನುಕರಣೆಗಳಾಗಿರುತ್ತವೆ. ಆ ಕಾಲದ ಜೀವನದ ವಿವಿಧ ರಂಗಗಳಲ್ಲಿ ಸ್ವಾತಂತ್ರ್ಯವನ್ನೇ ಪ್ರತಿಪಾದಿಸಿದ ಚಾರ್ವಾಕ ಮನೋವೃತ್ತಿಯು ಚಾರ್ಲ್ಸ್‌ದೊರೆ ಸ್ವೇಚ್ಛಾಚಾರಿಗಳಿಗೆ ಸಾಕಷ್ಟು ಪ್ರೋತ್ಸಾಹ ಕೊಟ್ಟನು. ಅವನ ಸಡಿಲುನೀತಿಯು ಪರಿಣಾಮವಾಗಿ ಅನಾರೋಗ್ಯ ಸಮಾಜ ಬೇಗ ನಿರ್ಮಾಣಗೊಂಡಿತು. ಈ ಕಳಪೆಸಮಾಜದ ಮೇಲೆ ಫ್ರೆಂಚ್ ಸಂಪ್ರದಾಯ ಒಳ್ಳೆಯ ಪರಿಣಾಮವನ್ನೇನೂ ಮಾಡಲಿಲ್ಲ. ಜಾರಿಬೀಳುವ ಸಮಾಜ ಇದರಿಂದ ಪೂರ್ಣ ಪಾತಾಳಕ್ಕಿಳಿಯಿತೆಂದೇ ಹೇಳಬೇಕು. ನೈತಿಕನೆಲಗಟ್ಟಿರದ ಕಾರಣ, ಸಮಾಜದ ಪ್ರತಿಬಿಂಬಗಳಾದ ಈ ಸುಖಾಂತನಾಟಕಗಳು ಅಶ್ಲೀಲ ನಾಟಕಗಳಾಗಿ ಬಿಟ್ಟವು. ಫ್ರೆಂಚ್‌ರಿಂದ ಪಡೆದ ಸಭ್ಯಸಮಾಜದ ನಡೆನುಡಿ ಚಿತ್ರಿಸುವ (the comedy of manners) ಸುಖಾಂತನಾಟಕದ ಹಾಸ್ಯರಸ ಹದಗೆಟ್ಟು ವಿಕೃತರೂಪತಾಳಿತು. ವೈಚರ್ಲಿಯಂಥವರು ಅದನ್ನು ಸಂಪೂರ್ಣ ರೂಪಗೆಡಿಸಿದರು. ಕಾಂಗ್ರೀವನ ಒಂದೇ ಒಂದು ನಾಟಕ “ಜಗದ ಹಾಗ”(**the way of the world**)ವನ್ನು ಬಿಟ್ಟರೆ ಇಂಗ್ಲೀಷಿನಲ್ಲಿ ಒಳ್ಳೆಯ ನಡತೆನಾಟಕಗಳು ಇಲ್ಲವೇ ಇಲ್ಲ. ಅಲ್ಲಿ ವಸ್ತು ಮುಖ್ಯವಲ್ಲ: ಹಾಸ್ಯಕಲ್ಪನೆ. ಪಾತ್ರಚಿತ್ರಣ. ವಾಕ್‌ಚಾತುರ್ಯ. ಭಾಷೆ. ಶೈಲಿ ಮತ್ತು ಹಾಸ್ಯಕಲ್ಪನೆಯಲ್ಲಿ ಇದು ಮೋಲಿಯರ್‌ನ ಫ್ರೆಂಚ್ ನಾಟಕಗಳನ್ನು ಹೋಲುತ್ತದೆ. ಮೋಲಿಯರ್‌ನನ್ನು ಅನುಸರಿಸಿ ಕಾಂಗ್ರೀವ ಬರೆದಂತೆ ಇನ್ನುಳಿದ ನಾಟಕಕಾರರು ನಾಟಕಗಳನ್ನು ರಚಿಸಿದ್ದರೆ, ಇನ್ನೂ ಕೆಲವು ಉತ್ತಮ ಸುಖಾಂತನಾಟಕಗಳು ರಂಗಭೂಮಿಗೆ ಬರಬಹುದಿತ್ತು. ರೆಸ್ಟೋರೇಶನ್ ನಾಟಕಕಾರರ ತರುವಾಯ ಬಂದ ನಾಟಕಕಾರರು ಭಾವೋದ್ರೇಕಿಗಳೂ ನೀತಿಬೋಧಕರೂ ಆಗಿದ್ದು ಕಣ್ಣೀರು ತರಿಸುವ ಸುಖಾಂತನಾಟಕಗಳನ್ನು ಬರೆದರು. ಹಾಸ್ಯಚೇತನೆಯನ್ನು ಕೈಬಿಟ್ಟ ಈ ಸುಖಾಂತನಾಟಕಗಳು ಕಣ್ಣೀರಿನ ಬುಗ್ಗೆಗಳಾದುವು: ನೀತಿಬೋಧನೆಯ ಸಾಧನಗಳಾದುವು. ಮುಂಬರುವ ಸುಖಾಂತನಾಟಕಕಾರರಿಗೆ ಈ ಸ್ವಚ್ಛವಲ್ಲದ ಸಂಪ್ರದಾಯಗಳಿಂದ ತಪ್ಪಿಸಿಕೊಳ್ಳುವುದು ಅಸಾಧ್ಯವೆನಿಸಿತು. ಅಂತೆಯೆ ಗೋಲ್ಡ್‌ಸ್ಮಿಥ್ ಮತ್ತು ಶೆರಿಡನ್ ಇವರು ಹಾಸ್ಯಚೇತನೆಯನ್ನು

ಸುಖಾಂತನಾಟಕದಲ್ಲಿ ಪುನಃ ಪ್ರತಿಷ್ಠಾಪಿಸುವ ಪ್ರತಿಜ್ಞೆಮಾಡಿ ವಿಫಲರಾದುದನ್ನು ನೋಡಿದರೆ ಈ ಕೆಟ್ಟ ಸಂಪ್ರದಾಯಗಳು ಎಷ್ಟು ಆಳವಾಗಿ ಬೇರೂರಿದ್ದವೆಂಬುದು ಸ್ಪಷ್ಟವಾಗುತ್ತದೆ. ಫೀಲ್ಡಿಂಗ್ ಗದ್ಯದಲ್ಲಿ, ಶ್ರೇಷ್ಠ ಹಾಸ್ಯಸಾಹಿತಿಯಾದರೂ ಹಾಸ್ಯ ಪ್ರಧಾನ ನಾಟಕ ಬರೆಯುವಲ್ಲಿ ವಿಫಲನಾದುದಕ್ಕೆ ಮೇಲೆ ವಿವರಿಸಿದ ಕೆಟ್ಟ ಸಂಪ್ರದಾಯಗಳೇ ಬಹುಮಟ್ಟಿಗೆ ಕಾರಣ. ಇಂಗ್ಲಂಡಿನಲ್ಲಿಯ ಸುಖಾಂತನಾಟಕದ ಈ ಕೆಟ್ಟ ಸಂಪ್ರದಾಯಗಳಿಗೆ, ಆಂಗ್ಲರು ಸುಖಾಂತನಾಟಕಕ್ಕೆ ಬೇಡವಾದ ವಿಡಂಬನೆಯ ಬಗೆಗೆ ತೋರಿದ ಒಲುವು ಮತ್ತು ಅದಕ್ಕೆ ಬೇಕಾದ ವಾಸ್ತವಿಕತೆಗೆ ತೋಡಿದ ಭಾವನಾತ್ಮಕ ವಿರೋಧಗಳು ಮುಖ್ಯಕಾರಣವೆನ್ನಬಹುದು. ಅವಾಸ್ತವವನ್ನು ಆದರ್ಶವೆಂದು ನಂಬಿ ತುಂಬಾ ಮೋಸಹೋಗಿದ್ದಾರೆ ಆಂಗ್ಲರು; ವಿಡಂಬನೆ ಎಷ್ಟೇ ಅಸಹ್ಯವಿದ್ದರೂ ಅದನ್ನು ಸಹಿಸುತ್ತಾರೆ. ಶೋಕರಸಪ್ರಧಾನ, ನೀತಿಬೋಧಕ ಬರಹಗಳನ್ನು ಸ್ವಾಗತಿಸುತ್ತಾರೆ. ಆದರೆ ಹಾಸ್ಯಚೇತನೆಯನ್ನು ಕಂಡು ಹೆದರುತ್ತಾರೆ. ಹಾಸ್ಯಚೇತನೆ ಉಚ್ಚ, ಮಧ್ಯಮ ಮತ್ತು ಕೆಳವರ್ಗದವರನ್ನೆಲ್ಲ ಒಟ್ಟಿಗೆ ಸೇರಿಸಿ ಕಲಬೆರಕೆಮಾಡುತ್ತಾಳೆ. ಹೀಗಾಗಿ ಉಚ್ಚ ಮತ್ತು ಮಧ್ಯಮವರ್ಗದವರು ತಮ್ಮನ್ನು ಕೆಳದರ್ಜೆಯವರೊಂದಿಗೆ ಕೂಡಿಸಿ ಕಟ್ಟುವ ಇವಳನ್ನು ಕಂಡರೆ ಉರಿದುಬೀಳುತ್ತಾರೆ. ಹೀಗಾಗಲು ಕಾರಣವೆಂದರೆ– ಅವರಿಗೆ ಹಾಸ್ಯ ಚೇತನೆಯ ಬಗೆಗೆ, ನಾಗರಿಕ ಸಮಾಜದ ಬಗೆಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದು ಮತ್ತು ಅವರಲ್ಲಿ ವ್ಯವಹಾರಜ್ಞಾನದ ಕೊರತೆಯಿರುವುದು.

ಸುಖಾಂತನಾಟಕದ ಪರಿಣಾಮ :

ಸುಖಾಂತನಾಟಕದ ಉದ್ದೇಶ ಕೇವಲ ನಗೆತರಿಸುವುದಾಗಿರದೆ, ನಗೆಯ ಮುಖಾಂತರ ಸಮಾಜ ಮತ್ತು ವ್ಯಕ್ತಿಗಳಿಗೆ ಸಂಸ್ಕಾರ ನೀಡುವುದಾಗಿದೆ. ಸುಖಾಂತನಾಟಕ ಸಮಾಜ ಮತ್ತು ವ್ಯಕ್ತಿಗಳಿಂದ ಅವಿವೇಕವನ್ನು ಹೊಡೆದೋಡಿಸುವುದರೊಂದಿಗೆ ಸ್ತ್ರೀಗೆ ವಿಶೇಷ ಸಾಮಾಜಿಕಸ್ವಾತಂತ್ರ್ಯ ಕೊಡಮಾಡುತ್ತದೆ. ಪ್ರತಿಯೊಬ್ಬರ ಪ್ರಮಾಣಪ್ರಜ್ಞೆ ಮತ್ತು ಸಾಮಾಜಿಕಪ್ರಜ್ಞೆಯನ್ನು ಜಾಗ್ರತಗೊಳಿಸುತ್ತದೆ. ಸುಸಂಸ್ಕೃತ ಸಮಾಜ ನಿರ್ಮಿಸುವಲ್ಲಿ ಸಹಾಯವಾಗುತ್ತದೆ. ಒಟ್ಟಿನಲ್ಲಿ ಇದರ ಪರಿಣಾಮ ಹಿತಕರವಾಗಿದ್ದು, ಇದು ಸಮಾಜದ ಆರೋಗ್ಯವನ್ನು ಕಾಯುವ ಉತ್ತಮ ಸಾಧನವಾಗಿದೆ.

ಹಾಸ್ಯಚೇತನೆ ಸಮಾಜದಲ್ಲಿರುವ ವಿಪರ್ಯಾಸ ಮತ್ತು ಲೋಪದೋಷಗಳನ್ನು ಹೊಡೆದುಹಾಕಲು ಪ್ರತಿಯೊಬ್ಬನನ್ನು ಪ್ರೇರೇಪಿಸುತ್ತಾಳೆ. ಅವಳ ಹಾಸ್ಯಕಲ್ಪನೆಗಳು ಬೆಳಕನ್ನೂ ಸಂತೋಷವನ್ನೂ ನೀಡುತ್ತವೆ. ಹಾಸ್ಯಚೇತನೆ ತಲೆತುಂಬುವ ಹಾಸ್ಯಕಲ್ಪನೆಗಳನ್ನು ನೆನೆದುನಕ್ಕಾಗ ಹೃದಯಹಗುರಾಗುತ್ತದೆ. ಬುದ್ಧಿವಿಕಾಸವಾಗುತ್ತದೆ. ಹಾಸ್ಯಕಲ್ಪನೆ ಒಂದು ಸುಗಂಧ ಪುಷ್ಪವಿದ್ದಂತೆ. ಈ ಪುಷ್ಪವನ್ನು ಪೆಟ್ಟಿಗೆಯಲ್ಲಿಟ್ಟರೆ ಅದರಲ್ಲಿಯ ವಸ್ತುಗಳೆಲ್ಲ ಸುಗಂಧ ಸೂಸುವಂತೆ ಸುಖಾಂತನಾಟಕ ನೋಡುವುದರಿಂದ

ನಮ್ಮ ತಲೆ, ಹಾಸ್ಯಕಲ್ಪನೆಗಳಿಂದ ತುಂಬಿಕೊಂಡಿದ್ದು, ನಮ್ಮ ವಿಚಾರಗಳಿಗೆಲ್ಲ ಹಾಸ್ಯ ಸೊಂಕಿ ಗಮಗಮಿಸಲಾರಂಭಿಸುವವು ಅಲ್ಲದೆ ಸುಖಾಂತನಾಟಕಗಳು ಜೀವನದ ಮರು ಭೂಮಿಯಲ್ಲಿ ಕಾಣಿಸಿಕೊಳ್ಳುವ ಓಯಾಸಿಸ್‌ಗಳೂ ಆಗಿವೆಯೆಂದರೆ ಅತಿಶಯೋಕ್ತಿ ಯಾಗದು. ಅಲ್ಲಿಯ ತಿಳಿಹಾಸ್ಯ ರಸಾಸ್ವಾದನೆ ಎಳೆನೀರು ಸೇವಿಸಿದಷ್ಟು ಆಹ್ಲಾದ ವನ್ನುಂಟುಮಾಡುತ್ತದೆ. ಹಾಸ್ಯವನ್ನು ಅರಿಯುವ, ಅರಿತು ಸವಿಯುವ ಬುದ್ಧಿಯನ್ನು ಪಡೆಯುವುದೆಂದರೆ ಸಂಸ್ಕೃತಿಯ ಮಾರ್ಗದಲ್ಲಿ ಒಂದು ಹೆಜ್ಜೆ ಮುಂದೆ ಸಾಗಿದಂತೆ. ಹಾಸ್ಯ ಮನೋಭಾವ ವ್ಯಕ್ತಿಯ ಬುದ್ಧಿಸಂಸ್ಕಾರದ ಸೂಚಕ. ಅದಿಲ್ಲದ ವ್ಯಕ್ತಿಗಳು ಅಸುಸ್ಕೃತರು, ಅವಿವೇಕಿಗಳು, ಮುಂಗೋಪಿಗಳು, ತಾಳ್ಮೆಹೀನರು, ಅವ್ಯವಹಾರಿಗಳಾ ಗಿರುತ್ತಾರೆ. ಒಮ್ಮೆ ಒಬ್ಬ ವಿದ್ಯಾರ್ಥಿ, ಪ್ರೊಫೆಸರರೊಬ್ಬರ ಪಾಂಡಿತ್ಯ ಮೆಚ್ಚಿ ಅವರ ಪರಿಚಯಮಾಡಿಕೊಳ್ಳುತ್ತಾನೆ; ಅವರ ಗುಣಗಾನವನ್ನು ಅವರೆದುರಿಗೇ ಮಾಡುತ್ತಾನೆ. ಮುಂದೆ ಒಂದುದಿನ ಆ ಪ್ರೊಫೆಸರ ಮುಖಾಂತರ ಆ ವಿದ್ಯಾರ್ಥಿಗೆ ಇನ್ನೊಬ್ಬ ಪ್ರೊಫೆಸರರ ಪರಿಚಯವಾಗುತ್ತದೆ. ಹೊಸದಾಗಿ ಪರಿಚಯವಾದ ಪ್ರೊಫೆಸರರ ಪಾಂಡಿತ್ಯವನ್ನೂ ಮೆಚ್ಚಿ, ಅವರ ಜೊತೆ ವಿಶೇಷ ಚರ್ಚೆಮಾಡಲು ಪ್ರಾರಂಭಿಸುತ್ತಾನೆ. ಜ್ಞಾನದಾಹವಿರುವ ವಿದ್ಯಾರ್ಥಿ ಇಬ್ಬರನ್ನೂ ಮೆಚ್ಚಿ ಗೌರವಿಸುತ್ತಾನೆ. ಆದರೆ ಅಸೂಯೆಯಿಂದ ಉರಿಯುವ ಮೊದಲನೆಯ ಪ್ರೊಫೆಸರ ಆ ವಿದ್ಯಾರ್ಥಿಯನ್ನು ಕರೆದು ಹೀಗೆ ಹೇಳುತ್ತಾನೆ "ಎಲೊ, ನೀನು ನನ್ನನ್ನು ಗೌರವಿಸುವಿಯೊ ಇಲ್ಲವೆ ಅವನನ್ನು ಗೌರವಿಸುವಿಯೊ? ನಮ್ಮಿಬ್ಬರನ್ನು ಏಕಕಾಲಕ್ಕೆ ಗೌರವಿಸುವುದು ನಿನಗೆ ಸಾಧ್ಯವಿಲ್ಲ. ನನ್ನನ್ನು ಅರಿಯುವ ಸಾಮರ್ಥ್ಯ ನಿನಗಿ ದ್ದರೆ, ಬೇರೆ ಪ್ರೊಫೆಸರರನ್ನು ಗೌರವಿಸುವ ನಿನ್ನ ವರ್ತನೆಯಿಂದ ನಾನು ಮಾರಪಂಡಿತ ನೆಂದೂ ನಿನ್ನ ಗೌರವಕ್ಕೆ ಪಾತ್ರನಲ್ಲವೆಂದಂತಾಯಿತು. ಒಂದುವೇಳೆ ನಿನ್ನಲ್ಲಿ ನನ್ನನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವಿಲ್ಲದಿದ್ದರೆ ನೀನು ಮೂರ್ಖನೆಂದು ಸಿದ್ಧವಾದಂತಾ ಯಿತು. ಅಂತೂ ನೀನು ಇನ್ನುಮೇಲೆ ನನ್ನ ದೃಷ್ಟಿಗೆ ಬೀಳಬೇಡ, ತೊಲಗಾಚೆ." ಹಾಸ್ಯಚೇತನೆ ಇಂಥ ವಿದ್ಯಾಗರ್ವಿ ಮತ್ತು ಅವಿವೇಕಿಗಳನ್ನು ತಿದ್ದಿ, ಸರಿಪಡಿಸಬಲ್ಲಳು.

× × ×

ಮೆರಿಡಿಥ್‌ನ ಈ ಮೇಲೆ ವಿವರಿಸಿದ ಪ್ರಬಂಧ ಎಷ್ಟೇ ಸುಸಂಬದ್ಧ ಮತ್ತು ಪಾಂಡಿತ್ಯಪೂರ್ಣವಾಗಿದ್ದರೂ ನ್ಯೂನತೆಗಳು ಇಲ್ಲದಿಲ್ಲ. ಅಂತೆಯೆ ಕೆಲವೊಂದು ಪತ್ರಿಕೆ ಮತ್ತು ಸಾಹಿತಿಗಳು ಅದರ ವಿಷಯಕ್ಕೆ ಒಪ್ಪಿಗೆ ತೋರಿಸಿದಂತೆ ಎಚ್ಚರಿಕೆಯನ್ನು ನೀಡಿ ದ್ದಾರೆ. 'ದಿ ಸ್ಪೆಕ್ಟೇಟರ' ಪತ್ರಿಕೆ ಅದರ ವಿಷಯಕ್ಕೆ ಹೀಗೆ ಅಭಿಪ್ರಾಯ ವ್ಯಕ್ತಪಡಿಸಿತು: ಮೆರಿಡಿಥ್‌ನ ವಿಚಾರಪೂರ್ಣನಗು (thoughtful laughter) ಮತ್ತು ವಿಚಾರ ರಹಿತನಗು (vacuous laughter) ಇವುಗಳ ವಿಂಗಡಣೆ ಮೆಚ್ಚಿಕೊಳ್ಳು ವಂಥದು. ಆದರೆ ಸುಖಾಂತನಾಟಕ ಕೇವಲ ಬೌದ್ಧಿಕಚಟುವಟಿಕೆಯಾಗಿ, ಬುದ್ಧಿಜೀವಿ

ಗಳ ಮನರಂಜನೆಯು ಸಾಧನವಾದರೆ. ಅಧಿಕ ಸಂಖ್ಯೆಯಲ್ಲಿ ನಾಟ್ಯಗೃಹ ತುಂಬಿರುವ ಜನಸಾಮಾನ್ಯರನ್ನು ತಣಿಸುವ ಬಗೆ ಹೇಗೆ ? ಸುಸಂಸ್ಕೃತ ಸಮಾಜಕ್ಕೂ ಸುಖಾಂತ ನಾಟಕಕ್ಕೂ ಇರುವ ನಿಕಟಸಂಬಂಧವನ್ನು ಅಲ್ಲಗಳೆಯದಿದ್ದರೂ ಸುಖಾಂತನಾಟಕಕ್ಕೆ ಸುಸಂಸ್ಕೃತ ಸಮಾಜ ಮತ್ತು ನಾಗರಿಕತೆಯ ಆವಶ್ಯಕತೆಯನ್ನು ಪ್ರಧಾನವಾಗಿರಿಸುವುದು ಅಷ್ಟೊಂದು ಸಮಂಜಸವಾಗಿ ತೋರದು. ಶುದ್ಧ ಸುಖಾಂತನಾಟಕಗಳು ಅವಾಸ್ತವ ಪ್ರಪಂಚಕ್ಕೆ ಸಂಬಂಧಿಸಿದವುಗಳಾಗಿದ್ದು. ವಾಸ್ತವಿಕ ಜಗತ್ತಿನಲ್ಲಿ ಅವು ತಲೆದೋರಲಾರವು. ಹೀಗಿರಲು ಶುದ್ಧ ಸುಖಾಂತನಾಟಕ ಸೃಷ್ಟಿಸದಿದ್ದವರು ಅನಾಗರಿಕರೆಂದು ಭಾವಿಸುವುದು ತಪ್ಪಾಗಲಿಕ್ಕಿಲ್ಲವೆ ? ವಾಸ್ತವ ಜಗತ್ತಿನಿಂದ ದೂರಿರುವ ಇಂಥ ನಾಟಕಗಳನ್ನು ಬಯಸುವವರಾರು ? ಶುದ್ಧ ಸುಖಾಂತನಾಟಕ ಇಂಗ್ಲೀಷಿನಲ್ಲಿ ಸೃಷ್ಟಿಗೊಳ್ಳದಿದ್ದರೆ ಇಂಗ್ಲೀಷರನ್ನು ಅನಾಗರಿಕರೆಂದು ಕರೆಯಬಹುದೆ ? ಹೀಗೆ ಸ್ಪೆಕ್ಟೇಟರ ಪತ್ರಿಕೆ, ಅದರಲ್ಲಿಯ ಸಂದಿಗ್ಧ ಸಂಗತಿಗಳನ್ನು ಬಯಲಿಗಿಟ್ಟಿದೆ. ಒಟ್ಟಿನಲ್ಲಿ ಈ ಪ್ರಬಂಧ ಈ ಸಾಹಿತ್ಯ ಪ್ರಕಾರ ಸಿದ್ಧಾಂತ ಪ್ರತಿಪಾದಿಸುವ ಕೆಲವೇ ಪ್ರಬಂಧಗಳಲ್ಲಿ ಒಂದು. ಅಂತೂ ಬರ್ನಾರ್ಡ ಶಾ ಹೇಳಿದಂತೆ : "Meredith is perhaps the highest living English authority on this subject ". ಮತ್ತು ಪ್ರೊ. ಭೂಷಣ ಒಪ್ಪುವಂತೆ : "There is no doubt that Meredith is by far the best English exponent of comedy and the comic spirit; and that hs Essay is *locus classicus* of literary criticism."

ಕಾಂಟನ ಸೌಂದರ್ಯವಿವೇಚನೆ

ಎಂ. ಬಿ. ಕೊಟ್ರಶೆಟ್ಟಿ

ಆಧುನಿಕ ಪಾಶ್ಚಾತ್ಯ ತತ್ವಜ್ಞಾನಿಗಳಲ್ಲಿ ಕಾಂಟನ ಸ್ಥಾನ ತುಂಬ ಹಿರಿದಾಗಿದೆ. ಅವನ ಶಕ್ತಿಯುತ ವಿಚಾರಧಾರೆಯಿಂದ ತತ್ವಜ್ಞಾನವು ಕ್ರಾಂತಿಕಾರಕ ಬದಲಾವಣೆಗಳನ್ನು ಕಂಡಿತು. ಒಂದರ್ಥದಲ್ಲಿ ಆಧುನಿಕ ಪಾಶ್ಚಾತ್ಯ ತತ್ವಜ್ಞಾನವೆಂದರೆ ಕಾಂಟ; ಆಧುನಿಕ ಪಾಶ್ಚಾತ್ಯ ತಾತ್ವಿಕವಿವೇಚನೆಗೆ ಕಾಂಟನೇ ಕೇಂದ್ರಬಿಂದು.

"It has been truely observed that in the modern world, one can philosophise against Kant or with him, but never without him."[1]

"ತತ್ವವಿವೇಚನೆ ನಡೆಯಬೇಕಾದರೆ ಅದು ಕಾಂಟನ ವಿರುದ್ಧವಾಗಿ ನಡೆಯಬೇಕು; ಇಲ್ಲವೆ ಅವನೊಂದಿಗೆ ನಡೆಯಬೇಕು. ಅವನ ಪ್ರಸ್ತಾಪವಿಲ್ಲದೆ ಅದು ನಡೆಯಲಾರದು" ಎಂಬ ರಾಬರ್ಟ ಪಾಲ್ ವುಲ್ಫನ ಮಾತುಗಳು ತಾತ್ವಿಕ ವಿಚಾರಧಾರೆಯ ಮೇಲೆ ಕಾಂಟ್ ಬೀರಿದ ಪ್ರಭಾವಪ್ರಗಲ್ಭತೆಯತ್ತ ಬೆಳಕು ಚೆಲ್ಲುತ್ತದೆ.

ಕಾಂಟ್ ಬದುಕಿ ಬಾಳಿದ (ಕ್ರಿ. ಶ. ೧೭೨೪–೧೮೦೪) ೧೮ನೆಯ ಶತಮಾನದಲ್ಲಿ ಆಧುನಿಕ ವಿಚಾರಧಾರೆ ಸತ್ವಯುತವಾಗಿ ರೂಪುಗೊಳ್ಳುತ್ತಿತ್ತು. ಈ ಶತಮಾನದಲ್ಲಿ ಲೆಸ್ಸಿಂಗ್, ಬರ್ಕ, ವಿಕ್ ಹೆಲ್ಮನ್, ಡೇವಿಡ್ ಹ್ಯೂಮ ಮೊದಲಾದವರ ವಿಚಾರಗಳಿಂದ ಪಾಶ್ಚಾತ್ಯ ತತ್ವಜ್ಞಾನಕ್ಷೇತ್ರದಲ್ಲಿ ಸಂಕ್ರಮಣ ತೋರಿತು. ಇದು ಅಭಿಜಾತ ಮತ್ತು ಆಧುನಿಕ ವಿಚಾರಧಾರೆಗಳ ನಡುವಣ ಸಂಕ್ರಮಣಕಾಲ, ಈ ಯುಗದ ಪ್ರಮುಖ ವಿಚಾರಗಳ ಪ್ರಭಾವವನ್ನು ಕಾಂಟನ ತಾತ್ವಿಕವಿವೇಚನೆಯಲ್ಲಿ ಕಾಣುತ್ತೇವೆ.

ಕಾಂಟ್‌ನ ತಾತ್ವಿಕವಿವೇಚನೆ ಮೂರು ವಿಚಾರಗಳಲ್ಲಿ ಕೇಂದ್ರೀಕೃತವಾಗಿದೆ. ಒಂದು ಇಂದ್ರಿಯಗೋಚರ ಪ್ರಕೃತಿಯಲ್ಲಿ ತೋರುವ ಸುಸಂಬದ್ಧತೆ, ಎಂದರೆ ಪ್ರಕೃತಿಯ ನಿಯಮಬದ್ಧತೆಯ ವಿಚಾರ. ವೈಜ್ಞಾನಿಕ ದೃಷ್ಟಿಕೋನಕ್ಕೆ ಪ್ರಕೃತಿಯಲ್ಲಿನ ಅನೇಕ ವಸ್ತುಗಳು. ಒಂದರಿಂದ ಇನ್ನೊಂದು ಪ್ರತ್ಯೇಕವೆಂದು ಅನುಭವಕ್ಕೆ ಬರುತ್ತವೆ. ಆದರೆ ತಾತ್ವಿಕವಾಗಿ ಈ ವೈವಿಧ್ಯತೆ ಪ್ರತ್ಯೇಕತೆಗಳ ಹಿಂದೆ. ಆ ಎಲ್ಲ ವಸ್ತುಗಳನ್ನು ಯಾವುದೋ ಒಂದು ಸಾಮಾನ್ಯಸೂತ್ರದಲ್ಲಿ ಬಂಧಿಸುವ ಏಕತೆಯ ವಿಚಾರವಿರುವದು

1. Kant ed. Robert paul wolff, Introduction XI.

ಕೂಡು ಬರದಿರಲಾರದು. 'ಏಕರೂಪತೆಯ ನಿಯಮ', 'ಕಾರ್ಯಕಾರಣ ನಿಯಮ' ಮುಂತಾದ ವೈಜ್ಞಾನಿಕನಿಯಮಗಳ ಸತ್ಯತೆಯನ್ನು ನಾವು ಪ್ರಶ್ನಿಸುವಂತಿಲ್ಲ. ಹ್ಯೂಮನ ತತ್ತ್ವಜ್ಞಾನದಲ್ಲಿ ಪ್ರಾಮುಖ್ಯತೆ ಪಡೆದ ಈ ವಿಚಾರವನ್ನು ಕಾಂಟ್ ಸ್ವೀಕರಿಸಿದ್ದಾನೆ. ಕಾಂಟನ ಪ್ರಥಮಕೃತಿ 'Critique of pure Reason' ದಲ್ಲಿ ವೈಜ್ಞಾನಿಕ ದೃಷ್ಟಿಕೋನದಿಂದ ಪ್ರಾಕೃತಿಕ ಸತ್ಯಗಳ ವಿವೇಚನೆ ಮಾಡಿರುವದನ್ನು ಕಾಣುತ್ತೇವೆ. ವೈಜ್ಞಾನಿಕ ಸತ್ಯಶೋಧನೆ ಪ್ರತ್ಯೇಕ ವಸ್ತುಗಳ ಅನುಭವದಿಂದ. ಎಂದರೆ ಆ ವಸ್ತುಗಳು ನಮ್ಮ ಇಂದ್ರಿಯ ಜ್ಞಾನಕ್ಕೆ ಒಳಗಾಗುವದರಿಂದ ಉಂಟಾಗುವ ತಿಳಿವಳಿಕೆಯಿಂದ ಸಾಧ್ಯವಾಗುತ್ತದೆ. ಭಿನ್ನವಸ್ತುಗಳ ಜ್ಞಾನದಿಂದ ಜಗತ್ತಿನ ಪೂರ್ಣಜ್ಞಾನ ಶೋಧನೆಗೆ ತರ್ಕದ, ಸಹಜಪ್ರಜ್ಞೆಯ ಸಹಾಯಪಡೆಯಬೇಕಾಗುತ್ತದೆ. ಸಮಸ್ತ ಸೃಷ್ಟಿಯನ್ನು ಒಂದೇ ರೀತಿಯಲ್ಲಿ ಬಂಧಿಸುವ ದೇವರು, ಸ್ವಾತಂತ್ರ್ಯ. ಚಿರಂಜೀವತ್ವ ಮುಂತಾದ ಕೆಲವು ಅಮೂರ್ತಕಲ್ಪನೆಗಳು ಕೇವಲ ಇಂದ್ರಿಯಜ್ಞಾನಕ್ಕೆ ಸೀಮಿತವಾಗಿಲ್ಲ. ಇಂದ್ರಿಯ ಜ್ಞಾನದ ಆಧಾರದಿಂದ ಅವುಗಳ ಸತ್ಯತೆಯನ್ನು ಪರಿಭಾವಿಸುವುದು ಸಾಧ್ಯವಿಲ್ಲವೆಂದೂ ಅದು ಅತೀತ ತರ್ಕವನ್ನು ಆಶ್ರಯಿಸುವುದೆಂದೂ ಕಾಂಟ್ ಹೇಳುತ್ತಾನೆ.

ಕಾಂಟನ ಎರಡನೆಯ ಕೃತಿ 'Critique of practical Reason' ದಲ್ಲಿ ನೈತಿಕ ನಿಯಮಗಳ ವಿವೇಚನೆಯಿದೆ. ಅವನ ಮೊದಲನೆಯ ಕೃತಿಯಲ್ಲಿಯೇ ನೈಸರ್ಗಿಕ ನಿಯಮಗಳು ಮಾನವನ ಐಂದ್ರಿಯಿಕ ಅನುಭವವನ್ನು ಮೀರಿಸಿಲ್ಲುತ್ತವೆಯೆಂಬ ನಂಬಿಕೆಯಿದೆ. ಪ್ರಕೃತಿಯ ಪರಮತತ್ತ್ವಗಳು ಮಾನವನ ವ್ಯಾವಹಾರಿಕ ಜೀವನದ ಮೇಲೆ ಪ್ರಭಾವ ಬೀರಿ ಅವನ ಅಶೋತ್ತರಗಳನ್ನು ಪ್ರೇರೇಪಿಸುತ್ತವೆ. ಮನುಷ್ಯ ಕೇವಲ ಪ್ರಾಣಿಯಲ್ಲ. ಪ್ರಬಲ ಇಚ್ಛಾಶಕ್ತಿಯುಳ್ಳ ಬುದ್ಧಿಜೀವಿ. ಪ್ರಾಕೃತಿಕ ನಿಯಮಗಳಿಂದ ಬಂಧಿತನಾಗಿದ್ದರೂ ಅವುಗಳನ್ನು ಮೀರಿನಿಂತು. ತನ್ನ ಜೀವನವನ್ನು ಅರ್ಥಪೂರ್ಣಗೊಳಿಸಿಕೊಳ್ಳುವ ಸ್ವಾತಂತ್ರ್ಯ ಹೊಂದಿರುತ್ತಾನೆ ಮಾನವನ ಈ ಅದಮ್ಯ ಸ್ವಾತಂತ್ರ್ಯಾಪೇಕ್ಷೆ. ಚೈತನ್ಯಶೀಲತೆಗಳು ಹೊಸದೊಂದು ತಾತ್ವಿಕವಲಯವನ್ನು ತೆರೆಯುತ್ತವೆ. ಅದೇ ನೈತಿಕ ನಿಯಮಬದ್ಧತೆ. ಪ್ಲೆಟೊನಸ್ ಸಿದ್ಧಾಂತದಿಂದ ಪ್ರೇರಿತನಾಗಿ ಕಾಂಟ್ ಇದನ್ನು ಪ್ರತಿಪಾದಿಸುತ್ತಾನೆ.

ಕಾಂಟನ ಮೇಲಣ ಎರಡು ಕೃತಿಗಳು ತತ್ತ್ವಜ್ಞಾನದ ಎರಡು ಪ್ರಮುಖ ದೃಷ್ಟಿಕೋನಗಳಿಗೆ ಪೂರಕವಾಗಿವೆ. ಒಂದನೆಯದು. ಪ್ರಕೃತಿಯ ಹಿನ್ನೆಲೆಯಲ್ಲಿರುವ ತತ್ತ್ವಗಳನ್ನು ವಿವೇಚಿಸುವುದರಿಂದ ಅದನ್ನು ನೈಸರ್ಗಿಕ ತತ್ತ್ವಜ್ಞಾನವೆಂದು ಕರೆದಿದ್ದಾನೆ. ಇನ್ನೊಂದು, ಆ ತತ್ತ್ವಗಳನ್ನು ಮನೋಬಲದಿಂದ ವ್ಯವಹಾರದಲ್ಲಿ ಇಳಿಸಬಯಸುವುದರಿಂದ ನೈತಿಕ ತತ್ತ್ವಜ್ಞಾನವೆಂದು ಕರೆಯಲ್ಪಡುತ್ತದೆ. ಜ್ಞಾನೇಂದ್ರಿಯಗಳಿಗೆ ಗ್ರಹೀತವಾಗುವ ವಿಚಾರಗಳಿಂದ ದೊರೆಯುವ ತಿಳಿವಳಿಕೆಯು ಮೊದಲನೆಯ ರೀತಿಯ ತತ್ತ್ವಜ್ಞಾನಕ್ಕೆ ಮೂಲಾಧಾರವಾಗುತ್ತದೆ. ಅಮೂರ್ತ ಸತ್ಯಗಳನ್ನು ಆತ್ಮಬಲದಿಂದ ವ್ಯವ

ಹಾರಕ್ಕೆ ತರುವಲ್ಲಿ ಇಚ್ಛಾಶಕ್ತಿಯಿಂದ ಪ್ರೇರಿತವಾದ ಸಹಜಪ್ರಜ್ಞೆ ಪ್ರಧಾನಪಾತ್ರ ಮಾಡುತ್ತದೆ. ಗ್ರಹೀತ ವಿಚಾರಗಳೇ (Concepts) ಈ ಎರಡೂ ದೃಷ್ಟಿಕೋನಗಳಲ್ಲಿ ಪ್ರಮುಖವಾದರೂ ಮೊದಲನೆಯದು ತಿಳಿವಳಿಕೆಯನ್ನು, ಎರಡನೆಯದು ಸಹಜ ಪ್ರಜ್ಞೆಯನ್ನು ಆಧರಿಸುತ್ತದೆಯೆನ್ನುವುದು ಪ್ರಮುಖ ವಿಚಾರವಾಗಿದೆ.

ಪ್ರಜ್ಞಾವಲಯಗಳು :

ಮನಶ್ಶಾಸ್ತ್ರವು ಜ್ಞಾನಗ್ರಹಣಶಕ್ತಿಯ ದೃಷ್ಟಿಯಿಂದ ಮಾನವನ ಮನೋವ್ಯಾಪಾರವನ್ನು ಮೂರು ವಿಧವಾದ ಪ್ರಜ್ಞಾವಲಯಗಳಲ್ಲಿ ವಿಭಾಗಿಸುತ್ತದೆ. ತಿಳಿಯುವುದು, ಸಂವೇದಿಸುವುದು, ಇಚ್ಛಿಸುವುದು ಇವು ಪ್ರಮುಖ ಮನೋವ್ಯಾಪಾರಗಳು.

"Understanding for cxcellence the faculty of knowledge and reason the faculty of desire."[1] ತಿಳಿವಳಿಕೆ ಜ್ಞಾನದ ಪ್ರಮುಖ ಕೈವಾರಿಯಾದರೆ ಸಹಜಪ್ರಜ್ಞೆಯು ಇಚ್ಛಾಶಕ್ತಿಯ ಕೈವಾರಿ. ಕಾಂಟ್ ಈ ಎರಡು ಪ್ರಜ್ಞಾವಲಯಗಳನ್ನು ಆಧರಿಸಿ ಮೇಲೆ ವಿವರಿಸಿದ ಎರಡು ಕೃತಿಗಳನ್ನು ರಚಿಸಿದ್ದಾನೆ. ಆದರೆ ಇವುಗಳಷ್ಟೇ ಪ್ರಭಾವಿಯಾದ ಇನ್ನೊಂದು ಶಕ್ತಿ ಮನಸ್ಸಿಗೆ ಇದೆ. ಅದೇ ನಮಗೆ ಸುಖದ ಇಲ್ಲವೆ ದುಃಖದ ಸಂವೇದನೆಯನ್ನುಂಟುಮಾಡುವ ಸಂವೇದನಾಶಕ್ತಿ. ಇದು ತಿಳಿವಳಿಕೆ ಮತ್ತು ಸಹಜಪ್ರಜ್ಞೆಯ ಪರಸ್ಪರ ಭಿನ್ನಕ್ಷೇತ್ರಗಳನ್ನು ಒಂದುಗೂಡಿಸುವ ಬಿಂದು. ಇದನ್ನೆ ಕಾಂಟ್ ಸೌಂದರ್ಯಪ್ರಜ್ಞೆಯ ಕ್ಷೇತ್ರವೆಂದು ಕರೆಯುತ್ತಾನೆ. ಇಂದ್ರಿಯಗಮ್ಯ ವಿಷಯಜ್ಞಾನದಲ್ಲಿ ಸಹಜಪ್ರಜ್ಞೆಯ ಒಡನಾಟ ಹಾಗು ಸಹಜ ಪ್ರಜ್ಞೆಯ ಕ್ಷೇತ್ರದಲ್ಲಿ ವಿಷಯಜ್ಞಾನದ ಪ್ರಾತಿನಿಧ್ಯವನ್ನು ಒಪ್ಪುವ ಪ್ರಜ್ಞಾವಲಯವಿದು. ಕಾಂಟನ ತತ್ವಜ್ಞಾನದಲ್ಲಿ ಈ ವಿಚಾರವು ಕೇಂದ್ರಸ್ಥಾನದಲ್ಲಿ ನಿಂತು ಅವನ ಸೌಂದರ್ಯ ಹಾಗು ಅದ್ಭುತ ತತ್ವದರ್ಶನಗಳಿಗೆ ಪ್ರೇರಣೆ ನೀಡಿದೆ. 'Observations upon the feeling of the Sublime and Beautiful' ಎಂಬ ಕಾಂಟನ ಸೌಂದರ್ಯ ವಿವೇಚನೆಯನ್ನೊಳಗೊಂಡ ಕೃತಿ ೧೭೬೪ರಲ್ಲಿ ಪ್ರಕಟವಾಗಿತ್ತು. ಸೌಂದರ್ಯದರ್ಶನವು ಬೃಹತ್‌ರೂಪತಾಳಿ ಅಭಿವ್ಯಕ್ತಗೊಂಡುದು ಅವನ ಮೂರನೆಯ ಶ್ರೇಷ್ಠಕೃತಿ 'Critique of Judgement' ಎಂಬುದರಲ್ಲಿಯೇ.

ಸೌಂದರ್ಯಪ್ರಜ್ಞೆ :

ಸೌಂದರ್ಯಪ್ರಜ್ಞೆಯ ಅಸ್ತಿತ್ವವನ್ನು ಕಾಂಟ್ ಸ್ವೀಕರಿಸಿದ್ದಾನೆ. ಅವನ ತತ್ವಜ್ಞಾನದಲ್ಲಿ ಇದು ಪ್ರಮುಖ ಸ್ಥಾನವನ್ನು ಆಕ್ರಮಿಸಿದೆಯೆನ್ನುವುದನ್ನು ಮೇಲೆ ವಿವರಿಸ

1. J. H. Bernard, critique of Judgement, Introduction, XVI.

ಲಾಗಿದೆ. ಸೌಂದರ್ಯವನ್ನು ಕುರಿತು ಅರ್ಥಪೂರ್ಣ ಮಾತನ್ನು ಕಾಂಟನೇ ಮೊತ್ತ ಮೊದಲಿಗೆ ಹೇಳಿದ್ದಾನೆ ಎಂದು ಹೆಗೆಲ್ ಹೇಳಿರುವುದನ್ನು ಪಂಡಿತರು ಒಪ್ಪಿಕೊಂಡಿದ್ದಾರೆ.

ಪ್ರಪಂಚದ ಅನಂತ ವಿಷಯಗಳನ್ನು ಅರಿಯಲು, ಅನುಭವಿಸಲು ಮನಸ್ಸಿಗೆ ಅವುಗಳನ್ನು ಕುರಿತು ಒಲವು ಅಭಿರುಚಿಗಳು ಅತ್ಯವಶ್ಯವಾಗಿ ಬೇಕು. ಅದಂ ಯಾವ ಪ್ರಜ್ಞಾಪಾತಳಿಯ ಮೇಲೆ ನಿಂತು ಜ್ಞಾನಸಗ್ರಹಣ ಮಾಡಬೇಕಾದರೂ ಒಲವೇ ಅದಕ್ಕೆ ಪ್ರೇರಕ, ಪ್ರಚೋದಕಶಕ್ತಿ. ಸೌಂದರ್ಯದರ್ಶನಕ್ಕೆ ನೈಸರ್ಗಿಕ ವಸ್ತುಗಳನ್ನು ಕುರಿತು ಅಭಿರುಚಿ ಇರಬೇಕು. ಸೌಂದರ್ಯಪ್ರಜ್ಞೆಗೆ ಸಂಬಂಧಿಸಿದ ಈ ಒಲವು ವಸ್ತು ಸೌಂದರ್ಯವನ್ನು ನಿರಪೇಕ್ಷವಾಗಿ ಪರಿಭಾವಿಸುತ್ತದೆ. ಅದು ವಸ್ತುಪರಿಜ್ಞಾನಕ್ಕೆ ಸಂಬಂಧಿಸಿದ ಅರಿವು ಇಲ್ಲವೆ ತರ್ಕಕ್ಕೆ ಸಂಬಂಧಿಸದೆ ಸೌಂದರ್ಯಾತ್ಮಕವಾಗಿರುತ್ತದೆನ್ನುವುದು ಕಾಂಟನ ಪ್ರಮುಖ ವಿಚಾರ.

The Judgement of taste is therefore not a Judgement of cognition and is consequently not logical but aesthetical by which we understand that whose determining gıound can be no other than subjective."[1]

ಸೌಂದರ್ಯದ ವಸ್ತುಗಳು ಎದುರಾಗಲು ಇಂದ್ರಿಯಗಳು ಸ್ವಾಭಾವಿಕವಾಗಿ ಪಡಿಮಿಡಿಯುತ್ತವೆ, ಸ್ಪಂದಿಸುತ್ತವೆ. ಇಂದ್ರಿಯಗಳು ಈ ಬಗೆಯ ಮಿಡಿತ, ಸ್ಪಂದನಗಳಿಗೆ ಕಾರಣಗಳು ಅನೇಕ. ಇಂದ್ರಿಯಗಳು ವಸ್ತುಗಳನ್ನು ಒಲಿಯಲು ಮೂರು ಪ್ರಮುಖ ಕಾರಣಗಳನ್ನು ಕಾಂಟ್ ಸೂಚಿಸುತ್ತಾನೆ.

ವ್ಯಾವಹಾರಿಕ ಉದ್ದೇಶ :

ವಸ್ತುಗಳು ಲೌಕಿಕ ಪ್ರಯೋಜನ ನೀಡುವುದರಿಂದ ಮನವು ಅವುಗಳನ್ನು ಒಲಿಯುತ್ತದೆ; ಅವುಗಳಲ್ಲಿ ಆಸಕ್ತವಾಗುತ್ತದೆ. ವ್ಯಾವಹಾರಿಕ ಉದ್ದೇಶದಿಂದ ಪ್ರೇರಿತವಾಗಿ ಇಂದ್ರಿಯ ಸ್ಪಂದನ ನಡೆದಾಗ ಮನಸ್ಸಿಗೆ ವಸ್ತುವನ್ನು ಕುರಿತು ಸುಖದ ಇಲ್ಲವೆ ದುಃಖದ ಸಂವೇದನೆಯಾಗುವುದು. ಒಂದೇ ವಸ್ತು ಭಿನ್ನ ವ್ಯಕ್ತಿಗಳಿಗೆ ಬೇರೆಬೇರೆ ರೀತಿಯ ಅನುಭವವನ್ನು ನೀಡಬಹುದು. ಈ ಮಾತಿನ ನಿದರ್ಶನಕ್ಕೆ ಕಾಂಟ್ ಭೋಜನ ಕೂಟದ ಉದಾಹರಣೆಯನ್ನು ಕೊಡುತ್ತಾನೆ. ಭೋಜನ ಕೂಟದಲ್ಲಿ ಭಾಗವಹಿಸುವ ಅನೇಕ ವ್ಯಕ್ತಿಗಳು ಅಲ್ಲಿ ಉಣಬಡಿಸಿದ ಪದಾರ್ಥಗಳಲ್ಲಿ ತಮ್ಮ ಇಂದ್ರಿಯಗಳಿಗೆ ವಿಶೇಷವಾಗಿ ತೃಪ್ತಿನೀಡುವ ಕೆಲವನ್ನು ಮಾತ್ರ ಮೆಚ್ಚಿ ತೃಪ್ತಿಪಡುತ್ತಾರೆ. ಪ್ರತಿ

1. Kant, Critique of Judgement, Trans, J. H. Bernard, P. 37.

ಯೊಬ್ಬರ ತೃಪ್ತಿ, ಆ ವಸ್ತುಗಳಲ್ಲಿ ಅವರ ಇಂದ್ರಿಯಗಳು ತೋರುವ ವಿಶೇಷ ಒಲವಿಗೆ (inclination) ಸಂಬಂಧಿಸಿ ಭಿನ್ನಭಿನ್ನವಾಗಿರಲು ಸಾಧ್ಯ. ಆದ್ದರಿಂದ ಇಂದ್ರಿಯ ತೃಪ್ತಿಯೆನ್ನುವುದು ಕೇವಲ ವೈಯಕ್ತಿಕ ಹಾಗು ಪರಿಪೂರ್ಣ ವ್ಯಕ್ತಿನಿಷ್ಠವಾದುದು ಎನ್ನುತ್ತಾನೆ.

ನೈತಿಕ ಉದ್ದೇಶ :

ಮಾನವನು ಇಂದ್ರಿಯ ಪ್ರವೃತ್ತಿಗೆ ಬಾಧಿತನಾಗಿದ್ದರೂ ಇಂದ್ರಿಯಗಳಿಗೆ ಮೀರಿದ ದಿವ್ಯದರ್ಶನದ ಕಲ್ಪನೆಯನ್ನು ಒಳಗೊಂಡ ಬುದ್ಧಿಜೀವಿ. ತಾನು ಮೆಚ್ಚಿದ ತತ್ವಪ್ರಣಾಲಿ, ಇರಿಸಿಕೊಂಡ ಆದರ್ಶಕ್ಕೆ ವಸ್ತು ಪೂರಕವಾಗುತ್ತದೆ ಎಂಬ ಕಾರಣದಿಂದ ಎಂದರೆ ನೈತಿಕ ಉದ್ದೇಶದಿಂದ ಅದನ್ನು ಒಲಿಯಬಹುದು. ಇಂಥಲ್ಲಿ ಬುದ್ಧಿಪುರಸ್ಸರವಾದ ವಸ್ತುನಿಷ್ಠದೃಷ್ಟಿ ವಸ್ತುವನ್ನು ಒಲಿಯಲು ಪ್ರಚೋದಕವಾಗುತ್ತದೆ.

ಸೌಂದರ್ಯಾತ್ಮಕ ಉದ್ದೇಶ :

ಕೇವಲ ಇಂದ್ರಿಯಗಳಿಗೆ ತೃಪ್ತಿನೀಡುವುದು ವ್ಯಾವಹಾರಿಕ, ಆದರ್ಶದ ಕಲ್ಪನೆಗೆ ಪೂರಕವಾಗುವುದು ನೈತಿಕ. ಇವೆರಡು ಉದ್ದೇಶಗಳನ್ನು ಬಿಟ್ಟು ಕೇವಲ ಸೌಂದರ್ಯದ ಅನುಭವಕ್ಕಾಗಿ ವಸ್ತುವನ್ನು ಪರಿಭಾವಿಸುವುದು ಸೌಂದರ್ಯಾತ್ಮಕ ಉದ್ದೇಶ. ಇಂದ್ರಿಯತೃಪ್ತಿ ಸಕಲ ಜೀವಿಗಳಿಗೆ ಸಾಮಾನ್ಯವಾದುದು. ನೈತಿಕ ಉದ್ದೇಶದಿಂದ ಪ್ರೇರಿತವಾದ ಒಳಿತಿನ ಕಲ್ಪನೆ ಬುದ್ಧಿಜೀವಿಗಳಾದ ಮಾನವರಿಗೆ ಮಾತ್ರ ಸಾಧ್ಯವಾದುದು. ಆದರೆ ಮನುಷ್ಯ ಇಂದ್ರಿಯ ಹಾಗು ಬುದ್ಧಿಶಕ್ತಿಗಳ ಅಪೂರ್ವ ಸಂಗಮ. ಇಂದ್ರಿಯ ಸಂಗದೂರವಾದ ಸೌಂದರ್ಯದ ಸಂಭಾವನೆ ಮಾನವನಿಗ ಮಾತ್ರ ಸಾಧ್ಯ.

"That which gratifies man is called pleasent, that which merely pleases him is beautiful, that which is esteemed (or approved) by him, i e. that which accords an objective worth, is good. Pleasantness concerns irrational animals also; but beauty concerns only men, i e. animal still rational, beings not merely qua rational (e. g. spirits) but qua animal also and concerns every rational being in general........ ....we may say that, of all these three kinds of satisfaction, that of taste in the beautiful is alone disinterested and free satisfaction; for no interest, either of sense or of reason, here forces our assent."[1]

---

1. Kant, Critique of Judgement, trans. J. H. Bernard, p. 44.

ಸೌಂದರ್ಯಪ್ರಜ್ಞೆಯ ವೈಶಿಷ್ಟ್ಯವನ್ನು ಕಾಂಟ್ ಈ ಅವತರಣಿಕೆಯಲ್ಲಿ ವಿವರಿಸಿಂತ್ತಾನೆ. ಮನುಷ್ಯ ಅರ್ಧಪ್ರಾಣಿ, ಇನ್ನರ್ಧ ಬುದ್ಧಿಜೀವಿಯಾದುದರಿಂದ ಅವನಿಗೆ ಪ್ರಾಣಿಗಳಿಗೆ ಸಾಧ್ಯವಾದ ಇಂದ್ರಿಯತೃಪ್ತಿಯ ಜೊತೆ ಬೌದ್ಧಿಕ ತೃಪ್ತಿ ಕೂಡ ದೊರೆಯುತ್ತದೆ. ಪ್ರಾಣಿಗಳಿಗೆ ಕೇವಲ ಇಂದ್ರಿಯತೃಪ್ತಿ ಸಾಧ್ಯವಾದರೆ, ದೇವತೆಗಳಿಗೆ ಕೇವಲ ಬೌದ್ಧಿಕತೃಪ್ತಿ ಸಾಧ್ಯ. ವರ್ಣರೇಖಾ ವಿನ್ಯಾಸದಿಂದ ಕೇವಲ ಇಂದ್ರಿಯಗಳಿಗೆ ತೃಪ್ತಿ ನೀಡುವ ಗುಣವನ್ನು ಮೋದನೀಯ (plasant) ಎಂದು ಕರೆಯುತ್ತಾನೆ. ಇಂದ್ರಿಯಗಳ ಸ್ವಾಭಾವಿಕ ಪ್ರವೃತ್ತಿಗೆ ಸಂಬಂಧಿಸಿದ ಈ ಗುಣ ಸಂಪೂರ್ಣ ವೈಯಕ್ತಿಕ ಇಲ್ಲವೆ ವ್ಯಕ್ತಿನಿಷ್ಟ. ತನ್ನಷ್ಟಕ್ಕೆ ತಾನೇ ಸಂತೋಷವನ್ನುಂಟುಮಾಡುವುದು ರಮಣೀಯ. ಸೌಂದರ್ಯಾನುಭವಕ್ಕೆ ಸೌಂದರ್ಯಪ್ರಜ್ಞೆ ಜಾಗ್ರತವಾಗಿರಬೇಕಾದುದು ಅತ್ಯವಶ್ಯ.

ನಿಸ್ಸಂಗ ಪರಿಭಾವನೆ :

ಕಾಂಟನ ಸೌಂದರ್ಯವಿವೇಚನೆಯಲ್ಲಿ ನಿಸ್ಸಂಗ ಪರಿಭಾವನೆಯ ತತ್ವವು ಪ್ರಮುಖ ಸ್ಥಾನದಲ್ಲಿದೆ. ಸೌಂದರ್ಯಾನುಭೂತಿಯ ಮೂಲಸೂತ್ರವು ವಸ್ತುವನ್ನು ಇಂದ್ರಿಯಸಂಗದೂರವಾಗಿ ಪರಿಭಾವಿಸುವುದರಲ್ಲಿದೆ. ವಸ್ತುವನ್ನು ಒಲಿಯಲು ಪ್ರೇರಕ ಕಾರಣಗಳನ್ನು ಕುರಿತು ಮೇಲೆ ವಿವರಿಸಲಾಗಿದೆ. ವಸ್ತುವನ್ನು ಕೇವಲ ಇಂದ್ರಿಯ ತೃಪ್ತಿಯ ಇಲ್ಲವೆ ನೈತಿಕ ಉದ್ದೇಶಗಳಿಂದ ನೋಡುವಾಗ: ನಮ್ಮ ದೃಷ್ಟಿ ಅದರ ಅಸ್ತಿತ್ವದಲ್ಲಿ ಕೇಂದ್ರೀಕೃತವಾಗುತ್ತದೆ. ಇಲ್ಲಿ ವಸ್ತುವಿನ ಅಸ್ತಿತ್ವ ನಮಗೆ ಅತ್ಯವಶ್ಯ. ಸೌಂದರ್ಯಾನುಭವಕ್ಕೆ ವಸ್ತುವಿನ ಅಸ್ತಿತ್ವ ಅಷ್ಟು ಮುಖ್ಯವಲ್ಲ. ಸೌಂದರ್ಯಾನುಭವದಲ್ಲಿ ಪ್ರಮುಖ ಪಾತ್ರವಹಿಸುವುದು ವಸ್ತುವಲ್ಲ, ಅದರ ಕಾಲ್ಪನಿಕ ಪ್ರತಿರೂಪಮಾತ್ರ.

"The actual physical object is not directly important, rather it is peculiar visual sensations and patterns which strike the mind that result in aesthetic feeling."[1]

ವಸ್ತುವಿನ ಅಸ್ತಿತ್ವದ ವಿಚಾರವು ಅದರ ಉಪಯೋಗವನ್ನು ಆಧರಿಸಿಯೇ ನಿಲ್ಲುತ್ತದೆ. ವಸ್ತುವಿಗೆ ಬದಲಾಗಿ ಅದರ ಕಾಲ್ಪನಿಕ ಪ್ರತಿರೂಪವು ನಮ್ಮೆದುರಿಗೆ ಬಂದಾಗ ನಮ್ಮ ಪರಿಭಾವನೆ ಒಮ್ಮೆಲೇ ಬದಲಾಗುತ್ತದೆ. ಆ ಕ್ಷಣದಲ್ಲಿ ನಮ್ಮ ಪರಿಭಾವನೆಯಲ್ಲಿ ವಸ್ತುವಿನ ಕಾಲ್ಪನಿಕ ಪ್ರತಿರೂಪ ಮಾತ್ರ ನಿಂತು. ಅದು ನಮ್ಮ ಮನಸ್ಸಿನಲ್ಲಿ ಮೂಡಿಸುವ ಪರಿಣಾಮವು ಮಹತ್ವದ ಪಾತ್ರವಹಿಸುತ್ತದೆ. ಇಂದ್ರಿಯತೃಪ್ತಿ ಹಿತಕರವಾದರೂ ವ್ಯಾವಹಾರಿಕ ಉದ್ದೇಶದಿಂದ ಪ್ರೇರಿತವಾದುದು. ವಸ್ತುವು ಒಳಿತಿನ ವಿಚಾರವನ್ನು ಆಧರಿಸಿ ಹಿತಕರವಾದ ಅನುಭವವನ್ನು ನೀಡಿದರೆ ಅದು ನೈತಿಕ ಉದ್ದೇಶ

1. Kant, ed. Robert Paul wolff, p. 386.

ದಿಂದ ಪ್ರೇರಿತವಾದುದೆಂದು ಬಗೆಯಬೇಕಾಗುವುದು. ಸೌಂದರ್ಯದ ಪರಿಭಾವನೆಯಲ್ಲಿ ಇವೆರಡೂ ಉದ್ದೇಶಗಳಿಗೆ ಸ್ಥಾನವಿಲ್ಲ. ಆದುದರಿಂದ ಅದು ನಿರುದ್ದಿಶ್ಯ ಇಲ್ಲವೆ ಸಂಗದೂರವಾದುದು ಎಂದು ಕಾಂಟ್ ಹೇಳುತ್ತಾನೆ.

ಸೌಂದರ್ಯ ನಿರ್ಣಯಗಳ ವೈಶಿಷ್ಟ್ಯಗಳು :

ಸೌಂದರ್ಯಾನುಭವವನ್ನು ಅಭಿವ್ಯಕ್ತಗೊಳಿಸುವ ಭಾಷೆ, ಸೌಂದರ್ಯದ ವಿಷಯದಲ್ಲಿ ನಿರ್ಣಾಯಕ ಸತ್ಯವನ್ನು ನುಡಿಯುವುದರಿಂದ ಅಂತಹ ಹೇಳಿಕೆಗಳನ್ನು 'ಸೌಂದರ್ಯ ನಿರ್ಣಯ' ಗಳೆಂದು ಕಾಂಟ್ ಕರೆಯುತ್ತಾನೆ. ಸೌಂದರ್ಯ ನಿರ್ಣಯಗಳು ಎರಡು ವಿಧವಾದ ವೈಲಕ್ಷಣ್ಯಗಳನ್ನು ವ್ಯಕ್ತಪಡಿಸುತ್ತವೆ. ಮೊದಲನೆಯದಾಗಿ ಅವು ಸೌಂದರ್ಯಪ್ರಜ್ಞೆಯುಳ್ಳ ಸರ್ವರಿಗೂ ಅನ್ವಿತವಾಗುವ ಸಾರ್ವತ್ರಿಕ ನಿರ್ಣಯಗಳು. ಸೌಂದರ್ಯಪ್ರಜ್ಞೆ ವ್ಯಕ್ತಿನಿಷ್ಠವಾದರೂ ಸೌಂದರ್ಯಾನುಭವವು ವಸ್ತುನಿಷ್ಠಸತ್ಯಗಳ ನಿಖರತೆಯನ್ನು ವ್ಯಕ್ತಪಡಿಸುತ್ತವೆ. ಉದಾಹರಣೆಗಾಗಿ 'ಈ ಹೂವು ಸುಂದರವಾಗಿದೆ' ಎಂಬ ಹೇಳಿಕೆಯನ್ನು ಇಲ್ಲಿ ಪರಿಶೀಲಿಸಬಹುದು. ಇದು ವೈಯಕ್ತಿಕ ಹೇಳಿಕೆಯಾದರೂ ನಿಸ್ಸಂಗ ಪರಿಭಾಷೆಯ ನಿಲವಿನಿಂದ ನೋಡುವ ಎಲ್ಲ ಜನರಿಗೆ ಸಂತೋಷವನ್ನುಂಟು ಮಾಡುವ ಸಾಮರ್ಥ್ಯವನ್ನು ಹೊಂದಿದೆ ಎಂದೇ ಅರ್ಥ. ಆದರೆ ಇದೇ ಮಾತನ್ನು ನಾವು ಹೂವಿನ ಸುವಾಸನೆಯನ್ನು ಕುರಿತು ಹೇಳಲಾರೆವು. ಏಕೆಂದರೆ ಒಬ್ಬನಿಗೆ ಒಂದು ಸುವಾಸನೆ ಸಂತೋಷನ್ನುಂಟು ಮಾಡಿದರೆ, ಅದು ಇನ್ನೊಬ್ಬನಿಗೆ ತಲೆನೋವನ್ನುಂಟುಮಾಡಬಹುದು. ಹೀಗೆಂದಾಗ ಹೂವಿನ ಸೌಂದರ್ಯವು ಅದರ ಅಸ್ತಿತ್ವಕ್ಕೆ ಸಂಬಂಧಿಸಿದುದೆಂದೂ, ವಸ್ತುನಿಷ್ಠವೆಂದೂ ಅರ್ಥವಲ್ಲ. ಒಂದು ವಸ್ತುವನ್ನು ಸುಂದರವೆನ್ನುವಲ್ಲಿ ಅದು ಅಂತಹ ವಿಶಿಷ್ಟಲಕ್ಷಣದಿಂದೊಡಗೂಡಿದ್ದು, ಪರಿಭಾವನೆಗೆ ಒಳಗಾದಾಗ ತನ್ನಿಂದ ತಾನೇ ಪ್ರಕಟವಾಗಿ ಹಾಗೆ ಭಾಸವಾಗುತ್ತದೆ ಎಂದು ಭಾವಿಸಬೇಕಾಗುತ್ತದೆ. ಸೌಂದರ್ಯವು ಏಕಕಾಲಕ್ಕೆ ವೈಯಕ್ತಿಕವೂ ಹೌದು; ಸಾರ್ವತ್ರಿಕವೂ ಹೌದು. ತನಗೆ ಸುಂದರವಾಗಿ ಕಂಡ ವಸ್ತು ಇತರರಿಗೂ ಹಾಗೆಯೇ ಕಾಣುತ್ತದೆ ಎಂಬ ಸ್ವಾಭಾವಿಕ ಗ್ರಹಿಕೆ ಮೂಡುತ್ತದೆ. ಏಕೆಂದರೆ ತಾನು ಪಡೆಯುವ ಸೌಂದರ್ಯದ ಅನುಭವವು ಸಂಪೂರ್ಣ ನಿರುದ್ದಿಶ್ಯ ಇಲ್ಲವೆ ಇಂದ್ರಿಯಸಂಗದೂರವಾದುದರಿಂದ ತನ್ನಂತೆಯೇ ಇತರರು ತೃಪ್ತಿಯನ್ನು ಪಡೆದೇ ಪಡೆಯುತ್ತಾರೆ ಎಂಬ ದೃಢವಾದ ನಂಬಿಕೆ ಅದರ ಹಿನ್ನೆಲೆಯಲ್ಲಿರುತ್ತದೆ.

"......he supposes in others the same satisfaction, he judges not merely for himself but for everyone, and speaks of beauty as if it were a proparty of things."[1]

---

1. Critique of Judgement, Trans, J. H. Bernard, P. 47.

ಎರಡನೆಯದಾಗಿ ಸೌಂದರ್ಯಾನುಭವವು ವ್ಯಕ್ತಿನಿಷ್ಠ ಎನ್ನುವ ವಿಚಾರವನ್ನು ಕಾಂಟ್ ಪ್ರತಿಪಾದಿಸುತ್ತಾನೆ. ವ್ಯಕ್ತಿ ಖುದ್ದಾಗಿ ಸ್ವಾನುಭವದಿಂದ ಅದನ್ನು ಅರಿತು ಅನುಭವಿಸಬೇಕು. ಈ ವಿಷಯದಲ್ಲಿ ಅವನು ಎರಡನೆಯವರ ಅನುಭವವೇನು? ನಿರ್ಣಯವೇನು? ಎಂದು ಇತರರ ಅನುಮತಿ, ಅಭಿಪ್ರಾಯಗಳಿಗಾಗಿ ಕಾದುನೋಡುವ ಆವಶ್ಯಕತೆ ಇಲ್ಲ. ನಿಜವಾಗಿ ನೋಡಿದರೆ ಸೌಂದರ್ಯವನ್ನುವುದು ವ್ಯಕ್ತಿಯಲ್ಲಿಯೂ ಇಲ್ಲ; ವಸ್ತುವಿನಲ್ಲಿಯೂ ಇಲ್ಲ. ಅದು ಪ್ರಾದುರ್ಭವಿಸುವುದು ವಸ್ತುದರ್ಶನದ ಕ್ಷಣ ದಲ್ಲಿ, ವ್ಯಕ್ತಿಯ ಸಂವೇದನೆಯ ಪ್ರಕ್ರಿಯೆಯಲ್ಲಿ. ಸೌಂದರ್ಯಾನುಭವವು ವ್ಯಕ್ತಿಯ ಸಂವೇದನೆಯ ವಲಯದಲ್ಲಿಯೆ ಮೂಡುತ್ತದೆ ಎಂಬ ಸತ್ಯವನ್ನು ಕಾಂಟ್ ಕಂಡು ದರಿಂದ ಸೌಂದರ್ಯಾನುಭವದಲ್ಲಿ ವ್ಯಕ್ತಿನಿಷ್ಠತೆಯನ್ನು ಒತ್ತಿಹೇಳುತ್ತಾನೆ. ಆದ್ದ ರಿಂದಲೇ ಅವನು ಸೌಂದರ್ಯನಿರ್ಣಯಗಳು ವ್ಯಕ್ತಿನಿಷ್ಠ ಸಾರ್ವತ್ರಿಕ ಸತ್ಯಗಳು ಎನ್ನುತ್ತಾನೆ. ವ್ಯಾವಹಾರಿಕ ಬೇಕು ಬೇಡಗಳಿಂದ ಪ್ರೇರಿತವಾದ ಇಂದ್ರಿಯಾನು ಭವವು ಕೇವಲ ವೈಯಕ್ತಿಕ: ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರತಕ್ಕದ್ದು. ಅದರಲ್ಲಿ ಸಾರ್ವತ್ರಿಕತೆ ಕಂಡುಬರಲು ಸಾಧ್ಯವೇ ಇಲ್ಲ. ನೈತಿಕ ನಿರ್ಣಯಗಳು ಪೂರ್ವಗ್ರಹಿತ ಆದರ್ಶದ ಕಲ್ಪನೆಗಳ ಮೇಲೆ ಆಧರಿತವಾಗಿರುವುದರಿಂದ ಅವು ನಿಃಸಂದೇಹವಾಗಿ ವಸ್ತುನಿಷ್ಠ ಸಾರ್ವತ್ರಿಕ ಸತ್ಯಗಳು.

ಭವ್ಯತೆ :

ಭವ್ಯತೆ (Sublime) ಸೌಂದರ್ಯದ ಪರಿಧಿಯಲ್ಲಿಯೇ ಗುರುತಿಸಬಹುದಾದ ಇನ್ನೊಂದು ತತ್ವವಾಗಿದೆ ಒಂದರ್ಥದಲ್ಲಿ ಸೌಂದರ್ಯವಲಯದಲ್ಲಿ ಬಳಕೆಗೊಳ್ಳುವ ಲಲಿತ, ಮನೋಹರ, ಸುಂದರ, ಮಹಾನ್, ಭವ್ಯ ಇತ್ಯಾದಿ ಪಾರಿಭಾಷಿಕ ಪದಗಳು ಸೌಂದರ್ಯದಲ್ಲಿ ತರತಮಗಳನ್ನು ಸಂಕೇತಿಸುತ್ತವೆ ಎಂದು ಎ. ಸಿ. ಬ್ರಾಡ್ಲೆ ಹೇಳುವ ಮಾತು ಅರ್ಥಪೂರ್ಣವಾಗಿದೆ. ಭವ್ಯತೆ ಸೌಂದರ್ಯದಲ್ಲಿ ಅತ್ಯುನ್ನತ ಮಟ್ಟವನ್ನು ಸೂಚಿಸುತ್ತದೆ. ಸೌಂದರ್ಯಕ್ಷೇತ್ರದಲ್ಲಿ ಇದೊಂದು ಧವಳಗಿರಿ ಶಿಖರ. ಇನ್ನುಳಿದುವು ಎಷ್ಟೇ ಎತ್ತರದಲ್ಲಿದ್ದರೂ ಇದರ ಎತ್ತರಕ್ಕೆ ಸರಿಯಾಗಲಾರವು.

ಯಾವುದು ಪರಿಪೂರ್ಣ ಮಹತಿಯನ್ನು ಪಡೆದಿರುವುದೋ ಅದೇ ಭವ್ಯವಾದುದು. ಸಾಮಾನ್ಯ ಮಹತಿ ಬೇರೆ, ಪರಿಪೂರ್ಣ ಮಹತಿ ಬೇರೆ ಎನ್ನುತ್ತಾನೆ ಕಾಂಟ್. ಪರಿಪೂರ್ಣ ಮಹತಿಯುಳ್ಳುದು ಎಲ್ಲ ವಿಧದ ಹೋಲಿಕೆಗಳಿಗೆ ಹೊರಗಾಗಿರುತ್ತದೆ. ಇಂತಹ ವಸ್ತು ಪರಿಭಾವನೆಗೆ ಒಳಗಾದಾಗ ನಮ್ಮ ಜ್ಞಾನೇಂದ್ರಿಯಗಳ ಎಲ್ಲ ಮಾಪನಗಳು ನಿರುಪಯೋಗಿಯಾಗುತ್ತವೆ. ಭವ್ಯವಸ್ತುವಿನ ಘನತೆ ಇಂದ್ರಿಯಾತೀತ ಸೀಮೆಯದು, ಆದ್ದರಿಂದ ಅದನ್ನು ಇಂದ್ರಿಯಶಕ್ತಿಯಿಂದ ಅಳೆದು, ಅಂತಹದೇ ಇನ್ನೊಂದು ವಸ್ತುವಿ ನೊಂದಿಗೆ ಹೋಲಿಸಿ ನೋಡುವುದು ಸಾಧ್ಯವಿಲ್ಲ.

ಭವ್ಯತೆ ಎರಡು ವಿಧವಾಗಿದೆ. ಒಂದು ಗಾತ್ರಭವ್ಯತೆ. ಇನ್ನೊಂದು ಚೈತನ್ಯ ಭವ್ಯತೆ. ಭವ್ಯತೆಯು ಪ್ರಾದುರ್ಭಾವಕ್ಕೆ ವಸ್ತು ಗಣನೀಯ ಪ್ರಮಾಣದ ಗಾತ್ರಮಹತಿಯನ್ನು ಹೊಂದಿರಬೇಕು. ಚಿಕ್ಕ ಗಾತ್ರದ ವಸ್ತುವಿನಲ್ಲಿ ಗೋಚರಿಸುವುದು ಲಾಲಿತ್ಯ ಮಾತ್ರ. ಆದರೆ ಭವ್ಯತೆಯ ಪ್ರಾದುರ್ಭಾವಕ್ಕೆ ಗಾತ್ರಮಹತಿಯಷ್ಟೇ ಚೈತನ್ಯಮಹತಿ ಕೂಡ ಅತ್ಯವಶ್ಯ. ಅಪ್ರತಿಮ ಸ್ಥೈರ್ಯ, ಧೈರ್ಯ, ಕ್ರಿಯಾಶೀಲತೆಗಳಿಂದ, ಸಾಂಸ್ಕೃತಿಕವಾಗಿ ಪ್ರಭಾವಶಾಲಿಯಾದ ವಿಚಾರಗಳಿಂದ ಒಮ್ಮೊಮ್ಮೆ ಚಿಕ್ಕಗಾತ್ರದ ವಸ್ತುವಿನಲ್ಲಿಯೂ ಅದು ವ್ಯಕ್ತಗೊಳ್ಳಬಹುದು. ಇದನ್ನು ಕಾಂಟ್ ಚೈತನ್ಯಭವ್ಯತೆಯೆಂದು ಕರೆಯುತ್ತಾನೆ.

ಭವ್ಯತೆಯ ಅನುಭವವು ಅತ್ಯಂತ ತೀವ್ರಗತಿಯದು. ಅದು ತೀವ್ರತಮವಾಗಿ ಮನಸ್ಸಿನಮೇಲೆ ಆಕ್ರಮಣಗೈಯುತ್ತದೆ. ಆಗ ಮನಸ್ಸಿನಲ್ಲಿ ಒಂದು ರೀತಿಯ ತೀವ್ರ ಸಂಚಲನದ ಅನುಭವವಾಗುತ್ತದೆ. ಆದರೆ ಸೌಂದರ್ಯಾನುಭವದ ಕಾಲಕ್ಕೆ ಮನಸ್ಸು ಪ್ರಶಾಂತಸ್ಥಿತಿಯಲ್ಲಿರುತ್ತದೆ. ಸೌಂದರ್ಯವು ಮನಸ್ಸನ್ನು ಕ್ರಮೇಣ ಸಾವಕಾಶವಾಗಿ ಸೆರೆಹಿಡಿಯುತ್ತದೆ ಎಂದು ಕಾಂಟ್ ಭವ್ಯತೆ ಹಾಗು ಸೌಂದರ್ಯದ ಅನುಭವಗಳಲ್ಲಿನ ಸೂಕ್ಷ್ಮ ಮಾನಸಿಕ ವ್ಯತ್ಯಾಸವನ್ನು ಗುರುತಿಸಿ ಹೇಳುತ್ತಾನೆ:

"The mind feels itself moved in the represantation of the subhime in nature while in aesthetical judgements about the bentiful it is in restful contemplation. This movement may (espacially in its beginings) be compared to a vibration i. e. to a quickly altering attraction toward and repulsion from the same object."[1]

ಭವ್ಯತೆಯ ಅನುಭವದಲ್ಲಿ ನಾವು ಮೊದಲು ಎದುರುಗೊಳ್ಳುವುದು ನಮ್ಮ ಇಂದ್ರಿಯಶಕ್ತಿಯಮೇಲೆ. ಮನಸ್ಸಿನಮೇಲೆ ಉಂಟಾಗುವ ವಜ್ರಾಘಾತವನ್ನು. ಇದರಿಂದ ನಮ್ಮ ವ್ಯಕ್ತಿತ್ವ ತತ್ತರಿಸುತ್ತದೆ. ಮನಸ್ಸು ತೀವ್ರಸಂಚಲನೆಗೆ ಒಳಗಾಗುತ್ತದೆ. ಆದರೆ ಈ ರೀತಿಯ ನಕಾರಾತ್ಮಕ ಪರಿಣಾಮವನ್ನು ಮನಸ್ಸು ಅನುಭವಿಸುವುದು ಕೆಲವು ಕ್ಷಣಮಾತ್ರ. ಭವ್ಯ ವಸ್ತುವಿನೆಡೆಗೆ ಮನಸ್ಸು ಆಕರ್ಷಿತವಾಗಿ ಮರುಕ್ಷಣದಲ್ಲಿ ಅದರಿಂದ ದೂರಸರಿಯುವ ಈ ಕ್ರಿಯೆ, ಭವ್ಯತೆಯ ಅನುಭವದಲ್ಲಿ ಪ್ರಥಮಘಟ್ಟಕ್ಕೆ ಸೂಚಿಯಾಗುತ್ತದೆ ಆದರೆ ಈ ಅನುಭವ ಇಲ್ಲಿಯೇ ಮುಕ್ತಾಯಗೊಳ್ಳದೆ ಇನ್ನೂ ವ್ಯಾಪಕವಾಗಿ ಮುಂದುವರಿಯುತ್ತದೆ. ವ್ಯಕ್ತಿತ್ವಾಘಾತದಿಂದ ಅನುಭವ ನಷ್ಟವಾಗದೆ ಭವ್ಯವಸ್ತುವಿನ

1. Critique of Judgement, Trans, J. H. Barnard. p. 97.

ಮಹತಿಗೆ ಸರಿಸಮವಾಗಿ ಬೆಳೆದುನಿಲ್ಲುತ್ತದೆ. ಸಾಸಿವೆಯಮೇಲೆ ಸಾಗರ ಹರಿದಂತೆ ಇದರ ಅನುಭವ. ಅಲ್ಪ ಸಾಸಿವೆಯ ಕಾಳು ಸಾಗರದ ಅಸೀಮತೆಯಲ್ಲಿ ಬೆರೆತು ಸಾಗರವೇ ಆಗುವಂತೆ ನಮ್ಮ ಆತ್ಮಚೈತನ್ಯಗಳು ವಸ್ತುವಿನ ಎತ್ತರಕ್ಕೆ ಬೆಳೆದುನಿಲ್ಲುತ್ತವೆ. ಇದು ಭವ್ಯತೆಯ ಅಂಗೀಕಾರಾತ್ಮಕ ಮುಖ. ಪ್ರಾರಂಭದಲ್ಲಿ ವ್ಯಕ್ತಿತ್ವಾಘಾತವೊದಗಿ ಮನಸ್ಸು ಸಂಚಲಿತವಾದರೆ ಕೊನೆಯಲ್ಲಿ ವ್ಯಕ್ತಿತ್ವ ಪ್ರಜ್ವಲಿಸಿ ಮನಸ್ಸು, ಸೌಂದರ್ಯದಲ್ಲಿ ಲಯವನ್ನೈದಿ ಪ್ರಶಾಂತಸ್ಥಿತಿಗೇ ಬರುವುದರಿಂದ ಭವ್ಯತೆಗೆ ಸೌಂದರ್ಯದ ಪರಿಧಿಯಲ್ಲಿಯೇ ಸ್ಥಾನಕಲ್ಪಿಸಿಕೊಟ್ಟುದು ಕಾಂಟ್‌ನ ಸೂಕ್ಷ್ಮವೇದಿಬುದ್ಧಿಗೆ ನಿಕಷವಾಗಿದೆ. ●

ಮೈಸೂರು ಪ್ರದೇಶದ ಪ್ರಕಟಿತ ಶಾಸನಗಳ ಸಮೀಕ್ಷೆ ಮತ್ತು ಅಪ್ರಕಟಿತ ಶಾಸನಗಳ ಸೂಚಿ

ಎಸ್. ಶೆಟ್ಟರ್
ಎಸ್. ರಾಜಶೇಖರ

ಮೈಸೂರು ವಿಭಾಗದ ಶಾಸನಗಳನ್ನು ಸಂಗ್ರಹಿಸಿ, ಪ್ರಕಟಿಸುವ ಬೃಹತ್ ಕಾರ್ಯವು ತುಮಕೂರು ಜಿಲ್ಲೆಯ ಶಾಸನಗಳ ಸಂಪುಟವಾದ ಎಪಿಗ್ರಾಫಿಯಾ ಕರ್ನಾಟಿಕ (ಎ ಕ.) XII ಹೊರಬಿದ್ದಾಗ ಒಂದು ಘಟ್ಟಕ್ಕೆ ಬಂದುಮುಟ್ಟಿತು.[1]

---

1. ಎ. ಕ. XII ನೆಯ ಸಂಪುಟವು ೧೯೦೪ರಲ್ಲಿ ಪ್ರಕಟವಾಯಿತು. ಈ ಮಾಲಿಕೆಯಲ್ಲಿ ಅದು ಕೊನೆಯ ಸಂಪುಟವಾದರೂ, ವಾಸ್ತವವಾಗಿ ಕೊನೆಗೆ ಪ್ರಕಟನೆಯಾದುದಲ್ಲ. ಅಂದರೆ ಎ.ಕ. IX (ಬೆಂಗಳೂರು) ಮತ್ತು ಎ. ಕ. X (ಕೋಲಾರ) ತುಮಕೂರು ಜಿಲ್ಲೆಯ ಶಾಸನಗಳ ಸಂಪುಟ ಪ್ರಕಟವಾದ ಒಂದು ವರ್ಷದ ನಂತರ. ೧೯೦೫ ರಲ್ಲಿ. ಪ್ರಕಟವಾದವು. ಎ.ಕ. ಮಾಲಿಕೆಯ ಪ್ರಕಟನೆಯ ಕ್ರಮ (ಅನುಭಾವಿಗಳಿಗೆ ಅನಾವಶ್ಯಕವೆನಿಸಿದರೂ. ಸಂಶೋಧನೆಯಲ್ಲಿ ಹೆಜ್ಜೆ ಇಡುವವರಿಗೆ ?) ಈ ಕೆಳಗಿನ ವಿವರದಿಂದ ಸ್ಪಷ್ಟವಾಗುವುದು :

ಎ. ಕ. I (ಕೊಡಗಿನ ಶಾಸನಗಳು) : ೧೮೮೬. (೧೯೧೪ ರಲ್ಲಿ ಮರುಪರಿಷ್ಕರಣೆ ಮತ್ತು ಪ್ರಕಟನೆ.

.. II (ಶ್ರವಣ ಬೆಳ್ಗೊಳ ..) : ೧೮೮೯. (ಶ್ರವಣಬೆಳ್ಗೊಳ ಹಾಸನ ಜಿಲ್ಲೆಯ ಒಂದು ಪಟ್ಟಣ. ಅಲ್ಲಿ ಅನೇಕ ಶಾಸನಗಳು ಕಂಡುಬಂದುದರಿಂದ ಒಂದು ಪ್ರತ್ಯೇಕ ಸಂಪುಟವನ್ನು ಪ್ರಕಟಿಸಲಾಯಿತು. ಜಿಲ್ಲಾವಾರು ವಿಂಗಡಣೆಯ ಆಧಾರಕ್ಕೆ ಇದೊಂದು ಸೇರಿಲ್ಲ. ಈ ಸಂಪುಟವನ್ನು ೧೯೨೩ರಲ್ಲಿ ಪರಿಷ್ಕರಿಸಿ ಪ್ರಕಟಿಸಲಾಯಿತು.)

.. III (ಮೈಸೂರು ..) . ೧೮೯೪ } ಇಂದಿನ ಮೈಸೂರು-ಮಂಡ್ಯ ಜಿಲ್ಲೆಗಳು
.. IV (ಮೈಸೂರು ..) : ೧೮೯೮ } ಆಗ ಒಂದೇ ಜಿಲ್ಲೆಯೊಳಗೆ ಸೇರಿದ್ದುವು.

.. V (ಹಾಸನ ,,) : ೧೯೦೨ (ಈ ಸಂಪುಟ ಎರಡು ಭಾಗಗಳಲ್ಲಿದೆ).

.. VI (ಕಡೂರು ..) : ೧೯೦೧ (ಇಂದು ಇದನ್ನು ಚಿಕ್ಕಮಗಳೂರು ಜಿಲ್ಲೆ ಎಂದು ಕರೆಯಲಾಗುವುದು).

.. VII (ಶಿವಮೊಗ್ಗ ,,) : ೧೯೦೨

,, VIII (ಶಿವಮೊಗ್ಗ ,,) : ೧೯೦೪

.. IX (ಬೆಂಗಳೂರು ,,) : ೧೯೦೫

.. X (ಕೋಲಾರ ,,) : ೧೯೦೫

,, XI (ಚಿತ್ರದುರ್ಗ ,,) : ೧೯೦೩

,, XII (ತುಮಕೂರು ,,) : ೧೯೦೪

ಈ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಿದ ಬಿ. ಎಲ್. ರೈಸ್ ೧೯೦೬ ರಲ್ಲಿ ನಿವೃತ್ತಿಹೊಂದಿದಾಗ ಆ ಕಾರ್ಯವನ್ನು ಮುಂದುವರಿಸಿಕೊಂಡು ಬರುವ ಹೊಣೆಯನ್ನು ಶ್ರೀ ಆರ್. ನರಸಿಂಹಾಚಾರ್ಯರ ಹೆಗಲಿಗೇರಿಸಲಾಯಿತು. ಸುಮಾರು ಹದಿನಾರುವರ್ಷ ಸತತವಾಗಿ ಶ್ರಮಿಸಿದ ನರಸಿಂಹಾಚಾರ್ಯರು, ತಮ್ಮ ಅಧಿಕಾರದ ಅವಧಿಯಲ್ಲಿ ಮೈಸೂರು ಪ್ರಾಕ್ತನ ಸಂಸ್ಥೆಯ ವಾರ್ಷಿಕ ವರದಿಗಳನ್ನು ಪ್ರಕಟಿಸುವ ಕಾರ್ಯವನ್ನು ಸುವ್ಯವಸ್ಥಿತ ರೀತಿಯಲ್ಲಿ ಮುಂದುವರಿಸಿಕೊಂಡು ಬಂದರಲ್ಲದೇ. ವಿವರದಲ್ಲಿಯೂ ಗಾತ್ರದಲ್ಲಿಯೂ ಅವುಗಳನ್ನು ಸುಧಾರಿಸಲು ಪ್ರಯತ್ನಪಟ್ಟರು. ಈ ವಾರ್ಷಿಕ ವರದಿಗಳನ್ನು ಪ್ರಕಟಿಸುವ ಯೋಜನೆಯನ್ನು ರೈಸರೇ ರೂಪಿಸಿದ್ದರೂ. ಶಾಸನ ಸಂಪುಟಗಳನ್ನು ಹೊರತರುವ ಕಾರ್ಯದಲ್ಲಿ ಮಗ್ನರಾದ ಅವರು ತಮ್ಮ ಅಧಿಕಾರದ ಅವಧಿಯಲ್ಲಿ ಪ್ರಕಟಿಸಿದ ವರದಿಗಳಲ್ಲಿ ವಿಶೇಷ ವಿವರಗಳನ್ನು ಒದಗಿಸಲಿಲ್ಲ.[2] ೧೯೦೬ರ ವರದಿಯನ್ನು ನರಸಿಂಹಾಚಾರ್ಯರು ಪ್ರಕಟಿಸಿದರೂ, ಅದರ ಬಹುಭಾಗ ರೈಸರು ಇಂಗ್ಲೆಂಡಿನಿಂದ ಕಳುಹಿಸಿದ ಪತ್ರ-ವರದಿಯನ್ನು ಅವಲಂಬಿಸಿದೆ. ಈ ವರ್ಷದ ಮತ್ತು ೧೯೦೭ ರ ವರದಿಗಳಲ್ಲಿ ಹೊಸ ಶಾಸನಗಳನ್ನೇನೂ ನರಸಿಂಹಾಚಾರ್ಯರು ಪ್ರಕಟಿಸಲಿಲ್ಲ. ೧೯೦೮ ರಿಂದ ಕ್ರಮೇಣ ಈ ಕ್ಷೇತ್ರದೆಡೆಗೆ ಅವರು ಹೆಚ್ಚು ಗಮನ ಹರಿಸಿದಂತೆ ಕಂಡು ಬರುವುದು. ೧೯೦೬ ರಿಂದ ೧೯೨೨ರ ವರೆಗೆ ಅವರು ಹೊರತಂದ ಹೊಸ ಶಾಸನಗಳ ವಿವರ ಇಂತಿದೆ :

೧೯೦೬ — ಯಾವ ಶಾಸನಗಳನ್ನೂ ಪ್ರಕಟಿಸಿಲ್ಲ.

೧೯೦೭ — ,,

೧೯೦೮ — ಒಂದು ಶಾಸನದ ಪೂರ್ಣಪಾಠ;
ಎರಡು ಶಾಸನಗಳ ಅಪೂರ್ಣಪಾಠಗಳ ಪ್ರಕಟನೆ [3]

೧೯೦೯ — ಆರು ಶಾಸನಗಳ ಪೂರ್ಣಪಾಠ;
ಎರಡು ಶಾಸನಗಳ ಅಪೂರ್ಣ ಪಾಠಗಳ ಪ್ರಕಟನೆ.[4]

---

2. ಮೈಸೂರು ಪ್ರಾಕ್ತನ ಸಂಸ್ಥೆಯ ವರದಿಗಳನ್ನು ೧೯೦೬ಕ್ಕಿಂತ ಎರಡು-ಮೂರು ವರ್ಷ ಮುಂಚೆ ಆರಂಭ ಮಾಡಲಾಗಿದೆ. ಆದರೆ ಅವುಗಳು ಎರಡು-ನಾಲ್ಕು ಪುಟಗಳಿಗಿಂತ ಹೆಚ್ಚಿಲ್ಲ- ಅಲ್ಲದೆ ಪಂಡಿತರಲ್ಲಿ ಆಸಕ್ತಿ ಕೆರಳಿಸುವ ಯಾವ ಮಾಹಿತಿಯನ್ನೂ ಒಳಗೊಂಡಿಲ್ಲ. ಅಪರೂಪವಾಗಿರುವ ಈ ವರದಿಗಳು ಪ್ರಾಚ್ಯವಸ್ತು ಸಂಗ್ರಾಹಕರಿಗೆ (ಆಂಟಿಕ್ವೇರಿಯನ್) ಹೆಚ್ಚು ಆಸಕ್ತಿದಾಯಕವಾಗಿವೆಯೇ ಹೊರತು ಪಂಡಿತರಿಗಲ್ಲ.

3. ಇಲ್ಲಿ ಕೊಟ್ಟ ಪೂರ್ಣ ಪಾಠದ ಶಾಸನವನ್ನು ಎ. ಕ. VII ಮತ್ತು VIII (ಅನುಬಂಧ) ಸಂಪುಟದಲ್ಲಿ ಸೇರಿಸಲಾಗಿದೆ. ಆದರೆ ಅಪೂರ್ಣ ಪಾಠದ ಎರಡು ಶಾಸನಗಳಿನ್ನೂ ಪೂರ್ಣ ಬೆಳಕು ಕಂಡಿಲ್ಲ.

4. ಇಲ್ಲಿ ಪ್ರಕಟಿಸಿದ ಎರಡು ಅಪೂರ್ಣಪಾಠದ ಶಾಸನಗಳಿನ್ನೂ ಪ್ರಕಟಗೊಂಡಿಲ್ಲ; ಆದರೆ ಉಳಿದವು ಎ. ಕ. II (ಶ್ರವಣಬೆಳ್ಗೊಳ. ೧೯೭೩ ಸಂ.) ರಲ್ಲಿ ಸೇರಿವೆ.

೧೯೧೦ — ಐದು ಶಾಸನಗಳ ಪೂರ್ಣ ಪಾಠ;
ಮೂರು ಶಾಸನಗಳ ಅಪೂರ್ಣ ಪಾಠ;
ಒಂದು ಮರಾಠಿ ರಹದಾರಿಯ ಪ್ರಕಟನೆ.[5]

೧೯೧೧ — ಆರು ಶಾಸನಗಳ ಪೂರ್ಣಪಾಠ ಪ್ರಕಟನೆ.[6]

೧೯೧೨ — ನಾಲ್ಕು ಶಾಸನಗಳ ಪೂರ್ಣ ಪಾಠ;
ನಾಲ್ಕು ಶಾಸನಗಳ ಅಪೂರ್ಣ ಪಾಠಗಳ ಪ್ರಕಟನೆ.[7]

೧೯೧೩ — ನಾಲ್ಕು ಶಾಸನಗಳ ಪೂರ್ಣ ಪಾಠ;
ಒಂದು ಶಾಸನದ ಅಪೂರ್ಣ ಪಾಠ ಪ್ರಕಟನೆ.[8]

೧೯೧೪ — ಮೂರು ಶಾಸನಗಳ ಪೂರ್ಣಪಾಠ; ಮೂರು ಶಾಸನಗಳ ಅಪೂರ್ಣಪಾಠ ಪ್ರಕಟನೆ.[9]

೧೯೧೫ — ಐದು ಶಾಸನಗಳ ಪೂರ್ಣಪಾಠ;
ಮೂರು ಶಾಸನಗಳ ಅಪೂರ್ಣ ಪಾಠ;
ಒಂದು ನಿರೂಪದ ಪ್ರಕಟನೆ.[10]

---

5. ಇಲ್ಲಿ ಪೂರ್ಣ ಪಾಠಕೊಟ್ಟ ಎರಡು ಶಾಸನಗಳನ್ನು, ಅಲ್ಲದೇ ಅರ್ಧ ಪಾಠದ ಎರಡು ಶಾಸನಗಳ ಪೂರ್ಣ ಪಾಠಗಳನ್ನು ಎ. ಕ. XVI (ಅನುಬಂಧ) ಸಂಪುಟದಲ್ಲಿ ಪ್ರಕಟಿಸಲಾಗಿದೆ. ಉಳಿದೆರಡು ಅಪೂರ್ಣ ಪಾಠಗಳ ಶಾಸನಗಳು ಮತ್ತು ಬರ್ಮೀಭಾಷೆಯ ಶಾಸನಗಳಿನ್ನೂ ಪ್ರಕಟವಾಗಬೇಕಾಗಿದೆ. ಅದರಂತೆ ಮರಾಠಿ ಸನದಿನ ಪ್ರಕಟನೆಯನ್ನು ನಾವು ಅರಿತಿಲ್ಲ.

6. ಪೂರ್ಣ ಪಾಠಕೊಟ್ಟಿರುವ ಈ ಶಾಸನಗಳಲ್ಲಿ ಮೂರು ಎ. ಕ. VII ಮತ್ತು VIII (ಅನುಬಂಧ) ಸಂಪುಟದಲ್ಲಿ, ಒಂದು ಎ. ಕ. II (೧೯೨೩ ಸಂ.) ದಲ್ಲಿ, ಇನ್ನೊಂದು ಎ. ಕ. XV (ಅನುಬಂಧ) ಸಂಪುಟದಲ್ಲಿ ಪ್ರಕಟನೆಗೊಂಡಿವೆ. ಇನ್ನೂ ಪ್ರಕಟವಾಗದೇ ಉಳಿದಿರುವುದು ಒಂದು ಮಾತ್ರ.

7. ಇಲ್ಲಿ ಪೂರ್ಣಪಾಠ ಕೊಟ್ಟಿರುವ ನಾಲ್ಕು ಶಾಸನಗಳಲ್ಲಿ ಒಂದು ಎ. ಕ. XVII (ಅನುಬಂಧ) ಸಂಪುಟದಲ್ಲಿ ಮತ್ತು ಮೂರು ಎ. ಕ. XIV (ಅನುಬಂಧ) ಸಂಪುಟದಲ್ಲಿ ಸೇರಿವೆ. ಉಳಿದ ಒಂದು ಶಾಸನ ಇನ್ನೂ ಪ್ರಕಟವಾಗಬೇಕು.

8. ಇಲ್ಲಿ ಕೊಡಲಾದ ಪೂರ್ಣ ಪಾಠಗಳಲ್ಲಿ ಎರಡು ಎ. ಕ. II ಪರಿಷ್ಕೃತ ಸಂಪುಟದಲ್ಲಿ ಪ್ರಕಟವಾದರೆ, ಒಂದು ಅಪೂರ್ಣ ಪಾಠದ ಶಾಸನದ ಪೂರ್ಣ ಪಾಠವು ಎ. ಕ. XV ರಲ್ಲಿ ಪ್ರಕಟಗೊಂಡಿದೆ. ಇಲ್ಲಿ ಕೊಡಲಾದ ಎರಡು ಶಾಸನಗಳನ್ನು ಮುಂದೆ ಪ್ರಕಟಿಸಲಾದ ಸಂಪುಟಗಳಲ್ಲಿ ನಾವು ಕಾಣುವುದಿಲ್ಲ.

9. ಇಲ್ಲಿ ಕೊಡಲಾದ ಪೂರ್ಣಪಾಠದ ಮೂರು ಶಾಸನಗಳನ್ನು ಎ. ಕ. XVII ರಲ್ಲಿ ಸೇರಿಸಲಾಗಿದೆ. ಇಲ್ಲಿ ಅಪೂರ್ಣ ಪಾಠಕೊಡಲಾದ ಶಾಸನಗಳಲ್ಲಿ ಎರಡರ ಪೂರ್ಣ ಪಾಠವನ್ನು ಎ. ಕ. XVII (ಅನುಬಂಧ) ಸಂಪುಟದಲ್ಲಿಯೂ ಮತ್ತೊಂದನ್ನು ಎ. ಕ. XIV (ಅನುಬಂಧ) ಸಂಪುಟದಲ್ಲಿಯೂ ಪ್ರಕಟಿಸಲಾಗಿದೆ.

10. ಇಲ್ಲಿ ಕೊಡಲಾದ ಪೂರ್ಣ ಪಾಠದ ಶಾಸನಗಳು ಯಾವ ಎ. ಕ. ಸಂಪುಟಗಳಲ್ಲಿ ಪ್ರಕಟಗೊಂಡಿಲ್ಲ. ಇಲ್ಲಿ ಕೊಟ್ಟಿರುವ ಅಪೂರ್ಣ ಪಾಠಗಳ ಶಾಸನಗಳಲ್ಲಿ ಎರಡು ಎ. ಕ. XIV

೧೯೧೬ — ಎಂಟು ಶಾಸನಗಳ ಪೂರ್ಣ ಪಾಠ;
ಒಂದು ಶಾಸನದ ಅಪೂರ್ಣ ಪಾಠ ಪ್ರಕಟನೆ.[11]

೧೯೧೭ — ಹತ್ತು ಶಾಸನಗಳ ಪೂರ್ಣ ಪಾಠಗಳ ಪ್ರಕಟನೆ.[12]

೧೯೧೮ — ಆರು ಶಾಸನಗಳ ಪೂರ್ಣ ಪಾಠ;
ಒಂದು ಶಾಸನದ ಅಪೂರ್ಣ ಪಾಠ;
ಒಂದು ಸನದನ್ನು ಪ್ರಕಟಿಸಲಾಗಿದೆ.[13]

೧೯೧೯ — ಮೂರು ಶಾಸನಗಳ ಪೂರ್ಣ ಪಾಠ ಪ್ರಕಟನೆ.[14]

೧೯೨೦ — ಮೂರು ಶಾಸನದ ಪೂರ್ಣ ಪಾಠ;
ಒಂದು ಶಾಸನದ ಅಪೂರ್ಣ ಪಾಠ ಪ್ರಕಟನೆ.[15]

೧೯೨೧ — ಎರಡು ಶಾಸನಗಳ ಪೂರ್ಣ ಪಾಠ ಪ್ರಕಟನೆ.[16]

೧೯೨೨ — ಹೊಸದಾಗಿ ಕಂಡ ಶಾಸನಗಳ ಪೂರ್ಣಪಾಠದ ಪ್ರಕಟನೆ ಇಲ್ಲ.

ಅಂದರೆ, ೧೯೦೬ ರಿಂದ ೧೯೨೨ರ ಅವಧಿಯಲ್ಲಿ ಹೊಸದಾಗಿ ಕಂಡು ಹಿಡಿಯಲಾದ ಮತ್ತು ಆ ಆ ವರ್ಷಗಳ ವರದಿಯಲ್ಲಿ ನೋಂದಾಯಿಸಲಾದ ನೂರಾರು ಶಾಸನಗಳಲ್ಲಿ ಹಲವು ಶಾಸನಗಳ ಪೂರ್ಣ ಅಥವಾ ಅಪೂರ್ಣ ಪಾಠಗಳನ್ನು ಮಾತ್ರ ಪ್ರಕಟಿಸಿದರೆಂಬ ಮಾತು ಸ್ಪಷ್ಟ. ೧೯೨೨ರ ಸುಮಾರಿಗೆ ಸುವ್ಯವಸ್ಥಿತಗೊಂಡ ವಾರ್ಷಿಕ ವರದಿಯ

ರಲ್ಲಿ ಪ್ರಕಟಗೊಂಡಿವೆ. ಮತ್ತೊಂದು ಇನ್ನೂ ಬೆಳಕು ಕಂಡಿಲ್ಲ. 'ನಿರೂಪ'ದ ಪ್ರಕಟನೆಯ ಬಗ್ಗೆ ನಮಗೆ ತಿಳಿದಿಲ್ಲ.

11. ಇಲ್ಲಿ ಪೂರ್ಣ ಪಾಠಕೊಡಲಾದ ಶಾಸನಗಳಲ್ಲಿ ಒಂದು ಎ. ಕ. XVII (ಅನುಬಂಧ)ದಲ್ಲಿ ಪ್ರಕಟವಾದರೆ, ಮತ್ತೊಂದು ಆ. ಸ. ಮೈ. ಆ. ರಿ. ೧೯೩೬ ರ ವರದಿಯಲ್ಲಿ, ನಂ. ೪೦ನೆಯ ಶಾಸನವೆಂದು ಪುನಃ ಪ್ರಕಟನೆಯಾಗಿದೆ. ಉಳಿದ ಶಾಸನಗಳು ಬೆಳಕು ಕಂಡಿಲ್ಲವಾದರೂ, ಇಲ್ಲಿ ಕೊಡಲಾದ ಅಪೂರ್ಣ ಪಾಠದ ಶಾಸನದ ಪೂರ್ಣ ಪಾಠವನ್ನು ಆ. ಸ. ಮೈ. ಆ. ರಿ. ೧೯೩೫ ರಲ್ಲಿ ನಂ. ೩೩ರಲ್ಲಿ ಕಾಣಬಹುದು.

12. ಇವುಗಳಲ್ಲಿ ಎರಡು ಮಾತ್ರ ಇನ್ನೂ ಯಾವ ಸಂಪುಟಗಳಲ್ಲೂ ಪ್ರಕಟವಾಗಿಲ್ಲ. ಉಳಿದ ಎಂಟರಲ್ಲಿ, ಐದು ಎ. ಕ. XVII ರಲ್ಲಿ ಮತ್ತುಳಿದ ಮೂರು ಎ. ಕ. XIV ರಲ್ಲಿ ಪ್ರಕಟವಾಗಿವೆ.

13. ಇಲ್ಲಿ ಕೊಟ್ಟಿರುವ ಪೂರ್ಣ ಪಾಠಗಳ ಶಾಸನಗಳಲ್ಲಿ ಎರಡು ಜೇರೆಡೆ ಇನ್ನೂ ಬೆಳಕು ಕಾಣಬೇಕಾಗಿದೆ; ಉಳಿದ ನಾಲ್ಕು ಎ. ಕ. XVI ರಲ್ಲಿ ಸೇರಿವೆ. ಅಪೂರ್ಣ ಪಾಠವನ್ನಿಲ್ಲಿ ಕೊಡಲಾದ ಶಾಸನದ ಪೂರ್ಣ ಪಾಠವನ್ನು ಎ. ಕ. XVI ರಲ್ಲಿ ಕಾಣಬಹುದು. ಸನದಿನ ಬಗ್ಗೆ ನಮಗೆ ತಿಳಿಯದು.

14. ಇವುಗಳಲ್ಲಿ ಎರಡು ಯಾವ ಅನುಬಂಧ ಸಂಪುಟಗಳಲ್ಲಿ ಸೇರಿಲ್ಲ; ಒಂದು ಮಾತ್ರ ಎ. ಕ. XVI ರಲ್ಲಿ ಪ್ರಕಟಿಸಲಾಗಿದೆ.

15. ಈ ನಾಲ್ಕು ಶಾಸನಗಳು ಇನ್ನೂ ಬೆಳಕು ಕಾಣಬೇಕಾಗಿವೆ.

16. ಈ ಶಾಸನಗಳನ್ನು ಯಾವ ಸಂಪುಟದಲ್ಲಿಯೂ ಸೇರಿಸಿಲ್ಲ.

ಪ್ರಕಟನೆಯನ್ನು, ಮುಂದಿನ ನಿರ್ದೇಶಕರು ನಿರ್ವಹಿಸಿಕೊಂಡು ಬಂದರೂ, ಒಂದು ವರ್ಷದಲ್ಲಿ ಕಂಡುಹಿಡಿದ ಶಾಸನಗಳ ಪೂರ್ಣ ಪಾಠವನ್ನು ಅದೇ ವರ್ಷದ ವರದಿಯಲ್ಲಿ ಪ್ರಕಟಿಸುವ ಸಂಪ್ರದಾಯವನ್ನು ಅವರು ಹಾಕಿಕೊಂಡರು. ಅಂದರೆ ೧೯೨೨ರ ನಂತರ ಕಂಡುಹಿಡಿದ ಶಾಸನಗಳಲ್ಲಿ ಬಹುತೇಕ ಎಲ್ಲವೂ ೧೯೨೨–೫೬ರ ಅವಧಿಯಲ್ಲಿ ಹೊರಬಂದ ೨೫ ವಾರ್ಷಿಕ ವರದಿಗಳಲ್ಲಿವೆ ಎಂದು ನಾವು ಊಹಿಸಬಹುದು.

ನಾವು ಗಮನಿಸಿದಂತೆ ಆ ಶಾಸನಗಳ ವಿವರ ಇಂತಿದೆ :

(೧)	೧೯೨೩ರ ವರದಿ :	೧೩೦	(೧೩)	೧೯೩೫ರ ವರದಿ :	೫೩
(೨)	೧೯೨೪ ,, :	೧೨೪	(೧೪)	೧೯೩೬ ,, :	೬೬
(೩)	೧೯೨೫ ,, :	೧೧೯	(೧೫)	೧೯೩೭ ,, :	೫೨
(೪)	೧೯೨೬ ,, :	೧೨೫	(೧೬)	೧೯೩೮ ,, :	೧೦೦
(೫)	೧೯೨೭ ,, :	೧೭೨	(೧೭)	೧೯೩೯ ,, :	೬೯
(೬)	೧೯೨೮ ,, :	೧೧೩	(೧೮)	೧೯೪೦ ,, :	೪೯
(೭)	೧೯೨೯ ,, :	೧೧೮	(೧೯)	೧೯೪೧ ,, :	೫೨
(೮)	೧೯೩೦ ,, :	೧೦೦	(೨೦)	೧೯೪೨ ,, :	೭೮
(೯)	೧೯೩೧ ,, :	೮೦	(೨೧)	೧೯೪೩ ,, :	೫೪
(೧೦)	೧೯೩೨ ,, :	೫೮	(೨೨)	೧೯೪೪ ,, :	೫೩
(೧೧)	೧೯೩೩ ,, :	೬೭	(೨೩)	೧೯೪೫ ,, :	೨೭
(೧೨)	೧೯೩೪ ,, :	೫೮	(೨೪)	೧೯೪೬ ,, :	೩೯

ಪ್ರತಿವರ್ಷ ಹೊರತರುವ ವಾರ್ಷಿಕ ವರದಿಯ ಕ್ರಮ ಇಲ್ಲಿಗೆ ಮುಕ್ತಾಯವಾಯಿತು. ೧೯೬೪ರಲ್ಲಿ ಡಾ॥ ಶೇಷಾದ್ರಿಯವರು ೧೯೪೭–೫೬ರ ವರದಿಗಳಿಂದ (೧೨೦ ಪುಟ ಮತ್ತು ಚಿತ್ರಗಳ) ಒಂದು ಸಂಪುಟವನ್ನು ಪ್ರಕಟಿಸಿದರು. ಇದರಲ್ಲಿ ೫೦ ಶಾಸನಗಳಿವೆ. ಅಂದರೆ, ೧೯೨೩–೫೬ರ ವರದಿಗಳಲ್ಲಿ ಪ್ರಕಟವಾದ ಒಟ್ಟು ಶಾಸನಗಳು ೨,೦೦೬.

ನರಸಿಂಹಾಚಾರ್ಯರು ಕಂಡುಹಿಡಿದ. ಆದರೆ ಅವರೇ ಪೂರ್ಣ ಪಾಠಗಳನ್ನು ಪ್ರಕಟಿಸಲಾಗದ, ಶಾಸನಗಳನ್ನೊಳಗೊಂಡು ಹೊಸ ಶಾಸನಗಳನ್ನು. ಜಿಲ್ಲೆಯ ಆಧಾರದ ಮೇಲೆ ವರ್ಗೀಕರಿಸಿ, ಅನುಬಂಧ ಸಂಪುಟಗಳನ್ನು ಹೊರತರಲು ಶ್ರಮಿಸಿದವರಲ್ಲಿ ಎಂ. ಎಚ್. ಕೃಷ್ಣ ಮೊದಲಿಗರು. ಅವರು ೧೯೪೨ ಮತ್ತು ೧೯೪೩ ರಲ್ಲಿ ಅನುಕ್ರಮವಾಗಿ ಎ. ಕ. XIV (ಮೈಸೂರು-ಮಂಡ್ಯ ಅನುಬಂಧ ಸಂಪುಟ) ಮತ್ತು ಎ. ಕ. XV (ಹಾಸನ ಜಿಲ್ಲೆಯ ಅನುಬಂಧ ಸಂಪುಟ) ಪ್ರಕಟಿಸಿದರು. ಇವರು ವಾರ್ಷಿಕ ವರದಿಗಳ ಪ್ರಕಟನೆಯನ್ನು ಮತ್ತಷ್ಟು ವ್ಯವಸ್ಥಿತಗೊಳಿಸಿದರಲ್ಲದೇ. ವಿಷಯ ನಿರೂಪಣೆ. ವಿವರಣೆಯಲ್ಲಿ ಹಾಗೂ ಮುದ್ರಣ ಕ್ರಮದಲ್ಲಿ ಅವುಗಳನ್ನು ಸುಧಾರಿಸಲು ಪ್ರಯತ್ನ

ಪಟ್ಟರು. ಕೃಷ್ಣರ ನಂತರ ಇಲಾಖೆಯು ಸ್ವತಂತ್ರ ಹಾಗೂ ಪೂರ್ಣ ಕಾಲದ ನಿರ್ದೇಶಕರ ಹುದ್ದೆಯನ್ನು ತುಂಬದೇ, ಮೈಸೂರು ವಿಶ್ವವಿದ್ಯಾಲಯದ ಇಂಡಾಲಜಿ ಶಾಖೆಯ ಪ್ರಾಧ್ಯಾಪಕರಾದ ಶ್ರೀ ನೀಲಕಂಠ ಶಾಸ್ತ್ರಿಗಳಿಗೆ ಈ ಇಲಾಖೆಯ ಜವಾಬ್ದಾರಿಯನ್ನು ನಿರ್ವಹಿಸಲಾಯಿತು.[17] ಎಕ್ಸ್-ಅಫಿಸಿಯೋ ನಿರ್ದೇಶಕರಾದ ಇವರು ವಾರ್ಷಿಕ ವರದಿ ಪ್ರಕಟಿಸುವ ಕಾರ್ಯವನ್ನು ಕೈಬಿಟ್ಟರೂ. ಇಲಾಖೆಯಲ್ಲಿ ಆಗಲೇ ಸಂಗ್ರಹವಾದ ಹೊಸ ಶಾಸನಗಳ ಪ್ರಕಟನೆಯನ್ನು ಮಾತ್ರ ಕೈ ಬಿಡಲಿಲ್ಲ. ಇವರು ಸಿದ್ಧಪಡಿಸಿದ ಎ.ಕ **XVI** (ತುಮಕೂರು ಜಿಲ್ಲೆಯ ಅನುಬಂಧ ಸಂಪುಟ) ೧೯೫೮ ರಲ್ಲಿ ಪ್ರಕಟವಾಯಿತು. ೧೯೫೮ ರಿಂದ ೧೯೬೫ ರ ವರೆಗೆ ಯಾವ ಸಂಪುಟಗಳೂ ಬೆಳಕು ಕಾಣಲಿಲ್ಲ. ೧೯೬೫ ರಲ್ಲಿ ಎ. ಕ.

---

17. ಮೈಸೂರು ಪ್ರಾಕ್ತನ ಇಲಾಖೆಯ ನಿರ್ದೇಶನ ಕಾರ್ಯವನ್ನು ನಿರ್ವಹಿಸಿದವರ ಬಗ್ಗೆ ನಿಚ್ಚಳ ವಿವರವಿಲ್ಲ. ಕೆಳಗೆ ಕೊಟ್ಟ ವಿವರ ಈ ಸಮಸ್ಯೆಯ ಪರಿಹಾರಕ್ಕೆ ಸ್ವಲ್ಪ ಅನುಕೂಲವಾಗಬಹುದು :

(i) ೧೯೦೬ರಲ್ಲಿ ಬಿ. ಎಲ್. ರೈಸ್ ನಿವೃತ್ತರಾದರು. (೧೮೯೦ ರಲ್ಲಿ ಅವರು ಪೂರ್ಣ ಕಾಲದ ನಿರ್ದೇಶಕರೆಂದು ನೇಮಕಗೊಂಡಿದ್ದರು.)

(ii) ೧೯೦೬ ರಿಂದ ೧೯೨೨ರ ವರೆಗೆ ಶ್ರೀ ಆರ್. ನರಸಿಂಹಾಚಾರ್ಯ.

(iii) ೧೯೨೨ರಿಂದ ೧೯೨೯ರ ವರೆಗೆ ಡಾ|| ಆರ್. ಶ್ಯಾಮಶಾಸ್ತ್ರಿ.

(iv) ೧೯೨೯ (ಡಿಸೆಂಬರ್) ನಲ್ಲಿ ಅಧಿಕಾರಕ್ಕೆ ಬಂದು ೧೯೪೭ರ ಮಾರ್ಚಿಯಲ್ಲಿ ಹಠಾತ್ತನೇ ಮರಣ ಹೊಂದುವವರೆಗೂ ಡಾ|| ಎಂ. ಎಚ್. ಕೃಷ್ಣ ನಿರ್ದೇಶಕರಾಗಿದ್ದರು. ಆದರೆ ೧೯೪೬ರ ಮಾರ್ಚಿಯಿಂದ ೧೯೪೭ರ ಜೂನ್ ವರೆಗಿನ ಅವಧಿಯಲ್ಲಿ ಅವರು ರಜೆಯ ಮೇಲೆ ಹೋದುದರಿಂದ ಶ್ರೀ ಎಲ್. ನರಸಿಂಹಾಚಾರ್ಯರು ಈ ಕಾರ್ಯ ನಿರ್ವಹಿಸಿದರು.

(v) ೧೯೪೭ರ ಡಿಸೆಂಬರ್‌ನಲ್ಲಿ ಹಂಗಾಮಿ ನಿರ್ದೇಶಕರೆಂದು ನೇಮಕಗೊಂಡ ಎಲ್. ನರಸಿಂಹಾಚಾರ್ಯರು ೧೯೫೦ರ ವರೆಗೂ ಮುಂದುವರಿದರು. ೧೯೫೦ರ ನವೆಂಬರ್‌ನಲ್ಲಿ ಅವರು ರಜೆ ಪಡೆದು ಹೋದುದರಿಂದ. ಅವರ ಸ್ಥಳಕ್ಕೆ ಶ್ರೀ ನಾರಾಯಣ ಅಯ್ಯಂಗಾರರು ಬಂದು ೧೯೫೮ರವರೆಗೂ ಕಾರ್ಯ ನಿರ್ವಹಿಸಿದರು.

(vi) ೧೯೫೮ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂಡಾಲಜಿ ಪ್ರೊಫೆಸರ್ ಆಗಿದ್ದ ಶ್ರೀ ಕೆ. ಎ. ನೀಲಕಂಠಶಾಸ್ತ್ರಿಗಳು ಎಕ್ಸ್-ಅಫಿಸಿಯೋ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡು ೧೯೬೬ರವರೆಗೂ ಮುಂದುವರಿದರು.

(vii) ಶ್ರೀ ನೀಲಕಂಠಶಾಸ್ತ್ರಿಗಳೊಡನೆ ಅದೇ ಇಂಡಾಲಜಿ ಶಾಖೆಯ ಡಾ|| ಎಂ. ಶೇಷಾದ್ರಿಯವರು ಗೌರವ-ಉಪನಿರ್ದೇಶಕರೆಂದು ನೇಮಕಗೊಂಡಿದ್ದರು. ಅವರು ೧೯೬೬ರಲ್ಲಿ ಶ್ರೀ ನೀಲಕಂಠ ಶಾಸ್ತ್ರಿಗಳ ಸ್ಥಾನಕ್ಕೆ ಬಂದು ೧೯೭೨ರಲ್ಲಿ ಹೃದಯಾಘಾತದಿಂದ ಆಕಸ್ಮಿಕ ಮರಣ ಹೊಂದುವವರೆಗೂ ಮುಂದುವರಿದರು.

(viii) ಎಕ್ಸ್-ಅಫಿಸಿಯೋ ನಿರ್ದೇಶಕರ ನೇಮಕವನ್ನು ಬಿಟ್ಟುಕೊಟ್ಟು ಪೂರ್ಣ ಅವಧಿಯ ನೇಮಕವನ್ನು ಪುನಃ ಕಾರ್ಯರೂಪಕ್ಕೆ ತಂದು. ಕನ್ನಡ ಸಂಶೋಧನ ಸಂಸ್ಥೆ. ಧಾರವಾಡದಲ್ಲಿ ಕ್ಯೂರೇಟರ್ ಎಂದಿದ್ದ ಡಾ|| ಎಂ. ಎಸ್. ನಾಗರಾಜರಾವ್ ಅವರನ್ನು ೧೯೭೩ರಲ್ಲಿ ನೇಮಿಸಲಾಯಿತು.

XVII (ಕೋಲಾರ ಜಿಲ್ಲೆಯ ಅನುಬಂಧ ಸಂಪುಟವನ್ನು) ಡಾ. ಎಂ. ಶೇಷಾದ್ರಿ ಪ್ರಕಟಿಸಿದರು. ಐದು ವರ್ಷಗಳ ನಂತರ, ಶಿವಮೊಗ್ಗ ಜಿಲ್ಲೆಯ ಅನುಬಂಧ ಸಂಪುಟವನ್ನು "ಎ. ಕ. VII ಮತ್ತು VIII: ಇನ್‌ಸ್ಕ್ರಿಪ್ಷನ್ಸ್ ಇನ್ ಷಿಮೊಗ ಡಿಸ್ಟ್ರಿಕ್ಟ್" ಎಂಬ ಹೆಸರಿನಲ್ಲಿ (ಮೂಲ ಯೋಜನೆಯಂತೆ, 'ಎ. ಕ. XVIII' ಎಂಬ ಹೆಸರಿನಿಂದಲ್ಲ !) ಅವರೇ ಹೊರತಂದರು. ಕೊನೆಯ ಈ ಎರಡು ಸಂಪುಟಗಳು ಅನೇಕ ಬಗೆಯಲ್ಲಿ ನಿರಾಶಾದಾಯಕವೂ, ಅಪೂರ್ಣವೂ, ಅಸಮರ್ಪಕವೂ ಆಗಿವೆಯೆಂದು ಅನಿವಾರ್ಯವಾಗಿ ಹೇಳಬೇಕಾಗಿದೆ.[18]

---

18. ಬಹು ಎಚ್ಚರಿಕೆ ವಹಿಸಿ. ದಕ್ಷತೆಯಿಂದ. ಪ್ರಕಟಿಸಿದ ಮೊದಮೊದಲ ಅನುಬಂಧ ಸಂಪುಟಗಳೊಡನೆ ಡಾ. ಶೇಷಾದ್ರಿಯವರ ಕಾಲದಲ್ಲಿ ಪ್ರಕಟಿಸಲಾದ ಎರಡು ಅನುಬಂಧ ಸಂಪುಟಗಳನ್ನು ಹೋಲಿಸಿ ನೋಡಿದಾಗ ಈ ಮಾತು ಮನವರಿಕೆ ಆಗಬಹುದು. ಕೋಲಾರ ಜಿಲ್ಲೆಯ ಅನುಬಂಧ ಸಂಪುಟದಲ್ಲಿ ಕಂಡ ಹಲವು ದೋಷಗಳ ಬಗ್ಗೆ ನಾವು ಇಲ್ಲಿ ಮೊದಲು ಲಕ್ಷ್ಯಕೊಡಬಹುದು:

(i) ತಾಲ್ಲೂಕಿನ ಹೆಸರಿಗೆ ಸಂಬಂಧಿಸಿದ ಸಂಕೇತಾಕ್ಷರದಲ್ಲಿಯೇ ಅನೇಕ ದೋಷಗಳಿವೆ.

(ಅ) ಬಾಗೇಪಲ್ಲಿಗೆ ಅವರು BP ಎಂದು ಕೊಟ್ಟಿರುವುದು Bg. ಆಗಿರಬೇಕಿತ್ತು;

(ಆ) ಬೌರಿಂಗ್ ಪೇಟೆಗೆ ಅವರು BG. ಎಂದಿರುವುದು Bp. ಆಗಬೇಕು;

(ಇ) ಚಿಂತಾಮಣಿಯನ್ನು CM. ಎಂದು ಸಂಕ್ಷೇಪಿಸಿರುವುದು ತಪ್ಪು. (Cm. ಎಂಬ ಸಂಕೇತಾಕ್ಷರಗಳನ್ನು ಎ. ಕ. ಆರನೆಯ ಸಂಪುಟದ ಚಿಕ್ಕಮಗಳೂರಿಗೆ ಮೂಲದಲ್ಲಿ ಉಪಯೋಗಿಸಲಾಗಿದೆ.) ಅದು Ct. ಆಗಿರಬೇಕಿತ್ತು.

(ಈ) ಇದರಂತೆ KL., MB., MR.,SD., SP., ಅನುಕ್ರಮವಾಗಿ Kl.,Mb.' Mr., Sd.. ಮತ್ತು Sp.. ಆಗಿರಬೇಕು. (ಈ ಸೂಚನೆಯಂತೆ ಸಂಪುಟದ ಕೊನೆಯಲ್ಲಿ, ಪುಟಗಳು ೧೦೩ ಮತ್ತು ಆ ಮುಂದಿನ ಪುಟಗಳಲ್ಲಿ. ಕೊಡಲಾದ 'Dynastic List' ನಲ್ಲಿರುವ ತಪ್ಪುಗಳನ್ನು ತಿದ್ದಿಕೊಳ್ಳಬೇಕು.)

(ii) 'Dynastic List' ನಲ್ಲಿರುವ ಈ ಕೆಳಕಂಡ ತಪ್ಪುಗಳನ್ನು ತಿದ್ದಿಕೊಂಡು ಓದಬೇಕು :

ಪು. ೧೦೩ ರಲ್ಲಿರುವ Mr. ೨೬೮ ಮತ್ತು ೨೬೯ ವಾಸ್ತವವಾಗಿ Kl. ೨೬೮ ಮತ್ತು ೨೬೯ ಆಗಬೇಕು.

ಪು. ೧೦೭ ರಲ್ಲಿರುವ Kl. ೪೪-R. Kl. ೨೬೬, ೨೬೨, ೨೬೧ ಮೊದಲು ವರದಿಯಾಗಿರುವುದು ೧೯೧೦, ಪು. ೨೯ ರಲ್ಲಿ.

ಪು. ೧೦೯ರಲ್ಲಿರುವ Kl. ೩೯೯ರ ಮೊದಲ ವರದಿ ೧೯೧೦, ಪು. ೩೫ರಲ್ಲಿ ಆಗಿದೆ; ೧೯೧೪, ಪು. ೪೪ರಲ್ಲಿ ಈ ಬಗ್ಗೆ ಮಾತ್ರ ಗಮನ ಸೆಳೆಯಲಾಗಿದೆ.

ಪು. ೧೨೪ರಲ್ಲಿ Mb. ೩೨೫ ಮತ್ತು Mb. ೩೨೬ ಹೊಸದಾಗಿ ಕಂಡ ಶಾಸನಗಳೆಂಬಂತಿವೆ; ವಾಸ್ತವವಾಗಿ ಇವುಗಳ ಮೊದಲ ವರದಿ ೧೯೧೧ರ ವರದಿಯ ಪು. ೨೩ರಲ್ಲಿ ಕಾಣಬಹುದು.

ಪು. ೧೧೬ರಲ್ಲಿರುವ Kl. ೧೪೬ ಹೊಸ ಶಾಸನವಲ್ಲ: ಪರಿಷ್ಕೃತವಾದ ಶಾಸನ. (ಮೂಲವನ್ನು ಎ. ಕ. Xರಲ್ಲಿ ಕಾಣಬಹುದು).

ಎಪಿಗ್ರಾಫಿಯ ಕರ್ನಾಟಿಕದ ಮೊದಲ ಹನ್ನೆರಡು ಸಂಪುಟಗಳಲ್ಲಿ ಸುಮಾರು

(iii) ಪು. ೨ (Alphabetical list of Towns etc.) ರಲ್ಲಿ ಸೂಡಿಯಲ್ಲಿ ಕಂಡ ಶಾಸನಗಳ ಸಂಖ್ಯೆ ತಪ್ಪಾಗಿ ವರದಿಯಾಗಿವೆ. ಅವು ೧೦೪–೧೦೬ (೨೦೪–೨೨೬ ಅಲ್ಲ) ಎಂದಿರಬೇಕು ಮು. ಮು.

ಶಿವಮೊಗ್ಗ ಜಿಲ್ಲೆಯ ಅನುಬಂಧ ಸಂಪುಟವು ಮೊದಲ ಯೋಜನೆಯಂತೆ ಎ. ಕ. XVIII ಎಂದು ಪ್ರಕಟವಾಗಿರಬೇಕಿತ್ತು. ಆದರೆ ನಮಗರಿಯದ ಕಾರಣಗಳಿಂದಾಗಿ ಈ ಸಂಪುಟದ ಹೆಸರನ್ನು "ಎ. ಕ. ಸಂ. VII ಮತ್ತು VIII : ಷಿಮೊಗ ಡಿಸ್ಟ್ರಿಕ್ಟಿನ ಅನುಬಂಧ ಶಾಸನಗಳೆ"ಂದು ಇಡಲಾಗಿದೆ. ಮೂಲ ಎ. ಕ. VII ಮತ್ತು VIII ಗಳೊಡನೆ ಈ ಸಂಪುಟದ ಶಾಸನವನ್ನು ಉಲ್ಲೇಖಿಸಿದಾಗ ಅನೇಕ ಬಗೆಯ ತೊಡರುಗಳುದ್ಭವಿಸುವವು. ಇರಲಿ. ಇನ್ನುಳಿದ ಹಲವು ವಿಷಯಗಳನ್ನಿಲ್ಲಿ ಗಮನಿಸಬಹುದು :

(i) ಪು. Vರ ಮುನ್ನುಡಿಯ ಅರ್ಥ ಸಮಗಾಗದು. ಶೇಷಾದ್ರಿಯವರು ನುಡಿದಂತೆ ಈ ಸಂಪುಟದಲ್ಲಿ ಕೊಡಲಾದ ಶಾಸನಗಳನ್ನು ರೈಸ್ ಸಂಗ್ರಹಿಸಿ ಎ. ಕ. VII ಮತ್ತು VIIIರಲ್ಲಿ ಪ್ರಕಟಿಸಿದರೆಂದೂ, ಅದನ್ನೇ ಪರಿಷ್ಕರಿಸಿ ಅಲ್ಲದೆ ಅವುಗಳೊಡನೆ ಕೆಲವು ಮಾತ್ರ ಹೊಸ ಶಾಸನಗಳನ್ನು ಈ ಸಂಪುಟದಲ್ಲಿ ಸೇರಿಸಲಾಗಿದೆ ಎಂದು ಹೇಳಲಾಗಿದೆ. ಆದರೆ ವಸ್ತುತಃ ಅವರು ಹೇಳಬಯಸಿದುದು ಬೇರೆಯಾಗಿತ್ತೆಂದು ಕಾಣುವುದು. ಪುಟಗಳು ೭–೧೧ರಲ್ಲಿ ಕೊಡಲಾದ 'Dynastic List' ನಿಂದ ಈ ಶಾಸನಗಳಲ್ಲಿ ಮುಕ್ಕಾಲು ಭಾಗ ೧೯೧೧ರಲ್ಲಿ ನರಸಿಂಹಾಚಾರ್ಯರು ನೊಂದಾಯಿಸಿದರೆಂಬ ಸತ್ಯ ಹೊರಬೀಳುವುದು.

(ii) ಶಿವಮೊಗ್ಗೆಗೆ ಸಂಬಂಧಿಸಿದ ಈ ಸಂಪುಟದಲ್ಲಿ ಸಾಂತಾರರ ಅತಿ ಪುರಾತನ ಶಾಸನವೆನಿಸಿದ (ಸು. ಕ್ರಿ. ಶ. ೭೦೦) ಮಾಚೇನಹಳ್ಳಿ ತಾಮ್ರಶಾಸನ (ಆ. ಸ. ಮೈ. ಆ. ರಿ. ೧೯೧೮, ಪ್ಯಾರಾ ೩೦–೩೨ರಲ್ಲಿ ಪ್ರಕಟವಾದ) ವನ್ನು ಇಲ್ಲಿ ಪ್ರಕಟಿಸುವುದು ಯೋಗ್ಯವಾಗಿತ್ತು. ಅದನ್ನು ಕೈಬಿಡಲು ಕಾರಣವೇನಿತ್ತೋ ನಮಗೆ ತಿಳಿಯದು. ಇದರಂತೆ ೧೯೧೧ರ ವರದಿಯಲ್ಲಿ (ಪ್ಯಾರಾ ೩೫) ಪ್ರಕಟವಾಗಿರುವ ಅತ್ಯಂತ ಕುತೂಹಲಕಾರಿ ಸೌಲಂಗದ ಮಾಸ್ತಿಕಲ್ಲನ್ನೂ ಈ ಸಂಪುಟದಲ್ಲಿ ಸೇರಿಸಿಲ್ಲ.

(iii) 'Abbreviations' ಅಡಿಯಲ್ಲಿ ಹೊಸದಾಗಿ ಕೊಟ್ಟಿರುವ Kmi. ಸಂಕೇತಾಕ್ಷರಗಳು ಕುಮ್ಸಿ ತಾಲೂಕಿಗೆಂದು ಹೇಳಲಾಗಿದೆ. ಆದರೆ ಇದು ಅನಾವಶ್ಯಕವಾಗಿತ್ತು. ಮೂಲ ಸಂಪುಟದಲ್ಲಿ ಈ ತಾಲೂಕಿನ ಉಲ್ಲೇಖ ಇಲ್ಲ; ಈಗಲೂ ಅದೊಂದು ತಾಲೂಕಲ್ಲ, ಉಪ-ತಾಲೂಕು. ಮೊದಲಿನಂತೆ ಈ ಒಂದು ಶಾಸನವನ್ನು ಶಿವಮೊಗ್ಗ ತಾಲೂಕಿನಲ್ಲಿ ಸೇರಿಸಿದ್ದರೆ ತೊಡರುಗಳನ್ನು ಕಡಿಮೆ ಮಾಡಬಹುದಿತ್ತು.

(iv) 'Alphabetic List etc' ದಲ್ಲಿ (ಪು. ೪) Sb.೫೭೯ ಇಲ್ಲ; ಅದನ್ನು ಸೇರಿಸಿಕೊಂಡು ಓದಬೇಕು.

(v) 'Dynastic List etc' (ಪುಟಗಳು ೭–೧೦) ಅಡಿಯಲ್ಲಿ ಹಲವು ವಿವರಗಳು ತಪ್ಪಿ ಹೋಗಿವೆ :

(ಅ) ಮೂರನೆಯ ಕಾಲಂನಲ್ಲಿ ಕೊಡಲಾದ ಪುಟಸಂಖ್ಯೆ ಮೂಲಪಾಠದ್ದಲ್ಲ, ಇಂಗ್ಲೀಷಿನ ಟ್ರಾನ್ಸ್‌ಲಿಟರೇಷನ್ ಭಾಗದ್ದು. ಇಲ್ಲಿ ಮೂಲಪಾಠ (ಕನ್ನಡದ) ಪ್ರಕಟವಾದ ಪುಟಸಂಖ್ಯೆಯ ವಿಭಾಗ ಇಲ್ಲ.

೯,೦೦೦ ಶಾಸನಗಳನ್ನು ರೈಸ್ ಪ್ರಕಟಿಸಿದರೆಂದು ಅಂದಾಜು ಮಾಡಲಾಗಿದೆ.[19] ೧೯೦೬–೧೯೨೨ರ ಕಾಲಾವಧಿಯಲ್ಲಿ ನರಸಿಂಹಾಚಾರ್ಯರು ಐದು ಸಾವಿರ ಹೊಸ

(ಅ) Sk. ೩೨೬ಕ್ಕೆ ವರದಿಯ ಉಲ್ಲೇಖ ಇಲ್ಲ. ಇದರಿಂದ ಇದೊಂದು ಹೊಸ ಶಾಸನವೆಂಬ ಭಾವನೆ ಬರುವುದು. ವಾಸ್ತವವಾಗಿ ೧೯೧೧ರ ವರದಿಯ ಪು. ೩೫ರಲ್ಲಿ ಇದನ್ನು ನೊಂದಾಯಿಸಲಾಗಿದೆ. ಇದರಂತೆ ಪು. ೮ರಲ್ಲಿಯ Sb. ೫೮೨ (೧೯೧೧, ಪು.೪೬). Sb. ೫೮೭ (ಅದೇ. ಪು. ೪೬), Sb. ೫೮೬ (ಅದೇ, ಪು. ೪೭). Kmi.೧ (ಶಿವಮೊಗ್ಗ Sh ಎಂದಿರಬೇಕಿತ್ತು–ಅದೇ, ಪು. ೫೯)ರ ವರದಿಗಳಲ್ಲಿಯ ಉಲ್ಲೇಖ ಬಿಟ್ಟಿದೆ. ಪುಟ ೯ರಲ್ಲಿಯ Sk. ೩೫೦ (೧೯೧೧. ಪು. ೪೧). Sk ೩೪೯ (ಅದೇ. ಪು. ೫೬), Sk. ೩೬೮ (ಅದೇ, ಪು. ೩೮) ಮತ್ತು ಪುಟ ೧೦ರಲ್ಲಿಯ Sb. ೫೮೯ (ಅದೇ. ಪು. ೪೭)ರ ಮೂಲ ಉಲ್ಲೇಖವನ್ನೂ ತಿಳಿಸಿಲ್ಲ. (ಕಂಸದಲ್ಲಿ ಹೇಳಲಾದ ವಿವರದಿಂದ ಇವನ್ನು ಸರಿಪಡಿಸಿಕೊಳ್ಳಿ).

(ಇ) ಪು. ೪ರಲ್ಲಿ ಕೊಟ್ಟ ಹೊನ್ನಾಳಿ ತಾಲೂಕಿನ ಹೊಸ ಶಾಸನಕ್ಕೆ ನಂ. ೧೨೪ ಏಕೆ ಕೊಡಲಾಗಿದೆ ಎಂಬುದು ತಿಳಿಯದು. ಎ. ಕ. VIIರಲ್ಲಿ ಈ ತಾಲೂಕಿನ ೧೧೯ ಶಾಸನಗಳು ಮಾತ್ರ ಪ್ರಕಟವಾಗಿರುವುದರಿಂದ ಮುಂದಿನ ಸಂಖ್ಯೆಯಾದ '೧೨೦' ಇದ್ದರೆ ಸರಿಯಾಗಿತ್ತೇನೋ (?)

(ಈ) ಪು. ೨೬ರಲ್ಲಿಯ Sk. ೩೬೮ ಶಾಸನದ ಮೂರನೆಯ ಸಾಲಿನಲ್ಲಿ 'ನೂಜಿಪ್ರ್ವತ್ತ' 'ನೂಜಿಪ್ರ್ವತ್ತ' ಎಂಬಲ್ಲಿ ಅನುಮಾನ ಇದೆ. ಇದರಿಂದ ನರಸಿಂಹಾಚಾರ್ಯರು ಕೊಟ್ಟ (೧೯೧೧. ಪು. ೩೮) ಇಷ್ಟಿಗೂ ಇಲ್ಲಿಯ ಇಷ್ಟಿಗೂ ವ್ಯತ್ಯಾಸ ಇರುವುದು.

(ಉ) ಪು. ೩೩ರಲ್ಲಿ Sh. ೫೮೪ "ಅದೇ ಗ್ರಾಮ" ಎಂದಿರುವುದು ತಪ್ಪು. ಕಾರಣ. ಈ ಶಾಸನ ಕೊಡಕಣಿ ಗ್ರಾಮದ್ದಲ್ಲ, ಆನವಟ್ಟಿ ಹೋಬಳಿಯ ಹಂಜಿ ಗ್ರಾಮದ್ದು.

(ಊ) ಪು. ೩೪ರಲ್ಲಿ Sh. ೫೮೫ ಎಂದು ಕೊಟ್ಟಿರುವ ಶಾಸನ ಅಸಮರ್ಪಕವಾಗಿದೆ. ಆ. ಸ. ಮೈ. ಆ. ರಿ. ೧೯೨೮. ನಂ. ೯೭. ಪು. ೮೯ರಲ್ಲಿ ಇದೇ ಶಾಸನದ ಉತ್ತಮ ಪಾಠ ದೊರೆಯುವುದು.

(ಋ) Dynastic List etc , ಪು. ೧೦ರಲ್ಲಿ ಎರಡನೆಯ ಕಾಲಂನಲ್ಲಿರುವ Sb. ೩೭೨ ತಪ್ಪು–ಅದು Sb. ೫೭೨ ಆಗಬೇಕು: Hn. ೧೪ ತಪ್ಪು–ಅದು Hn. ೧೨೪ ಆಗಬೇಕು.

19. ನಾವು ಕಂಡಂತೆ ರೈಸ್ ಪ್ರಕಟಿಸಿದ ಶಾಸನಗಳ ವಿವರ ಇಂತಿದೆ :

ಎ. ಕ. I (ಮೊದಲನೆಯ ಆವೃತ್ತಿ) : ಒಟ್ಟು ಶಾಸನ : ೨೩ (೭೫. ಎರಡನೆಯ ಮುದ್ರಣ. ೧೯೧೪ ರಲ್ಲಿ. ಅದರ ಹೊಸದಾಗಿ ಸೇರಿಸಲಾದ ಶಾಸನಗಳು ನಾಲ್ಕು ಮಾತ್ರ. ಉಳಿದ ೪೮ ಶಾಸನಗಳನ್ನು ಎ. ಕ. IX ಮತ್ತು ಎ. ಕ. XII ರಲ್ಲಿ ಅನುಬಂಧವಾಗಿ ಕೊಟ್ಟಿರುವುದರಿಂದ. ಮೊದಲ ಪಟ್ಟಿಯಲ್ಲಿ ಅವುಗಳ ಎಣಿಕೆ ಆಗಿದೆ.)

ಶಾಸನಗಳನ್ನು ಕಂಡುಹಿಡಿದರೆಂದು ಡಾ. ಕೃಷ್ಣ ಅಂದಾಜು ಮಾಡಿರುವರು.[20] ಆದರೆ ವಿವರಿಸಲಾದ ಪೂರ್ಣ–ಅಪೂರ್ಣ ಪಾಠಗಳ ಸುಮಾರು ೮೫ ಶಾಸನಗಳನ್ನುಳಿದು ಇತರ ಎಲ್ಲ ಶಾಸನಗಳನ್ನು ಆ ವರ್ಷದ ವರದಿಗಳಲ್ಲಿ ಅವರು ಪ್ರಕಟಿಸಲಿಲ್ಲ ಎಂಬ ವಿಷಯ ಸ್ಪಷ್ಟವಾಗಿದೆ.

ನರಸಿಂಹಾಚಾರ್ಯರು ನೊಂದಾಯಿಸಿದ ಶಾಸನಗಳ ಆಧಾರದ ಮೇಲೆ ಮುಂದೆ ಅನುಬಂಧ ಸಂಪುಟಗಳನ್ನು ಪ್ರಕಟಿಸಲಾಯಿತೆಂದು ಮೇಲೆ ನೋಡಿದ್ದೇವೆ ಈ ಸಂಪುಟಗಳಲ್ಲಿರುವ ಹೊಸ ಶಾಸನಗಳ ವಿವರ ಇಂತಿದೆ:[21]

ಎ. ಕ. XIV (ಮೈಸೂರು–ಮಂಡ್ಯ)	: ೮೪೩
ಎ. ಕ. XV (ಹಾಸನ)	: ೩೭೯
ಎ. ಕ. XVI (ತುಮಕೂರು)	: ೨೪೭
ಎ. ಕ. XVII (ಕೋಲಾರ)	: ೪೧೫
ಎ. ಕ. VII ಮತ್ತು VIII (ಶಿವಮೊಗ್ಗ)	: ೭೫
ಒಟ್ಟು ಶಾಸನಗಳ ಸಂಖ್ಯೆ	: ೧೯೫೯

ಎ. ಕ. II	,,	:	,,	: ೧೪೪
ಎ. ಕ. III	,,	:	,,	: ೮೦೩
ಎ. ಕ. IV	,,	:	,,	: ೯೬೨
ಎ. ಕ. V	,,	:	,,	: ೯೪೨
ಎ. ಕ. VI	,,	:	,,	: ೬೨೧
ಎ. ಕ. VII	,,	:	,,	: ೬೫೮
ಎ. ಕ. VIII	,,	:	,,	: ೧೦೩೮
ಎ. ಕ. IX	,,	:	,,	: ೧೦೬೯
ಎ. ಕ. X	,,	:	,,	: ೧೩೪೭
ಎ. ಕ. XI	,,	:	,,	: ೬೪೨
ಎ. ಕ. XII	,,	:	,,	: ೬೮೮
ರೈಸ್ ಪ್ರಕಟಿಸಿದ ಶಾಸನಗಳ ಒಟ್ಟು ಸಂಖ್ಯೆ				: ೮೯೩೭

20. ಎ. ಕ. XIV (ಮೈಸೂರು–ಮಂಡ್ಯ ಅನುಬಂಧ) ಸಂಪುಟದ ಮುನ್ನುಡಿ ನೋಡಿ.

21. ಎ. ಕ. I–XII ರಲ್ಲಿ ರೈಸ್ ಪ್ರಕಟಿಸಿದ ಅನೇಕ ಶಾಸನಗಳನ್ನು ಇಲ್ಲಿ ಪರಿಷ್ಕರಿಸಿ ಪ್ರಕಟಿಸ

ಅಂದರೆ ಇಲ್ಲಿಯ ವರೆಗೆ ಅನುಬಂಧ ಸಂಪುಟಗಳಲ್ಲಿ ಪ್ರಕಟವಾದ ಹೊಸ ಶಾಸನಗಳ ಸಂಖ್ಯೆ ೨,೦೦೦ ಕ್ಕಿಂತ ಹೆಚ್ಚಿಲ್ಲವೆಂಬ ವಿಷಯ ತಿಳಿದಂತಾಯಿತು.

ಈ ಎಲ್ಲ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು, ಇಲ್ಲಿಯ ವರೆಗೆ ಪ್ರಕಟಿಸಲಾಗದ ಶಾಸನಗಳ ವಿವರ ತೆಗೆಯಲು ನಾವು ಇಲ್ಲಿ ಪ್ರಯತ್ನಿಸಿರುವೆವು. ಇದರಿಂದ ಮುಂದಿನ ಸಂಶೋಧನೆಗೂ, ಅನುಬಂಧ ಸಂಪುಟಗಳಲ್ಲಿ–ವರದಿಗಳಲ್ಲಿ ಪ್ರಕಟವಾದ ಶಾಸನಗಳ ಪೂರ್ಣ ಕಲ್ಪನೆ ಪಡೆದುಕೊಳ್ಳಲು ಅನುಕೂಲವಾಗಬಹುದೆಂದು ಭಾವಿಸಲಾಗಿದೆ. ಎಷ್ಟೇ ಮುನ್ನೆಚ್ಚರಿಕೆ ವಹಿಸಿ ಪ್ರಕಟಿತ ಶಾಸನಗಳೊಡನೆ ಅಪ್ರಕಟಿತ ಶಾಸನಗಳನ್ನು ಹೋಲಿಸಿ ನೋಡಿದ್ದರೂ, ಸುಮಾರು ನೂರು ಬೇರೆಬೇರೆ ಸಂಪುಟಗಳಲ್ಲಿ ಈ ವಿವರ ಹರಡಿರುವುದರಿಂದ, ಅಲ್ಲದೇ ವೈಯಕ್ತಿಕವಾಗಿ ಅನೇಕ ಎಡೆ ಈ ಶಾಸನಗಳು ಪ್ರಕಟಗೊಂಡಿರಬಹುದಾದ ಸಂಭವ ಇರುವುದರಿಂದ, ನಮ್ಮ ಸೂಚಿಯಲ್ಲೂ ಹಲವಾರು ತಪ್ಪುಗಳಾಗಿರುವ ಸಾಧ್ಯತೆ ಇಲ್ಲದಿಲ್ಲ. ಶಾಸನಾಸಕ್ತರು ಇಂತಹ ದೋಷಗಳನ್ನು ಪಂಡಿತರ ಗಮನಕ್ಕೆ ತಂದು, ಈ ಸೂಚಿಯನ್ನು ತಿದ್ದುವರೆಂದು ಭಾವಿಸುವೆವು.[22]

* * *

ಮೈಸೂರು ಪ್ರದೇಶದ ಶಾಸನಗಳ ಪ್ರಕಟನೆಯ ಒಂದು ಸಮಗ್ರ ಚಿತ್ರ ಪಡೆಯಲು ಅನುಕೂಲವಾಗಬಹುದೆಂಬ ಉದ್ದೇಶದಿಂದ, ನಮ್ಮ ಸಮೀಕ್ಷೆಯನ್ನು ಸಂಗ್ರಹ ರೂಪದಲ್ಲಿ ಮೊದಲು ಕೊಡಲಾಗಿದೆ.*

ಲಾಗಿದೆ. ಇವುಗಳನ್ನು ಇಲ್ಲಿ ಗಮನಿಸಲಾಗಿಲ್ಲ. ಮೈಸೂರು ಪ್ರಾಕ್ತನ ಶಾಖೆಯು ಒಟ್ಟು ಎಷ್ಟು ಶಾಸನಗಳನ್ನು ಇಲ್ಲಿಯ ವರೆಗೆ ಪ್ರಕಟಿಸಿದೆ ಎಂಬ ಅಂದಾಜು ಕಟ್ಟುವಾಗ ಈ ಸಂಖ್ಯೆ (೧೯೫೫) ಗಳಲ್ಲಿ ೧೯೦೬–೨೨ ರ ವರದಿಗಳಲ್ಲಿ ಪ್ರಕಟವಾಗಿದ್ದ ಶಾಸನಗಳ ಸಂಖ್ಯೆಯನ್ನು ವಜಾಮಾಡುವ ಎಚ್ಚರಿಕೆ ವಹಿಸಬೇಕು.

22. ಈ ಸಮೀಕ್ಷೆ ಮತ್ತು ಸೂಚಿಯನ್ನು ಡಾ. ಶೆಟ್ಟರ್ ಹಮ್ಮಿಕೊಂಡು ಎರಡು ವರ್ಷಗಳಾದರೂ. ಇವನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾದುದು. ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತು. ಹೊಸದಿಲ್ಲಿ. ಇತ್ತೀಚೆಗೆ ಮೈಸೂರು ಪ್ರಾಕ್ತನ ಶಾಖೆಯ ವಾರ್ಷಿಕ ವರದಿಗಳನ್ನು ಪರಿಷ್ಕರಿಸಲು ಧನಸಹಾಯವಿತ್ತುದರಿಂದ. ಎಸ್. ರಾಜಶೇಖರ್. ಲೆಕ್ಚರರ್. ಇತಿಹಾಸ ಮತ್ತು ಪ್ರಾಕ್ತನ ಶಾಖೆ. ಅವರೊಡನೆ ಸಹಸಂಪಾದನ ಕಾರ್ಯ ಕೈಕೊಂಡುದರಿಂದ. ಸಂಶೋಧನ ವಿದ್ಯಾರ್ಥಿಗಳಾದ ಶ್ರೀಯುತರಾದ ಜಿ. ಕೆ. ವೆಟಿಕಲ್. ಎಚ್. ಬಿ. ಸುಂಕದ ಮತ್ತು ಕುಮಾರಿ ಫರಿದಾ ಗನಿಹಾರ್ ನೆರವು ನೀಡಿದುದರಿಂದ.

*ಪು. ೧೧೯ ಅ. ಟಿ. ಯಲ್ಲಿ ಡಾ॥ ಎಂ. ಎಸ್. ನಾಗರಾಜರಾವ್‌ರವರು ೧೯೬೩ರಲ್ಲಿ ನಿರ್ದೇಶಕರಾದರೆಂದಿರುವುದನ್ನು ೧೯೭೨ ಎಂದು ತಿದ್ದಿಕೊಳ್ಳಬೇಕು.

ಮೈಸೂರು ಪ್ರಾಕ್ತನ ಇಲಾಖೆಯ ಸಾಧನೆಯ ಪಕ್ಷಿನೋಟ

ಎ. ಕ. I	(ಮೊದಲನೆಯ ಆವೃತ್ತಿ-೧೮೮೬)	: ೨೩
ಎ. ಕ. I	(ಎರಡನೆಯ ಆವೃತ್ತಿಯಲ್ಲಿ ಹೊಸದಾಗಿ ಸೇರಿಸಿದ ಶಾಸನ) (ಎ. ಕ. IX ಮತ್ತು XII ರಲ್ಲಿ ಅನುಬಂಧವಾಗಿ ಕೊಡಲಾದ ಕೊಡಗಿನ ೪೮ ಶಾಸನಗಳನ್ನು ಬಿಟ್ಟು)	: ೪
ಎ. ಕ. II	(ಮೊದಲನೆಯ ಆವೃತ್ತಿ)	: ೧೪೪
ಎ. ಕ. II	(ಎರಡನೆಯ ಆವೃತ್ತಿ, ನರಸಿಂಹಾಚಾರ್ಯರಿಂದ ಹೊಸದಾಗಿ ಸೇರಿಸಲಾದ ಶಾಸನಗಳು)	: ೩೫೬
ಎ. ಕ. III		: ೮೦೩
ಎ. ಕ. IV		: ೯೬೨
ಎ. ಕ. V		: ೯೪೨
ಎ. ಕ. VI		: ೬೨೧
ಎ. ಕ. VII		: ೬೫೮
ಎ. ಕ. VIII		: ೧೦೩೮
ಎ. ಕ. IX		: ೧೦೬೯
ಎ. ಕ. X		: ೧೩೪೭
ಎ. ಕ. XI		: ೬೪೨
ಎ. ಕ. XII		: ೬೮೮
ಎ. ಕ. XIV	(ಮೈಸೂರು ಮತ್ತು ಮಂಡ್ಯ ಅನುಬಂಧ ಸಂಪುಟ)	: ೮೪೩
ಎ. ಕ. VX	(ಹಾಸನ ಅನುಬಂಧ ಸಂಪುಟ)	: ೩೭೯
ಎ. ಕ. XVI	(ತುಮಕೂರು ಅನುಬಂಧ ಸಂಪುಟ)	: ೨೪೭
ಎ. ಕ. XVII	(ಕೋಲಾರ ಅನುಬಂಧ ಸಂಪುಟ)	: ೪೧೫
ಎ. ಕ. VII ಮತ್ತು VIII	(ಶಿವಮೊಗ್ಗ ಅನುಬಂಧ ಸಂಪುಟ)	: ೭೫
	ಒಟ್ಟು :	೧೧,೨೫೬

ವರದಿಗಳಲ್ಲಿ ಪ್ರಕಟವಾದ ಶಾಸನಗಳು

೧೯೦೬ರಿಂದ ೨೨ರ ವರೆವಿಗೂ ಪೂರ್ಣ ಮತ್ತು ಅಪೂರ್ಣ ಪಾಠಗಳ
ಒಟ್ಟು ಸಂಖ್ಯೆ : ೮೫

ಇವುಗಳಲ್ಲಿ ಅನುಬಂಧ ಸಂಪುಟಗಳಲ್ಲಿ ಪುನರ್ ಮುದ್ರಿತವಾದ
ಶಾಸನಗಳು : ೪೬

೧೯೩೫ರಲ್ಲಿ ಪುನರ್ ಮುದ್ರಿತವಾದ ಶಾಸನ : ೧

೧೯೩೬ರಲ್ಲಿ ಪುನರ್ ಮುದ್ರಿತವಾದ ಶಾಸನ : ೧

ಎ. ಕ. XV (ಅನುಬಂಧ ಸಂಪುಟದಲ್ಲಿ Ak ೫, ೬ ಹೊಸ ಶಾಸನ
ಗಳೆಂದು ಪ್ರಕಟವಾಗಿರುವವು ೧೯೨೮ರ ವರದಿಯಲ್ಲಿ ಪ್ರಕಟವಾಗಿವೆ.) : ೨

ಎ. ಕ. VII ಮತ್ತು VIII ಅನುಬಂಧ Sb. ೫೮೫, ೧೯೨೮ರ ವರದಿ
ಯಲ್ಲಿ ಪ್ರಕಟವಾಗಿದೆ) : ೧

ಒಟ್ಟು : ೫೧

ಹೀಗೆ ಎರಡುಬಾರಿ ಮುದ್ರಣವಾದ ಶಾಸನಗಳ ಒಟ್ಟು ಸಂಖ್ಯೆ : ೫೧

ಪುನರ್ ಮುದ್ರಣವಾದ ಶಾಸನಗಳನ್ನು ವಜಿಮಾಡಿ (೮೫—೫೧=೩೪)
ಉಳಿದ ಶಾಸನಗಳ ಸಂಖ್ಯೆ : ೩೪

ಅಂದರೆ, ೧೯೦೬ರಿಂದ ೧೯೨೨ರ ವರೆಗೆ ಪ್ರಕಟಿಸಿದ ಹೊಸ ಶಾಸನಗಳ
ಒಟ್ಟು ಸಂಖ್ಯೆ : ೩೪

೧೯೨೩ರಿಂದ ೧೯೫೬ರ ೨೫ ವರದಿಗಳಲ್ಲಿ ಪ್ರಕಟಿಸಲಾದ ಒಟ್ಟು
ಶಾಸನಗಳ ಸಂಖ್ಯೆ : +೨,೦೦೬

೧೯೦೬ರಿಂದ ೧೯೫೬ರ ವರೆಗೆ ಪ್ರಕಟಿಸಲಾದ ಹೊಸ ಶಾಸನಗಳು : ೨,೦೪೦
(ಅನುಬಂಧ ಸಂಪುಟಗಳಲ್ಲಿ ಪುನರ್ ಮುದ್ರಿತವಾದವುಗಳನ್ನು ಬಿಟ್ಟು)
+೧೧,೨೫೬

ಮೈಸೂರು ಪ್ರಾಕ್ತನ ಶಾಖೆಯು ಇಲ್ಲಿಯ ವರೆಗೆ ಪ್ರಕಟಿಸಿದ
ಒಟ್ಟು ಶಾಸನಗಳು : ೧೩,೨೯೬*

---

*ಇತ್ತೀಚೆಗೆ ಮೈಸೂರಿನ ಕನ್ನಡ ಅಧ್ಯಯನಸಂಸ್ಥೆಯು ಎ. ಕ. Iರಲ್ಲಿ ೩೧ ಹೊಸ ಶಾಸನ ಗಳನ್ನು ಸೇರಿಸಿದೆ. ಎ. ಕ. IIಕ್ಕೆ (ಎ. ಕ. Vರಿಂದ ೭, ಎ. ಕ. XVರಿಂದ ೧, ಆ.ಸ.ಮೈ.ಆ.ವ. ೧೯೨೭ ರಿಂದ ೧ ಮತ್ತು ಡಾ. ಎಸ್. ಶೆಟ್ಟರ್, ೧೯೬೭ರಲ್ಲಿ ಪರಿಶೋಧಿಸಿದ ಮಹಾಪ್ರಬಂಧ, ಸಂ. ೨. ಅನು ಬಂಧ ೧ರಲ್ಲಿ ಕೊಡಲಾದ ೩೬ ಶಾಸನಗಳನ್ನು ಪಡೆದುಕೊಂಡು) ೭೭ ಶಾಸನಗಳನ್ನು ಸೇರಿಸಿದ್ದಾರೆ.

ಮೈಸೂರುಪ್ರದೇಶದ ಅಪ್ರಕಟಿತ ಶಾಸನಗಳ ಸೂಚಿ

(೧೯೦೬–೧೯೧೨)

ಅ. ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧.	ಮೈಸೂರು (ರೆಸಿಡೆಂಟರ ವಶದಲ್ಲಿದ್ದುದು.)	ಮೈಸೂರು	ಮೈಸೂರು	ಆಳಿಕೆಯ ೨೫ನೆಯ ವರ್ಷ	ಅವಿನೀತ	ಗಂಗ	ಕೊಂಗಣಿ ಮಹಾಧಿರಾಜನು ಮಾದಿಶರ್ಮನಿಗೆ ಪರುವಿ ವಿಷಯದಲ್ಲಿದ್ದ ಪೊನ್ನವಾರಿಯನ್ನು ಕೊಟ್ಟದತ್ತಿ.	ಆರ್ಕಿಯಾಲಾಜಿಕಲ್ ಸರ್ವೆ ಆಫ್ ಮೈಸೂರು. ಆನ್ಯುಯಲ್ ರಿಪೋರ್ಟ (ಆ.ಸ.ಮೈ. ಆ. ರಿ) ೧೯೧೧, ಪು. ೩೬.
೨.	ಹೆಗ್ಗರೆ	ತುಮಕೂರು	ತುಮಕೂರು	—	(ಶಿವಮಾರ II)	,,	ಈ ವೀರಗಲ್ಲು ಮಣ್ಣೆಯೂರಿನ ದೇವಂದರನ ಸಾವನ್ನು ಉಲ್ಲೇಖಿಸುತ್ತದೆ.	ಆ. ಸ. ಮೈ. ಆ.ರಿ. ೧೯೧೦, ಪು. ೨೪.
೩.	,,	,,	,,	—	,,	,,	ತೆಯಿಲೋಕಮಲ್ಲಯಮ್ಮನ ಸಾವನ್ನು ಉಲ್ಲೇಖಿಸುವ ವೀರಗಲ್ಲು.	ಅದೇ, ಪು. ೨೪.
೪.	ರಾಮಪುರ	ಚನ್ನಪಟ್ಟಣ	ಬೆಂಗಳೂರು	೧೦೦೪	—	,,	೧೦೦೪ ರಲ್ಲಿ ಮಾಚಗಾವುಂಡನು ರಾಮಪುರದ ಕೆರೆ ಮತ್ತು ತೂಬನ್ನು ಕಟ್ಟಿಸಿದನೆಂದು ತಿಳಿಸುತ್ತದೆ.	ಆ.ಸ.ಮೈ.ಆ.ರಿ. ೧೯೦೮, ಪು. ೮.

ಅ. ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೫.	ಕೂಡಲೂರು	,,	,,	—	ಮಾರಸಿಂಹ	,,	ಇರುಗಯ್ಯನು ಕೊಟ್ಟ ದತ್ತಿ	ಆ.ಸ.ಮೈ.ಆ.ರಿ. ೧೯೦೯, ಪು. ೧೬.
೬.	ಮಾಲೂರ ಪಟ್ಣ	,,	,,	—	,,	,,	ಸಲ್ಲೇಖನವನ್ನು ಉಲ್ಲೇಖಿಸುವ ಶಾಸನ	ಅದೇ, ಪು. ೧೬.
೭.	ಮೊಗೇನಹಳ್ಳಿ	ಚನ್ನಪಟ್ಣ	ಬೆಂಗಳೂರು	—	ಮಾರಸಿಂಹ	ಗಂಗ	ಬೆಡುವಗೆರೆಯ ನಾಳ್ಗಾವುಂಡನಾದ ಪರಪಳಮಲ್ಲನು ಕೆರೆಯ ತೂಬೊಂದನ್ನು ನಿರ್ಮಿಸಿದ.	ಅದೇ, ಪು. ೧೬.
೮.	ಕುಂತಿಹಳ್ಳಿ	ತುಮಕೂರು	ತುಮಕೂರು	—	ರಕ್ಕಸಗಂಗ	,,	ಅಚಮ್ಮನು ರಾಚಮಲ್ಲಗಾವುಂಡನ ಮಗಳೆಂದು ಉಲ್ಲೇಖಿಸುತ್ತದೆ.	ಆ.ಸ. ಮೈ ಆ ರಿ. ೧೯೧೮, ಪು. ೨೭.
೯.	ಬೇಪೂರು	ಚನ್ನಪಟ್ಣ	ಬೆಂಗಳೂರು	೯೫೮	ರಾಚಮಲ್ಲ III	,,	ಮಣಲೇರನ ಅನುಮತಿ ಪಡೆದು. ಪೆರ್ಗಡೆ ಶಂಕಯ್ಯ ಮತ್ತು ಇತರರು ಕೆರೆಯ ದುರಸ್ತಿ ಮಾಡಿಸಿದರು.	ಆ.ಸ.ಮೈ. ಆರಿ. ೧೯೦೯, ಪು. ೧೬.
೧೦.	ಅಂತರಗಂಗೆ	ಕೋಲಾರ	ಕೋಲಾರ	—	—	ತಮಿಳು ಗಂಗರು	————	ಆ ಸ.ಮೈ.ಆ.ರಿ. ೧೯೧೦, ಪು. ೩.
೧೧.	ದೊಡ್ಡ ಮಾಲೂರು	ಚನ್ನಪಟ್ಣ	ಬೆಂಗಳೂರು	—	—	ಚೋಳಗಂಗ	ಕಿಟಿಲ್ಕೆ ನಾಡಿನ ರಾಜೇಂದ್ರಸಿಂಹ ಚತುರ್ವೇದಿಮಂಗಲಂನ ಸಭಾಸದರಿಂದ ದೇವಸ್ಥಾನಕ್ಕೆ (ಕೈಲಾಸೇಶ್ವರ) ಬಿಟ್ಟ ದತ್ತಿಯ ವಿವರ.	ಆ.ಸ.ಮೈ.ಆ.ರಿ. ೧೯೦೯,ಪು. ೧೬.

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೨.	ಕೂಡಲೂರು	ಚನ್ನಪಟ್ಣ	ಬೆಂಗಳೂರು	—	ವಿಜಯಾಲಯ	ಚೋಳ	ಚೋಳ ಅರಸ ವಿಜಯಾಲಯನನ್ನು ಮಾತ್ರ ಹೆಸರಿಸುವ ಒಂದೇ ಸಾಲಿನ ಶಾಸನ.	ಅದೇ, ಪು. ೧೭.
೧೩.	ಮಾಲೂರು ಪಟ್ಣ	,,	ಬೆಂಗಳೂರು	೧೦೦೭	ರಾಜರಾಜ I	,,	ನಿಗರಿಲಿ ಶೋಟಿಪುರಂನ ಅಯ್ಯ ಪೊಟಿಲ್ ಶೆಟ್ಟಿ ಮತ್ತಿತರರು ತಮ್ಮ ಊರದೇವರಾದ ಜಯಂಗೊಂಡ ಶೋಟಿವಿಣ್ಣಗರ್ ಆಟ್ವಾರನ ದೇವಸ್ಥಾನಕ್ಕೆ ಅಕ್ಕಿ,ಎಣ್ಣೆ,ತುಪ್ಪ ಮೊದಲಾದವುಗಳನ್ನು ಒದಗಿಸುವದಾಗಿ ಮಾತುಕೊಟ್ಟರು. ಅಲ್ಲದೆ ಅರಸನ ದಿಗ್ವಿಜಯಗಳನ್ನು ಹೆಸರಿಸುತ್ತದೆ.	ಅದೇ, ಪು. ೧೭.
೧೪.	ದೊಡ್ಡ ಮಾಲೂರು	,,	,,	೧೦೨೪	ರಾಜೇಂದ್ರ ಚೋಳ I	,,	ಪೆರಿಯಮುಟಿವೂರಿನ ಸಭಾಸದರು ಅಪ್ಪಿರಮೇಯ ವಿಣ್ಣಗರ್ ಆಟ್ವಾರ ದೇವರಿಗೆ ಕೊಟ್ಟ ದತ್ತಿಯ ವಿವರ. ಅಲ್ಲದೆ ಅರಸನ ದಿಗ್ವಿಜಯಗಳನ್ನು ಹೆಸರಿಸುತ್ತದೆ.	ಅದೇ, ಪು. ೧೭.
೧೫.	,,	,,	,,	೧೦೨೯	,,	,,	ಈ ಶಾಸನ ಗಂಗರೊಡನೆ ನಡೆದ ಕದನವನ್ನು ಉಲ್ಲೇಖಿಸುತ್ತ ದೇವಾಲಯದ ಆಭರಣ ಮತ್ತಿತರ ಸಾಮಾನುಗಳನ್ನು ಹುಗಿದಿಟ್ಟಿದಂದನ್ನು ತಿಳಿಸುತ್ತದೆ.	ಅದೇ, ಪು. ೧೭.

ಕ್ರ. ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೧೬.	,,	,,	,,	ಅರಸನ ಆಳ್ವಿಕೆಯ ೧೮ನೆಯ ವರ್ಷ	,,	,,	ದೇವರ ನಂದಾದೀವಿಗೆ ಮತ್ತು ಅನ್ನಪ್ರಸಾದಕ್ಕಾಗಿ ವಿಳ್ಳಪಕ್ಕಂದ ನಕ್ಕಪಾರನ ಹೆಂಡತಿ ದೇವಸಂಗೈ-ವ್ವಾನಿಯು ಬಿಟ್ಟ ಭೂದತ್ತಿ.	ಅದೇ. ಪು. ೧೮.
೧೭.	,,	,,	,,	—	,,	,,	ಕೂಡಲೂರಿನ ಕೈಲಾಸಂ ಉಡೈಯ ಮಹಾದೇವರ್‌ನ ದೇಗುಲಕ್ಕೆ ನಂದಾದೀವಿಗೆಗಳ ದತ್ತಿಯನ್ನು ಉಲ್ಲೇಖಿಸುತ್ತದೆ.	ಅದೇ, ಪು. ೧೮.
೧೮.	,,	,,	,,	—	,,	,,	ರಾಜೇಂದ್ರಸಿಂಹೇಶ್ವರನ ದೇಗುಲಕ್ಕೆ ಬಿಟ್ಟ ದತ್ತಿಗಳನ್ನು ಉಲ್ಲೇಖಿಸುತ್ತದೆ.	ಅದೇ, ಪು. ೧೮.
೧೯.	ಹರಿಹರ	ದಾವಣಗೆರೆ	ಚಿತ್ರದುರ್ಗ	—	—	ಪಾಂಡ್ಯ	ಹರಿಹರೇಶ್ವರನ ದೇವಾಲಯಕ್ಕೆ ಮಹಾಪ್ರಧಾನ ಶ್ರೀಗಣ ಸರ್ವಾಧ್ಯಕ್ಷ ಆದಿತ್ಯದಂಡನಾಯಕನು ಕೆಲವು ಪಾತ್ರೆಗಳನ್ನು ಮತ್ತು ಆಭರಣಗಳನ್ನು ಕೊಟ್ಟದ್ದು.	ಆ.ಸ.ಮೈ.ಆ.ರಿ. ೧೯೧೨, ಪು. ೪೬.
೨೦.	ಕೃಷ್ಣಾಪುರ	ಚನ್ನಪಟ್ಣ	ಬೆಂಗಳೂರು	೧೧೧೨	ವಿಷ್ಣುವರ್ಧನ	ಹೊಯ್ಸಳ	ಅಂಕಕಾಜೇಶ್ವರ ದೇವರಿಗೆ ಕೇಶಿಯಣ್ಣ ಮತ್ತು ಬಮ್ಮಯ್ಯ ಹೆಗ್ಗಡೆಗಳು ದತ್ತಿಬಿಟ್ಟುದನ್ನು ಉಲ್ಲೇಖಿಸುತ್ತದೆ.	ಆ.ಸ.ಮೈ.ಆ.ರಿ. ೧೯೦೮, ಪು. ೮.

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೧.	ಬೊಮ್ಮನ ಹಳ್ಳಿ	,,	,,	೧೧೩೮	,,	,,	ಬಸವಾಚಾರಿಯು ಸಾಂಸಾರಿಕ ಜೀವನ ದಿಂದಾದ ದೋಷಗಳಿಂದ ಮುಕ್ತಿ ಯಾಚಿಸಿ, ಕೆರೆ ಮತ್ತು ದೇವಾಲಯ ವನ್ನು ಕಟ್ಟಿಸಿದನು. ಆ ದೇವ ಸ್ಥಾನಕ್ಕೆ ಅವನ ಸಂಬಂಧಿಕರು ದತ್ತಿ ಕೊಟ್ಟರು.	ಆ.ಸ.ಮೈ. ಆ.ರಿ. ೧೯೧೧, ಪು. ೪೩.
೨೨.	ಬಸ್ತಿಹಳ್ಳಿ	ಬೇಲೂರು	ಹಾಸನ	—	,,	,,	ಹೆಗ್ಗಡೆ ಮಲ್ಲಿಮಯ್ಯ ಮತ್ತು ದಂಡ ನಾಯಕ ಏಚಿಕಯ್ಯರು ಮಲ್ಲಿನಾಥ ನಿಗೆ ಕೊಟ್ಟದತ್ತಿ.	ಆ.ಸ.ಮೈ. ಆ.ರಿ. ೧೯೦೮, ಪು. ೯.
೨೩ ಮತ್ತು ೨೪.	ಬೇವೂರು	ಚನ್ನಪಟ್ಣ	ಬೆಂಗಳೂರು	—	,,	,,	ಒಡೆದುಹೋಗಿದ್ದು, ಅರಸನ ಹೆಸ ರನ್ನು ಉಲ್ಲೇಖಿಸುತ್ತವೆ.	ಆ.ಸ.ಮೈ. ಆ.ರಿ. ೧೯೦೯, ಪು. ೧೯.
೨೫.	ಮಾಲೂರು	,,	,,	—	,,	,,	ಸಿರಿಯಮಂಟಿವೂರಿನ ಮಹಾಜನರು ಗೋಪಿನಾಥನ ದೇವಸ್ಥಾನಕ್ಕೆ ಬಿಟ್ಟ ಭೂದತ್ತಿಯನ್ನು ಉಲ್ಲೇಖಿಸು ತ್ತದೆ.	ಅದೇ, ಪು. ೨೦.
೨೬ ಮತ್ತು ೨೭.	ಕೃಷ್ಣಾಪುರ	,,	,,	೧೧೫೮	ನರಸಿಂಹ I	,,	ಅಂಕಕಾಚೇಶ್ವರನಿಗೆ ಬಿಟ್ಟ ದತ್ತಿಯ ವಿವರ.	ಆ.ಸ.ಮೈ.ಆ.ರಿ. ೧೯೦೮, ಪು. ೮.

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೨೮.	ದಾವಣಗೆರೆ	ದಾವಣಗೆರೆ	ಚಿತ್ರದುರ್ಗ	೧೨೦೩	ಬಲ್ಲಾಳ II	,,	ಈ ವೀರಗಲ್ಲು ಪಾಂಡೇಶ್ವರ ದೇವಸ್ಥಾನದ ಆಚಾರ್ಯರಾದ ವಾಮಶಕ್ತಿದೇವನು ಗೋಕಾಳಗದಲ್ಲಿ ಮಡಿದ ವೀರನೊಬ್ಬನ ತಂದೆಗೆ ಭೂದತ್ತಿಯನ್ನು ಕೊಟ್ಟ ಬಗ್ಗೆ ತಿಳಿಸುತ್ತದೆ.	ಆ.ಸ.ಮೈ.ಆ.ರಿ. ೧೯೧೨, ಪು. ೪೩.
೨೯.	ಚಿಕ್ಕ ಮಾಲೂರು	ಚನ್ನಪಟ್ಣ	ಬೆಂಗಳೂರು	—	ಬಲ್ಲಾಳ II	,,	ಈ ಶಾಸನಗಳು ಸ್ತಂಭ, ತೊಲೆ ಮುಂತಾದವುಗಳನ್ನು ದಾನಮಾಡಿದವರ ಬಗ್ಗೆ ವಿವರ ಕೊಡುತ್ತವೆ.	ಆ.ಸ.ಮೈ ಆ.ರಿ. ೧೯೦೯, ಪು. ೨೦.
೩೦.	ಕೂಡಲೂರು	,,	,,	—	,,	,,	ಪೇರಾಯಿರಂ ಉಡ್ಯೆಯಾನ್‌ನು ಮೂರು ಕವ್ಪಾಣಾಂ(ಗದ್ಯಾಣ)ನ್ನು ನಂದಾದೀವಿಗೆಗೆ ಕೊಟ್ಟ.	ಅದೇ, ಪು. ೨೧.
೩೧.	ಹರಿಹರ	ದಾವಣಗೆರೆ	ಚಿತ್ರದುರ್ಗ	—	ನರಸಿಂಹ II	,,	ಈ ಶಾಸನವು ಮಹಾಪ್ರಧಾನ ಪೋಲಾಳಂವ ದಣ್ಣಾಯಕನು ಹರಿಹರೇಶ್ವರನ ದೇವಸ್ಥಾನವನ್ನು ಕಟ್ಟಿಸಿದನೆಂದು ಉಲ್ಲೇಖಿಸುತ್ತದೆ.	ಆ.ಸ.ಮೈ.ಆ.ರಿ. ೧೯೨೧, ಪು. ೭೩.
೩೨.	,,	,,	,,	೧೨೪೪	ಸೋಮೇಶ್ವರ	,,	ಇಮ್ಮಡಿ ಚಲದಂಕ ಆದಿಮಲ್ಲ ಶೆಟ್ಟಿಯು ಹರಿಹರನಿಗೆ ಪುಷ್ಪಮಾಲೆ ಮತ್ತು ತುಳಸಿದಳಗಳ ಪೂರೈಕೆಗಾಗಿ ಕೊಟ್ಟದತ್ತಿ.	ಅದೇ. ಪು. ೪೪.

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೩೩.	ಮಾಲೂರು ಪಟ್ಣ	ಚನ್ನಪಟ್ಣ	ಬೆಂಗಳೂರು	೧೨೪೭	,,	,,	ಆರುವೋಟೀಶ್ವರಂ ಉಡೈಯಂನಾಯನಾರನ ದೇಗುಲಕ್ಕೆ ನಾಜ್ಪತ್ತೆಣ್ಣಾಯಿರಪ್ಪೇನಾಪತಿ ಮತ್ತು ವಿರುದಕಂದ್ಯೆಯಾರ್ ಪಾಣಾರ್‌ರು ಕೊಟ್ಟದತ್ತಿ.	ಆ.ಸ.ಮೈ.ಆ.ರಿ. ೧೯೦೯, ಪು. ೨೧.
೩೪ ರಿಂದ ೩೬.	ಹರಿಹರ	ದಾವಣಗೆರೆ	ಚಿತ್ರದುರ್ಗ	೧೨೬೧ ೧೨೬೫ ೧೨೭೨	,,	,,	ಬೊಮ್ಮಿದೇವ, ಉದಾದೇವಿ ಮತ್ತು ವಿಠ್ಠಣ್ಣರು ಹರಿಹರದೇವರ ಪುಷ್ಪಮಾಲೆ ಮತ್ತು ತುಳಸಿದಳಕ್ಕಾಗಿ ಹಣವನ್ನು ದತ್ತಿಯಾಗಿ ಬಿಟ್ಟರು.	ಆ.ಸ.ಮೈ.ಆ.ರಿ. ೧೯೧೨, ಪು. ೪೫.
೩೭.	ಕೆಂಗೇರಿ	ಬೆಂಗಳೂರು	ಬೆಂಗಳೂರು	—	,,	,,	ಈ ಅಪೂರ್ಣ ಶಾಸನವು ಹಿರಿಯಗಂಗರಾಜನನ್ನು ಹೆಸರಿಸುತ್ತದೆ. ಅಲ್ಲದೆ ಬಹುಶಃ ದಾಳಿಯೊಂದಕ್ಕೆ ಸಂಬಂಧಪಟ್ಟ ವೇಚಿಯಣ ಮತ್ತು ಚಿಕಣ ಎಂಬವರನ್ನು ಉಲ್ಲೇಖಿಸುತ್ತದೆ.	ಆ.ಸ.ಮೈ.ಆ.ರಿ. ೧೯೧೦. ಪು. ೩೩.
೩೮.	ಕೂಡಲೂರು	ಚನ್ನಪಟ್ಣ	,,	—	,,	,,	ನಾಜ್ಪತ್ತೆಣ್ಣಾಯಿರ-ಪ್ಪೇನಾಪತಿ ಮತ್ತು ಅವನ ಮಂಗಳು ಬಿಟ್ಟದತ್ತಿ.	ಆ.ಸ.ಮೈ.ಆ.ರಿ. ೧೯೦೯, ಪು. ೨೧.
೩೯.	,,	,,	,,	—	,,	,,	ಮಾದಿಗಾವುಂಡನ್ ಮತ್ತು ಪಮ್ಮ ಗಾವುಂಡನ್‌ರು ಬಿಟ್ಟ ದತ್ತಿ.	ಅದೇ, ಪು. ೨೧.
೪೦.	ಚಿಕ್ಕ ಮಾಲೂರು	,,	,,	—	,,	,,	ವೀರವಳ ದಂಡನಾಯಕನ ಮಂಗಮಟಲಿ ಉಡೈಯರು ಬಿಟ್ಟದತ್ತಿ.	ಅದೇ, ಪು. ೨೦.

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೪೧.	ದೊಮ್ಮಲೂರು	ಬೆಂಗಳೂರು	,,	(೧೨೮೦)	ರಾಮನಾಥ	,,	ವೀರರಾಮನಾಥದೇವನು ಶೊಕ್ಕಪ್ಪೆರುಮಾಳ್ ದೇವಸ್ಥಾನದ ಪೂಜಾರಿಗೆ ಭೂದತ್ತಿ ಕೊಟ್ಟ. ದೊಂಬಲೂರು ಇಳೈಪಾಕ್ಕ ನಾಡಿನಲ್ಲಿದ್ದಿತೆಂದು ತಿಳಿಸುತ್ತದೆ	ಆ.ಸ.ವ್ಯೆ.ಆ.ರಿ. ೧೯೧೧, ಪು. ೪೯.
೪೨.	ಬನ್ನೇರುಘಟ್ಟ	ಆನೇಕಲ್	,,	ಆಳ್ವಿಕೆಯ ೪೦ ನೆಯ ವರ್ಷ	,,	,,	ವಣ್ಣಿಯರ್ ಘಟ್ಟದ ದಾಮೋದರಪ್ಪೆರುಮಾಳನಿಗೆ ಬಿಟ್ಟ ದತ್ತಿ.	ಆ.ಸ.ವ್ಯೆ.ಆ.ರಿ. ೧೯೦೮, ಪು. ೧೩.
೪೩.	ಬೇವೂರು	ಚನ್ನಪಟ್ಣ	,,	೧೨೭೨	ನರಸಿಂಹ III	,,	ನರಸಿಂಹನ ಕಾಲದಲ್ಲಿ, ಅರಸನ ಆಳಾದ ಮಸಣಯ ನಾಯಕನು ಕೆರೆಯ ತೂಬನ್ನು ಕಟ್ಟಿಸಿದ.	ಆ.ಸ.ವ್ಯೆ.ಆ.ರಿ. ೧೯೦೯, ಪು. ೨೨.
೪೪.	ಹೊಂಗನೂರು	,,	,,	೧೨೯೫	,,	,,	ಅರಸನು ಕೂಡಲೂರಿನ ಸೋಮನಾಥ-ಕಾತರಾಗ್ನಿ ಚಿತ್ತನಿಗೆ ಭೂದತ್ತಿ ಕೊಟ್ಟುದುದನ್ನು ಮತ್ತು ಅರಸನ ಮಂತ್ರಿಯಾದ ಪೆರುಮಾಳೆದೇವ ದಣ್ಣಾಯಕನು ಆ ಭೂಮಿಯನ್ನು ಸೋಮನಾಥ-ಕಾತರಾಗ್ನಿ ಚಿತ್ತನಿಂದ ಕೊಂಡುಕೊಂಡು ಅದನ್ನು ಹೊಂಗನೂರಿನ ಪ್ರಕಾಶ ನಾರಾಯಣದೇವರಿಗೆ ದತ್ತಿ ಬಿಟ್ಟುದನ್ನು ಉಲ್ಲೇಖಿಸುತ್ತದೆ.	ಅದೇ, ಪು. ೨೨.

ಅ.ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೪೫.	ಕೂಡಲೂರು	,,	,,	—	,,	,,	ಮುಕ್ಕಾದ ಈ ಶಾಸನವು ಸುರಭೂಪತಿದೇವನಿಗೆ ಕೊಟ್ಟ ದತ್ತಿಯನ್ನು ಹೆಸರಿಸುತ್ತದೆ.	ಅದೇ. ಪುಟ. ೨೩.
೪೬ ಮತ್ತು ೪೭.	ದೊಮ್ಮಲೂರು	ಬೆಂಗಳೂರು	,,	೧೩೦೧	ಬಲ್ಲಾಳ III	,,	ಬಲ್ಲಾಳನು ದೊಂಬಲೂರಿನ ಶೊಕ್ಕಪ್ಪೆರುಮಾಳ್ ದೇವರಿಗೆ ಬಿಟ್ಟ ದತ್ತಿಗಳ ವಿವರ.	ಆ.ಸ.ಮೈ.ಆ.ರಿ. ೧೯೧೧, ಪು. ೫೦.
೪೮.	ಮಾಲೂರು ಪಟ್ಣ	ಚನ್ನಪಟ್ಣ	,,	೧೩೦೭	,,	,,	ಸತ್ಯಾನಂದ ಸ್ವಾಮಿಯ ಮಗನಾದ ನೀಲಕಂಠದೇವರಿಗೆ ಕಾವದೇವರಸನು ಕೊಟ್ಟದತ್ತಿ.	ಆ.ಸ..ಮೈ.ಆ.ರಿ. ೧೯೦೯, ಪು. ೨೩.
೪೯.	ಕೂಡಲೂರು	,,	,,	೧೩೧೩	,,	,,	ಮಾಶವಗಾವುಂಡನು ಮತ್ತು ಕೂಡಲೂರಿನ ಮಹಾಜನರು ದೇವಸ್ಥಾನವೊಂದಕ್ಕೆ ಕೊಟ್ಟ ದತ್ತಿ.	ಅದೇ, ಪು. ೨೩
೫೦.	ದೊಮ್ಮಲೂರು	ಬೆಂಗಳೂರು	,,	೧೩೨೮	,,	,,	ಎಲಹಂಕ ನಾಡಿನೊಳಗಿನ ದೊಂಬಲೂರಿನ ಸೋಮನಾಥದೇವರಿಗೆ ಮಹಾಪ್ರಧಾನ ಪೊನ್ನಣ್ಣನ ಮಗ ಕಾಮೆಯ ದಣ್ಣಾಯಕನು ಮತ್ತು ಎಲಹಂಕ ನಾಡಿನ ಪ್ರಜೆಗವುಡುಗಳು ಬಿಟ್ಟದತ್ತಿಯ ವಿವರ.	ಆ.ಸ.ಮೈ.ಆ.ರಿ. ೧೯೧೧, ಪು. ೫೧.

ಅ.ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೫೧.	ಬನ್ನೇರುಘಟ್ಟ	ಆನೇಕಲ್	,,	—	,,	,,	ವೀರಬಲ್ಲಾಳದೇವನಿಗೆ ಜಯವಾಗಲೆಂದು ತಾವುತ್ತಾಳ್ವರ್ ಕೊಟ್ಟ ದತ್ತಿ.	ಆ.ಸ.ಮೈ.ಆ.ರಿ. ೧೯೦೮, ಪು. ೯.
೫೨ ಮತ್ತು ೫೩.	,,	,,	,,	—	,,	,,	ತಾವುತ್ತಾಳ್ವರ್‌ನ ದತ್ತಿಗಳು	ಅದೇ, ಪು. ೯.
೫೪.	,,	,,	,,	—	,,	,,	ಮಹಾಪಸಾಯಿತ ಮಾಚಣ್ಣ ಮತ್ತು ಇತರರು ಬನ್ನೇರುಘಟ್ಟದ ದೇವಸ್ಥಾನಕ್ಕೆ ಬಿಟ್ಟದತ್ತಿ.	ಅದೇ, ಪು. ೯.
೫೫.	ದೊಮ್ಮಲೂರು	ಬೆಂಗಳೂರು	,,	—	,,	,,	ಮಹಾಮಂಡಳೇಶ್ವರ ತ್ರಿಭುವನಮಲ್ಲ ಮಾಯಿಶಿವನಾಂಡರ್‌ನ ಪತ್ನಿಯಾದ ಅರುಂಡಮ್ಮೆ ದೇವಸ್ಥಾನದ (ಸೋಮೇಶ್ವರ) ಮುಖಮಂಟಪ ಕಟ್ಟಿಸಿದುದರ ಉಲ್ಲೇಖವಿದೆ.	ಆ.ಸ.ಮೈ ಆ.ರಿ, ೧೯೧೧, ಪು. ೫೧.
೫೬.	ಬನ್ನೇರುಘಟ್ಟ	ಆನೇಕಲ್	,,	ಸು. ೧೩೬೦	ಕಂಪಣ್ಣ ಒಡೆಯರ	ವಿಜಯನಗರ	ಬನ್ನೇರುಘಟ್ಟದ ದೇವಸ್ಥಾನಕ್ಕೆ ಕಂಪಣ್ಣ ಒಡೆಯರು ಮತ್ತು ಮಂತ್ರಿ ಸೋಮಪ್ಪ ಒಡೆಯರು ಬಿಟ್ಟದತ್ತಿ.	ಆ.ಸ.ಮೈ.ಆ.ರಿ. ೧೯೭೮. ಪು. ೧೪.

ಅ. ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೫೭.	ಮೈಸೂರು ? (ಇನಾಂ ಕಚೇರಿ ಯಲ್ಲಿದ್ದುದು.)	—	—	೧೩೮೬	ಹರಿಹರ II	,,	ಹರಿಹರ ಮಹಾರಾಜನು ನಾರಾಯಣವಾಜಪೇಯಯಾಜಿ, ನರಹರಿ ಸೋಮಯಾಜಿ ಮತ್ತು ಪಂಡರಿ ದೀಕ್ಷಿತರಿಗೆ ತಾಮ್ರಶಾಸನ ದಯಪಾಲಿಸಿದನು.	ಅದೇ, ಪು. ೧೪.
೫೮.	ಹರಿಹರ	ದಾವಣಗೆರೆ	ಚಿತ್ರದುರ್ಗ	೧೩೯೮	,,	,,	ಮಹಾರಾಜನು ಬಾಗವಾಡಿ (ಪ್ರತಾಪವಿಜಯ ಹರಿಹರಪುರ) ಯನ್ನು ವಿಠಲಾಚಾರ್ಯರಿಗೆ ದತ್ತಿ ಕೊಟ್ಟುದುದನ್ನು ಉಲ್ಲೇಖಿಸುತ್ತದೆ.	ಆ.ಸ.ಮೈ.ಆ.ರಿ. ೧೯೧೨, ಪು. ೪೮.
೫೯.	,,	,,	,,	೧೩೯೯	,,	,,	ಅರಸನು ಎಳವಿಗೆ (ವ್ಯಾಘ್ರತಟಾಕ) (ಧರ್ಮಮೂರ್ತಿ ಹರಿಹರಪುರ) ಯನ್ನು ವಿಠಲಾಚಾರ್ಯರಿಗೆ ಧಾರೆ ಎರೆದುದನ್ನು ತಿಳಿಸುತ್ತದೆ.	ಅದೇ, ಪು ೪೮.
೬೦.	ಬಿಳಿಸಾವಿಲೆ	ಹೊಸಕೋಟೆ	ಬೆಂಗಳೂರು	೧೩೯೯	,,	,,	ನಿಗಿರಿಲಿ ಶೋಳಿವಳನಾಡಿನ ಶಣ್ಣೈಲ ನಾಡಿನೊಳಗಿನ ತೆಂಕೂಋನಾಡಿನ ಅಧಿಕಾರಿಯಾದ ಕಱಿಕಿಱೈನ ದಾಮೋದರ ಶೆಟ್ಟಿಯಾರ್ ದೀಪಸ್ತಂಭವನ್ನು ಮಾಡಿಸಿ ನಿಲ್ಲಿಸಿದನು.	ಆ.ಸ.ಮೈ.ಆ.ರಿ. ೧೯೧೧. ಪು. ೫೨.

ಅ.ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೬೧.	ಭೈರಾಪೂರ	ವೊಳಕಾಲ್ಮೂರು	ಚಿತ್ರದುರ್ಗ	—	,,	,,	ಹರಿಹರನು ಲಂಕೆಯ ಭೈರವದೇವರಿಗೆ ಕೊಟ್ಟ ಮಲಿಗೌಂಡನ ಹಳ್ಳಿ ಮತ್ತು ಹೊಸಬಟಿ ಹಳ್ಳಿಗಳನ್ನು ಹೆಸರಿಸುತ್ತದೆ.	ಆ.ಸ.ಮೈ.ಆ.ರಿ. ೧೯೦೯, ಪು. ೨೩.
೬೨.	ಬನ್ನೇರು ಘಟ್ಟ	ಆನೇಕಲ್	ಬೆಂಗಳೂರು	೧೩೯೬	ನಾರಣದೇವ ಒಡೆಯ	,,	ಸೊವಣ್ಣನ ಪುತ್ರ ಸ...ಪ್ಪನು ಬಿಟ್ಟ ದತ್ತಿ.	ಆ.ಸ.ಮೈ ಆ ರಿ. ೧೯೦೮, ಪು. ೧೬.
೬೩.	ಉಮ್ಮತ್ತೂರು	ಚಾಮರಾಜನಗರ		೧೩೯೭	,,	,,	ನಾರಾಯಣ ಒಡೆಯರು ಹರಿಹರನ ಸೌಖ್ಯಕ್ಕಾಗಿ ಉಮ್ಮತ್ತೂರಿನ ಕೊಂಗಲಾಪುರವನ್ನು ಅಗ್ರಹಾರವನ್ನಾಗಿ ಮಾಡಿ–ನಾರಾಯಣಪುರವೆಂದು ಹೆಸರಿಟ್ಟು ಬ್ರಾಹ್ಮಣರಿಗೆ ದತ್ತಿ ಬಿಟ್ಟರು.	ಅದೇ, ಪು. ೧೬.
೬೪.	ದೊಮ್ಮಲೂರು	ಬೆಂಗಳೂರು	ಬೆಂಗಳೂರು	೧೪೦೯	ದೇವರಾಯ I	,,	ವೀರಪ್ರತಾಪದೇವರಾಯನ ಬಲಗೈಯಂತಿರುವ ನಾಗಪ್ಪದಣ್ಣಾಯಕನು ಚೊಕ್ಕನಾಥದೇವರಿಗೆ ಕರಡಿಯ ಹಳ್ಳಿಯಲ್ಲಿ ಕೆಲವು ಸುಂಕಗಳನ್ನು ಬಿಟ್ಟ ವಿವರ	ಆ ಸ.ಮೈ ಆ.ರಿ. ೧೯೧೧, ಪು. ೫೨.
೬೫. ಮತ್ತು ೬೬.	ಬನ್ನೇರು ಘಟ್ಟ	ಆನೇಕಲ್	,,	೧೪೨೩	ದೇವರಾಯII	,,	ದೇವರಾಯನ ದಂಡನಾಯಕನಾದ ಪೆರುಮಾಳೆದೇವ ದಂಡನಾಯಕನು ದಾವೋದರ ಪೆರುಮಾಳನಿಗೆ ಬಿಟ್ಟ ದತ್ತಿ.	ಆ.ಸ.ಮೈ.ಆ.ರಿ. ೧೯೦೮. ಪು. ೧೭.

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೬೭.	ಹರಿಹರ	ದಾವಣಗೆರೆ	ಚಿತ್ರದುರ್ಗ	೧೪೨೬	,,	,,	ಅರಸನು ಚಂದ್ರಗುತ್ತಿರಾಜ್ಯದ ರಟ್ಟಿಹಳ್ಳಿ ಸ್ಥಳದೊಳಗನ ಮಾಕನೂರನ್ನು ಪ್ರತಾಪದೇವರಾಯ ಪುರವೆಂದು ಹೆಸರಿಸಿ ವಿಠಲಾಚಾರ್ಯನಿಗೆ ದತ್ತಿಯಾಗಿ ಬಿಟ್ಟನು.	ಆ.ಸ.ಮೈ.ಆ.ರಿ. ೧೯೧೨. ಪು. ೪೯.
೬೮.	ಕಲ್ಕೆರೆ	ಬೆಂಗಳೂರು	ಬೆಂಗಳೂರು	೧೪೨೮	,,	,,	ಹಿರಿಯ ಒಡೆಯ, ಚಿಕ್ಕ ಒಡೆಯ, ಮಲ್ಲಯ ಒಡೆಯ ಮತ್ತು ತಿಮ್ಮರಸ ಒಡೆಯರ ಪುಣ್ಯಕ್ಕಾಗಿ ದಳವಾಯಿ ಎಲೆಯನಾಯಕನು ಬಿಟ್ಟ ಭೂದತ್ತಿಯನ್ನು ತಿಳಿಸುತ್ತದೆ.	ಆ.ಸ.ಮೈ.ಆ.ರಿ. ೧೯೧೧. ಪು ೫೨.
೬೯.	ಕೃಷ್ಣಾಪುರ	ಚನ್ನಪಟ್ಣ	,,	೧೪೩೮	,,	,,	ಹಾಳುಬಿದ್ದಿದ್ದ ಅಂಕನಾಥನ ದೇವಸ್ಥಾನವನ್ನು ಮತ್ತು ಹಳ್ಳಿಯನ್ನು ಅಳಗಿಶೆಟ್ಟಿಯು ಜೀರ್ಣೋದ್ಧಾರ ಮಾಡಿದ. ಹೊಸದಾಗಿ ಕಟ್ಟಿದ ಪಟ್ಟಣವನ್ನು ತಿರುಮಲನಾಥಪುರವೆಂದು ಕರೆಯಲಾಯಿತು.	ಆ.ಸ ಮೈ ಆ.ರಿ. ೧೯೦೮, ಪು. ೮.
೭೦.	ಭೂತನ ಹಳ್ಳಿ	ಆನೇಕಲ್	,,	೧೪೬೯	ವಿರೂಪಾಕ್ಷ	,,	ಶ್ರೀರಂಗನಾಥನ ವಂಗ ಶ್ರೀರಂಗ ರಾಜನು ದಾಮೋದರಪ್ಪೆರುಮಾಳನಿಗೆ ಕೊಟ್ಟ ದತ್ತಿ.	ಅದೇ, ಪು. ೧೮.

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೭೧.	ಜಾಲಹಳ್ಳಿ	ಬೆಂಗಳೂರು	,,	೧೫೦೬	(ವೀರನರಸಿಂಹ)	,,	ತಿಪ್ಪರಸಯ್ಯನು ಭುಜಬಲರಾಯನ ಅಧಿಕಾರಿಯೆಂದು ತಿಳಿಸುತ್ತದೆ.	ಅದೇ. ಪು. ೨೧.
೭೨.	ಬೆಂಗಳೂರು (ರೆವಿನ್ಯೂಸರ್ವೆ ಆಫೀಸಿನಲ್ಲಿ ಯುದು.)	,,	,,	೧೫೩೧ (?)	ಅಚ್ಯುತರಾಯ	,,	ದೇವಾಂಗ ಮತ್ತು ಶಾಲೆ ಪಂಗಡಗಳ ನಡುವೆ ನಡೆದ ವಿವಾದವನ್ನು ಬ್ರಾಹ್ಮಣನೊಬ್ಬನು ಪರಿಹರಿಸಿದುದನ್ನು ತಿಳಿಸುತ್ತದೆ.	ಅದೇ, ಪು. ೨೨.
೭೩.	ಕೇತಮಾರನಹಳ್ಳಿ	,,	,,	೧೫೩೫	,,	,,	ಅಪೂರ್ಣ ಶಾಸನ.	ಅದೇ, ಪು. ೨೨.
೭೪. ಮತ್ತು ೭೫.	ಬನ್ನೇರು ಘಟ್ಟ	ಆನೇಕಲ್	,,	(೧೫೫೦?)	ಸದಾಶಿವ ರಾಯ	,,	ಮಹಾಮಂಡಲೇಶ್ವರ ತಿಮ್ಮಯ್ಯದೇವ ಮಹಾ ಅರಸುಗಳ ಆಜ್ಞೆಯ ಮೇರೆಗೆ ಮಾಧವ ಪಂಡಿತನ ಪುತ್ರ ಭಾಸ್ಕರ ಪಂಡಿತನು ಧ್ವಜಸ್ತಂಭವನ್ನು ನಿಲ್ಲಿಸಿದ.	ಅದೇ, ಪು. ೨೨.
೭೬.	,,	,,	,,	(೧೫೫೦?)	,,	,,	ಧ್ವಜಸ್ತಂಭವನ್ನು ಕೆತ್ತಿದ ಕಲ್ಕುಟಿಗರ ಹೆಸರುಗಳು.	ಅದೇ, ಪು. ೨೨.
೭೭.	ಚನ್ನಪಟ್ಣ	ಚನ್ನಪಟ್ಣ	,,	—	—	,,	ದೇವರಾಜ ಒಡೆಯರು ಬೆಟ್ಟ ಎನ್ನುವವನಿಗೆ ಚೆನ್ನಪಟ್ಟಣ(?)ದ ಕಲ್ಲಿನ ಕೋಟೆ ಕಟ್ಟಿದುದಕ್ಕಾಗಿ ಕೊಟ್ಟ ದತ್ತಿ.	ಅದೇ, ಪು. ೧೭.

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೭೮.	ಬೆಂಗಳೂರು	ಬೆಂಗಳೂರು	,,	೧೬೭೯	ಎಕ್ರೋಜಿ	ಮರಾಠ	ಎಕ್ರೋಜಿರಾಯನು ಬೆಂಗಳೂರಿನ ಮಹಾನಾಡುಗಳ ವಿನಂತಿಯ ಮೇರೆಗೆ ಮಲ್ಲಾಪುರದ ಮಲ್ಲಿಕಾರ್ಜುನ ದೇವರಿಗೆ ಮೋದರನಿಂಗನ ಹಳ್ಳಿಯನ್ನು ಮಾನ್ಯವಾಗಿ ಬಿಟ್ಟ.	ಆ.ಸ.ಮೈ. ಆ.ರಿ. ೧೯೦೯, ಪು. ೨೩.
೭೯.	ಆಣಜಿ	ದಾವಣಗೆರೆ	ಚಿತ್ರದುರ್ಗ	೧೫೭೮?	—	ಸಂತೆ ಬೆನ್ನೂರು ನಾಯಕರು	ಅಣಜಿಯ ಮಾಚಪ್ಪದೇವನ ಮಠಕ್ಕೆ ಕೋಮನಾಯಕನ ಮಗ ಚಿಕ್ಕ ನಾಗಪ್ಪನಾಯಕನು ತನ್ನ ತಂದೆ ತಾಯಿಗಳ ಸ್ವರ್ಗಸುಖಕ್ಕಾಗಿ ಬಿಟ್ಟ ದತ್ತಿಯ ಉಲ್ಲೇಖ.	ಆ.ಸ ಮೈ.ಆ.ರಿ. ೧೯೦೮, ಪು. ೨೩.
೮೦.	ಹರಿಹರ	,,	,,	೧೫೦೭	ಚೆನ್ನಬಸಪ್ಪ ನಾಯಕ	ಸೋಳೂರು ನಾಯಕರು	ಸೋಳೂರು ಬಸವಭೂಪಾಲನ ಮಗನಾದ ಚೆನ್ನಬಸವಪ್ಪನಾಯಕನ ಆಜ್ಞೆಯ ಮೇರೆಗೆ ಬೋಗೂರು ಅಕ್ಕಿಯ ಹೊನ್ನಿಶೆಟ್ಟಿಯ ಮಗ ಚಿಕ್ಕ ಮಲ್ಲಿಶೆಟ್ಟಿಯು ಹರಿಹರೇಶ್ವರನ ದೇವಾಲಯದ ಹಾಳುಬಿದ್ದಿದ್ದ ಉತ್ತರ ಬಾಗಿಲ ಮೇಲ್ಭಾಗವನ್ನು ಮತ್ತೆ ಕಟ್ಟಿಸಿದನೆಂದು ತಿಳಿಸುತ್ತದೆ.	ಆ.ಸ.ಮೈ ಆ.ರಿ. ೯೧೨. ಪು. ೫೪.
೮೧.	ಆಣಜಿ	,,	,,	೧೫೮೦?	ಕಾಮಗೇತಿ ಕಸ್ತೂರಿ ಮೆದಕೇರಿ ನಾಯಕ	ಚಿತ್ರದುರ್ಗ ನಾಯಕರು	ಕಾಮಗೇತಿ-ಕಸ್ತೂರಿ-ಮೆದಕೇರಿ ನಾಯಕನು ಉಚ್ಚಂಗಿ ದುರ್ಗದ ಬಿತ್ತ ಬಟ್ಟನಿಗೆ ಕೊಟ್ಟದತ್ತಿ.	ಆ.ಸ.ಮೈ.ಆ.ರಿ. ೧೯೦೮, ಪು. ೬೩.

ಅ. ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೮೨.	ಮತ್ತಿಕೆರೆ	ಬೆಂಗಳೂರು	ಬೆಂಗಳೂರು	೧೮೩೪	—	ಬ್ರಿಟಿಷರು	ಮತ್ತಿಕೆರೆಯಲ್ಲಿ ಕೆರೆಯನ್ನು ಕಟ್ಟಿದುದಕ್ಕಾಗಿ ವಲೂರು ವೀರಾ-ಸ್ವಾಮಿಪಿಳ್ಳೆಗೆ ಕೊಟ್ಟ ಭೂದತ್ತಿ.	ಅದೇ, ಪು. ೨೬.
೮೩.	ಅಮ್ರುತಾಪುರ	ತರೀಕೆರೆ	ಚಿಕ್ಕ ಮಗಳೂರು	ಸು. ೧೨೦೦	—	—	(ಈ ಶಾಸನದ ಮೇಲೆ) ಕೊರೆಯಲಾಗಿರುವ ಅಳತೆಕೋಲಂ. ಕೆರೆಯನ್ನು ಅಳೆಯುವ ಮಾಪನ ದಂಡವೆಂದು ತಿಳಿಸುತ್ತದೆ.	ಆ.ಸ.ಮೈ.ಆ.ರಿ. ೧೯೧೨, ಪು. ೬೩.
೮೪.	ಚಿಂಗರಹಳ್ಳಿ	ದೇವನಹಳ್ಳಿ	ಬೆಂಗಳೂರು	೧೪೧೩	—	—	ಕಾಶಿಯ ಅವಧೂತ ನೀಲಕಂಠ ಯೋಗೀಶ್ವರನಿಗೆ ಹಣವನ್ನು ದತ್ತಿಯಾಗಿ ಬಿಟ್ಟುದರ ಉಲ್ಲೇಖವಿದೆ. ಅಲ್ಲದೆ. ಈತನು ನಡೆಸಿದ ಸತ್ಕಾ-ರ್ಯಗಳನ್ನು ನಿರೂಪಿಸುತ್ತದೆ.	ಅದೇ. ಪುಟ. ೬೪.
೮೫.	ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ	೧೭೬೧	—	—	ಈ ತೆಲಗು ಶಾಸನವು ಯಾಡಿಗೌಡಂ ನಾಗಪ್ಪನಿಗೆ ಒಂಬತ್ತು ಹೆಂಡಿರು ಮತ್ತು ಒಬ್ಬ ಮಗನಿದ್ದನೆಂದು ತಿಳಿಸಿ. ಅವರ ಹೆಸರುಗಳನ್ನು ಹೆಸರಿಸುತ್ತದೆ.	ಆ.ಸ ಮೈ.ಆ.ರಿ. ೧೯೦೯, ಪು. ೨೮.
೮೬.	ಬೇವೂರು	ಚನ್ನಪಟ್ಣ	ಬೆಂಗಳೂರು	೧೮೧೮	—	—	(ಆಂಜನೇಯನ) ದೇವಸ್ಥಾನವು ಬೇವೂರಗೌಡನಿಂದ ಮತ್ತೆ ಜೀರ್ಣೋದ್ಧಾರವಾಯಿತೆಂದು ತಿಳಿಸುತ್ತದೆ.	ಅದೇ, ಪು. ೨೯.

ಅ.ನಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೮೭. ಮತ್ತು ೮೮.	ಕೋಲಾರ	ಕೋಲಾರ	ಕೋಲಾರ	—	—	—	ಪರ್ಶಿಯನ್ ಶಾಸನಗಳು	ಆ.ಸ.ಮೈ.ಆ.ರಿ. ೧೯೧೦, ಪು. ೨.
೮೯.	ತೇರಹಳ್ಳಿ	ಕೋಲಾರ	ಕೋಲಾರ	—	—	—	ಪರ್ಶಿಯನ್ ಶಾಸನ	ಅದೇ, ಪು. ೨.
೯೦.	ವಡವಟ್ಟ	ಚನ್ನಪಟ್ಣ	ಬೆಂಗಳೂರು	—	—	—	—	ಅದೇ, ಪು. ೬.
೯೧	ಮುದ್ದನಗೆರೆ	ಮದ್ದೂರು	ಮಂಡ್ಯ	—	—	—	—	ಅದೇ, ಪು. ೮.
೯೨.	ನಾಗಸಂದ್ರ	ಬೆಂಗಳೂರು	ಬೆಂಗಳೂರು	—	—	—	—	ಆ.ಸ.ಮೈ.ಆ.ರಿ. ೧೯೧೧, ಪು. ೨.
೯೩.	ಕೋಳಿಗುಂದ	ಅರಸೀಕೆರೆ	ಹಾಸನ	—	—	...	—	ಅದೇ, ಪು. ೪.
೯೪.	ಹಳೇಬೀಡು	ಬೇಲೂರು	,,	—	—	—	—	ಅದೇ, ಪು. ೮.
೯೫	ದೊಡ್ಡ ಉಳ್ಳರ್ತಿ	ಚಳ್ಳಕೆರೆ	ಚಿತ್ರದುರ್ಗ	—	—	—	—	ಆ.ಸ.ಮೈ ಆ.ರಿ. ೧೯೧೯, ಪು. ೬.
೯೬.	ಶ್ರವಣಬೆಳಗೊಳ	ಚನ್ನರಾಯಪಟ್ಣ	ಹಾಸನ	—	—	—	ಮಲೆಯಾಳಭಾಷೆಯ ಶಾಸನ	ಅದೇ. ಪು. ೭.
೯೭.	ರಾಮಪುರ	ಶ್ರೀರಂಗಪಟ್ಣ	ಮಂಡ್ಯ	—	—	—	—	ಆ.ಸ.ಮೈ.ಆ.ರಿ. ೧೯೧೨, ಪು. ೪.

ಅ. ಸಂ.	ಗ್ರಾಮ	ತಾಲೂಕು	ಜಿಲ್ಲೆ	ಕ್ರಿ. ಶ.	ಆಳುವ ಅರಸ	ಅರಸುಮನೆತನ	ಶಾಸನದ ವಿವರ	ವರದಿ ಮತ್ತು ಉಲ್ಲೇಖ
೯೮.	ಮೈಸೂರು	ಮೈಸೂರು	ಮೈಸೂರು	—	—	—	ಹಿತ್ತಾಳೆ ಬಾಗಿಲು, ವಾಹನ, ಬೆಳ್ಳಿ ಪಾತ್ರೆಗಳ ಮೇಲಿರುವ ದಾನ ಶಾಸನಗಳು.	ಆ ಸ ಮೈ ಆ.ರಿ. ೧೯೧೨, ಪು. ೨೦.
೯೯.	ಆನೇಕಲ್	ಆನೇಕಲ್	ಬೆಂಗಳೂರು	—	—	—	ಕಂಬಾರ ಆಣೆಕಟ್ಟಿನ ಬಗ್ಗೆ ಈ ಶಾಸನದಲ್ಲಿ ಉಲ್ಲೇಖವಿದೆ.	ಆ ಸ.ಮೈ ಆ.ರಿ. ೧೯೦೬, ಪು. ೨೪.
೧೦೦.	ಕಲ್ಲುಕೋಟಿ ನಾಯಕನ ದೊಡ್ಡಿ	ಚನ್ನಪಟ್ಣ	,,	—	—	—	—	ಆ ಸ ಮೈ.ಆ.ರಿ. ೧೯೦೮, ಪು. ೫

ಒರೆಗಲ್ಲು

ನಾಗವರ್ಮನು ಜನ್ನನ ಗುರುವಲ್ಲ :

ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವ ।
ರ್ಮನಿದಾನೀಂತನಶರ್ವವರ್ಮನೆಗಡಂ ಜನ್ನಂಗುಪಾಧ್ಯಾಯನಿಂ ।
ದು ನೃಸಿಂಹಕ್ಷಿತಿನಾಥನಲ್ಲಿ ಕಟಕೋಪಾಧ್ಯಾಯನಾರೆಂಬ ಸೂ ।
ಕ್ತಿ ನವೀನೋಜ್ವಳಬಾಣನಪ್ಪ ಸುಮನೋಬಾಣಂ ಕವಿಶ್ರೇಷ್ಠರೊಳ್ ॥

ಅನಂತನಾಥಪುರಾಣ (೧–೩೪)ದ ಈ ಪದ್ಯಕ್ಕೆ ಆರ್. ನರಸಿಂಹಾಚಾರ್ ಅವರು "ಕಲ್ಯಾಣಚಾಲುಕ್ಯ ಜಗದೇಕನಲ್ಲಿ ಕಟಕೋಪಾಧ್ಯಾಯನಾಗಿದ್ದ ಇಮ್ಮಡಿ ನಾಗವರ್ಮನು ಜನ್ನನಿಗೆ ಉಪಾಧ್ಯಾಯನು, ಹೊಯ್ಸಳ ನರಸಿಂಹನಲ್ಲಿ ಕಟಕೋಪಾಧ್ಯಾಯನಾಗಿರುವವನು ಕವಿ ಸುಮನೋಬಾಣನು" ಎಂದು ಅರ್ಥ ಹಚ್ಚಿದರು. ಈ ಅಭಿಪ್ರಾಯವನ್ನು ವಿರೋಧಿಸಿ ಡಾ. ಎ. ವೆಂಕಟಸುಬ್ಬಯ್ಯನವರು "ಕಲ್ಯಾಣಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲನಲ್ಲಿ ನಾಗವರ್ಮನು ಕಟಕೋಪಾಧ್ಯಾಯನಾಗಿರುವಂತೆ, ಹೊಯ್ಸಳ ನೃಸಿಂಹನಲ್ಲಿ ಕಟಕೋಪಾಧ್ಯಾಯನಾಗಿರುವ ಕವಿ ಸುಮನೋಬಾಣನು ಜನ್ನನಿಗೆ ಉಪಾಧ್ಯಾಯನು" ಎಂದು ಅರ್ಥಹೇಳಿದರು. ವಿದ್ವಾಂಸರು, ವೆಂಕಟಸುಬ್ಬಯ್ಯನವರ ಮಾತನ್ನು ಪರೀಕ್ಷಿಸುವುದಿರಲಿ, ಕಿವಿಯಲ್ಲಿ ಸಹ ಹಾಕಿಕೊಳ್ಳದೆ ನರಸಿಂಹಾಚಾರ್‌ರ ಅಭಿಪ್ರಾಯವನ್ನು ಒಪ್ಪಿ ಬಿಟ್ಟಿದ್ದಾರೆ. ಈ ಅಂಶವನ್ನು ಈಗ ಇನ್ನೊಮ್ಮೆ ಪರೀಕ್ಷಿಸುವುದು ಅತ್ಯವಶ್ಯವೆಂದು ತೋರುತ್ತದೆ.

ಅನಂತನಾಥಪುರಾಣದ ಪ್ರಥಮಾಶ್ವಾಸದಲ್ಲಿ ಈ ಪದ್ಯ ಬರುವ ಸಂದರ್ಭ ಹೀಗಿದೆ :

೧–೧೭ ದೇವತೆಗಳ ಮತ್ತು ಮುನಿಗಳ ಸ್ತುತಿ
೧೮–೨೫ ಕವಿಯ ಗುರುಪರಂಪರೆ
೨೬–೩೩ ಕವಿಪತ್ನಿಯ ಗುರುಪರಂಪರೆ
೩೪ "ಜನನಾಥಂ ಜಗದೇಕನಲ್ಲಿ......" ಎಂಬ ಮೇಲಿನ ಪದ್ಯ
೩೫ "ಎನಗನುಕೂಲಮಕ್ಕೆ ......" ಎಂಬ ಪದ್ಯ.
೩೬–೪೧ ಸುಕವಿಪ್ರಶಂಸೆ, ಕುಕವಿನಿಂದೆ.

೫೨ ಶಂಕರ ಗಂಗೆಯರ ಮಗ ಜನ್ನ ಎಂಬ ಹೇಳಿಕೆ.
೫೩-೬೧ ಕವಿಪರಿಚಯ ಮತ್ತು ಪ್ರಶಂಸೆ.
೬೨ ಪುರಾಣವಿರಚಿಸೆಂದು ವಿದ್ವಜ್ಜನರ ಬಿನ್ನಹ.

೩೪ನೆಯ ಪದ್ಯದಲ್ಲಿ ಬರುವ ಕವಿಸುಮನೋಬಾಣ ಮತ್ತು ೫೨ನೆಯ ಪದ್ಯದಲ್ಲಿ ಬರುವ ಶಂಕರ–ಇವು ಜನ್ನನ ತಂದೆಯ ಎರಡು ಹೆಸರುಗಳೆಂದು ನರಸಿಂಹಾಚಾರ್ ಮೊದಲಾದವರ ಮತ. ಈ ಸಮೀಕರಣಕ್ಕೆ ಆಧಾರವೆಂದರೆ "ಭಾಳಲೋಚನಂ ಕವಿಸುಮನೋಬಾಣನ ಮಗನೆಂದಖಿಳಕ್ಷೋಣಿಗೆ ಪೆಸರಾಯ್ತು" ಎಂದು ಯಶೋಧರ ಚರಿತೆಯಲ್ಲಿ. "ಶಂಕರಪುತ್ರಂ......ಕವಿ ಜನ್ನಂ" ಎಂದು ಅನಂತನಾಥ ಪುರಾಣದಲ್ಲಿ ಹೇಳಿದುದು. ವೀರಶೈವಾದಿ ಧರ್ಮಗಳಂತೆ ಜೈನದಲ್ಲಿಯೂ ಮಗ, ಶಿಷ್ಯ ಸಮಾನಾರ್ಥಕ ಪದಗಳೆಂಬುದಕ್ಕೆ ಹತ್ತಾರು ಉದಾಹರಣೆಗಳನ್ನು ಕೊಟ್ಟು, ಜನ್ನನ ಗುರುವಾದ ಸುಮನೋಬಾಣನೇ ಬೇರೆ, ಜನ್ನನ ತಂದೆಯಾಗಿರುವ ಶಂಕರನೇ ಬೇರೆ ಎಂದು ಹೇಳುತ್ತಾರೆ ಎ. ವೆಂಕಟಸುಬ್ಬಯ್ಯನವರು.

ಶಿಷ್ಯ, ಮಗ ಸಮಾನಾರ್ಥಕ ಪದಗಳೆಂಬ ಈ ಅಂಶವನ್ನು ಬಿಟ್ಟರೂ ಜೈನ ಪುರಾಣಗಳ ಪೀಠಿಕಾಸಂಧಿಯ ವಿಷಯಾನುಕ್ರಮದ ಪರಿಚಯ-ವಿವೇಚನೆಗೆ ಮೇಲಿನ ವಿವರಣೆಯಿಂದ ಒಂದು ಅಂಶ ಹೊಳೆಯುತ್ತದೆ. ಅದು : ೩೩ನೆಯ ಪದ್ಯದ ವರೆಗೆ ದೀಕ್ಷಾಗುರುಪರಂಪರೆ ಹೇಳಿ, ೩೪ನೆಯ ಪದ್ಯದಲ್ಲಿ ಒಮ್ಮೆ ಸುಮನೋಬಾಣನಾಮದಿಂದ, ೫೨ನೆಯ ಪದ್ಯದಲ್ಲಿ ಇನ್ನೊಮ್ಮೆ ಶಂಕರನಾಮದಿಂದ ತಂದೆಯ ಹೆಸರು ಹೇಳಿರುವನೆನ್ನುವುದು ವಿಚಿತ್ರವೆನಿಸುತ್ತದೆ ಅದಕ್ಕಾಗಿ ೩೩ರ ವರೆಗೆ **ದೀಕ್ಷಾಗುರು** ಪರಂಪರೆಯನ್ನು,೩೪ನೆಯ ದರಲ್ಲಿ **ವಿದ್ಯಾಗುರು** ಸುಮನೋಬಾಣನನ್ನು ಸೂಚಿಸಿ, ಆಮೇಲೆ ೧೬ ಪದ್ಯಗಳಲ್ಲಿ ಪ್ರಾಚೀನ ಕವಿಸ್ತುತಿ, ಸುಕವಿಪ್ರಶಂಸೆ, ಕುಕವಿನಿಂದೆಗಳನ್ನು ವಿವರಿಸಿ ೫೨ನೆಯದರಲ್ಲಿ ತನ್ನ **ಲೌಕಿಕತಂದೆಯ** ಸಂಗತಿಯನ್ನು ವ್ಯಕ್ತಪಡಿಸಿರುವನೆಂದು ಭಾವಿಸುವುದು ಸೂಕ್ತವೆನಿಸುತ್ತದೆ. ಜನ್ನನಿಗೆ ಸುಮನೋಬಾಣ ಗುರು, ಶಂಕರ ತಂದೆ ಎಂದು ಇದರಿಂದಲೂ ಸ್ಪಷ್ಟವಾಗುತ್ತದೆ.

ಎರಡನೆಯದಾಗಿ, ಕಲ್ಯಾಣಚಾಲುಕ್ಯರಲ್ಲಿ ಕಟಕೋಪಾಧ್ಯಾಯನಾಗಿದ್ದ ನಾಗವರ್ಮ, ದೂರದ ದ್ವಾರಸಮುದ್ರದಲ್ಲಿದ್ದ ಜನ್ನನಿಗೆ ಗುರುವಾಗಿರುವುದೂ ಅಸಂಭವ. ಅದೇ ಪಟ್ಟಣದಲ್ಲಿ ಕವಿಸುಮನೋಬಾಣನೆಂಬ ಸುಪ್ರಸಿದ್ಧ ಕಟಕಾಚಾರ್ಯನಿದ್ದುದನ್ನು ನೆನೆದರೆ, ಇದು ಇನ್ನೂ ಅಸಂಭವವೆನಿಸುತ್ತದೆ. ಜನ್ಮತಃ ನಾಗವರ್ಮ ಮತ್ತು ಜನ್ನರದು ಸಂಚಾರೀ ಜೀವನವಲ್ಲ; ಸಂತೃಪ್ತ ಜೀವನ. ಹೀಗಾಗಿ ಒಬ್ಬನು ದ್ವಾರಸಮುದ್ರಕ್ಕೋ ಇನ್ನೊಬ್ಬನು ಕಲ್ಯಾಣಕ್ಕೋ ಹೋಗಿ ಗುರು-ಶಿಷ್ಯ ಸಂಬಂಧ ಬೆಳೆಸಿಕೊಂಡಿರಲಾರರು.

ಕವಿಚರಿತೆಕಾರರ ಅಭಿಪ್ರಾಯದಂತೆ ನಾಗವರ್ಮ (೧೧೪೫) ಮತ್ತು ಜನ್ನ (೧೨೦೯)ರ ಮಧ್ಯೆ ಸುಮಾರು ಮೂರು ತಲೆಮಾರುಗಳಷ್ಟು ಅಂತರ ಕಂಡುಬರುತ್ತದೆ. ಆದರೂ ಅವರು 'ನಾಗವರ್ಮನು ಬಹುದಿವಸ ಬದುಕಿದ್ದು. ವಾರ್ಧಕದಲ್ಲಿ ಜನ್ನನಿಗೆ ಉಪಾಧ್ಯಾಯನಾದಂತೆ ತೋರುತ್ತದೆ' ಎಂದು ಹೇಳಿ ತಮ್ಮ ಮತವನ್ನು ಸಮರ್ಥಿಸಿಕೊಳ್ಳುತ್ತಾರೆ. ಈ ಪ್ರಸಂಗದಲ್ಲಿ ಇತ್ತೀಚೆ ಲಭಿಸಿದ ಇದೇ ನಾಗವರ್ಮನ 'ವರ್ಧಮಾನ ಪುರಾಣ' ಹೆಚ್ಚಿನ ಬೆಳಕು ಬೀರುತ್ತದೆ. 'ವರ್ಧಮಾನ ಪುರಾಣ' ರಚನೆಗೊಂಡ ಉಲ್ಲೇಖ ಅಲ್ಲಿ ಹೀಗಿದೆ :

ವಸುವರ್ಗಾಂತಮಿದ × ತೀತಳಕಭೂಭೃದ್ವತ್ಸರಂ ಚಿತ್ರಭಾ ।
ನುಸಮಾಖ್ಯಾಬ್ದಕಮಶ್ವಯುಗ್ಬಹುಳಷಷ್ಠೀವಾಸರಂ ತಾ[ಂ] ಪುಸ ।
ರ್ವಸು ಪಕ್ಷಂ ಸುರಮಂತ್ರಿವಾರಮಭಿಜಿಲ್ಲಗ್ನೋದಯಂ ಕೂಡೆ ವ ।
ರ್ತಿಸೆ ಪೇಳ್ದಂ ಕವಿತಾಗುಣೋದಯನಿದಂ ಚೆಲ್ವಾಗೆ ತಾತ್ಪರ್ಯದಿಂ ॥೧

ಈ ಪದ್ಯದ ನಷ್ಟಪಾಠವನ್ನು, ದೋಷಪಾಠಗಳನ್ನು ತಿದ್ದಲು ಬೇರೆ ಹಸ್ತಪ್ರತಿಗಳಿಲ್ಲ. ಸ್ವಾಮಿ ಕಣ್ಣುಪಿಳ್ಳೆ ಪಂಚಾಂಗದ ಮೇರೆಗೆ ಚಿತ್ರಭಾನು ಸಂವತ್ಸರ ೯೦೪. ೯೬೪, ೧೦೨೪. ೧೦೮೪–ಈ ನಾಲ್ಕು ಶಕವರ್ಷಗಳಲ್ಲಿ ಬರುತ್ತದೆ. ಇವುಗಳಲ್ಲಿ ಶಾಲಿವಾಹನ ಶಕ ೯೬೪ರ ಸಂವತ್ಸರ ಮಾಸ, ತಿಥಿ. ವಾರ. ನಕ್ಷತ್ರಗಳೆಲ್ಲ ಈ ಪದ್ಯದ ವಿವರಗಳಿಗೆ ಹೊಂದುವುದರಿಂದ ವರ್ಧಮಾನಪುರಾಣ, ಶಾಲಿವಾಹನ ಶಕ ೯೬೪ರಲ್ಲಿ ಹುಟ್ಟಿದೆಯೆಂದು ಗ್ರಹಿಸಬೇಕಾಗುತ್ತದೆ

ಮೇಲಿನ ತ್ರುಟಿತ ಪದ್ಯದ "ವಸುವರ್ಗಾಂತ" ಎಂಬುದಕ್ಕೆ ೬೪ ಅಂತ್ಯ (ವಸು=೮, ಇದರ ವರ್ಗ ೮×೮=೬೪)ದಲ್ಲಿರಬೇಕು ಎಂದು ಅರ್ಥಹೊರಡುವ ಕಾರಣ ನಾವು ಹೇಳುವ ಸಂವತ್ಸರ ೯೬೪ ಇನ್ನೂ ಸತ್ಯವೆನಿಸುತ್ತದೆ. ಈ ಒಂದು ಎಳೆಯನ್ನು ಹಿಡಿದುಕೊಂಡು ಪ್ರಸ್ತುತ ಪದ್ಯವನ್ನು ಹೀಗೆ ಪರಿಷ್ಕರಿಸಬಹುದು.

೧. "ವಸುವರ್ಗಾಂತಮಿದ × ತೀತಳಕಭೂಭೃದ್ವತ್ಸರಂ" ಎಂಬ ಸಂಸ್ಕೃತ ಪದ ಸಂಯೋಜನೆಯಲ್ಲಿ 'ಮಿದ' ಎಂಬುದು ಸಂಸ್ಕೃತವಲ್ಲದಂತೆ ತೋರುವುದರಿಂದ ಇದಂ ದುಷ್ಟಪಾಠವಾಗಿರಬೇಕು. "ತೀತಳಕ+ಭೂಭೃದ್ವತ್ಸರಂ" ಎಂಬಲ್ಲಿಯ 'ತೀತಳಕ' ಎಂಬುದು ದುಷ್ಟಪಾಠವಾಗಿರುವುದು ತೀರ ಸ್ಪಷ್ಟ. ಈ ಎರಡೂ ಪಾಠಗಳನ್ನು ಹೀಗೆ ಪರಿಷ್ಕರಿಸಬಹುದು :

"ಗಿರಿಶಿಖಿಮಾಯುಮಾರ್ಗ ಶಶಿಸಂಖ್ಯೆಯೊಳ್" "ಉಡುದೇವಸಿಧಿನಯನೇಂದು" ಎಂದು ಮಿತಿನಿರ್ದೇಶನ ಸಂಕೇತಪದಗಳು 'ಸಮಾಸಪದ'ವಾಗಿ ಹೊಂದಿಕೊಂಡು


೧. ಈ ವರ್ಧಮಾನಪುರಾಣ ಅಚ್ಚಾಗುತ್ತಲಿದೆಯೆಂದು ಸಂಪಾದಕರಾದ ಬಿ. ಎಸ್. ಸಣ್ಣಯ್ಯನವರು ಪತ್ರ ಬರೆದು ತಿಳಿಸಿದ್ದಾರೆ. ಹಸ್ತಪ್ರತಿಯಿಂದ ಈ ಪದ್ಯವನ್ನು 'ನನಗೆ ಪೂರೈಸಿದವರು ಪ್ರೊ. ಸಂಗಮೇಶ ಬಿರಾದಾರ.

ಬರುವುದನ್ನು ನೋಡಿದರೆ ಮೇಲಿನ ಪಾಠದಲ್ಲಿ ಪ್ರತ್ಯಯದಂತೆ ತೋರುವ "ವಿಂದ" ವನ್ನು 'ನಿಧಿ' ಎಂದು ತಿದ್ದಬೇಕೆನಿಸುತ್ತದೆ. ಅಕ್ಷರದ ರೂಪಸಾದೃಶ್ಯವೂ ಇದನ್ನು ಬೆಂಬಲಿಸುತ್ತದೆ. ಇನ್ನು ನಷ್ಟಭಾಗದಲ್ಲಿ 'ಪ್ರ' ಇರಬಹುದು. ಆಗ "ವಸುವರ್ಗಾಂತ [ನಿಧಿಪ್ರ]ತೀತ" ಎಂಬ ಪಾಠ ಸಿದ್ಧವಾಗುತ್ತದೆ.

೨. ಇಷ್ಟು ಪಾಠದಿಂದ ಮುಂದೆ ಉಳಿಯುವುದು "ಳಕ ಭೂಭೃದ್ವತ್ಸರಂ". ಇದು ಬಹುಶಃ "ಶಕಭೂಭೃದ್ವತ್ಸರಂ" ಇರಬಹುದು. ಶಕನೃಪ (=ಭೂಭೃತ್)ವರ್ಷ ವೆಂದು ಇದರ ಅರ್ಥ. ಕನ್ನಡ ಕಾವ್ಯ, ಶಾಸನಗಳಲ್ಲಿ ಬರುವ "ಶಕನೃಪಾಬ್ದಂ", "ಶಾಲಿ ವಾಹನ ಶಕಾಬ್ದಂ" ಮೊದಲಾದ ಪ್ರಯೋಗಗಳನ್ನು ಇಲ್ಲಿ ನೆನೆಯಬಹುದು.

ನಮ್ಮ ಈ ಪರಿಷ್ಕರಣದಿಂದ "ವಸುವರ್ಗಾಂತ[ನಿಧಿಪ್ರ]ತೀತ[ಶ]ಕಭೂಭೃ ದ್ವತ್ಸರಂ" ಎಂಬ ಪಾಠ ಸಿದ್ಧವಾಗಿ, ಇದರಿಂದ ಶಕೆ ೯೬೪ (ನಿಧಿ=೯, ವಸುವರ್ಗ ೮×೮=೬೪) ಎಂಬ ಅರ್ಥ ಹೊರಡುತ್ತದೆ. ಹೀಗಾಗಿ ಈ ನಾಗವರ್ಮನ ಕಾಲ ಶಾಲಿವಾಹನ ಶಕೆ ೯೬೪ ಅಂದರೆ ಕ್ರಿ. ಶ. ೧೦೪೨ ಇರಬಹುದೇ ಹೊರತು ಕವಿಚರಿತೆ ಕಾರರು ಹೇಳುವಂತೆ ೧೧೪೫ ಅಲ್ಲ. ಈ ಸುಮಾರಿಗೆ ಪೊಟ್ಟಲಕೆರೆ ರಾಜಧಾನಿಯಲ್ಲಿ ಆಳುತ್ತಿದ್ದವ ಕಲ್ಯಾಣಚಾಲುಕ್ಯ ಜಗದೇಕಮಲ್ಲ ಜಯಸಿಂಹ II. ನಾಗವರ್ಮ ಕಟಕಾ ಚಾರ್ಯನಾಗಿದ್ದುದು ಪೊಟ್ಟಲಕೆರೆಯಲ್ಲಿ; ಈ ಅರಸನ ಆಶ್ರಯದಲ್ಲಿ. ಇದರಿಂದ ನಾಗ ವರ್ಮ (೧೦೪೨), ಜನ್ನ (೧೨೦೯) ರ ಮಧ್ಯೆ ೧೬೫ ವರ್ಷಗಳ ಅಂತರ ತೋರಿಬಂದು ಅವರ ಗುರುಶಿಷ್ಯ ಸಂಬಂಧ ಕಡಿದೇ ಬೀಳುತ್ತದೆ. ಕಾರಣ ಈ ಮೂರನೆಯ ಆಧಾರ ದಿಂದಲೂ ನಾಗವರ್ಮನು ಜನ್ನನ ಗುರುವಲ್ಲವೆಂದು ಸ್ಪಷ್ಟವಾಗುತ್ತದೆ.

ಈಗ (ಶಂಕರನ ಮಗನಾದ) ಜನ್ನನು ನಾಗವರ್ಮನ ಶಿಷ್ಯನಲ್ಲ, ಸುಮನೋ ಬಾಣನ ಶಿಷ್ಯನೆಂದು ಒಪ್ಪಬೇಕಾಗುತ್ತದೆ. ಕೇಶಿರಾಜ, ತಾನು ಸುಮನೋಬಾಣನ ಮಗಳ ಮಗ, ಮಲ್ಲಿಕಾರ್ಜುನನ ಮಗನೆಂದು ಹೇಳಿಕೊಂಡಿರುವುದರಿಂದ ಈ ವರೆಗೆ ಭಾವಿಸುತ್ತ ಬಂದಿರುವ ಇವರ ವಂಶಸಂಬಂಧವನ್ನು ಹೀಗೆ ಮುರಿದು ಹೊಂದಿಸು ವುದು ಅನಿವಾರ್ಯವಾಗುತ್ತದೆ.



ಒಟ್ಟಿನಲ್ಲಿ ೧. ಜನ್ನನ ಗುರು ನಾಗವರ್ಮನಲ್ಲ.
೨. ಜನ್ನನ ಗುರು ಸುಮನೋಬಾಣ, ತಂದೆ ಶಂಕರ.
೩. ಜನ್ನ, ಕೇಶಿರಾಜನ ಸೋದರ ಮಾವನಲ್ಲ.

ಹೀಗೆ ಜೈನನಾಗಿರುವ ಜನ್ನನ ಸಂಬಂಧ ತಪ್ಪಿಹೋದರೆ, ಕವಿ ಸುಮನೋಬಾಣ, ಮಲ್ಲಿಕಾರ್ಜುನ, ಕೇಶಿರಾಜರ ಜೈನತ್ವದ ಬಗ್ಗೆ ಸಂದೇಹವೂ ಹುಟ್ಟುತ್ತದೆ.

ಒಂದುವೇಳೆ ಗುರುವೂ ತಂದೆಯೂ ಆಗಿದ್ದ ಒಬ್ಬ ವ್ಯಕ್ತಿಗಾಗಿಯೇ ಜನ್ನನು ಕ್ರಮವಾಗಿ ಸುಮನೋಬಾಣನೆಂಬ ಬಿರುದನ್ನೂ, ಶಂಕರನೆಂಬ ಅಂಕಿತನಾಮವನ್ನೂ ಬಳಸಿದ್ದರೆ ಮೇಲಿನ ೨, ೩ನೆಯ ಹೇಳಿಕೆಗಳು ಬಿದ್ದುಹೋಗಬಹುದು. ಆದರೆ "ಜನ್ನನ ಗುರು ನಾಗವರ್ಮನಲ್ಲ" ಎಂಬುದು ಮಾತ್ರ ಐತಿಹಾಸಿಕ ಸತ್ಯವಾಗಿ ನಿಲ್ಲುತ್ತದೆ.

ಮಧುಕೇಶ್ವರ ದೇವಾಲಯದ ಶರಣರ ವಿಗ್ರಹಗಳು :

ಬನವಾಸಿ ಮಧುಕೇಶ್ವರ ದೇವಾಲಯದ ಶಿವೋತ್ಸವ ಮಂಟಪದ ಗಗ್ಗರಿಕಲ್ಲಿನ ಸಂತ್ತ "ದಾಸಿಯಯ್ಯ. ಮೋಳಿಗೆಯ್ಯ, ನುಲಿಯ ಚಂದಯ್ಯ, ಆಯ್ದಕ್ಕಿ ಮಾರಯ್ಯ, ಹಡಪದ ಅಪ್ಪಣ್ಣ, ಅಗ್ಗವಣಿ ಹೊನ್ನಯ್ಯ. ಗಂಡಬ್ರಹ್ಮಯ್ಯ-ಈ ಶರಣರ ವಿಗ್ರಹಗಳನ್ನು ಕೆತ್ತಲಾಗಿದೆಯೆಂದು ಶ್ರೀ. ಬಿ. ಎಸ್. ಗದ್ದಗಿಮಠ ಅವರು ಶಾಸನೋಕ್ತ ವೀರಶೈವರು ಎಂಬ ಲೇಖನ (ವಿಭೂತಿ ೧೯೬೧) ದಲ್ಲಿ ಹೇಳಿದ್ದರು. ಆಮೇಲೆ ಹಲವು ವಿದ್ವಾಂಸರೂ 'ಶಾಸನದಲ್ಲಿ ಶಿವಶರಣರು' ಎಂಬ ಗ್ರಂಥದಲ್ಲಿ ನಾನೂ ಈ ಹೇಳಿಕೆಯನ್ನೇ ಉದ್ಧರಿಸಂತ್ತ ನಡೆದಿದ್ದೆವು. ಇತ್ತೀಚೆ ಡಾ. ವಿ. ಶಿವಾನಂದ ಅವರು 'ಕರ್ನಾಟಕ ಭಾರತಿ' (೬-೩) ಯಲ್ಲಿ ಅವುಗಳ ವಿಷಯವಾಗಿ ಲೇಖನ ಬರೆಯುತ್ತ, ಜೊತೆಗೆ ಕಷ್ಟಪಟ್ಟು ಸಂಗ್ರಹಿಸಿದ ಆ ಚಿತ್ರಗಳನ್ನೂ ಪ್ರಕಟಿಸಿದ್ದಾರೆ. ಈ ಲೇಖನದಲ್ಲಿ ಮೊದಲನೆಯ ಚಿತ್ರ : ದಾಸಿಮಣ್ಣ (ದೇವರ ದಾಸಿಮಯ್ಯ), ಐದನೆಯ ಚಿತ್ರ : ಹೆಸರು ಸ್ಪಷ್ಟವಾಗಿ ಕಾಣುವುದಿಲ್ಲ ಎಂದು ಹೇಳಿದ್ದಾರೆ. ಇತ್ತೀಚೆ ಅವರು ನನಗೆ ಪೂರೈಸಿದ ಚಿತ್ರಗಳ ಮೇಲಿರುವ ಲಿಪಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಲು. ಮೊದಲನೆಯದು ದಾಸಿಮಣ್ಣನಾಗಿರದೇ ಲಧೆ(=ದ್ದೆ) ಸೋಮಣ್ಣನದೆಂದೂ,[1] ಐದನೆಯದು 'ಯಿಕಧ ಮಾರ್‍ಯಯ' (=ಇಕ್ಕದ ಮಾರಯ್ಯ)ನದೆಂದೂ ತಿಳಿದುಬಂದಿತು.[2]

ಚನ್ನಬಸವಪುರಾಣ (೫೭-೫೮), ಲದ್ದೆಯ ಸೋಮಣ್ಣ ಎಂದು ಕೇವಲ ಹೆಸ

1. ಡಾ. ವಿ. ಶಿವಾನಂದರು ಇತ್ತೀಚೆ ಸಂಪಾದಿಸಿದ 'ಗುಂಡ ಬ್ರಹ್ಮಯ್ಯಗಳ ಚರಿತ್ರೆ' ಯನ್ನು ಪ್ರಕಟಿಸುತ್ತ ನನ್ನ ಸೂಚನೆಯಂತೆ ದೇವರದಾಸಿಮಯ್ಯ ಎಂಬುದನ್ನು ಲದ್ದೆಯ ಸೋಮಣ್ಣ ಎಂದು ತಿದ್ದಿಕೊಂಡಿದ್ದಾರೆ.

2. ಡಾ. ಗದ್ದಗಿಮಠ ಅವರು ವಿಭೂತಿಯಲ್ಲಿ ಪ್ರಕಟಿಸಿದ 'ಶಾಸನೋಕ್ತ ವೀರಶೈವರು' (೧೯೬೧) ಹೆಸರಿನ ಲೇಖನದಲ್ಲಿ ಐದನೆಯ ಚಿತ್ರದ ಹೆಸರನ್ನು ಹೇಳಿಲ್ಲ. ಇದನ್ನು ಅನುಸರಿಸಿ ಡಾ. ವಿ. ಶಿವಾನಂದರು ಕೂಡ ಹೆಸರು ಸ್ಪಷ್ಟವಾಗಿಲ್ಲವೆಂದು ಹೇಳಿದ್ದಾರೆ. ಆಶ್ಚರ್ಯದ ಸಂಗತಿಯೆಂದರೆ ಶ್ರೀ ಗದ್ದಗಿಮಠರು ಶರಣಸಾಹಿತ್ಯ (೨೩-೭-೧೯೬೦) ದಲ್ಲಿ ಪ್ರಕಟಿಸಿದ "ಶಾಸನೋಕ್ತ ವೀರಶೈವರು" ಲೇಖನದಲ್ಲಿಯೇ ಇದು ಇಕ್ಕದ ಮಾರಯ್ಯನದೆಂದು ಹೇಳಿದ್ದಾರೆ. ಆದರೆ ಈ ಲೇಖನ ಪೂರ್ತಿಯಾದ ಮೇಲೆ ಆ ಅಂಶ ನನ್ನ ಕಣ್ಣಿಗೆ ಬಿತ್ತು.

ರನ್ನು, ಮಹಲಿಂಗಲೀಲೆ (೧೦–೪೮) ಈತನು ಶಿವನಿಗೆ ಒಂದು ಪಟ್ಟಣ ರಚಿಸಿದನೆಂಬ ವಿಷಯವನ್ನು ತಿಳಿಸುತ್ತವೆ. ಇವನ ಹೆಸರಿನಲ್ಲಿ

ಆವ ಕಾಯಕವಾದಡೂ ಸ್ವಕಾಯಕವ ಮಾಡಿ
ಗುರುಲಿಂಗ ಜಂಗಮದ ಮುಂದಿಟ್ಟು
ಒಕ್ಕುದ ಹಾರೈಸಿ ಮಿಕ್ಕುದ ಕೈಕೊಂಡು
ವ್ಯಾಧಿ ಬಂದಡೆ ನರಳು, ಬೇನೆ ಬಂದಡೆ ಒರಲು
ಜೀವ ಹೋದಡೆ ಸಾಯಿ
ಇದಕ್ಕಾ ದೇವರ ಹಂಗೇಕೆ ಭಾಪು ಲದ್ದೆಯಸೋಮ

ಎಂಬ ಒಂದು ವಚನವೂ ಸಿಗುತ್ತದೆ.

ಐದನೆಯ ಚಿತ್ರದಲ್ಲಿಯುವ 'ಇಕ್ಕದ ಮಾರಯ್ಯ'ನೆಂಬ ಶರಣ. ಶಿರಾಳಕೊಪ್ಪದ ಸಮೀಪವಿರುವ ಶಿವನಪಾದ ಇವನ ಗ್ರಾಮ. ಭಿಕ್ಷುಕನಾಗಿ ಬಂದ ಶಿವನಿಂದ ಕಾಯಕ ಮಾಡಿಸಿದ ಶರಣನೀತ. ಇತ್ತೀಚೆ ಲಭಿಸಿದ 'ಇಕ್ಕದ ಮಾರಯ್ಯನ ಸಾಂಗತ್ಯ' ಎಂಬ ಕೃತಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನಸಂಸ್ಥೆಯ ಹಸ್ತಪ್ರತಿ ಭಾಂಡಾರದಲ್ಲಿ ಇರುವುದಾಗಿ ತಿಳಿದುಬರುತ್ತದೆ.*

ಎಂ. ಎಂ. ಕಲಬುರ್ಗಿ

'ಮುಯ್ಯ್' : ಒಂದು ಟಿಪ್ಪಣಿ

ಮದುವೆ, ಸಮಾಜದ ಗಂಡು-ಹೆಣ್ಣುಗಳನ್ನು ವ್ಯವಸ್ಥಿತ ಕುಟುಂಬ ಜೀವನಕ್ಕೆ ತೊಡಗಿಸುವ ಪರಂಪರಾನುಗತ ವ್ಯವಸ್ಥೆ. ಇದರಲ್ಲಿ ವೈಯಕ್ತಿಕ ಅಗತ್ಯದ ಅನಿವಾರ್ಯತೆಯಷ್ಟೇ ಸಾಮಾಜಿಕ, ನೈತಿಕ, ಧಾರ್ಮಿಕ ಹೊಣೆಗಾರಿಕೆ ಇರುತ್ತದೆ. ಲೈಂಗಿಕ ತೃಪ್ತಿ, ಸಂತಾನಾಭಿವೃದ್ಧಿಯ ಮೂಲಕ ವಂಶದ ಮುಂದುವರಿಕೆ ಮೂಲಭೂತ ಹಾಗೂ ಸಾರ್ವತ್ರಿಕವಾದ ಆಶಯಗಳು. ವಿವಾಹಪದ್ಧತಿಯ ಉಳಿದ ಅಂಶಗಳು ಭಿನ್ನ ಸಾಂಸ್ಕೃತಿಕ ಪರಿಸರದಲ್ಲಿ ಬೇರೆಬೇರೆಯಾಗಬಹುದು. ಅಥವಾ ಮತ್ತೊಂದು ಪ್ರದೇಶದ ಜನರ ಜೀವನ ಸಂದರ್ಭದಲ್ಲಿ ಅವು ಅರ್ಥಪೂರ್ಣವೆನಿಸದೆ ಹೋಗಬಹುದು. ನಮ್ಮ ವಿವಾಹ ಕ್ರಮಗಳಲ್ಲಿದ್ದ ಹಲವು ಆಚರಣೆಗಳು ಪ್ರಗತಿಪರ ಸಮಾಜಗಳ ಪ್ರಭಾವದಿಂದಲೋ ಅಥವಾ ಅಗತ್ಯ ಎನ್ನಿಸದಿದ್ದರಿಂದಲೋ ಪರಿಷ್ಕರಿಸಲ್ಪಟ್ಟವು, ಇಲ್ಲವೆ ಬದಲಾದುವು. ಹೀಗಾದಾಗ ಒಂದು ಅನುಸರಣೆಯ ಕ್ರಮದ ಹಿಂದಿದ್ದ ಮೂಲ ಆಶಯ, ಕಾಲಗತಿಯಲ್ಲಿ ಮರೆತುಹೋಗಬಹುದಾದ ಸಾಧ್ಯತೆ ಇರುತ್ತದೆ.

ವಿವಾಹ ಸಂದರ್ಭಗಳಲ್ಲಿ 'ಉಡುಗೊರೆ' ನೀಡುವುದು ಎಲ್ಲಾಕಡೆ ಕಂಡುಬರುತ್ತದೆ. ಇದೊಂದು ವಿವಾಹದ ಶಿಷ್ಟಕ್ರಮವೆಂದು ಭಾವಿಸಿದ್ದೇವೆ. ನಮಗೆ ತಿಳಿದಿರು

*ಇಕ್ಕದ ಮಾರಯ್ಯನ ಸಂಗತಿಗಳನ್ನು ನನ್ನ ಗಮನಕ್ಕೆ ತಂದ ಶ್ರೀ. ಎಚ್. ದೇವೀರಪ್ಪ ಅವರಿಗೆ ಕೃತಜ್ಞನಾಗಿದ್ದೇನೆ.

ಮತ್ತೆ ಉಡುವ ಬಟ್ಟೆರೂಪದ ಉಡುಗೊರೆ(ಉಡುವ + ಕೊರೆ) ಕಾಲಕ್ರಮೇಣ ತನ್ನ ಅರ್ಥವಲ್ಲಿ ವಿಶಾಲತೆಯನ್ನು ಪಡೆದುಕೊಂಡಿತು. ವಿವಾಹ ಸಂದರ್ಭದಲ್ಲಿ ಕೊಡುಗೆಗಳಾಗಿ ನೀಡಬಹುದಾದ ಹಣ, ವಸ್ತ್ರ, ಆಭರಣಗಳಿಗೆಲ್ಲಾ ಈ ಅರ್ಥ ಬಂದಿತು. ಸುಸಂಸ್ಕೃತ ಜನರು ಇದನ್ನು ಉಡುಗೊರೆ ಎಂದು ಕರೆದರೆ, ಗ್ರಾಮೀಣ ಜನರು ಇದಕ್ಕೆ 'ಮುಯ್' (ಮುಯ್ಯಿ) ಎಂದು ಕರೆಯುತ್ತಾರೆ. ಈಗಲೂ ಮಲೆನಾಡುಪ್ರದೇಶದ ಹಳ್ಳಿಗಳಲ್ಲಿ 'ಮುಯ್‌ಕೊಡುವುದು, ಮುಯ್‌ಮುಟ್ಟು ಮಾಡುವುದು' ಎಂದೇ ವಾಡಿಕೆಯಲ್ಲಿದೆ. ಮುಯ್ ಎಂಬ ಮಾತು ಅವರ ಬಾಯಲ್ಲಿ ಕೆಲವೊಮ್ಮೆ 'ಮೈ' ಎಂದು ಉಚ್ಚಾರವಾಗುತ್ತದೆ. ಬಯಲುನಾಡುಗಳಲ್ಲೂ ಈ ಪದ ಬಳಕೆಯಲ್ಲಿದೆ.

ಮುಯ್ ಎಂದರೆ ಪ್ರತಿಯಾಗಿ ಕೊಡುವುದು ಎಂದು ಅರ್ಥವಾಗುತ್ತದೆ. ದುರ್ಯೋಧನ, ಭೀಮನಿಗೆ ಪ್ರತಿ ಏಟನ್ನು ಕೊಟ್ಟ; ಸೇಡಿಗೆ ಪ್ರತೀಕಾರವಾಗಿ (Tit for Tat) ಕೊಟ್ಟ ಎಂಬರ್ಥದಲ್ಲಿ. ಆದರೆ ಇಲ್ಲಿಯ ಅರ್ಥ, ಅದಲ್ಲ. ತನ್ನ ಅಥವಾ ತನ್ನವರ ಮದುವೆಯಲ್ಲಿ ಸ್ನೇಹಿತರು, ಬಂಧುಗಳು ಹಣವನ್ನೋ, ಬಟ್ಟೆಯನ್ನೋ, ಪಾತ್ರೆ ಪರಡಿಗಳನ್ನೋ ಕೊಡುಗೆಯಾಗಿ ಕೊಟ್ಟರೆ, ಅದಕ್ಕೆ ಪ್ರತಿಯಾಗಿ ಅಷ್ಟೇ ಮೊತ್ತದ ಅಥವಾ ಅದಕ್ಕಿಂತ ಹೆಚ್ಚಾದ ಕೊಡುಗೆಯನ್ನು ವಾಪಸ್ಸು ನೀಡುವುದು. ಇಂಥದೇ ಒಂದು ಬಗೆಯ ವಿಪರ್ಯಯ (Reciprocal) ಕೊಡುಗೆಕ್ರಮ, ಕೆಲವು ವಿಶೇಷ ಸಂದರ್ಭಗಳಲ್ಲಿ ಮೆಕ್ಸಿಕೊ ಜನರು ಮತ್ತು ಹಲವು ಆದಿವಾಸಿ ಜನರಲ್ಲಿ ರೂಢಿಯಲ್ಲಿದೆಯೆಂದು ಪ್ರಸಿದ್ಧ ಮಾನವಶಾಸ್ತ್ರಜ್ಞರಾದ ಆರ್ ಎಲ್. ಬೀಲ್ಸ್ ಮತ್ತು ಹ್ಯಾರಿ ಹೊಯಿಜರ್ ಉಲ್ಲೇಖಿಸುತ್ತಾರೆ. ಹೀಗೆ ಮುಯ್ ಕೊಡುತ್ತಿದ್ದ ವಸ್ತುಗಳು ಹೆಚ್ಚಾಗಿ ಹಣದ ರೂಪದಲ್ಲಿಯೇ ಇರುತ್ತಿದ್ದುವೆಂದು ಊಹಿಸಬಹುದು. ಬರವಣಿಗೆ ಗೊತ್ತಿಲ್ಲದ ಬಹು ಮಂದಿ ಹಳ್ಳಿಗರು ಕೊಡುಗೆ ಕೊಟ್ಟವರ ಹೆಸರುಗಳನ್ನು ನೆನಪಿನ ಶಕ್ತಿಯಿಂದಲೇ ಉಳಿಸಿಕೊಂಡು ಕ್ರಮವಾಗಿ ಹಿಂದಿರುಗಿಸಬೇಕಾಗಿತ್ತು. ವಿದ್ಯಾಭ್ಯಾಸ ಹೆಚ್ಚಿದಂತೆಲ್ಲಾ ಈ ಕ್ರಮ ತಪ್ಪಿ, ಬರೆದಿಡುವ ಪದ್ಧತಿ ರೂಢಿಯಾಯಿತು. ಇದನ್ನು 'ಮುಯ್‌ಪಟ್ಟಿ' ಎಂದು ಕರೆಯುತ್ತಾರೆ. ಮುಯ್‌ಪಟ್ಟಿ ಬರವಣಿಗೆಯ ಹಳೆಯ ಮಾದರಿ ಹೀಗಿದೆ:

> ಸ್ವಸ್ತಿ ! ಶ್ರೀ ಜಯನಾಮ ಸಂವತ್ಸರದ ವೈಶಾಖ ಶುದ್ಧ ೧೪ ಯು ೧೬-೫-೫೪ ರವಿವಾರದಲ್ಲಿ..........ತಾ||.......... ಹೋಬಳಿ.........ಗ್ರಾಮದ ವಾಸಿ ಶ್ರೀ. ....ಅವರ ಪುತ್ರಿ ಹ||ಕು||ಸೌ||... ... .ಮದ್ವೆಯಲ್ಲಿ ಶೀಮೆಯವರು, ಬಂಧುಬಳಗದವರು, ಕಳ್ಳುಬಳ್ಳಿಯವರು ಮಾಡಿದ ಮುಯ್ಯಿ ಮುಟ್ಟು ತಪ್ಸೀಲು:
>
> ೧. ಮಹರಾಜೇಶ್ರೀ . ... ರೂ. ಆ. ಕಾ.
> ೧ – ೦ – ೦

ಮೇಲಿನ ಮಾದರಿಪಟ್ಟಿಯಲ್ಲಿ 'ಮುಯ್‌ಮುಟ್ಟು' ಎಂಬ ಪದ ಬಳಕೆಯಾಗಿರುವುದನ್ನು ಗಮನಿಸಬಹುದಾಗಿದೆ. ಪ್ರಾಯಃ 'ಮುಟ್ಟು' ಎನ್ನುವುದಕ್ಕೆ ಮುಟ್ಟಿಸು, ತಲುಪಿತು

ಎಂಬರ್ಥವಿರಬೇಕು. ಇಲ್ಲಿಯೂ ಮುಯ್ ಪುನಃ ಹಿಂದುರಿಗಿಸಬೇಕಾದದ್ದೆಂದೇ ಧ್ವನಿತವಾಗುತ್ತದೆ.

ಗ್ರಾಮೀಣ ಜನರಲ್ಲಿ ರೂಢಿಯಲ್ಲಿರುವ ಈ ಸಂಪ್ರದಾಯದ ಹಿಂದೆ ಒಂದು ವಿಶೇಷ ಆಶಯ, ಸಾಮಾಜಿಕ ಅನಿವಾರ್ಯತೆ ಇದ್ದಂತೆ ಕಾಣಿಸುತ್ತದೆ. ಆರ್ಥಿಕ ಸಂಪಾದನೆ ಕಡಿಮೆ ಇದ್ದ ಗ್ರಾಮೀಣ ಕೂಡುಕುಟುಂಬಗಳಲ್ಲಿ ಮದುವೆಯ ವೆಚ್ಚವನ್ನು ಸರಿದೂಗಿಸುವುದು ಕಷ್ಟತರವಾಗಿತ್ತು. ಈಗ ಪ್ರಚಲಿತವಿರುವ ವರದಕ್ಷಿಣೆ ಪದ್ಧತಿಯಂತೆ, ಕನ್ಯಾತೆರ ಕೊಡಬೇಕಾಗಿದ್ದ ಗಂಡಿನ ತಾಯಿತಂದೆಯರಿಗಂತೂ ಇದರ ಬಿಸಿ ಹೆಚ್ಚಾಗಿ ತಟ್ಟುತ್ತಿತ್ತು. ಆರ್ಥಿಕ ಸಂಕಷ್ಟದಿಂದಿರುತ್ತಿದ್ದ ವರನ ಅಥವಾ ವಧುವಿನ ತಾಯಿತಂದೆಯರಿಗೆ ಮುಯ್ಯದ ರೂಪದಲ್ಲಿ ಬರುತ್ತಿದ್ದ ಹಣ, ಎಷ್ಟೋ ಸಹಾಯಕ್ಕೆ ಬರುತ್ತಿತ್ತು. ಒಂದು ರೀತಿಯಲ್ಲಿ ಆರ್ಥಿಕಸಹಕಾರ ಸಾಧ್ಯವಾಗುತ್ತಿತ್ತು. ಅಲ್ಲದೆ ಹೀಗೆ ಪಡೆದುಕೊಳ್ಳುತ್ತಿದ್ದ ಹಣವನ್ನು ಸಾಲ ಹಿಂತಿರುಗಿಸುವ ಹಾಗೆ ಒಟ್ಟಿಗೆ ಹಿಂದಿರುಗಿಸಬೇಕಾಗಿರಲಿಲ್ಲ. ಜೊತೆಗೆ ಇದು ಬಡ್ಡಿರಹಿತ ಹಣವಾಗಿತ್ತು. ದೀರ್ಘಾವಧಿಯಲ್ಲಿ ಸಾಂದರ್ಭಿಕವಾಗಿ ವಾಪಸ್ಸುಮಾಡಬೇಕಾಗಿದ್ದರಿಂದ ಅಷ್ಟೊಂದು ಹೊರೆ ಎನ್ನಿಸುತ್ತಿರಲಿಲ್ಲ. ಇಂದೂ ಸಂಪ್ರದಾಯದ ಹೆಸರಿನಲ್ಲಿ ಗ್ರಾಮೀಣ ಜನ ಉಳಿಸಿಕೊಂಡಿರುವ ಈ ಸಂಪ್ರದಾಯ ಭಾಗಶಃ ಮೂಲಉದ್ದೇಶವನ್ನೇ ಸಾಧಿಸುತ್ತಿದೆ. ನಾಗರಿಕ ಜನರಿಗೆ ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳು ಮತ್ತು ಆರ್ಥಿಕಸ್ಥಿತಿಯಿಂದಾಗಿ ಮೂಲ ಆಶಯ ಅತ್ಯಾವಶ್ಯಕವಾಗಿರುವಂತೆ ಕಾಣಿಸುತ್ತಿಲ್ಲ. 'ಉಡುಗೊರೆ ಸ್ವೀಕರಿಸುವುದಿಲ್ಲ' ಇತ್ಯಾದಿ ವಿವಾಹ ಆಮಂತ್ರಣ ಪತ್ರಿಕೆಗಳ ಸೂಚನೆಗಳು ಈ ಮಾತನ್ನು ಸ್ಪಷ್ಟಪಡಿಸುತ್ತವೆ. ಒಟ್ಟಿನಲ್ಲಿ ಅದೊಂದು ಆರ್ಥಿಕ ಅಗತ್ಯವಾಗಿರುವುದಕ್ಕಿಂತ ಹೆಚ್ಚಾಗಿ ಕೈಯಲ್ಲಿ ಕೊಟ್ಟು ಶುಭಹಾರೈಸು ಸಾಮಾನ್ಯಕ್ರಿಯೆಯಾಗಿ ಪರಿಣಮಿಸಿದೆ.

ಕೆ. ಶ್ರೀಕಂಠ ಕೂಡಿಗೆ

ಗ್ರಂಥಾವಲೋಕನ

ನಮ್ಮ ಹಳ್ಳಿಯ ಕಥೆಗಳು : ಸಂ. ಕೆ. ವಿರೂಪಾಕ್ಷಗೌಡ ಮತ್ತು ಕಲ್ಲೇಶ ಇಟಗಿ. ಪ್ರ : ಕೊಟ್ಟೂರೇಶ್ವರ ಪ್ರಕಾಶನ, ಬಾಚಿಗೊಂಡನಹಳ್ಳಿ, ಬೆಲೆ : ಎರಡು ರೂಪಾಯಿ. ಪು : ೯೧

ನಮ್ಮ ಜಾನಪದಸಾಹಿತ್ಯದ ವ್ಯಾಪ್ತಿ, ಹಾಡುಗಳಿಗಷ್ಟೇ ಸೀಮಿತಗೊಂಡಿದ್ದ ಕಾಲವೊಂದಿತ್ತು. ಗೀತೆಗಳಂತೆ ಕಥೆ, ಗಾದೆ, ಒಗಟು, ರಂಗಭೂಮಿ ಮುಂತಾದವುಗಳು ಕೂಡ ಜಾನಪದಸಾಹಿತ್ಯದ ಪ್ರಕಾರಗಳೆಂಬ ಮಾತು ನಿರ್ಧಾರವಾಗಿ, ಇತ್ತೀಚೆಗೆ ಆ ದಿಶೆಯಲ್ಲಿ ಕಾರ್ಯ ನಡೆದಿದೆ. ಹೀಗಿರುವುದರಿಂದಾಗಿ ನಮ್ಮ ಜಾನಪದ ಕಥೆಗಳ ಸಂಗ್ರಹದ ಇತಿಹಾಸ ಬಹಳ ಹಿಂದೆ ಹೋಗದು. ಈಗಾಗಲೇ ಅನೇಕ ಕಥಾಸಂಗ್ರಹಗಳು ಪ್ರಕಟಗೊಂಡಿದ್ದರೂ ಒಟ್ಟಿನ ದೃಷ್ಟಿಯಿಂದ ಇವುಗಳ ಸಂಖ್ಯೆ ಕಡಿಮೆಯೆಂದೇ ಹೇಳಬಹುದು. ಬೆಳಕುಕಾಣಬೇಕಾದ ಕಥಾಸಾಹಿತ್ಯ ಇನ್ನೂ ರಾಶಿರಾಶಿಯಾಗಿ ಬಿದ್ದಿದೆ ಈ ನಿಟ್ಟಿನಿಂದ ನೋಡಲಾಗಿ ಪ್ರಸ್ತುತ ಸಂಗ್ರಹ ಸ್ವಾಗತಾರ್ಹ.

'ನಮ್ಮ ಹಳ್ಳಿಯ ಕಥೆಗಳು' ಬಳ್ಳಾರಿ ಜಿಲ್ಲೆಯನ್ನು ಪ್ರತಿನಿಧಿಸುವ ಕೃತಿ. ಇದರಲ್ಲಿ (೧) ಮೂರು ಮಾತುಗಳು (೨) ಮೂರು ಗೊಂಬೆಗಳು (೩) ದಾಸಯ್ಯ (೪) ಕಡಬಿನ ಕಥೆ (೫) ಕದ್ದವನ ಬಾಳುವೆ ಇದ್ದೋಟಿ (೬) ಪಾಪಪುಣ್ಯ (೭) ಚಂದ್ರಬಾಬು (೮) ಬ್ರಾಹ್ಮಣ ಜಾತಕ ಮಹೇಂದ್ರಬಾಬು (೯) ಧರ್ಮಾಧರ್ಮರಾಜ (೧೦) ಶೂರಧೀರ (೧೧) ಒಂದು ಗಾಲಿಯಮೇಲೆ ಒಂಬತ್ತು ನೆಲೆಯ ತೇರು (೧೨) ಬಸವಂತ ಬಲವಂತ-ಹೀಗೆ ಹನ್ನೆರಡು ಕಥೆಗಳಿವೆ. ಕೆಲವು, ಪ್ರಮಾಣದಲ್ಲಿ ದೊಡ್ಡವುಗಳಾದರೆ; ಇನ್ನು ಕೆಲವು, ಚಿಕ್ಕವು. ಹೆಚ್ಚಿನ ಕಥೆಗಳು ಸುಂದರವಾಗಿವೆ. ಅಧ್ಯಯನಕ್ಕೆ ಯೋಗ್ಯವಾಗಿವೆ. ಇವುಗಳಲ್ಲಿ ರಮ್ಯಕಥೆಗಳ ಸಂಖ್ಯೆಯೇ ಅಧಿಕವಾಗಿದೆ.

ಒಂದು ಕಥೆಯ ಚಾರಿತ್ರಿಕ ಬೆಳವಣಿಗೆಯಲ್ಲಿ ಅಸಮಂಜಸವಾದ ಅಂಶಗಳು ಹೇಗೆ ಬಂದು ಸೇರಿಕೊಳ್ಳುತ್ತವೆ ಎಂಬುದಕ್ಕೆ ಒಂದು ಉದಾಹರಣೆ : 'ಮೂರು ಮಾತುಗಳು' ಎಂಬ ಮೊದಲನೆಯ ಕಥೆಯಲ್ಲಿ ಒಬ್ಬ ಮುಂದುಕಿ ಬಡವನೊಬ್ಬನಿಂದ ಹಣಪಡೆದು, ಪ್ರತಿಯಾಗಿ ಅವನಿಗೆ ಮೂರು ಮಾತುಗಳನ್ನು ಹೇಳುತ್ತಾಳೆ.

ಅವಳು ಹೇಳಿದ ಮೊದಲನೆಯ ಮಾತು "ಲಗ್ನಕ್ಕೆ ಹೋಗುವುದಕ್ಕಿಂತ ಮೊದಲು ಹಬ್ಬಕ್ಕೆ ಹೋಗುವುದು ಲೇಸು" ಈ ಮಾತಿಗೆ ನೇರ ಸಂಬಂಧವನ್ನುಳ್ಳ ಅವನ ಪ್ರಥಮ ಕಾರ್ಯ "ಮುಗ್ಗುಲ ಹಳ್ಳಿಯಲ್ಲಿ ಜಾತ್ರೆಯು ನಡೆಯುತ್ತಿತ್ತು. ಅವನು ಮುದುಕಿಯ

ಮಾತನ್ನು ನೆನಪುಮಾಡಿಕೊಂಡು ಜಾತ್ರೆಗೆ ಹೋದನು." ಇಲ್ಲಿ ಮಾತು ಮತ್ತು ಕ್ರಿಯೆಗೆ ಇರಬೇಕಾದ ನಿಕಟ ಸಂಬಂಧ ತಪ್ಪಿಹೋಗಿದೆ

ಇಲ್ಲಿಯ ಕಥೆಗಳ ಭಾಷೆಯ ಬಗ್ಗೆ ಒಂದು ಮಾತು. ಜಾನಪದ ಕಥೆಗಳನ್ನು ಕಥೆ ಹೇಳುವವರ ಆಡುಮಾತಿನಲ್ಲಿಯೇ ಹಿಡಿದಿಡುವುದು ಸೂಕ್ತವಿಧಾನ. ಒಂದುವೇಳೆ ಕಥೆಗಳನ್ನು ಗ್ರಾಂಥಿಕಭಾಷೆಗೆ ಮಾರ್ಪಡಿಸಿದರೆ ಸಹಜವಾಗಿರಬೇಕಾದ ಜಾನಪದ ಸೊಗಸು ಇಲ್ಲದಾಗುತ್ತದೆ ಈ ಸಂಗ್ರಹದ ಕಥೆಗಳಲ್ಲಿ ಕೆಲವು ಗ್ರಾಂಥಿಕಭಾಷೆಯಲ್ಲಿವೆ (೧, ೬, ೭, ೯, ೧೦ ಮತ್ತು ೧೧), ಕೆಲವು ಆಡುಮಾತಿನಲ್ಲಿವೆ (೩. ೪. ೫ ಮತ್ತು ೧೨). ಇನ್ನುಳಿದವು ಪೂರ್ತಿ ಗ್ರಾಂಥಿಕಭಾಷೆಯಲ್ಲಿಯೂ ಇಲ್ಲ. ಪೂರ್ತಿ ಆಡುಮಾತಿನಲ್ಲಿಯೂ ಇಲ್ಲ ಇವೆರಡೂ ಅಲ್ಲದ ಮತ್ತು ಇವುಗಳೆರಡರ ಮಿಶ್ರಣವಾಗಿರುವ ಒಂದುತರದ ವಿಚಿತ್ರ ಭಾಷೆಯಲ್ಲಿವೆ (೮, ೨ ಮತ್ತು ೯). ಇಂಥ ಹೈಬ್ರಿಡ್ ಭಾಷೆಗೆ ಒಂದು ಉದಾಹರಣೆ: "ಒಂದು ಹಳ್ಳಿಯಲ್ಲಿ ಗಂಡ ಹೆಂಡರಿದ್ರು. ಹೆಂಡತಿ ಅಡಿಗೆಮಾಡುವ ಸಾಮಾನು ತಂದುಕೊಟ್ರೆ ಅವುಗಳನ್ನು ಅಡಿಗೆ ಮಾಡಲಿಕ್ಕೆ ಇಟ್ಟು ಬೇಳೆ ಆಗಲಿ, ಬದ್ನಿಕಾಯಾಗ್ಲಿ. ಯಾವುದೇ ಪಲ್ಯಾದ ದಿನಸನ್ನು ತೋಡಿಕೊಂಡು ತಿಂದು ಬರೇ ಮೇಲಿನ ತಿಳಿಸಾರು ನೀಡುತ್ತಿದ್ಳು. ಗಂಡನಿಗೆ ಉಂಡುಉಂಡು ಬೇಜಾರಾಗಿತ್ತು" (ಪುಟ ೫).

"ಎರಡು ಮೈಲು" (ಪು. ೧೩), "೨–೩ ಮೈಲು" (ಪು. ೭೨): "ರಾತ್ರಿ ಹನ್ನೊಂದು ಗಂಟೆಗೆ" (ಪು. ೨೧) ಇಂಥ ಜಾನಪದವಲ್ಲದ ಹೇಳಿಕೆಗಳು ಬಳಕೆಯಾಗಿವೆ ಪ್ರಾರಂಭದಲ್ಲಿ ಕೊಟ್ಟಿರುವ ಒಂದುಪುಟದ ತಿದ್ದುಪಡಿ. ಅಚ್ಚಿನ ದೋಷಗಳನ್ನು ಪೂರ್ತಿಯಾಗಿ ಸೂಚಿಸಲು ಅಸಮರ್ಥವಾಗಿದೆ. ಪುಸ್ತಕದ ಮುದ್ರಣ ಎಷ್ಟೇನೂ ಚನ್ನಾಗಿಲ್ಲ. ಏನಿದ್ದರೂ ಹೇಗಿದ್ದರೂ ಇಂಥ ಸಂಗ್ರಹಗಳು ನಮಗೆ ಬೇಕು. ಏಕೆಂದರೆ ಪ್ರತಿಯೊಂದು ಜಾನಪದ ಕಥೆಯನ್ನು "ಚಾರಿತ್ರಿಕ–ಭೌಗೋಲಿಕ" ವಿಧಾನದಿಂದ ಅಭ್ಯಸಿಸಿದಾಗ ಮಾತ್ರ ಇಂಥ ಅಧ್ಯಯನಕ್ಕೆ ಪೂರ್ಣವಿರಾಮ ಈ ರೀತಿಯ ಅಧ್ಯಯನದ ಮೂಲಕ ಕಥೆಯ ಹುಟ್ಟು. ಬೆಳವಣಿಗೆ, ದೇಶಾಂತರ ಪ್ರಯಾಣ. ಪ್ರಕ್ಷಿಪ್ತಲೋಪ ಮೊದಲಾದವುಗಳನ್ನು ತಿಳಿದುಕೊಳ್ಳಬೇಕಾದರೆ ಒಂದೇ ಕಥೆಯ ಅನೇಕ ಪಾಠಾಂತರಗಳು ತೀರ ಅವಶ್ಯ. ಈ ಪಾಠಾಂತರಗಳ ಬಂಡವಾಳವಿಲ್ಲದಿದ್ದರೆ ಏನುಮಾಡಲೂ ಸಾಧ್ಯವಿಲ್ಲ. ಆದ್ದರಿಂದ ಹೆಚ್ಚುಹೆಚ್ಚು ಕಥೆಗಳು ಪ್ರಕಟವಾದಷ್ಟು ಒಳ್ಳೆಯದು ಇಲ್ಲಿಯ ಹಲವು ಕಥೆಗಳು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಬೇರೆಡೆಯಲ್ಲಿ ಪ್ರಚಾರದಲ್ಲಿರುವುದು ಗಮನಾರ್ಹ ಸಂಗತಿ.

ಸಂಪಾದಕರ ಉತ್ಸಾಹ ಮೆಚ್ಚತಕ್ಕದ್ದು. ವೈಜ್ಞಾನಿಕದೃಷ್ಟಿಯಿಂದ ಇಲ್ಲಿಯ ಕಥೆಗಳನ್ನು ವರ್ಗೀಕರಿಸಿ, ಯೋಗ್ಯರೀತಿಯಿಂದ ಸಂಪಾದಿಸಿದ್ದರೆ ಇದು ಒಳ್ಳೆಯ ಸಂಗ್ರಹವಾಗಬಹುದಿತ್ತು. ಈಗಾಗಲೇ ಹಲವಾರು ಜಾನಪದ ಸಂಗ್ರಹಗಳನ್ನು ಪ್ರಕಟಿಸಿರುವ ಸದರೀ ಸಂಪಾದಕರಿಂದ ಬಳ್ಳಾರಿ ಜಿಲ್ಲೆಯ ಜಾನಪದಸಾಹಿತ್ಯ ಬೆಳಕುಕಾಣಬೇಕಾಗಿದೆ.

ಸಾದರ ಸ್ವೀಕಾರ

೧. **ಹರಕು ಪುಸ್ತಕ :**

ಲೇ. ಧರಣೇಂದ್ರ ಕುರಕುರಿ. ಪ್ರ : ಕಾವ್ಯಧಾರಾ ಪ್ರಕಾಶನ ಧಾರವಾಡ. ಬೆಲೆ : ನಾಲ್ಕು ರೂಪಾಯಿ. ಪುಟ : ೪೪

೨. **ಕನ್ನಡ ಗ್ರಂಥಸೂಚಿ** (ಸಂಪುಟ–೧) :

ಸಂ : ದೇ. ಜವರೇಗೌಡ. ಪ್ರ : ನಿರ್ದೇಶಕರು, ಪ್ರಸಾರಾಂಗ ಮಾನಸಗಂಗೋತ್ರಿ ಮೈಸೂರು ೬. ಬೆಲೆ : ಮೂವತ್ತು ರೂಪಾಯಿ. ಪುಟ : xviii + 239

೩. **ಪಾರಮಾರ್ಥ ಪ್ರಕಾಶಿಕೆ :**

ಸಂ : ಜಿ. ಎಮ್. ಉಮಾಪತಿಶಾಸ್ತ್ರಿ. ಪ್ರ : ಶಾರದಾಭವನ ಪ್ರಕಾಶನ, ಬಾಗಲಕೋಟ. ಬೆಲೆ : ಎಂಟು ರೂಪಾಯಿಗಳು. ಪುಟ : ೩೩ + ix + ೧೦೩ + ೫೯

೪. **ತೊದಲು :**

ಸಂ. ವಸಂತ ಕುಷ್ಟಗಿ. ಪ್ರ : ವಿದ್ಯಾವಿಹಾರ ಪ್ರಕಾಶನ–೧, ಬೆಲೆ : ಎರಡು ರೂಪಾಯಿ. ಪು : xi + ೪೭

೫. **ಭಾವಗಂಗೆ :**

ಸಂ : ಗವೀಶ ಹಿರೇಮಠ ಮತ್ತು ಬಿ. ಕೆ. ಹಳ್ಳಿ. ಪ್ರ : ವಿಶ್ವಜ್ಯೋತಿ ಪ್ರಕಾಶನ. ಕಲಬುರ್ಗಿ. ಬೆಲೆ: ಉತ್ತಮ ಪ್ರತಿ: ೬ ರೂ. ಸಾದಾ ಪ್ರತಿ: ೪ ರೂಪಾಯಿಗಳು. ಪು : ೧೦೪

೬. **ಇನ್ನಾದರೂ ಬದುಕಬೇಕು :**

ಲೇ : ಜಯಸುದರ್ಶನ. ಪ್ರ : ಅಕ್ಷರ ಪ್ರಕಾಶನ. ಸಾಗರ. ಬೆಲೆ : ೮ ರೂ. ೫೦ ಪೈ. ಪುಟ : vii + ೧೦೦

೭. **ಕನ್ನಡ ಸಾಹಿತ್ಯ ಪರಿಷತ್ತು** (ವಾರ್ಷಿಕ ವರದಿ-೧೯೭೩) :

ಪ್ರ. ಕನ್ನಡ ಸಾಹಿತ್ಯ ಪರಿಷತ್ತು. ಪಂಪಮಹಾಕವಿರಸ್ತೆ. ಬೆಂಗಳೂರು ೧೮. ಪುಟ : ೬೬ + ೪೭

೮. **ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ** (೫೯–೧) :

ಪ್ರ : ಕನ್ನಡ ಸಾಹಿತ್ಯ ಪರಿಷತ್ತು. ಚಾಮರಾಜ ಪೇಟೆ ಬೆಂಗಳೂರು ೧೮.

ಸಂಪಾದಕೀಯ

ಬಾಲ್ಯದ ಬಾಲಗ್ರಹಗಳನ್ನು ದಾಟಿ "ಭಾರತಿ" ಈ ಸಂಚಿಕೆಯ ಮೂಲಕ ಏಳನೆಯ ವರ್ಷದಲ್ಲಿ ಕಾಲಿಡುತ್ತಲಿದೆ. ಉತ್ತರಕರ್ನಾಟಕದಲ್ಲಿ ಇಂಥ ಒಂದು ಪತ್ರಿಕೆಯೇ ಇಲ್ಲದಾಗ, ಕರ್ನಾಟಕ ವಿಶ್ವವಿದ್ಯಾಲಯ ಈ ಹೊಣೆಯನ್ನು ಹೊತ್ತಿತು. ಹುಟ್ಟಿದ "ಭಾರತಿ" ಬದುಕುವ ಬಗ್ಗೆ ಅನೇಕರು ಸಂದೇಹಪಟ್ಟರು. ಆದರೆ ಆ ಸಂದೇಹವನ್ನು ನಿವಾರಿಸಿ ನಿರೀಕ್ಷೆಗೂ ಮೀರಿ ಗಟ್ಟಿಮುಟ್ಟಾಗಿ ಬೆಳೆದು, ನೂರಾರು ಯುವಜನ ಲೇಖಕರನ್ನು ಸೃಷ್ಟಿಸಿತು; ಅವರಲ್ಲಿ ವಾಚನಾಭಿರುಚಿ, ಲೇಖನ ವ್ಯವಸಾಯಗಳನ್ನು ಕುದುರಿಸಿತು. ಇಂಥ ಒಳ್ಳೆಯ ದಿನಗಳನ್ನು ಉದ್ದಕ್ಕೂ ಉಳಿಸಿಕೊಂಡು ಬರಲು ಬಯಸಿದ "ಭಾರತಿ" ಎಲ್ಲರಿಗೂ ಕೃತಜ್ಞತೆಗಳನ್ನರ್ಪಿಸುತ್ತದೆ.

೧. ಸಾಹಿತ್ಯಸಮ್ಮೇಲನದ ಅಧ್ಯಕ್ಷತೆ: ಜಯದೇವಿತಾಯಿ ಲಿಗಾಡೆ

ಕನ್ನಡ ಸಾಹಿತ್ಯಸಮ್ಮೇಲನಗಳ ಇತಿಹಾಸದಲ್ಲಿ, ಈ ಸಲದ್ದು ಒಂದು ವಿಶೇಷ. ಈ ಅಪೂರ್ವತೆಯನ್ನು ತಂದುಕೊಟ್ಟದ್ದು, ಶ್ರೀಮತಿ ಜಯದೇವಿತಾಯಿ ಲಿಗಾಡೆ ಅವರ ಅಧ್ಯಕ್ಷತೆ. ಪ್ರಥಮ ಮಹಿಳಾ ಅಧ್ಯಕ್ಷತೆಯೆಂಬ ಸಾಮಾನ್ಯ ಮಾತನ್ನು ಬಿಟ್ಟರೂ ಕನ್ನಡನಾಡು, ನಾಡವರು; ನುಡಿ, ಸಾಹಿತ್ಯಗಳಿಗೆ ಸಲ್ಲಿಸಿದ ಸೇವೆಯ ಅಸಾಮಾನ್ಯತೆ ಅವರ ವ್ಯಕ್ತಿತ್ವಕ್ಕಿದೆ. ಒಂದರ್ಥದಲ್ಲಿ ಅವರು ಉತ್ತರ ಸೀಮಾರೇಖೆಯ ಕನ್ನಡ ದಿಕ್ಪಾಲಕರು. ಗಡಿನಾಡಿನಲ್ಲಿ ಕನ್ನಡವನ್ನು, ಕನ್ನಡತನವನ್ನು ಜಾಗ್ರತವಾಗಿಟ್ಟು, ಕರ್ನಾಟಕ ಏಕೀಕರಣಪ್ರಜ್ಞೆಯನ್ನು ಪೋಷಿಸಿ, ಕನ್ನಡದ ಬದುಕು ವೈಭವಪೂರ್ಣವಾಗಲಿ ಎಂದು ಅಂತಃಕರಣಪೂರ್ವಕ ಹಂಬಲಿಸುತ್ತ ಕನ್ನಡ, ಮರಾಠಿ ಭಾಷೆಗಳಲ್ಲಿ ಸಾಹಿತ್ಯವನ್ನು ಸೃಷ್ಟಿಸಿ, ಭಾಷಾಬಾಂಧವ್ಯವನ್ನೂ ಮೆರೆದಿದ್ದಾರೆ, ಶ್ರೀಮತಿ ಲಿಗಾಡೆಯವರು.

ನಾಲವತ್ತೆಂಟನೆಯ ಕನ್ನಡ ಸಾಹಿತ್ಯಸಮ್ಮೇಲನದ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ಮಾತೆಯವರಿಗೆ "ಭಾರತಿ" ವಂದನೆಗಳನ್ನು ಸಲ್ಲಿಸುತ್ತದೆ.

೨. ಅಧ್ಯಯನಪೀಠದ ಇನ್ನೊಂದು ಸಾಧನೆ: ಎಂ. ಎ. ಜಾನಪದ

೨೫ ವರ್ಷಗಳ ಹಿಂದೆ ಹನಿಯಾಗಿ ಮೂಡಿದ ಕನ್ನಡ ಅಧ್ಯಯನಪೀಠ, ಹಳ್ಳವಾಗಿ ಹರಿದು ಈಗ ಹೊಳೆಯಾಗಿ ತುಂಬಿ ಸೂಸುತ್ತಲಿದೆ. ಈ ನದಿಗೆ ಈ ವರ್ಷ ಸೇರಿದ ಇನ್ನೊಂದು ಪ್ರವಾಹವೆಂದರೆ, ಜಾನಪದ ಎಂ. ಎ. ವರ್ಗ. ಲೋಕದ ಎಲ್ಲ ಜ್ಞಾನವಲಯನ್ನು ಕನ್ನಡಕ್ಕೆ ಆಹ್ವಾನಿಸಿಕೊಳ್ಳಬೇಕೆಂಬ ಹಲವು ಹಂಬಲಗಳಲ್ಲಿ ಇದೂ ಒಂದು. ಕರ್ನಾಟಕ, ಜಾನಪದ ಸಂಪತ್ತಿಗೆ ತವರು. ಇಲ್ಲಿಯ ಜನಪದರ ನಡೆ-ನುಡಿ, ಆಚಾರ, ವಿಚಾರ, ಸಾಹಿತ್ಯಗಳ ಶಾಸ್ತ್ರೀಯ ಅಧ್ಯಯನ ನಡೆಸುವುದು. ನಮ್ಮ ಜೀವನವನ್ನು ಬಿಂಬಿಸುವ "ಜಾನಪದ ವಸ್ತುಸಂಗ್ರಹಾಲಯ"ವನ್ನು ಸ್ಥಾಪಿಸುವುದು. ಜಾನಪದ ಲಯಗಳನ್ನು ಸಂಗ್ರಹಿಸುವುದು — ಇವೇ ಮೊದಲಾದ ಉದ್ದೇಶಗಳನ್ನಿಟ್ಟುಕೊಂಡು ಹುಟ್ಟಿದ ಈ ಕ್ಷೇತ್ರ, ಉತ್ತರೋತ್ತರಗೊಳ್ಳಲಿಯೆಂದು "ಭಾರತಿ" ಹಾರೈಸುತ್ತದೆ.

ಈ ಸಂಚಿಕೆಯ ಲೇಖಕರು

೧. **ಶ್ರೀ ಎಸ್. ಎಸ್. ಕೋತಿನ :**
ಕನ್ನಡ ಅಧ್ಯಾಪಕರು. ಬಸವಪ್ರಭು ಕೋರೆ ಆರ್ಟ್ಸ ಮತ್ತು ಸಾಯನ್ಸ ಕಾಲೇಜ, ಚಿಕ್ಕೋಡಿ.

೨. **ಡಾ. ಕೆ. ಕೃಷ್ಣಮೂರ್ತಿ :**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಸಂಸ್ಕೃತವಿಭಾಗ, ಕ. ವಿ. ವಿ. ಧಾರವಾಡ.

೩. **ಶ್ರೀ ಈಶ್ವರ ಕಮ್ಮಾರ :**
ಸಹಾಯಕ ನಿರ್ದೇಶಕರು, ಪ್ರಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ ಕ. ವಿ. ವಿ. ಧಾರವಾಡ.

೪. **ಶ್ರೀಮತಿ ಶಶಿಕಲಾ ಎಸ್. ಮಸ್ತದ :**
ಕನ್ನಡ ಅಧ್ಯಾಪಕರು, ಅಕ್ಕಮಹಾದೇವಿ ಕಾಲೇಜ, ಬೀದರ.

೫. **ಶ್ರೀ ಬಿ. ಬಿ. ಮಹೀಶವಾಡಿ :**
ಅಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೬. **ಶ್ರೀ ಜೆ. ರಾಮಸ್ವಾಮಿ :**
ಸಂಶೋಧಕ ವಿದ್ಯಾರ್ಥಿ. ಅಣ್ಣಾಮಲೈ ವಿಶ್ವವಿದ್ಯಾಲಯ, ಅಣ್ಣಾಮಲೈ ನಗರ.

೭. **ಕು. ಪ್ರೇಮಾ ತಾಶೀಲದಾರ :**
C/o ಎಚ್. ಕೆ. ತಾಶೀಲದಾರ, ೪೩೮೧ ಚವಾಟಗಲ್ಲಿ, ಬೆಳಗಾವಿ.

೮. **ಶ್ರೀ ಎಸ್. ಎಫ್. ಪೂಜಾರ :**
ಸಮಾಜ ಕಲ್ಯಾಣವಿಭಾಗ, ಕ. ವಿ. ವಿ. ಧಾರವಾಡ.

೯. **ರಾವಬಹಾದ್ದೂರ (ಶ್ರೀ ಆರ್. ಬಿ. ಕುಲಕರ್ಣಿ)**
ಜಮಖಂಡಿ.

೧೦. **ಶ್ರೀ ವಿಲ್ಯಂ ಮಾಡ್ತ :**
ಅಧ್ಯಾಪಕರು. ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೧೧. **ಕು. ಹೇಮಲತಾ ಪದಕಿ :**
ಸಹಾಯಕ ಸಂಶೋಧಕರು. ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೧೨. **ಶ್ರೀ ಚಂದ್ರಶೇಖರ ಯರವಿನತೆಲಿಮಠ :**
ಅಧ್ಯಾಪಕರು, ಇಂಗ್ಲೀಷ ವಿಭಾಗ, ಕ. ವಿ. ವಿ. ಧಾರವಾಡ.

೧೩. **ಡಾ. ಎಂ. ಬಿ. ಕೊಟ್ರಶೆಟ್ಟಿ :**
ರೀಡರ್, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೧೪. **ಡಾ. ಎಸ್. ಶೆಟ್ಟರ್ :**
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಇತಿಹಾಸ ಹಾಗೂ ಪ್ರಾಚ್ಯಶಾಸ್ತ್ರ ವಿಭಾಗ, ಕ. ವಿ. ವಿ. ಧಾರವಾಡ.

೧೫. **ಶ್ರೀ ಎಸ್. ರಾಜಶೇಖರ :**
ಅಧ್ಯಾಪಕರು, ಇತಿಹಾಸ ಹಾಗೂ ಪ್ರಾಚ್ಯಶಾಸ್ತ್ರ ವಿಭಾಗ, ಕ. ವಿ. ವಿ. ಧಾರವಾಡ.

೧೬. **ಡಾ. ಎಂ. ಎಂ. ಕಲಬುರ್ಗಿ :**
ರೀಡರ್, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೧೭. **ಶ್ರೀ ಕೆ. ಶ್ರೀಕಂಠ ಕೂಡಿಗೆ :**
ಕನ್ನಡ ಅಧ್ಯಾಪಕರು, ಮೈಸೂರು ವಿ. ವಿ. ಸ್ನಾತಕೋತ್ತರಕೇಂದ್ರ ಬಿ. ಆರ್. ಪ್ರಾಜೆಕ್ಟ್-೫೭೭೧೧೫, ಶಿವಮೊಗ್ಗ ಜಿಲ್ಲೆ.

೧೮. **ಶ್ರೀ ಬಸವರಾಜ ಮಲಶೆಟ್ಟಿ :**
ಕನ್ನಡ ಅಧ್ಯಾಪಕರು, ವಿಜಯನಗರ ಕಾಲೇಜು, ಹೊಸಪೇಟೆ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವ್ಯಾಸಂಗವಿಸ್ತರಣ ಹಾಗು ಪ್ರಕಟನ ವಿಭಾಗ

ಇತ್ತೀಚಿನ ಪ್ರಕಟನೆಗಳು

ಉಪನ್ಯಾಸ ಗ್ರಂಥಮಾಲೆ : ಪ್ರತಿಯೊಂದರ ಬೆಲೆ ೨೫ ಪೈಸೆ

ನಮ್ಮ ಅರಣ್ಯಗಳು — **ಟಿ. ಎಂ. ಪಂಡಿತ**
ಹರಿಜನೋದ್ಧಾರಕಾರ್ಯ — **ಎನ್. ಕೆ. ಕಡೆತೋಟದ**
ಬದಲಾಗುತ್ತಿರುವ ಭಾರತೀಯ ಕುಟುಂಬ — **ಎಚ್. ವ್ಹಿ. ನಾಗೇಶ್**
ಷಡಕ್ಷರದೇವ ಕವಿಯ ರಾಜಶೇಖರ ವಿಳಾಸ — **ಎಂ. ಎನ್. ವಾಲಿ**
ಮಾತು — **ಜಿ. ಕೃಷ್ಣರಾವ್**

ಇತರ ಪ್ರಕಟನೆಗಳು :

ಶಾಸನ ವ್ಯಾಸಂಗ — **ಎಂ. ಎಂ. ಕಲಬುರ್ಗಿ** ರೂ. ೭-೦೦

ಕಮೀಶನ್ನಿನ ವಿವರ :

ವಿಶ್ವವಿದ್ಯಾಲಯದ ಪ್ರಕಟನೆಗಳನ್ನು ಕೊಳ್ಳುವವರಿಗೆ ಈ ಕೆಳಗಿನಂತೆ ಕಮೀಶನ್ ಕೊಡಲಾಗುತ್ತದೆ.

ಪಠ್ಯಪುಸ್ತಕಗಳು (ಪರೀಕ್ಷೆಗಳಿಗೆ ಗೊತ್ತುಪಡಿಸಿದವು ಮಾತ್ರ) :
೨೫ ಪ್ರತಿಗಳನ್ನು ಅಥವಾ ಅದಕ್ಕೂ ಹೆಚ್ಚಿಗೆ ಕೊಳ್ಳುವವರಿಗೆ :
೧೦೦ ಕ್ಕೆ ೧೫ ರಂತೆ

ರೂ. ೨೦೧೧/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ :
೧೦೦ ಕ್ಕೆ ೨೦ ರಂತೆ

ಇತರ ಎಲ್ಲ ಪ್ರಕಟನೆಗಳು (ನಿಯತಕಾಲಿಕೆಗಳನ್ನು ಒಳಗೊಂಡು) :
೧೦೦ ರೂ. ಗಳಿಂದ ೫,೦೦೦ ರೂ. ವರೆಗಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ:
೧೦೦ ಕ್ಕೆ ೨೫ ರಂತೆ

೫,೦೦೦ ರೂ. ಗಳಿಗೆ ಮೇಲ್ಪಟ್ಟ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ;
೧೦೦ಕ್ಕೆ ೩೩ $\frac{೧}{೩}$ ರಂತೆ

ಒಂದು ವರ್ಷದ ಅವಧಿಯಲ್ಲಿ (ಎಪ್ರಿಲ್ ೧ ರಿಂದ ಮಾರ್ಚ ೩೧ ರ ವರೆಗೆ) ಒಟ್ಟಿಗೆ ರೂ. ೨೦,೦೦೦/- ಅಥವಾ ಅದಕ್ಕೂ ಹೆಚ್ಚಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ೩೩ $\frac{೧}{೩}$ ದಂತೆ ಕಮೀಶನ್ ಕೊಡಲಾಗುವುದು.

*   *   *   *   *

ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ — ರೂ. ೪ (ಅಂಚೆವೆಚ್ಚ ಸಹಿತ)

ಬಿಡಿ ಪ್ರತಿ — ರೂ ೨–೫೦ (ಅಂಚೆ ವೆಚ್ಚ ರೂ. ೧–೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೨–೦೦ ಮಾತ್ರ)

ಕರ್ನಾಟಕ ಭಾರತಿ

(ಆಜೀವ ಸದಸ್ಯತ್ವ)

ಯಾವುದೇ ವ್ಯಕ್ತಿ ಅಥವಾ ಸಂಘ–ಸಂಸ್ಥೆಗಳು ೧೦೦ ರೂ. ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ 'ಕರ್ನಾಟಕ ಭಾರತಿ' ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗುವುದು.

(ಹಣವನ್ನು ಮನಿ ಆರ್ಡರ ಅಥವಾ ಪೋಸ್ಟಲ್ ಆರ್ಡರ ಮೂಲಕ ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,
ವ್ಯಾಸಂಗವಿಸ್ತರಣ ಹಾಗು ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ–೩
